**Check List for First Visit of ER Observers**

**(The Report of first visit should answer all the questions given below in detail, mention corrective action taken if any)**

**District: Haveri** **Year : 2020 - 21**

| Sl. No. | Details | REMARKS |
|---|---|---|
| 1 | Whether all EROs and AEROs, as per ECI notification, are in place. If not, since when vacant, and what actions taken by the DEO/CEO to fill up the vacancy. (Please refer ECI DO letter dated 6th Aug 2019 to Chief Secretary of a State/UT) | Both EROs are in place.<br><br>Out of 7 AEROs one place i.e. Tahsildar Byadagi is vacant .It is vacant for last one month.<br><br>The DEO has sent letter to Government requesting to fill the vacancy<br>A Shirastedar of DC office is temporarily placed in the post- |
| 2 | Whether ERO/AEROs as well as BLOs stand trained. When was training classes organized? Please checks records including video recordings. Also ascertain quality of training by asking a few questions. | ERO/AEROs as well as BLOs are trained .<br>A training was imparted to BLOs in all ACs between 13-11-2020 and 21-11-2020 |
| 3 | Status of BLOs/BLAs appointments - | - |
| | a) Is there one BLO per Polling Station? | Yes. In all 1470 BLOs are working |
| | b) How many BLOs are local i.e., registered as electors in the concerned Polling Station? | 361 BLOs are registered as electors in the concerned PS |

| | | |
|---|---|---|
| | c) Out of total BLOs in an AC, how many BLOs are teachers? | 1101 BLOs are teachers. |
| | d) Whether retired Govt. servants are appointed as BLOs? If so give full details? | NO |
| | e) Whether any step taken to appoint willing BLOs? (Please refer ECI instructions dated 2nd January, 2013) | Necessary steps are taken to appoint willing BLOs. |
| | f) Have BLOs been given photo identity cards/kit bag/name boards (at residence) as prescribed by the Commission? | Yes. given photo identity cards and kit bags to all BLOs |
| 4 | How many BLAs have been appointed by recognized political parties? Also please mention how many BLAs were appointed till last year. What actions have been taken by the DEO/EROs to motivate/convince political parties to appoint BLAs. Also please mention (AC wise) the total number of Forms (6,7,8 and 8A) received from BLAs during last revision. | As on 25.11.2020 no political party has updated its BLA list for the current year.<br><br>However the following parties have appointed BLA's last year.<br>INC-551 BJP-219<br>CPI-Nil BSP-Nil JDS-Nil<br><br>This matter is a point of discussion in every meeting with political parties. But as this being a non election period they seems to be not interested.<br><br>No forms have been received from BLAs during last revision |
| 5 | How many designated officers have been appointed for each polling station and when a training class for them was organized? Please check the level of knowledge by asking some questions. | No separate designated officers have been appointed for each polling station. All trained BLOs will act as Designated Officers on special campaign days. Responsibilities of DOs are explained to them in regular training sessions. |

| | | |
|---|---|---|
| 6 | Whether a hard copy and a soft copy of the complete electoral roll published as draft has been given to all recognized political parties? If, yes then the date on which it was given. Please personally check the relevant record to satisfy yourself? | Yes. a hard copy and a soft copy of the complete electoral roll published as draft has been given to all recognized political parties at Taluka Level.<br>Haveri 19-11-2020<br>Byadagi 21-11-2020<br>Ranebennur 20-11-2020<br>Hirekerur 19-11-2020<br>Savanur 19-11-2020<br>Shiggaon 25-11-2020<br>Hanagal 21-11-2020<br>Acknowledgements verified. |
| 7 | Whether the draft roll has been published after integrating the supplements. If, so, whether there is any case of data loss in the process | The draft roll was published after integrating the supplements. No case of data loss in the process was reported. |
| 8 | Whether the pdf of electoral roll is available on the website of the CEO?<br>Has the copy of PER of the entire constituency has been published at the notice board of the ERO as well as is available at a place in ERO office for public inspection.<br>Also draft electoral roll of the concerned part (PS) should have been published at the polling station / designated location at what other place the roll has been published / made available for public inspection. | It is available on the web site of the CEO.<br>The copy of the roll was published on the Notice board of the ERO and AERO<br>The roll was published at all Polling stations as well as designated locations<br>The DEO has instructed the AEROs to handover a copy of the roll to Rural and Urban Local Bodies for public inspection |
| 9 | Are forms 6, 6A, 7, 8 and 8A available in adequate number at every polling station/ designated | Yes. |

| | | |
|---|---|---|
| | locations? | |
| 10 | How and in what ways adequate publicity been given to on going summary revision? (Please attach a note).<br><br>Mention specifically if anything innovative has been done by the DEO/ERO? | **Published in daily newspapers / local media and also meeting with Political parties.**<br><br>**The DEO is creating awareness through twitter handles and face book pages frequently.** |
| 11 | What steps have been taken to ensure registration of weaker/ marginalized sections of the society? If there is any area predominately inhabited by such persons, then make visit to there and direct the field machinery to keep focus on such PSs. | **Special focus has been given to areas predominantly inhibited by minority people and slum dwellers. Nodal officers from Social Welfare, Women and Child, Minorities and Disabled welfare Departments have been appointed to identify and visit the areas predominately inhabited by weaker/marginalized section of the society to encourage and co-ordinate timely registration .** |
| 12 | Has the district put in place an effective Public Grievance Management System (PGMS)? Please check yourself its effectiveness by adopting suitable tactics. The PGMS should, inter alia, include - | **Yes** |
| | a) A district call centre / control room with a toll free number (Please note 1950 toll free number is to function from CEOs office only. Districts should have some other | **A District call center /control room is in place with the number 08375-249102** |

| | | |
|---|---|---|
| | number. Please mention this number) | |
| | b) A SMS based complaint registration system. | Yes |
| | c) A web based complaint registration system. | Yes. |
| | d) An all day working control room/ separate public facilitation counter for guiding public and answering their queries and also for lodging complaints and receiving the forms in the office of DEO and EROs. | Yes. |
| | e) What sort of mechanism has been put in place for timely inquiry and action on all complaints? Please check complaint register to ascertain the reality. | Helpdesk have been setup in all ERO and AERO offices to address any complaint lodged. Any complaint received in District Helpline, is immediately forwarded to concerned offices and addressed within minimum possible time. |
| | f) Whether there is any mechanism to inform the complaint about the result of inquiry and action taken | Action taken is being informed to the complainant through Phone call and SMS . it is also uploaded in NGRS Portal. |
| 13 | You Should see the scrutiny/ analysis of the draft rolls using formats 1 to 8 done by the DEO/ERO concerned. You may also do some analysis, if needed, to do some cross checks. What are the | Scrutiny analysis of the draft rolls are done by using format 1-8 communicated by the office of the CEO.<br>Top 20 and bottom 20 additions, deletions, young voter inclusion are verified.<br>Analysis also done in respect to Gender ratio, EP ratio, age cohort, Epic and photo |

| | | |
|---|---|---|
| | challenge areas and targets made by the DEO/ERO for district/AC (Please refer ECI guidelines dated 25th July 2019.). Based on the analysis made by you/DEO/ERO, the major areas of concern need to be identified along with the frame suitable strategies / corrective action plans. Please make a mention of this, Major focal points of analysis are. | coverage.<br><br>Major areas of concern are identified in district. They are Low gender ratio and enrolment of 18-19 electors.<br>The EROs and AEROs are instructed to work on these lines to counter these problematic areas. |
| | Elector Population Ratio (EP Ratio). For every district it should be equal to the projected population in the 18+ age group. In other words every otherwise eligible person 18 years or more should be enrolled as electors. | The District has a projected population of 1782723 for 2021 and the number of electors is 1266772.<br>Haveri District has the EP ratio is 71.06 where as the state ratio is 71.11 Therefore the District has the ratio in par with State Ratio |
| | a) Age Cohort wise analysis – The percentage of 18+ populations in every age cohort should be compiled/ available from the census data. This should match, to the extent possible, with the percentage of electors in every age cohort. In case it is less it may be because of missing enrollment and if it is more it may be because of non deletion of dead or shifted voters. | Except for the age groups of 18-19 and 19-20 the district has no problem with the EP Ratio in any of the age groups.<br>18-19 population as per Age Cohort for the District is 30229. But as per the Electoral roll the 18-19 age group voters are 11627 . The gap is mainly because lot of young people have not registered either because they are migrated to other cities in search of good education or job opportunities. Or COVID may be one of the reasons for low enrollment. Hence the enrollment of this age group is less. But the DEO has assured that during SSR 2020 all necessary steps will be taken to enroll all eligible young voters. |

| | | |
|---|---|---|
| | b) Gender Ratio. Gender ratio of the population should ideally match with the elector gender ratio. The sharp deviations may be attributed to migration of males to neighboring districts for economic reasons, double registration of females both as daughter and daughter in law or any other reason. Please find out the reasons and also see that necessary strategy is made to address the issue. ECI is deeply concerned over a generally apathy/ insensitivity seen in females' registration as electors. | **The DEO has made a Gender Ratio analysis and instructed the AEROs and EROs for follow-up action .**<br><br>**District Gender Ratio for population : 951**<br><br>**District Gender Ratio for Electors : 944**<br><br>**A gap was observed between the census and electors gender ratio. It is observed that as compared to state Gender Ratio of 982, the district has a low GR. The main reason may be the GR for Census itself is low in the district. Even then also the gap is on higher side. This is mainly because two of the ACs namely Hanagal and shiggaon are showing very low Gender Ratios of 924 and 927 respectivly .**<br>**The matter was discussed in detail with both the AEROs, EROs and DEO. In discussion with EROs it is observed that the areas predominantly resided by the minorities are showing low gender ratio.**<br>**The DEO explained that the administration is continuously pressing this issue for the last five years. Because of these efforts the Gender Ratio which was as low as 891 in 2013 had gradually increased to 944.**<br><br>**The AEROs were directed to visit the low GR polling stations along with CDPO and EO TP. Find out the reasons for low female enrolment and immediately undertake the necessary measures and give compliance.** |

| | | |
|---|---|---|
| | | |
| | c) A close vigil on percentage of inclusions/ deletions (by Form 7 or sou-motu) etc. It has been our experience that on an average every year there is 4% inclusion and 2% deletion resulting in 2% increase in the roll. (Note – let everybody stand clarified that it is just indicative and cannot be taken as uniform yardstick/ principle / red point.) You should look with suspicion any abnormal increase in inclusion or deletion and compare it with inclusion and deletion in previous years. Similar vigil in case of deletions is expected | This year the district has received and a total of 12929 form 6 and names are included in the Rolls.<br>In the same period a total of 3810 Form 7 were received and names were deleted , .But no Suo-motu deletion was carried out.<br><br>A net change in the number of electors is 9119.<br>Addition percentage = 1.03<br>Deletion Percentage = 0.31<br>Net increase = 0.73 %<br><br>The pandemic covid is the main reason for low inclusion and deletion |
| | d) What is the strategy for 100% PER/EPIC? | The district has achieved 100% PER and 100% EPIC.<br>Only 9 electors are found without EPIC<br>This is because of technical reasons. And necessary corrections will be done at the back end . |
| 14 | Please do a Random quality check of disposal of Forms 6, 6A, 7, 8 and 8A to find out if being done as per law and ECI instructions. In case of | A random check of forms was done along with field verification.<br>And it is found that the disposal of forms was carried out as per law and ECI instructions. |

| | | |
|---|---|---|
| | abnormal rejection, find out reasons. | No abnormal rejections were found. |
| 15 | Please Check How many forms accepted by different modes. Also what was public response on special campaign day? | Special campaign days are scheduled on<br>a)22.11.2020 (Sunday)<br>b) 29.11.2020 (Sunday)<br>c) 06.12.2020 (Sunday)<br>d) 13.12.2020 (Sunday)<br><br>The response of public is good, The district has received a total of 3260 forms on the first two Special Campaign Days.<br><br>2067 Form 6, 761 Form 7, 375 Form 8 and 57 Form 8a.<br>of these forms .<br>Through BLO :- 3005<br>Through BLA :- NIL<br>Through Internet :- Nil<br>Directly to AERO :- 255<br>Through DEOs office :- NIL |
| 16 | After passing the order by AERO/ERO super checking of 50 verified entries as randomly selected by ERONet (20 additions+20 deletions+10 modification) shall be done by the Roll Observer in his assigned district. The entries to be verified by the Roll Observer by table top exercise as well as field verification will invariable include the entries verified by AERO, ERO, Dy. DEO and DEO. | So far no orders are passed during the present summery revision.<br>With regard to the forms of last year 50 entries [ 20 Additions,20 Deletions and 10 Modifications] are randomly checked and verified.<br>Along with these forms, a field visit was also carried out to check the work of BLOs |

| | | |
|---|---|---|
| 17 | Please Obtain specific and quantifiable inputs on SVEEP and public awareness measures in the format prescribed by the ECI | 1. Banners have been printed and displayed at prominent places.<br>2. NGOs and CBOs have been roped in for larger reach<br>3. Continuous monitoring is being done.<br>4. Marginalized groups have been reached. |
| 18 | Whether designated officers are doing preliminary checking of forms at the time of acceptance ? | yes. |
| 19 | You should check the functioning of ERO Net in the District whether forms received are, first off all, digitized / data Entry done on daily basis on ERONet and drill down list of claims / objections etc., are available in website. (Pl. see ECI Guideline dated 25th July 2019). ECI Instruction on transferency measures have to be completed to by all concerned and any laxity in this regard will be viewed seriously. 100% compliance is demanded. Pl. talk to technical officer in charge of this to ensure it. if there are any glitches, they should be immediately brought to the notice of the CEO of correction. | ERO net is functioning fully in the District. The digitization, processing and disposal of all types of forms are carried out through ERO net only. Even generating PDF copies of electoral rolls and EPICs also done through ERO Net only. No technical glitches are reported. |

| | | |
|---|---|---|
| 20. | Whether a de-duplicating software was run on e-roll database of an AC, if so what was the output and how many duplicate names were deleted from the roll after field verification by BLOs. Deletion should be done only after following the statutory provisions of notice and hearing. | De-duplicating software is not run by DEO office. But, in ERO.Net demographically similar entries (DSE) and logical errors were identified. Last year a Total of 2582 DSEs and 198 logical errors were identified.. |

| Sl No. | AC No. and Name | Total No. of DSE Identified | Total No. of Logical Errors Identified. |
|---|---|---|---|
| 1 | 82-Hangal | 294 | 51 |
| 2 | 83-Shiggaon | 349 | 19 |
| 3 | 84-Haveri | 660 | 36 |
| 4 | 85-Byadagi | 322 | 20 |
| 5 | 86-Hirekerur | 332 | 40 |
| 6 | 87-Ranebennur | 625 | 32 |
| | Total | 2582 | 198 |

Out of 2582 DSEs 1534 DSEs were resolved and 1048 DSEs are pending. and of the logical errors only 64 are pending. These pending DSEs are for across parts and ACs and will need time All duplicate names were deleted from the roll only after field verification by BLOs, and following the statutory provisions of notice and hearing.

| | | |
|---|---|---|
| 21 | You should also Find out if forms received in bulk from any/ individual or NGOs. (Please refer to ECI | Bulk forms were not received from any political parties and NGOs. |

| | | |
|---|---|---|
| | instructions on filing of applications by BLAs ) | Yes. |
| 22 | Whether the multimedia campaign on enrollment is being run properly in the district? | |
| 23 | In what way the Common Service Centre's (CSCs) are being used for electoral roll related works. | Common Service Centre's (CSCs) are used for verification and correction of electoral details as a part of EVP programme. . CSCs are used to receive all types of Forms . They can also take up the work of Printing of color EPICs. |
| 2 | Has a baseline study of Knowledge, Attitudes and Practices of voters been carried out in the district? If so what does it discloses? | NO<br>The office of the CEO used to get the KAP study carried out by outsourcing agency in some selected ACs every year. Year before last 82- Hangal AC was included in this study. This time the district has not received any report about the study being conducted in any of the ACs in the District. |

Manoz Jain, I.A.S.,

ROLL OBSERVER FOR HAVERI DISTRICT

## ದಿನಾಂಕ: 30-11-2020 ರಂದು ಮಧ್ಯಾಹ್ನ 2.30 ಗಂಟೆಗೆ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2020ಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿ ವೀಕ್ಷಕರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಿಗಳ ಸಭೆಯ ನಡುವಳಿಗಳು.

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಮಾನ್ಯ ಮತದಾರರ ಪಟ್ಟಿ ವೀಕ್ಷಕರು
2. ಜಿಲ್ಲಾಧಿಕಾರಿಗಳು ಹಾವೇರಿ.
3. ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಹಾವೇರಿ
4. ಅಪರ ಜಿಲ್ಲಾಧಿಕಾರಿಗಳು ಹಾವೇರಿ.
5. ಉಪವಿಭಾಗಾಧಿಕಾರಿಗಳು ಹಾವೇರಿ/ಸವಣೂರು.
6. ಜಿಲ್ಲೆಯ ಎಲ್ಲ ತಹಶೀಲ್ದಾರರು
7. ಚುನಾವಣಾ ತಹಶೀಲ್ದಾರ

ಪ್ರಾರಂಭದಲ್ಲಿ ಸಭೆಗೆ ಹಾಜರಿದ್ದ ಮಾನ್ಯ ಮತದಾರರ ಪಟ್ಟಿ ವೀಕ್ಷಕರು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಎಲ್ಲ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ಸ್ವಾಗತಿಸಿದರು.

ಪ್ರಾರಂಭಕ್ಕೆ ಹಾಜರಿದ್ದ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಮಾನ್ಯ ಮತದಾರರ ಪಟ್ಟಿ ವೀಕ್ಷಕರು ಚರ್ಚಿಸಿದರು. ದಿನಾಂಕ:18-11-2020ರಂದು ಜಿಲ್ಲೆಯಾದ್ಯಂತ ಪ್ರಕಟವಾದ ಕರಡು ಮತದಾರರ ಪಟ್ಟಿಯ ಒಂದು ಪ್ರತಿಯನ್ನು ತಹಶೀಲ್ದಾರರು ಎಲ್ಲ ರಾಜಕೀಯ ಪಕ್ಷಗಳಿಗೆ ಉಚಿತವಾಗಿ ಒದಗಿಸಿದ ಬಗ್ಗೆ ಕೇಳಿದಾಗ ಎಲ್ಲ ತಹಶೀಲ್ದಾರರು ರಾಜಕೀಯ ಪಕ್ಷಗಳಿಗೆ ಒದಗಿಸಿರುವುದಾಗಿ ತಿಳಿಸಿದರು.

ನಂತರ ಮಾನ್ಯ ವೀಕ್ಷಕರು ದಿನಾಂಕ: 18-11-2020 ರಂದು ಜಿಲ್ಲೆಯಾದ್ಯಂತ ಪ್ರಕಟವಾದ ಮತದಾರರ ಪಟ್ಟಿಯ ಅಂಕಿ ಅಂಶಗಳನ್ನು ಪರಿಶೀಲಿಸುತ್ತಾ ಆರೋಗ್ಯಕರ ಮತದಾರರ ಪಟ್ಟಿಯ ವಿವಿಧ ಅಂಶಗಳಾದ ಜನಸಂಖ್ಯೆ ಮತ್ತು ಮತದಾರರ ಅನುಪಾತ, ಲಿಂಗಾನುಪಾತ ಹಾಗೂ ವಿವಿಧ ವಯೋಮಾನಗಳ ಮತದಾರರ ವಿವರಗಳನ್ನು ಹಾಜರಿದ್ದ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಜಿಲ್ಲೆಯ ಜನಸಂಖ್ಯೆ ಮತ್ತು ಮತದಾರರ ಅನುಪಾತವು 71.06 ಇರುವುದನ್ನು ಕುರಿತು ತೃಪ್ತಿ ವ್ಯಕ್ತಪಡಿಸಿದರು. ಆದರೆ ಜಿಲ್ಲೆಯ ಲಿಂಗಾನುಪಾತವು 944 ಇರುವುದನ್ನು ಕುರಿತು ಜನಸಂಖ್ಯೆಯ ಲಿಂಗಾನುಪಾತಕ್ಕೆ ಹೋಲಿಸಿದಾಗ ಇದು ಕಡಿಮೆಯಿದ್ದು ಇದನ್ನು ಬರುವ ದಿನಗಳಲ್ಲಿ ಹೆಚ್ಚು ಮಾಡಬೇಕು. ಇದಕ್ಕಾಗಿ ಮಹಿಳಾ ಮತದಾರರ ಸಂಖ್ಯೆಯು ಕಡಿಮೆ ಇರುವ ಮತಗಟ್ಟೆಗಳ ಬಿ.ಎಲ್.ಓ ರವರ ಪ್ರತ್ಯೇಕ ಸಭೆಯನ್ನು ಕರೆದು ಕಾರಣಗಳನ್ನು ಚರ್ಚಿಸಿ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಹಾನಗಲ್ಲ ಮತ್ತು ಶಿಗ್ಗಾಂವ ವಿಧಾನಸಭಾ ಕ್ಷೇತ್ರಗಳು ಕ್ರಮವಾಗಿ 924 ಮತ್ತು 927 ಲಿಂಗಾನುಪಾತವನ್ನು ಹೊಂದಿರುವುದಕ್ಕೆ ತಮ್ಮ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ ಬರುವ ದಿನಗಳಲ್ಲಿ ಈ ಪ್ರಮಾಣವನ್ನು ಹೆಚ್ಚು ಮಾಡಲು ತುರ್ತು ಕ್ರಮವನ್ನು ಕೈಗೊಳ್ಳದೇ ಹೋದಲ್ಲಿ ಶಿಸ್ತು ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

18 ರಿಂದ 19 ರ ವಯೋಮಾನದ ಯುವ ಮತದಾರರ ಸಂಖ್ಯೆಯು 30229 ಇದ್ದು ಇದು ಒಟ್ಟು ಮತದಾರರ ಶೇ:2.38 ರಷ್ಟು ಮಾತ್ರ ಆಗಿದ್ದು ಜನಸಂಖ್ಯೆಯ ಪ್ರಕಾರ 2.67 ಇರಬೇಕಿತ್ತು. ಎಂದು ಹೇಳಿದರು ಅದಕ್ಕೆ ಜಿಲ್ಲಾಧಿಕಾರಿಗಳು ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಈ ವಯೋಮಾನದ ರಾಜ್ಯದ ಸರಾಸರಿಯು 1.74 ಇದ್ದು ಜಿಲ್ಲೆಯ ಅಂಕಿಅಂಶಗಳು ಅದಕ್ಕಿಂತ ಉತ್ತಮವಾಗಿವೆ ಅಲ್ಲದೇ ಕರಡು ಮತದಾರರ ಪಟ್ಟಿಯ ಪ್ರಕಟಣೆಯ ನಂತರ ಮತ್ತೆ ಸುಮಾರು 8,000 ಯುವ ಮತದಾರರ ಅರ್ಜಿಗಳು ಸ್ವೀಕೃತವಾಗಿವೆ. ಕಾರಣ ಈ ಪ್ರಮಾಣ ಇನ್ನು ಹೆಚ್ಚಾಗುವ ಸಂಭವವಿದೆ ಎಂದು ವಿವರಿಸಿದರು.

ಪುಟ 2 ಕ್ಕೆ,

ಕರಡು ಮತದಾರರ ಪಟ್ಟಿಯಲ್ಲಿ 17566 ವಿಕಲಚೇತನ ಮತದಾರರು ಇರುವ ಅಂಶವನ್ನು ಚರ್ಚಿಸುತ್ತಾ ಈ ಅಂಕಿ ಅಂಶಗಳನ್ನು ಜಿಲ್ಲಾ ವಿಕಲಚೇತನ ಕಲ್ಯಾಣ ಇಲಾಖೆಯ ಅಂಕಿ ಅಂಶಗಳೊಂದಿಗೆ ಪರಿಶೀಲಿಸಲು ತಿಳಿಸಿದರು. ಇದಕ್ಕೆ ಜಿಲ್ಲಾಧಿಕಾರಿಗಳು ಈ ಎಲ್ಲ ಅಂಕಿ ಅಂಶಗಳನ್ನು ಜಿಲ್ಲಾ ವಿಕಲಚೇತನ ಕಲ್ಯಾಣ ಇಲಾಖೆಯ ಗ್ರಾಮಮಟ್ಟದ ಕಾರ್ಯಕರ್ತರ ಸಹಯೋಗದೊಂದಿಗೆ ತಯಾರಿಸಲಾಗಿರುತ್ತದೆ ಎಂದು ವಿವರಿಸಿದರು.

ನಂತರ ವೀಕ್ಷಕರು ಕಳೆದ ಅಂತಿಮ ಮತದಾರರ ಪಟ್ಟಿ ಪ್ರಕಟವಾದ ಬಳಿಕ ಕರಡು ಪಟ್ಟಿಯ ಪ್ರಕಟಣೆವರೆಗೆ ಹಾಗೂ ನಂತರದ ಮಿಂಚಿನ ನೊಂದಣಿ ಕಾರ್ಯಕ್ರಮದಲ್ಲಿ ಸ್ವೀಕೃತವಾದ ಎಲ್ಲ ನಮೂನೆ 6,7,8,8ಎ–ಗಳ ಸಂಖ್ಯೆ ಹಾಗೂ ಅವುಗಳ ವಿಲೇವಾರಿಯಲ್ಲಿ ಸಾಧಿಸಿದ ಪ್ರಗತಿಯನ್ನು ಕುರಿತು ಪರಿಶೀಲಿಸಿದರು. ಹಾಗೂ ಮಿಂಚಿನ ನೊಂದಣಿ ಸಂದರ್ಭದಲ್ಲಿ ವಿವಿಧ ನಮೂನೆಗಳನ್ನು ಸ್ವೀಕರಿಸಿದ ಕುರಿತು ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದರು.

90 ರಿಂದ 100 ವಯಸ್ಸು ಮೇಲ್ಪಟ್ಟ 6332 ಮತದಾರರಿದ್ದು, ಇವರ ಇರುವಿಕೆಯ ಬಗ್ಗೆ ಪರಿಶೀಲಿಸಲು ಸೂಚಿಸಿದರು, ಹಾಗೂ ಮತದಾರರ ಮಿಂಚಿನ ನೊಂದಣಿಯಲ್ಲಿ ಸವಣೂರ ತಾಲೂಕಿನಲ್ಲಿ ಅತೀ ಕಡಿಮೆ ನೊಂದಣಿಯಾಗಿದ್ದು ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು ಮುಂದಿನ ದಿನಗಳಲ್ಲಿ ಮಿಂಚಿನ ನೋಂದಣಿಯಲ್ಲಿ ಹೆಚ್ಚಿನ ನೊಂದಣಿಯಾಗುವಂತೆ ತಾಲೂಕಿನ ಎಲ್ಲ ಬಿ. ಎಲ್. ಓ. ಗಳಿಗೆ ಸೂಕ್ತ ನಿರ್ದೇಶನ ನೀಡಲು ಸೂಚಿಸಿದರು.

ಕೊನೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳಿಗೆ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸುವ ಕಾರ್ಯವು ಒಬ್ಬ ವ್ಯಕ್ತಿಗೆ ಮತದಾನದ ಹಕ್ಕನ್ನು ದೊರಕಿಸಿಕೊಟ್ಟು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಕಾರಣ ಎಲ್ಲ ಅರ್ಹ ಮತದಾರರು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ನೊಂದಣಿಯಾಗುವಂತೆ ಕ್ರಮ ವಹಿಸಲು ಅದೇ ಕಾಲಕ್ಕೆ ಅನರ್ಹರು ಮತದಾರರ ಪಟ್ಟಿಯಲ್ಲಿ ಸೇರಿಕೊಳ್ಳದಂತೆ ಎಚ್ಚರಿಕೆ ವಹಿಸಲು ಸೂಚಿಸಿದರು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀಮನೋಜ ಜೈನ್. ಐ.ಎ.ಎಸ್.<br>
ವಿಶೇಷ ಆಯುಕ್ತರು.(ಯೋಜನೆ) ಬಿ.ಬಿ.ಎಂ.ಪಿ. ಬೆಂಗಳೂರು<br>
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಹಾವೇರಿ.<br>
ಹಾಗೂ ಮತದಾರರ ಪಟ್ಟಿ ವೀಕ್ಷಕರು,<br>
ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷರಣೆ–2020

ಶ್ರೀಮತಿ ಉಮಾ ಮಹಾದೇವನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:20.11.2020 ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

-----

ಪ್ರಾರಂಭದಲ್ಲಿ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕೋಲಾರರವರು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಬಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಹಾಗೂ ನಿರ್ದೇಶಕರು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ನಡೆಸಿಕೊಡಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಈ ಕೆಳಕಂಡ ಯೋಜನೆಗಳ ಅನುಷ್ಠಾನದ ಬಗ್ಗೆ ಹಾಜರಿದ್ದ ಅಧಿಕಾರಿಗಳಿಗೆ ಮಾರ್ಗದರ್ಶನ/ಸೂಚನೆ ನೀಡಿದರು.

1. **ಕೋವಿಡ್-19:**

ಕೋಲಾರ ಜಿಲ್ಲೆಯಲ್ಲಿ ಕೋವಿಡ್- 19 ರ ಪರಿಸ್ಥಿತಿಯ ಬಗ್ಗೆ ಪರಿಶೀಲಿಸುತ್ತಾ, ಪ್ರಸ್ತುತ ಪರಿಸ್ಥಿತಿಯ ಮಾರಣಾಂತಿಕ ದರಗಳು, ಸಂಪರ್ಕ ಪತ್ತೆ ಹಚ್ಚುವಿಕೆ, ಮೂಲಸೌಕರ್ಯ ಮತ್ತು ಹಾಸಿಗೆಯ ಲಭ್ಯತೆಯ ವಿವರಗಳನ್ನು ಪರಿಶೀಲಿಸಿದರು.

2. **ಇ-ಗ್ರಾಮ ಸ್ವರಾಜ್ ಕ್ರಿಯಾ ಯೋಜನೆಗಳ ಬಗ್ಗೆ:**

14ನೇ ಹಣಕಾಸು ಆಯೋಗದ ಯೋಜನೆಯಡಿ 2015-16, 2016-17, 2017-18, 2018-19 ಮತ್ತು 2019-20ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಉಳಿಕೆ ಇರುವ ಅನುದಾನಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸಲ್ಲಿಸಲು ಸೂಚಿಸಿದರು.

ಕ್ರಿಯಾ ಯೋಜನೆಯನ್ನು ಇ-ಗ್ರಾಮ ಸ್ವರಾಜ್ ತಂತ್ರಾಂಶದಲ್ಲಿ ಕಾಮಗಾರಿಗಳ ಪಟ್ಟಿಯನ್ನು ತಕ್ಷಣವೇ ನಮೂದಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾರ್ಯಾದೇಶ ನೀಡಲು ಸೂಚಿಸಲಾಯಿತು. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತವಾಗದಂತೆ ಕ್ರಮ ವಹಿಸಲು ಸೂಚಿಸಿದರು.

ಕ್ರಿಯಾ ಯೋಜನೆಯ ಮೊತ್ತವನ್ನು ಶಾಶ್ವತವಾಗಿ ಗುರ್ತಿಸುವಂತಹ ಒಳ್ಳೆಯ ಕೆಲಸಗಳಿಗೆ ಅಂದರೆ ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯಗಳಿಗೆ ಪ್ರಥಮ ಆದ್ಯತೆ ನೀಡಬೇಕೆಂದು ಹಾಗೂ ಹೆಚ್ಚುವರಿ ಕ್ರಿಯಾ ಯೋಜನೆಯ ಇ-ಗ್ರಾಮ ಸ್ವರಾಜ್ ಗ್ರಾಮದ ಅಡಿಯಲ್ಲಿ ಬರುವ ಗ್ರಾಮಗಳ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲು ಸೂಚಿಸಿದರು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಬಾಕಿ ಇರುವ ವಿದ್ಯುತ್ ಬಿಲ್ಲುಗಳಿಗೆ ಪಾವತಿಸಲು ಸಭೆಯಲ್ಲಿ ತಿಳಿಸಿದರು.

ಕ್ರಿಯಾ ಯೋಜನೆಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ನಿಯಮಿತವಾಗಿ ಪಂಚತಂತ್ರ ತಂತ್ರಾಂಶದಲ್ಲಿ ತಪ್ಪದೇ ನಮೂದಿಸಲು ಸಭೆಯಲ್ಲಿ ಸೂಚಿಸಿದರು.

3. **ತೆರಿಗೆ ಪರಿಷ್ಕರಣೆ:**

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ಪರಿಷ್ಕರಣೆಗೆ ಸಂಬಂಧಿಸಿದಂತೆ ಆಸ್ತಿಗಳ ಸಮೀಕ್ಷೆ ಮಾಡಿಸಿ, ಟ್ಯಾಕ್ಸ್ ಸರ್ವೆ ರಿಜಿಸ್ಟರ್ ತೆರೆಯಬೇಕು. ವಾಣಿಜ್ಯ ತೆರಿಗೆ, ಸರ್ಕಾರಿ ಜಮೀನು, ಪ್ರತಿಯೊಂದನ್ನು ಅಸೆಸ್‌ಮೆಂಟ್ ರಿಜಿಸ್ಟರ್‌ನಲ್ಲಿ ಕಡ್ಡಾಯವಾಗಿ ನಮೂದಿಸಬೇಕು ಈ ಎಲ್ಲಾ ಆಸ್ತಿಗಳಿಗೆ ತೆರಿಗೆ ಪುಸ್ತಕದಲ್ಲಿ ಪರಿಷ್ಕರಿಸಿರುವ ದರಗಳಂತೆ ತೆರಿಗೆಯನ್ನು ಕಡ್ಡಾಯವಾಗಿ ಭರಿಸಿಕೊಂಡು ಪಂಚಾಯಿತಿಗಳ ಆದಾಯವನ್ನು ಹೆಚ್ಚಿಸಿಕೊಳ್ಳಲು ಸೂಚಿಸಿದರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಕೆಳಕಂಡ ದಿನಾಂಕಗಳಂದು ತೆರಿಗೆ ಪರಿಷ್ಕರಣೆ ಮಾಡುವುದಾಗಿ ತಿಳಿಸಿದರು.

- ಕೋಲಾರ 15.12.2020
- ಮಾಲೂರು 01.12.2020
- ಬಂಗಾರಪೇಟೆ 15.12.2020
- ಕೆ.ಜಿ.ಎಫ್ 10.12.2020
- ಮುಳಬಾಗಿಲು 10.12.2020
- ಶ್ರೀನಿವಾಸಪುರ 15.12.2020

ಎಲ್ಲಾ ವಿವರಗಳನ್ನು ಪ್ರಧಾನ ಕಾರ್ಯದರ್ಶಿ (ಪಂಚಾಯತ್ ರಾಜ್) ಹಾಗೂ ಉಸ್ತುವಾರಿ ಕಾರ್ಯದರ್ಶಿಯವರು ಪರಿಶೀಲಿಸಿ ದಿನಾಂಕ:01.12.2020ರಿಂದ ಜಾರಿಗೆ ಬರುವಂತೆ ಪರಿಷ್ಕೃತ ತೆರಿಗೆಯನ್ನು ದಿನಾಂಕ:15.12.2020ರೊಳಗಾಗಿ ಪೂರ್ಣಗೊಳಿಸಬೇಕೆಂದು ಹಾಜರಿದ್ದ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

ಸರ್ಕಾರದಿಂದ ಬಂದಿರುವ ತೆರಿಗೆ ಪರಿಷ್ಕರಣೆಗೆ ಸಂಬಂಧಪಟ್ಟಂತೆ ಎಲ್ಲಾ ಆದೇಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಷ್ಠಾನಗೊಳಿಸಿ ಹೆಚ್ಚಿನ ಆದಾಯ ತರಲು ಸಂಪೂರ್ಣ ತೆರಿಗೆಯನ್ನು ವಸೂಲಾತಿ ಮಾಡಲು ಹಾಜರಿದ್ದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲಾಯಿತು.

4. **ಗ್ರಾಮ ಸಭೆಗಳು:**

ಗ್ರಾಮ ಸಭೆಗಳನ್ನು ನಡೆಸಿ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ 7 ದಿನಗಳೊಳಗಾಗಿ ನಡುವಳಿಗಳನ್ನು ಪಂಚತಂತ್ರದಲ್ಲಿ ಅಳವಡಿಸಬೇಕೆಂದು ಹಾಜರಿದ್ದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲಾಯಿತು.

5. **ಮಕ್ಕಳ ಗ್ರಾಮ ಸಭೆಗಳು**

ಮಕ್ಕಳ ಗ್ರಾಮ ಸಭೆಗಳಿಗೆ ಎಲ್ಲಾ ಇಲಾಖೆಗಳಲ್ಲಿ ಲಭ್ಯವಿರುವ ಮಾಹಿತಿಯನ್ನು ಪಡೆದುಕೊಂಡು 6 ರಿಂದ 18 ವರ್ಷದೊಳಗಿನ ಮಕ್ಕಳನ್ನು ಮಕ್ಕಳ ಗ್ರಾಮ ಸಭೆಗಳಿಗೆ ಆಹ್ವಾನಿಸಿ ಪ್ರತಿಯೊಂದು ಮಗುವು ಮಾಸ್ಕ್ ಧರಿಸಿ ಅಂತರ ಕಾಪಾಡಿಕೊಳ್ಳುವ ಬಗ್ಗೆ ಅರಿವು ಮೂಡಿಸಿ ನವೆಂಬರ್–14 ರಿಂದ ಜನವರಿ 24, 2021 ರ ತನಕ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸಲು ಸೂಚಿಸಲಾಯಿತು. ಗ್ರಾಮ ಸಭೆಗಳಲ್ಲಿ ಮಕ್ಕಳು ನೀಡುವ ಸೂಚನೆಗಳನ್ನು ಆಧರಿಸಿ ಮಕ್ಕಳ ಗ್ರಾಮ ಸಭೆಗಳನ್ನು ಸರ್ಕಾರ ನೀಡಿರುವ ಆದೇಶದಲ್ಲಿ ಸೂಚಿಸಿರುವ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮ ವಹಿಸಲು ಸೂಚಿಸಲಾಯಿತು. ಪಂಚಾಯತ್ ರಾಜ್ ಅಧಿನಿಯಮ 58ರಲ್ಲಿ ಸೂಚಿಸಿರುವಂತೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಮಕ್ಕಳ ಕೋರಿಕೆಗಳನ್ನು ದಾಖಲಿಸಿ ಪಾಲನೆಗಾಗಿ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರು.

6. **ಅಡಾಕ್ ಸಮಿತಿ:**

ಗ್ರಾಮ ಪಂಚಾಯಿತಿವಾರು ಆಡಿಟ್ ವರದಿಗಳಲ್ಲಿ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತದ ವಿವರಗಳನ್ನು ಗ್ರಾಮ ಪಂಚಾಯಿತಿವಾರು ಪಟ್ಟಿ ಮಾಡಿ ಗ್ರಾಮ ಪಂಚಾಯಿತಿವಾರು ದಿನಾಂಕಗಳನ್ನು ನಿಗದಿಪಡಿಸಿ ನಿಗದಿತ ಅವಧಿಯೊಳಗೆ ಆಡಿಟ್ ಆಕ್ಷೇಪಣೆಗಳನ್ನು ತೀರುವಳಿ/ಮುಕ್ತಾಯ ಮಾಡುವ ಸಂಬಂಧ ದಾಖಲೆಗಳನ್ನು ಹಾಗೂ ಬಿಲ್ಲುಗಳನ್ನು ಪರಿಶೀಲಿಸಿ ವಿಳಂಬ ಮಾಡದೇ ಕ್ರಮ ವಹಿಸಲು ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ/ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ/ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

7. <u>ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:</u>

ಸದರಿ ಯೋಜನೆಯಲ್ಲಿ ಗ್ರಾಮ ಪಂಚಾಯಿತಿಯಲ್ಲಿ ರಾಜೀವ್ ಗಾಂಧಿ ಭವನ ನಿರ್ಮಿಸಿ, ಆ ಭವನದಲ್ಲಿ ಗ್ರಂಥಾಲಯ, ಓದುವ ಭವನ, ಸ್ವ-ಸಹಾಯ ಸಂಘಗಳಿಗೆ ಸಭಾ ಭವನ ಕಟ್ಟಿಸಿಕೊಡಲು ಅನುವು ಮಾಡಿಕೊಡಲು ತಿಳಿಸಿದರು.

- ಗ್ರಾಮ ಪಂಚಾಯಿತಿಗಳಲ್ಲಿ ಸ್ವಂತ ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಲು ಸೂಚಿಸಲಾಯಿತು.
- ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವನ್ನು ನರೇಗಾ, ಗ್ರಾಮ ಪಂಚಾಯಿತಿ ಮತ್ತು ಇಲಾಖೆಯ ಅನುದಾನವನ್ನು ಒಗ್ಗೂಡಿಸಿಕೊಂಡು ನಿರ್ಮಾಣ ಮಾಡಲು ಸೂಚಿಸಲಾಯಿತು.

ಚಿಕ್ಕಬಳ್ಳಾಪುರ ಜಿಲ್ಲೆ ಮುದ್ದೇನಹಳ್ಳಿ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ನಿರ್ಮಿಸಿದ್ದು, ಜಿಲ್ಲೆಯಿಂದ ಒಂದು ತಂಡ ಮುದ್ದೇನಹಳ್ಳಿ ಶಾಲೆಗೆ ಭೇಟಿ ನೀಡಿ, ವೀಕ್ಷಿಸಲು ಅದೇ ರೀತಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಲು ಹಾಜರಿದ್ದ ಎಲ್ಲಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲಾಯಿತು ಹಾಗೂ ರಾಮನಗರ ಜಿಲ್ಲೆಯ ಕಲ್ಯಾಣಿ ಪುನಸ್ಥಾಪನೆಗಾಗಿ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲಿಸುವ ಬಗ್ಗೆ ಒಂದು ತಂಡವನ್ನು ಕಳುಹಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಉಮಾ ಮಹಾದೇವನ್)**
**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.**

ದಿನಾಂಕ : 23-11-2020 ರಂದು ಮಧ್ಯಾಹ್ನ 03-00 ಘಂಟೆಗೆ ಬಾಗಲಕೋಟೆ ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜರುಗಿದ ಗ್ರಾಮ ಪಂಚಾಯತ ಚುನಾವಣೆಯ ಮುಂಜಾಗ್ರತಾ ಕ್ರಮ, ಕೋವಿಡ್-19ರ ಪ್ರಗತಿ, ಪ್ರವಾಹ/ಅತಿವೃಷ್ಟಿ, ಮತ್ತು ಜಿಲ್ಲೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ನಡುವಳಿಗಳು

************

ಅಧ್ಯಕ್ಷತೆ :

ಶ್ರೀ ಶಿವಯೋಗಿ ಸಿ. ಕಳಸದ, ಭಾಆಸೇ.,
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಾಗಲಕೋಟೆ ಜಿಲ್ಲೆ

ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಮಟ್ಟದ ಅಧಿಕಾರಿಗಳು:

1. ಜಿಲ್ಲಾಧಿಕಾರಿಗಳು, ಬಾಗಲಕೋಟೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ
3. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಬಾಗಲಕೋಟೆ
4. ಶ್ರೀ ಯಶವಂತ್ ವಿ. ಗುರುಕಾರ, ಐ.ಎ.ಎಸ್. (ಪರೀಕ್ಷಾರ್ಥ ಅಧಿಕಾರಿಗಳು) ಬಾಗಲಕೋಟೆ
5. ಅಪರ ಜಿಲ್ಲಾಧಿಕಾರಿಗಳು ಬಾಗಲಕೋಟೆ
6. ಉಪ ವಿಭಾಗಾಧಿಕಾರಿಗಳು, ಬಾಗಲಕೋಟೆ
7. ಉಪ ಕೃಷಿ ನಿರ್ದೇಶಕರು, ಬಾಗಲಕೋಟೆ
8. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಾಗಲಕೋಟೆ
9. ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಬಾಗಲಕೋಟೆ
10. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬಾಗಲಕೋಟೆ
11. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ
12. ಪೌರಾಯುಕ್ತರು, ನಗರಸಭೆ ಬಾಗಲಕೋಟೆ
13. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬಾಗಲಕೋಟೆ
14. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ
15. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಾಗಲಕೋಟೆ
16. ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನೀಯರ್ ವಿಭಾಗ, ಬಾಗಲಕೋಟೆ
17. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಾಗಲಕೋಟೆ
18. ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಬಾಗಲಕೋಟೆ
19. ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕಿಯ ಸೇವೆ, ಬಾಗಲಕೋಟೆ
20. ಉಪ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಾಗಲಕೋಟೆ
21. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬಾಗಲಕೋಟೆ
22. ಎಲ್ಲ ತಹಶೀಲದಾರರು
23. ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ
24. ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳು

*************

ಪ್ರಾರಂಭಿಕವಾಗಿ ಅಪರ ಜಿಲ್ಲಾಧಿಕಾರಿಗಳು, ಬಾಗಲಕೋಟೆರವರು ಸಭೆಯ ಅಧ್ಯಕ್ಷರಿಗೆ ಸ್ವಾಗತವನ್ನು ಬಯಸುತ್ತಾ, ಸಭೆಯಲ್ಲಿ ಹಾಜರಿದ್ದ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಪರೀಕ್ಷಾರ್ಥ ಐ.ಎ.ಎಸ್ ಅಧಿಕಾರಿಗಳು,

ಉಪ ವಿಭಾಗಾಧಿಕಾರಿಗಳು ಹಾಗೂ ಎಲ್ಲ ತಹಶೀಲದಾರರು, ಎಲ್ಲ ಇಲಾಖೆಯ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಪ್ರಗತಿ ಪರಿಶೀಲನಾ ಸಭೆ ಪ್ರಾರಂಭಿಸಲು ಸಭಾಧ್ಯಕ್ಷರಲ್ಲಿ ಕೋರಿದರು.

1) <u>ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ ಕುರಿತು ಕೈಗೊಂಡ ಕ್ರಮಗಳ ಬಗ್ಗೆ :</u>

ಪ್ರಥಮವಾಗಿ ಸಭೆಯನ್ನು ಪ್ರಾರಂಭಿಸುತ್ತಾ, ದಿನಾಂಕ 18.11.2020 ರಂದು ಮೊದಲನೆಯ ಹಂತದ ಮತದಾರ ಪಟ್ಟಿಯ ಕರಡು ಪ್ರತಿ ಪ್ರಕಟಿಸಲಾಗಿದೆ ಹಾಗೂ ಈ ಬಗ್ಗೆ ರಾಜಕೀಯ ಪಕ್ಷದ ಮುಖಂಡರ ಸಭೆ ಸಹಿತ ಜರುಗಿಸಿ ಮಾಹಿತಿ ನೀಡಲಾಗಿದೆ ಎಂದರು.

ಮತದಾರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಸ್ವೀಕೃತವಾದ ನಮೂನೆ 6, 7, 8, 8ಎ ಅರ್ಜಿಗಳ ಬಗ್ಗೆ AERO(ತಹಶೀಲದಾರ) 1% ರಷ್ಟು, ERO(ಉಪ ವಿಭಾಗಾಧಿಕಾರಿಗಳು) 10% ರಷ್ಟು, DEO(ಜಿಲ್ಲಾಧಿಕಾರಿಗಳು) 1% ರಷ್ಟು ಮತ್ತು ವಿಕ್ಷಕರು 1% ರಷ್ಟು ದಾಖಲೆ ಪರಿಶೀಲಿಸಲು ಚುನಾವಣೆ ಆಯೋಗದ ನಿರ್ದೇಶನವಿದ್ದು ಆ ಪ್ರಕಾರ ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ ಅನುಸರಣೆ ಸಲ್ಲಿಸಬೇಕು ಹಾಗೂ ಎಲ್ಲ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ಸೂಚಿಸಿದರು.

ಗ್ರಾಮ ಪಂಚಾಯತಿ ಚುನಾವಣೆಗೆ ಸಂಬಂಧಿಸಿದ ಎಲ್ಲ ಮತಗಟ್ಟೆಗಳಿಗೆ ತಹಶೀಲದಾರರು ಭೇಟಿ ನೀಡಿ ಮತಗಟ್ಟೆ ಸುಸ್ಥಿತಿಯಲ್ಲಿರುವ ಕುರಿತು ಪರಿಶೀಲಿಸಬೇಕೆಂದು ಹಾಗೂ ಪರಿಶೀಲಿಸಿದ ಬಗ್ಗೆ ಆಯಾ ಮತಗಟ್ಟೆಗಳ ಮುಂದೆ ಮತಗಟ್ಟೆಗಳ ಹೆಸರು ಕಾಣುವಂತೆ ನೋಟ್ ಕ್ಯಾಮ್ ಆ್ಯಪ್‌ನಲ್ಲಿ ಛಾಯಾ ಚಿತ್ರ ತೆಗೆದು ಭೇಟಿ ನೀಡಿದ ಬಗ್ಗೆ ಖಾತ್ರಿ ಪಡಿಸಬೇಕು ಹಾಗೂ ನೀವು ಯಾವ ರೀತಿ ಏನು ಕ್ರಮಗಳನ್ನು ಕೈಗೊಂಡಿದ್ದೀರಿ? ಎನ್ನುವುದರ ಬಗ್ಗೆ ಕಡ್ಡಾಯವಾಗಿ ದಿನಚರಿಯನ್ನು ಬರೆಯಬೇಕು ಎಂದು ಸೂಚಿಸಲಾಯಿತು.

ದಿನಾಂಕ: 01.01.2021ರಂದು 18 ವರ್ಷ ಮೇಲ್ಪಟ್ಟ ಎಲ್ಲ ಯುವ ಮತದಾರರನ್ನು ಸೇರ್ಪಡೆ ಮಾಡಲು, ಮೃತ ಮತದಾರರನ್ನು ಮತದಾರರ ಪಟ್ಟಿಯಿಂದ ಕಡಿಮೆಗೊಳಿಸಲು ನಿಯಮಾನುಸಾರ ದಾಖಲೆ ಪರಿಶೀಲಿಸಿ ಕ್ರಮ ವಹಿಸಲು ಸೂಚಿಸಲಾಯಿತು. ಸಾಮಾಜಿಕವಾಗಿ ಹಿಂದುಳಿದ ವರ್ಗವಾಗಲೀ, ಯಾವುದೇ ತಾಂಡಾದಲ್ಲಿರುವ ಕಾರ್ಮಿಕರು ಕೂಲಿ ಕೆಲಸಕ್ಕೆಂದು ಪರಸ್ಥಳಗಳಿಗೆ / ವಲಸೆ ಹೋಗಿರುವ ಮತದಾರರನ್ನು ಗುರುತಿಸಿ ಮತದಾನ ಮಾಡಲು ಅನುವು ಮಾಡಬೇಕೆಂದು ತಿಳಿಸುತ್ತಾ, ಹಾಗು ಒಂದು ವೇಳೆ ಅಂತಹವರು ಮತದಾನ ಮಾಡದೇ ಹೋದರೆ, ಮತದಾರರ ಮತದಾನ ಹಕ್ಕನ್ನು ನಾವು ಕಸಿದುಕೊಂಡಂತ್ತಾಗುತ್ತದೆ, ಹಾಗು ಕಳೆದ ಬಾರಿ ಬಿಟ್ಟು ಹೋಗಿರತಕ್ಕಂತಹ ಮತದಾರರಿಗೆ ಮತದಾನದ ಅರಿವು ಮೂಡಿಸಲು, ಮತದಾನದ ಜಾಗೃತಿಗಾಗಿ ಹಾಗೂ ಮತದಾರ ನೋಂದಣಿ ಕುರಿತು ಭಾರತ ಚುನಾವಣಾ ಆಯೋಗವು ವೇಳಾಪಟ್ಟಿ ಕುರಿತು ಹೆಚ್ಚಿನ ಪ್ರಚಾರವನ್ನು ಮಾಡಬೇಕೆಂದು ವಾರ್ತಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.

2) **ಬೆಳೆ ಪರಿಹಾರ ಸಮೀಕ್ಷೆ ಕುರಿತು :**

ಜಿಲ್ಲೆಯ ಋತುಮಾನ ಹಾಗೂ ಮಳೆ, ಪ್ರವಾಹದಿಂದ ಉಂಟಾದ ಹಾನಿ ಕುರಿತು ಜಂಟಿ ಕೃಷಿ ನಿರ್ದೇಶಕರು, ಬಾಗಲಕೋಟೆರವರು ಸಭೆಗೆ ವಿವರಿಸುತ್ತಾ, ಜಿಲ್ಲೆಯಲ್ಲಿ ದಿನಾಂಕ 25.07.2020 ರಿಂದ 25.10.2020ರ ವರೆಗೆ 528.5ಮೀ.ಮೀ ಮಳೆ ಆಗಿದ್ದು, ಪ್ರತಿಶತ 28 ಮಿ.ಮೀ ಮಳೆ ಜಾಸ್ತಿ ಆಗಿದೆ. ಜಿಲ್ಲೆಯಲ್ಲಿ ಜೋಳ ಬಿತ್ತನೆ ಕಾರ್ಯ ಮತ್ತು ಕಡಲೆ, ಗೋಧಿ ಬಿತ್ತನೆಯು ಈಗಾಗಲೇ 100% ಗುರಿ ತಲುಪಿರುವುದಾಗಿ, ಹಾಗೂ ಬೀಜ ರಸಗೊಬ್ಬರಗಳ ದಾಸ್ತಾನುಗಳ ಯಾವ ತೊಂದರೆ ಆಗಿಲ್ಲವೆಂದು ತಿಳಿಸಿದರು ಹಾಗೂ ಜಿಲ್ಲೆಯಲ್ಲಿ 9 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಹಾವು ಕಡಿತದಿಂದ 6 ಜನ ಮೃತ ಪಟ್ಟಿದ್ದಾಗಿ ಸಭಾಧ್ಯಕ್ಷರ ಗಮನಕ್ಕೆ ತಂದರು.

ಜಿಲ್ಲೆಯಲ್ಲಿ ದಿನಾಂಕ 25.07.2020 ರಿಂದ 25.10.2020 ರವರೆಗೆ ಪ್ರವಾಹ ಹಾಗೂ ಭಾರಿ ಮಳೆಯಿಂದ ಕೃಷಿ ಬೆಳೆಯ 65,489 ಹೆಕ್ಟರ ಕ್ಷೇತ್ರ ಹಾನಿಯಾಗಿದ್ದು ತೋಟಗಾರಿಕೆ ಬೆಳೆಯ 47,036 ಹೆಕ್ಟರ ಕ್ಷೇತ್ರ ಹಾನಿಯಾಗಿರುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ಹಾಗೂ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆಯವರು ಸಭೆಯಲ್ಲಿ ವಿವರಿಸಿದರು. ಜಿಲ್ಲೆಯಲ್ಲಿ ಈಗಾಗಲೇ 90,970 ಫಲಾನುಭವಿಗಳ ಡಾಟಾ ಎಂಟ್ರಿ ಕಾರ್ಯವನ್ನು ಪರಿಹಾರ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಅದರಲ್ಲಿ 19680 ಫಲಾನುಭವಿಗಳಿಗೆ ಸರ್ಕಾರದಿಂದ (ರೂ.20.98 ಕೋಟಿಗಳು) ಫಲಾನುಭವಿಗಳ ಖಾತೆಗೆ ಸರ್ಕಾರದಿಂದ ನೇರವಾಗಿ ಹಣ ಸಂದಾಯವಾಗಿರುತ್ತದೆಂದು ಹಾಗೂ ಕೇಂದ್ರ ನೆರವಿನ ಯೋಜನೆ, ರಾಜ್ಯ ವಲಯ ಯೋಜನೆ, ಜಿಲ್ಲಾ ವಲಯ ಯೋಜನೆಗಳ ಬಗ್ಗೆ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆರವರು ಸಭಾಧ್ಯಕ್ಷರಿಗೆ ತಿಳಿಸಿದರು.

3) **ಕೋವಿಡ್-19 ಹರಡುವಿಕೆಯನ್ನು ತಡೆಗಟ್ಟುವ ಕುರಿತು ಪ್ರಗತಿ ಪರಿಶೀಲನೆ:**

ಜಿಲ್ಲಾ ಸಮೀಕ್ಷಣಾಧಿಕಾರಿಗಳು ಸಭೆಗೆ ವಿವರಿಸುತ್ತಾ, ಜಿಲ್ಲೆಯಲ್ಲಿ ದಿನಾಂಕ 20.11.2020 ರಂದು 1614 ಕೋವಿಡ್-19 ಪರೀಕ್ಷೆಗಳನ್ನು ಮಾಡಲಾಗಿ, 23 ಪ್ರಕರಣಗಳಲ್ಲಿ ಸೋಂಕಿತರು ದೃಢಪಟ್ಟಿರುತ್ತಾರೆ, ಅದರಂತೆ ದಿ.21.11.2020 ರಂದು 1266 ಪರೀಕ್ಷೆಗಳನ್ನು ಮಾಡಲಾಗಿ ಅವುಗಳಲ್ಲಿ 10 ಪ್ರಕರಣಗಳು ಸೋಂಕಿತರೆಂದು ದೃಢಪಟ್ಟಿರುತ್ತವೆಂದು ಹಾಗೂ ದಿ.22.11.2020 ರಂದು 1138 ಪರೀಕ್ಷೆಗಳನ್ನು ಮಾಡಲಾಗಿ ಅವುಗಳಲ್ಲಿ ಕೇವಲ 4 ಪ್ರಕರಣಗಳು ಸೋಂಕಿತರೆಂದು ದೃಢಪಟ್ಟಿರುತ್ತವೆಂದು ಸಭೆಯಲ್ಲಿ ವಿವರಿಸಿದರು.

ಈಗಾಗಲೇ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಪ್ರತಿ ದಿನ ಕೋವಿಡ್-19 ಪರೀಕ್ಷಾ 3400 ಗುರಿ ನಿಗದಿಪಡಿಸಿದ್ದು ಇರುತ್ತದೆ. ಅವುಗಳಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆ 2900, ರ್‍ಯಾಟ್ ಪರೀಕ್ಷೆ 500 ರಂತೆ ಗುರಿ ಸಾಧಿಸಲು ಜಿಲ್ಲಾಧಿಕಾರಿಗಳು ಸೂಚಿಸಿದಾಗ, ಈಗ ಪ್ರತಿ ದಿನ 2000 ಮಾತ್ರ ಪರೀಕ್ಷೆ ಮಾಡುತ್ತಿರುವುದಾಗಿ ಹೇಳಿದರು. ಇದು ಶೇ.33 ಪರೀಕ್ಷೆಗಳ ಕಡಿಮೆ ಪ್ರಮಾಣದಲ್ಲಿ ಆಗಿರುವುದರ ಬಗ್ಗೆ ಹಾಗೂ ಒಂದು ವೇಳೆ ಸರ್ಕಾರದವರು ಇನ್ನೂ ಹೆಚ್ಚಿನ ಗುರಿಯನ್ನು ಸಾಧಿಸಲು ಸೂಚಿಸಿದರೆ ಯಾವ ರೀತಿ ಕ್ರಮ ಕೈಗೊಳ್ಳುವಿರಿ ಎಂದು ಪ್ರಶ್ನಿಸಿದಾಗ, ಅದಕ್ಕೆ ಜಿಲ್ಲಾ ಸಮೀಕ್ಷಣಾಧಿಕಾರಿಗಳು ವಿವರಿಸುತ್ತಾ,

ಈಗಾಗಲೇ ನಮ್ಮಲ್ಲಿ 11 ಲ್ಯಾಬ್ ಟೆಕ್ನಿಶಿಯನ್‌ಗಳು ಮಾತ್ರ ಇರುವರು, ಅವರಲ್ಲಿ ಕೆಲವರು ಆರೋಗ್ಯದ ಸಮಸ್ಯೆಯಿಂದ ರಜೆ ಮೇಲಿರುತ್ತಾರೆ, ಆದುದರಿಂದ ಇನ್ನು 4-5 ಜನ ಲ್ಯಾಬ್ ಟೆಕ್ನಿಶಿಯನ್‌ಗಳು ಬೇಕಾಗಿರುವುದಾಗಿ ಜಿಲ್ಲಾ ಶಸ್ತ್ರ ಚಿಕಿತ್ಸಕರು ಸಭೆಯ ಗಮನಕ್ಕೆ ತಂದು, ಮಾನವ ಶಕ್ತಿ (Man Power) ಕೊರತೆ ಇರುವುದಾಗಿ ತಿಳಿಸಿದರು. ಅದಕ್ಕೆ ಹೊಸದಾಗಿ ಸಿಬ್ಬಂದಿಯನ್ನು ನೇಮಕಮಾಡಿಕೊಂಡು ಇಲ್ಲವೇ ಬೇರೆ ಸಂಸ್ಥೆಗಳಲ್ಲಿನ ಸಿಬ್ಬಂದಿ ಎರವಲು ಪಡೆದುಕೊಂಡು ಪ್ರತಿದಿನ 3400 ಪರೀಕ್ಷಾ ಗುರಿಯನ್ನು ಸಾಧಿಸುವಂತೆ, ಹಾಗೂ ಆರ್‌ಟಿಪಿಸಿಆರ್ ಪದ್ಧತಿಯಲ್ಲಿ ಪೂಲಿಂಗ್ ಪರೀಕ್ಷೆಯನ್ನು ಮಾಡುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸ್ಥಳೀಯ ಜನರು ಗುಂಪು ಗುಂಪಾಗಿ ಸೇರುವ ಪ್ರದೇಶವನ್ನು ಗುರುತಿಸಿ, ಅಂತಹ ಸ್ಥಳಗಳಲ್ಲಿ ಸಾರ್ವಜನಿಕರು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ತಿಳುವಳಿಕೆ ನೀಡಲು ಹಾಗೂ ಮಾಸ್ಕ್ ಧರಿಸದ ಹಾಗೂ ಕೋವಿಡ್-19ರ ನಿಯಮ ಪಾಲಿಸದವರಿಗೆ ದಂಡ ವಸೂಲಿ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಸ್ಥಳಿಯ ಸಂಸ್ಥೆಗಳ ಅಧಿಕಾರಿಗಳಿಗೆ ಸೂಚಿಸಲಾಯಿತು.

4) <u>ಮನೆ ಹಾನಿ ಪ್ರಗತಿ ಕುರಿತು :</u>

ಜಿಲ್ಲೆಯಲ್ಲಿ ಪ್ರವಾಹ / ಮಳೆಯಿಂದ ಮನೆ ಹಾನಿ ಹಾಗೂ RGRHCL ತಂತ್ರಾಂಶದಲ್ಲಿ ಅಳವಡಿಸಿದ ಪರಿಹಾರ ವಿತರಿಸಿದ ಬಗ್ಗೆ ವಿವರಿಸಲು ಹಾಗೂ ಜಿಲ್ಲೆಯಲ್ಲಿ 2020ರ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಆದ ಅತಿವೃಷ್ಟಿ ಹಾಗೂ ಪ್ರವಾಹದಿಂದ ಹಾನಿಗೊಳಗಾದ ಮನೆಗಳ ಸಮೀಕ್ಷೆ ಸಂಪೂರ್ಣಗೊಂಡ ಬಗ್ಗೆ ಹಾಗೂ ಸದರಿ ಮನೆಗಳ ಹಾನಿ ಬಗ್ಗೆ RGRHCL ತಂತ್ರಾಂಶದಲ್ಲಿ ಅಳವಡಿಸಿದ ಬಗ್ಗೆ ಕೇಳಲಾಗಿ, ತಹಶೀಲದಾರ ಜಮಖಂಡಿ 622, ರಬಕವಿ-ಬನಹಟ್ಟಿ 712, ಮುಧೋಳ 1029, ಬಾಗಲಕೋಟೆ 506, ಹುನಗುಂದ 334, ಗುಳೇದಗುಡ್ಡ 421, ಬದಾಮಿ 510, ಇಲಕಲ್ 305, ಬೀಳಗಿ 422, ಮನೆಗಳ ಡಾಟಾ ಎಂಟ್ರಿ ಮಾಡಿರುವುದಾಗಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶರವರು ತಿಳಿಸಿದರು. ಜಿಲ್ಲಾಧಿಕಾರಿಗಳು, ಯಾವುದೇ ರೀತಿಯ ತೊಂದರೆಗಳಿದ್ದರೂ ಅವುಗಳನ್ನು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಸರಿಪಡಿಸಿಕೊಳ್ಳಲು ತಹಶೀಲದಾರರಿಗೆ ನಿರ್ದೇಶಿಸಿ, ಅದರಂತೆ ಈವರೆಗೆ "ಎ, ಬಿ1, ಬಿ2, ಸಿ" ಕ್ಯಾಟಗರಿಯ ಒಟ್ಟು 3711 ಮನೆಗಳಿಗೆ ಈ ಕಛೇರಿಯಿಂದ ಅನುಮೋದನೆ ನೀಡಲಾಗಿದೆ. ಅದರನ್ವಯ 'ಸಿ' ಕ್ಯಾಟಗರಿಯ ಮನೆ ಹಾನಿಗೆ ಸಂಬಂಧಿಸಿದಂತೆ ತಕ್ಷಣ ಅನುದಾನ ಬಿಡುಗಡೆ ಮಾಡಿ "ಪೇ ಜನರೇಟ್" ಮಾಡಲು ಹಾಗೂ 2676 ಅನುಮೋದಿಸಿದ ಮನೆಗಳಿಗೆ ಸಂಬಂಧಿಸಿದಂತೆ "ಜಿಪಿಎಸ್" ಆಧಾರಿತ ಫೋಟೊಗಳನ್ನು ಅಪ್‌ಲೋಡ್ ಮಾಡಲು ನಿರ್ದೇಶನ ನೀಡಲಾಯಿತು, ಅಲ್ಲದೆ ಹಂತವಾರು ನಿಗದಿತ ಅವಧಿಯಲ್ಲಿ ಪ್ರಗತಿ ಸಾಧಿಸಲು ಸೂಚಿಸಲಾಯಿತು.

2019-20ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಯಾದ ಮನೆಗಳಿಗೆ ಮೊದಲ ಹಂತದಲ್ಲಿ ರೂ.1,00,000/- ಅನುದಾನ ಬಿಡುಗಡೆಯಾಗಿದ್ದು, ಅವುಗಳಲ್ಲಿ ಕೆಲವು ಮನೆಗಳ ಕಟ್ಟಡ ಪ್ರಾರಂಭಿಸಿರುವುದಿಲ್ಲ, ಅನುದಾನ ಬಿಡುಗಡೆಯಾಗಿದ್ದರಿಂದ ಬಿಡುಗಡೆಯಾದ ಅನುದಾನವನ್ನು ಕಟ್ಟಡ ಪ್ರಾರಂಭಿಸದೇ ಇರುವ ಫಲಾನುಭವಿಗಳಿಂದ

ವಸೂಲಿ ಆಗದೇ ಇರುವಂತಹ ಮನೆಗಳ ಆಸ್ತಿ ಮೇಲೆ ಭೋಜಾ ದಾಖಲಿಸಲು, ನಿಯಮಾನುಸಾರ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

5) **ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರವರು :**

2020-21ನೇ ಸಾಲಿನ ನಿಗಮದ ಯೋಜನೆಗಳಾದ **"ಉದ್ಯೋಗಿನಿ ಯೋಜನೆ"** ಅಡಿಯಲ್ಲಿ 54 ಭೌತಿಕ ನಿಗದಿತ ಗುರಿ 54 ಫಲಾನುಭವಿಗಳ ಯಾದಿಯನ್ನು ಮಾನ್ಯ ಶಾಸಕರಿಗೆ ಆಯ್ಕೆಗಾಗಿ ಸಲ್ಲಿಸಲಾಗಿದ್ದು, ಇನ್ನೂ ಆಯ್ಕೆಯಾಗಿರುವುದಿಲ್ಲವೆಂದು ಸಭಾಧ್ಯಕ್ಷರ ಗಮನಕ್ಕೆ ತಂದರು. **"ಲಿಂಗತ್ವ ಅಲ್ಪ ಸಂಖ್ಯಾತರ ಪುನರವಸತಿ ಯೋಜನೆ"** ಅಡಿಯಲ್ಲಿ 20 ಅರ್ಜಿಗಳು, **"ಚೇತನ ಯೋಜನೆ"** ಅಡಿಯಲ್ಲಿ 22 ಅರ್ಜಿಗಳು, **"ಧನಶ್ರೀ ಯೋಜನೆ"** ಅಡಿಯಲ್ಲಿ 42 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಸದರಿ ಮಾಹೆಯಲ್ಲಿ ಆಯ್ಕೆ ಮಾಡಲಾಗುವುದು ಹಾಗೂ **"ಕಿರುಸಾಲ ಯೋಜನೆ, ಸಮೃದ್ಧಿ ಯೋಜನೆ"** ಸದರಿ ವರ್ಷದಲ್ಲಿ ಕ್ರಿಯಾ ಯೋಜನೆ ಬಂದಿರುವುದಿಲ್ಲ ಎಂದು ಸಭಾಧ್ಯಕ್ಷರಿಗೆ ತಿಳಿಸಿದರು.

ಜಿಲ್ಲೆಯಲ್ಲಿರುವ ಕಾರ್ಯನಿರತ ಲೈಂಗಿಕ ಕಾರ್ಯಕರ್ತೆಯರ ಪೈಕಿ 36 ಜನ ಮಹಿಳೆಯರಿಗೆ ಪಡಿತರ ಚೀಟಿ ಇರುವುದಿಲ್ಲವೆಂದು ಉಪ ನಿರ್ದೇಶಕರು, ಮ.ಮ.ಕ.ಇ.ರವರು ಸಭಾಧ್ಯಕ್ಷರಿಗೆ ತಿಳಿಸಿದರು.

ಜಿಲ್ಲೆಯಲ್ಲಿರುವ ಕಾರ್ಯನಿರತ ಲೈಂಗಿಕ ಕಾರ್ಯಕರ್ತೆಯರ ಪೈಕಿ 36 ಜನ ಮಹಿಳೆಯರ ಪಟ್ಟಿಯನ್ನು ಉಪ ನಿರ್ದೇಶಕರು, ಮ.ಮ.ಕ.ಇ.ರವರಿಂದ ಪಡೆದುಕೊಂಡು ಪರಿಶೀಲಿಸಿ, ಒಂದು ವಾರದಲ್ಲಿ ವಿತರಿಸುವಂತೆ ಉಪ ನಿರ್ದೇಶಕರು, ಆ.ನಾ.ಸ ಹಾಗೂ ಗ್ರಾ.ವ್ಯ.ಇ.ರವರಿಗೆ ಸೂಚಿಸಲಾಯಿತು.

6) **ಪಂಚಾಯತ ರಾಜ್ ಎಂಜಿನಿಯರಿಂಗ್ ವಿಭಾಗ :**

2020-21ನೇ ಸಾಲಿನ ಅತಿವೃಷ್ಟಿಯಿಂದ 1539.11 ಕಿ.ಮೀ. ಗ್ರಾಮೀಣ ರಸ್ತೆಗಳು ಹಾನಿಯಾಗಿದ್ದು, ರೂ.6,934.35 ಲಕ್ಷಗಳು ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಹಾಗೂ 34 ಬ್ರಿಡ್ಜ್/ಬಂದಾರಗಳು ಹಾನಿಯಾಗಿದ್ದು ರೂ. 140.50 ಲಕ್ಷಗಳು ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ ಹಾಗೂ 29 ಗ್ರಾಮೀಣ ಕುಡಿಯುವ ಮತ್ತು ನೈರ್ಮಲ್ಯ ವಿಭಾಗದ ಕಾಮಗಾರಿಗಳು ಹಾನಿಯಾಗಿದ್ದು ರೂ. 160.00 ಲಕ್ಷಗಳು ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಮೇಲಿನ ಕಾಮಗಾರಿಗಳಿಗೆ ಯಾವುದೇ ರೀತಿಯ ಅನುದಾನ ಈವರೆಗೂ ಸರ್ಕಾರದಿಂದ ಬಿಡುಗಡೆಯಾಗಿರುವುದಿಲ್ಲವೆಂದು ಸಭೆಗೆ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇ.ವಿ.ರವರು ತಿಳಿಸಿದರು.

ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ಒಟ್ಟು ಮಂಜೂರಾದ ಕಾಮಗಾರಿಗಳ ಸಂಖ್ಯೆ 140, ಅಂದಾಜು ಮೊತ್ತ ರೂ. 2470.00 ಲಕ್ಷಗಳು, ಟೆಂಡರಿಗಿಟ್ಟ ಮೊತ್ತ ರೂ. 1859.02 ಲಕ್ಷಗಳು ಹಾಗೂ ಟೆಂಡರ್ / ತುಂಡು ಗುತ್ತಿಗೆ ವಹಿಸಿದ ಗುತ್ತಿಗೆ ಮೊತ್ತ ರೂ. 1815.02 ಲಕ್ಷಗಳ ವಿವರಣೆಯನ್ನು ಸಲ್ಲಿಸಿದರು.

2019-20ನೇ ಸಾಲಿನ ಜಿಲ್ಲೆಯಲ್ಲಿ ವಿಧಾನಸಭಾ ಮತಕ್ಷೇತ್ರದ ಒಟ್ಟು 72 ಕಾಮಗಾರಿಗಳು ಮುಕ್ತಾಯಗೊಂಡಿದ್ದು, 55 ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ ಯಾವುದೇ ಅನುದಾನ ಸರ್ಕಾರದಿಂದ ಬಿಡುಗಡೆ ಆಗಿರುವುದಿಲ್ಲವೆಂದು ಸಭಾಧ್ಯಕ್ಷರ ಗಮನಕ್ಕೆ ತಂದರು.

7) **ಪದವಿ ಕಾಲೇಜು ಸಂಯೋಜಕರು :**

ಜಿಲ್ಲೆಯಲ್ಲಿ ಒಟ್ಟು 63 ಪದವಿಗಳು ಕಾಲೇಜುಗಳಿವೆ. ಅವುಗಳಲ್ಲಿ 18 ಸರ್ಕಾರಿ ಪದವಿ ಕಾಲೇಜುಗಳು, 45 ಖಾಸಗಿ ಹಾಗೂ ಅನುದಾನಿತ ಪದವಿ ಕಾಲೇಜು ಇರುವುದರ ಬಗ್ಗೆ ಮಾಹಿತಿಯನ್ನು ನೀಡಿದರು. ದಿ.17.11.2020 ರಿಂದ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳ ತರಗತಿಗಳು ಪ್ರಾರಂಭವಾಗಿರುತ್ತವೆ. ಸುಮಾರು 15000 ವಿದ್ಯಾರ್ಥಿಗಳು ಪದವಿ ಅಂತಿಮ ವರ್ಷ ವ್ಯಾಸಂಗ ಮಾಡುತ್ತಿದ್ದಾರೆ. ಕೋವಿಡ್-19 (ಎಸ್‌ಓಪಿ) ಸರ್ಕಾರದ ನಿರ್ದೇಶನದಂತೆ ಕೊಠಡಿಗಳಿಗೆ ಸ್ಯಾನಿಟೈಸ್ ಮಾಡಲಾಗಿರುತ್ತದೆ. ಥರ್ಮಲ್ ಸ್ಕ್ಯಾನಿಂಗ್ ವ್ಯವಸ್ಥೆ ಕೂಡ ಲಭ್ಯವಿದ್ದು, ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಹಾಗೂ ಗುಂಪು ಗುಂಪಾಗಿ ಸೇರುವುದನ್ನು ನಿಷೇಧಿಸಲಾಗಿದೆ ಎಂದರು. ಸದರಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪಾಲಕರ ಒಪ್ಪಿಗೆ ಪತ್ರ ಹಾಗೂ ಕೋವಿಡ್-19 ರ್‍ಯಾಪಿಡ್ ಟೆಸ್ಟ್ ಪತ್ರವನ್ನು ಒಪ್ಪಿಸುವುದು ಕಡ್ಡಾಯವಾಗಿರುತ್ತದೆ. ಅನೇಕ ವಿದ್ಯಾರ್ಥಿಗಳು ಕೋವಿಡ್-19ರ ತಪಾಸಣೆ ಇರುವುದರಿಂದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಾಲೇಜುಗಳಿಗೆ ಬರುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಕೇವಲ 10% ವಿದ್ಯಾರ್ಥಿಗಳು ಮಾತ್ರ ಕಾಲೇಜುಗಳಿಗೆ ಬರುತ್ತಿರುವುದಲ್ಲದೆ, ವಿದ್ಯಾರ್ಥಿನಿಯರ ಸಂಖ್ಯೆ ಅಧಿಕವಾಗಿರುತ್ತದೆ. ಕೆಲವು ವಿದ್ಯಾರ್ಥಿಗಳಿಗೆ ಕೋವಿಡ್-19ರ ಪರೀಕ್ಷೆ ಮಾಡಿದರೂ ಕೂಡಾ ಇನ್ನು ಪರೀಕ್ಷಾ ವರದಿ ಬಂದಿರುವುದಿಲ್ಲ ಎಂದು ಸಂಯೋಜಕರು ಸಭೆಯ ಗಮನಕ್ಕೆ ತಂದರು.

8) **ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ :**

ಜಿಲ್ಲೆಯಲ್ಲಿ ಪ್ರವಾಹ / ಮಳೆಯಿಂದ ಗ್ರಾಮೀಣ ಭಾಗದಲ್ಲಿರುವ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದರ ಬಗ್ಗೆ ವಿವರಿಸಲು ತಿಳಿಸಿದಾಗ,

ಜಿಲ್ಲೆಯಲ್ಲಿ ಯಾವುದೇ ಗ್ರಾಮದಲ್ಲಿ ನೀರಿನ ಸಮಸ್ಯೆ ಇರುವುದಿಲ್ಲವೆಂದು ಕಾರ್ಯನಿರ್ವಾಹಕ ಅಭಿಯಂತರರು ಆರ್‌ಡಬ್ಲ್ಯೂಎಸ್ ರವರು ಸಭೆಗೆ ವಿವರಿಸಿದರು.

9) **ಘನ ತ್ಯಾಜ್ಯ ವಸ್ತು ಸಂಗ್ರಹಣ ಸ್ಥಳ :**

ಜಿಲ್ಲೆಯಲ್ಲಿ ಎಲ್ಲ ಗ್ರಾಮ ಪಂಚಾಯತ ಪ್ರದೇಶದಲ್ಲಿ ಘನ ತ್ಯಾಜ್ಯ ವಸ್ತುಗಳ ಸಂಗ್ರಹಕ್ಕಾಗಿ ಸ್ಥಳಗಳನ್ನು ಗುರುತಿಸಲಾಗುತ್ತಿದ್ದು ಕಂದಾಯ ಇಲಾಖೆ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಜಮೀನುಗಳನ್ನು ಜಿಲ್ಲಾಧಿಕಾರಿಗಳು ಈಗಾಗಲೇ ಮಂಜೂರಿಸಿದ್ದು, 9 ಗ್ರಾಮ ಪಂಚಾಯತಗಳಲ್ಲಿ ಸ್ಥಳವಿಲ್ಲದೇ ಇರುವುದರಿಂದ ಕೃಷ್ಣಾ ಮೇಲ್ದಂಡೆ ಯೋಜನೆ ವ್ಯಾಪ್ತಿಯ ಪುನರ್ ವಸತಿ ಕೇಂದ್ರಗಳಲ್ಲಿ ಜಾಗೆ ಮಂಜೂರಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರು ಸಭಾಧ್ಯಕ್ಷರಿಗೆ ಕೋರಲಾಗಿ, ಪುನರ್ ವಸತಿ ಕೇಂದ್ರಗಳಲ್ಲಿ ಈಗಾಗಲೇ ತಿಪ್ಪೆಗುಂಡಿಗಾಗಿ ಜಾಗೆ ಕಾಯ್ದಿರಿಸಿದ್ದು, ಸಂಬಂಧಿಸಿದ ಗ್ರಾಮ ಪಂಚಾಯತಗಳಿಗೆ ಸದರಿ ಜಾಗೆ ಉಪಯೋಗಿಸಲು ಮಂಜೂರಾತಿ ಬಗ್ಗೆ ಕ್ರಮ ವಹಿಸಲು ಮಹಾ ವ್ಯವಸ್ಥಾಪಕರಿಗೆ ಸೂಚಿಸಲಾಯಿತು.

ಕೊನೆಯದಾಗಿ, ಜಿಲ್ಲೆಯ ಎಲ್ಲ ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲದಾರರು ಸ್ಮಶಾನವಿಲ್ಲದ ಗ್ರಾಮಗಳನ್ನು ಗುರುತಿಸಿ ಸ್ಮಶಾನದ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲು, ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ವಿವಿಧ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳನ್ನು ಆರ್‌ಟಿಸಿಗಳಲ್ಲಿ ಇಂದೀಕರಣಗೊಳಿಸುವುದು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರು ಭೂಸ್ವಾಧೀನವಾದ ಕ್ಷೇತ್ರದ ಬಗ್ಗೆ ಕೆಜೆಪಿ ಮಾಡುವ ಕ್ರಮ ವಹಿಸಲು, ಸದರಿ ಕಾರ್ಯದಲ್ಲಿ ಸಾಧಿಸಿದ ಪ್ರಗತಿ ವರದಿ ಮೇಲಿಂದ ಮೇಲೆ ಆಯುಕ್ತರಿಗೆ ಸಲ್ಲಿಸುವಂತೆ ನಿರ್ದೇಶನ ನೀಡಲಾಯಿತು.

ಕೊನೆಯದಾಗಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ಸಂಸ್ಥೆ, ಬೆಂಗಳೂರು
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಾಗಲಕೋಟೆ ಜಿಲ್ಲೆ

**ಶ್ರೀ ಎಸ್.ಆರ್.ಉಮಾಶಂಕರ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ದಿನಾಂಕ 30.11.2020ರಂದು ದಾವಣಗೆರೆ ಜಿಲ್ಲೆಯಲ್ಲಿನ ಕೋವಿಡ್ –19 ನಿಯಂತ್ರಿಸಲು ಕೈಗೊಂಡ ಕ್ರಮಗಳ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿ.**

1. ಜಿಲ್ಲೆಯಲ್ಲಿ ಈ ದಿನದವರೆಗೆ 15 ಹೊಸ ಪ್ರಕರಣಗಳು ಸೇರಿದಂತೆ ಒಟ್ಟು 21,597ಕೋವಿಡ್ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು 21,093 ವ್ಯಕ್ತಿಗಳನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿರುತ್ತದೆ. (ಶೇ.1%) 241 ಸಕ್ರಿಯ ಪ್ರಕರಣಗಳು ಇರುತ್ತವೆ. ಜಿಲ್ಲೆಯ ಪಾಸಿಟಿವಿಟಿ ದರವು ಶೇ.1 ರಷ್ಟು ಇರುತ್ತದೆ.

2. ಜಿಲ್ಲೆಯಿಂದ ದಿನಾಂಕ: 29.11.2020ರವರೆಗೆ 1,62,614 ಗಂಟಲು ದ್ರವದ ಮಾದರಿಗಳನ್ನು ಕೋವಿಡ್ ಪರೀಕ್ಷೆಗಾಗಿ ಕಳುಹಿಸಿದ್ದು 14,095 ಪಾಸಿಟಿವ್ ಬಂದಿರುತ್ತವೆ, 1,48,519 ನೆಗೆಟಿವ್ ಬಂದಿರುತ್ತವೆ. 2,145 ಗಂಟಲು ದ್ರವದ ಮಾದರಿಗಳ ಫಲಿತಾಂಶವು ಬಾಕಿ ಇದ್ದು ಈ ದಿನ ಸಂಜೆಯೊಳಗೆ 840 ಫಲಿತಾಂಶಗಳು ನಿರೀಕ್ಷೆಯಲ್ಲಿರುತ್ತವೆ. ಉಳಿದ ಫಲಿತಾಂಶಗಳನ್ನು 24 ಗಂಟೆಗಳ ಒಳಗಾಗಿ ಪಡೆಯಲಾಗುವುದು ಹಾಗೂ ರ್‍ಯಾಪಿಡ್ ಅಂಟಿಜೆನ್ ನಮ್ಮ ಜಿಲ್ಲೆಯಲ್ಲಿ 92,113 ಪರೀಕ್ಷೆ ಮಾಡಲಾಗಿದ್ದು, 7,502 ಪಾಸಿಟಿವ್ ಬಂದಿದ್ದು 84,611 ನೆಗೆಟಿವ್ ಬಂದಿರುತ್ತದೆ.

3. ಜಿಲ್ಲೆಯಲ್ಲಿ ಈವರೆಗೆ 263 ಮರಣಗಳು ಸಂಭವಿಸಿರುತ್ತವೆ. ಇವುಗಳ ಪೈಕಿ 21 ವ್ಯಕ್ತಿಗಳು ಹೊರ ಜಿಲ್ಲೆಯವರಾಗಿದ್ದಾರೆ. ಜಿಲ್ಲೆಯ ಫ್ಯಾಟಿಲಿಟಿ ದರವು ಶೇ.1 ರಷ್ಟು ಇರುತ್ತದೆ. ಜಿಲ್ಲೆಯ ಗುಣಮುಖ ಸರಾಸರಿ ಶೇ.98ರಷ್ಟು ಇರುತ್ತದೆ. ಸಕ್ರಿಯ ಪ್ರಕರಣಗಳು ಶೇ.1 ರಷ್ಟು ಇರುತ್ತದೆ.

4. ಮೃತಪಟ್ಟ ಎಲ್ಲಾ ವ್ಯಕ್ತಿಗಳನ್ನು ಕೋವಿಡ್–19 ಮಾರ್ಗಸೂಚಿಗಳು ಮತ್ತು ನಿಯಮಾನುಸಾರ ದಾವಣಗೆರೆ ಜಿಲ್ಲೆಯಲ್ಲಿ ಅಂತ್ಯಸಂಸ್ಕಾರ ಮಾಡಲಾಗಿರುತ್ತದೆ.

5. ಜಿಲ್ಲೆಯಲ್ಲಿ ಯಾವುದೇ ಪ್ರದೇಶಗಳಲ್ಲಿ 20 ಕ್ಕಿಂತ ಹೆಚ್ಚು ಪ್ರಕರಣಗಳು ಕಂಡು ಬಂದಿರದ ಕಾರಣ ಕಂಟೈನ್‌ಮೆಂಟ್ ವಲಯಗಳು ಇರುವುದಿಲ್ಲ.

6. ಜಿಲ್ಲೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ 400 ಬೆಡ್‌ಗಳ ಕೋವಿಡ್ ಆಸ್ಪತ್ರೆಯೆಂದು ಗುರುತಿಸಲಾಗಿದೆ. ಈ ದಿನ 37 ಖಚಿತಪಟ್ಟ ಕೋವಿಡ್ ಪ್ರಕರಣಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಹೆಚ್ಚುವರಿ 250 ಬೆಡ್‌ಗಳ ಐಸೋಲೇಶನ್ ವಾರ್ಡ್ ಅನ್ನು ಗುರುತಿಸಲಾಗಿದೆ. ಜಿಲ್ಲೆಯ 4 ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ 50 ಐಸೋಲೇಷನ್ ಬೆಡ್‌ಗಳನ್ನು ಸ್ಥಾಪಿಸಲಾಗಿದೆ. ಹರಿಹರ–01, ಹೊನ್ನಾಳಿ–03, ಚನ್ನಗಿರಿ–0, ಜಗಳೂರು–02, ಮತ್ತು ಪ್ರತಿ ತಾಲ್ಲೂಕಿನಲ್ಲಿ ಲಕ್ಷಣಗಳು ಇಲ್ಲದ ಪಾಸಿಟಿವ್ ಪ್ರಕರಣಗಳನ್ನು ಚಿಕಿತ್ಸೆಗೆ ಒಳಪಡಿಸಲು 100 ಬೆಡ್‌ಗಳ ಕೋವಿಡ್ ಕೇರ್ ಸೆಂಟರ್‌ಗಳಾಗಿ ಕಾರ್ಯನಿರ್ವಹಿಸಲು ಗುರುತಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಸಿಸಿಸಿ ಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್ ರೋಗಿಗಳು : ದಾವಣಗೆರೆ–00, ಹರಿಹರ–00, ಹೊನ್ನಾಳಿ–00, ಚನ್ನಗಿರಿ–00, ಜಗಳೂರು–00. ಕೋವಿಡ್ ಕೇರ್ ಸೆಂಟರ್‌ಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದ್ದು, ಮುಂಬರುವ ದಿನಗಳಲ್ಲಿ ಹೆಚ್ಚಿನ ಕೋವಿಡ್ ಪ್ರಕರಣಗಳು ಕಂಡು ಬಂದರೆ ಪುನಃ ಪ್ರಾರಂಭ ಮಾಡಲಾಗುವುದು.

Home Isolation = 158
ದಾವಣಗೆರೆ–73, ಹರಿಹರ–12, ಹೊನ್ನಾಳಿ–43, ಚನ್ನಗಿರಿ–10, ಜಗಳೂರು–20ಕೋವಿಡ್–19 ರೋಗಿಗಳನ್ನು ಇರಿಸಲಾಗಿದೆ. ಹಾಗೂ ಶೇಕಡಾ 50 ರಷ್ಟು ಪ್ರಾ.ಆ.ಕೇಂದ್ರಗಳಲ್ಲಿ ಜ್ವರದ ಕ್ಲಿನಿಕ್‌ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

7. ಜಿಲ್ಲೆಯಲ್ಲಿ ಕೆ.ಪಿ.ಎಂ.ಇ ಅಡಿ ನೊಂದಾಯಿತ ಎಲ್ಲಾ ಖಾಸಗಿ ಕ್ಲಿನಿಕ್/ ಪಾಲಿಕ್ಲಿನಿಕ್/ ಡೇಕೇರ್ ಸೆಂಟರ್/ ನರ್ಸಿಂಗ್ ಹೋಂ/ ಆಸ್ಪತ್ರೆಗಳನ್ನು ತಕ್ಷಣದಿಂದ ಕಡ್ಡಾಯವಾಗಿ ತೆರೆದು ಸೇವೆ ಒದಗಿಸಲು ಸೂಚಿಸಿದೆ ಮತ್ತು ಕಡ್ಡಾಯವಾಗಿ ಜ್ವರ, ಐ.ಎಲ್.ಐ. ಮತ್ತುಎಸ್.ಎ.ಆರ್.ಐ. (ತೀವ್ರ ತರಹದ ಶ್ವಾಸಕೋಶದ ಸೋಂಕು) ಪ್ರಕರಣಗಳನ್ನು ವರದಿ ಮಾಡಲು ಸೂಚಿಸಿದೆ. ಈ ಸೂಚನೆಯನ್ನು ಉಲ್ಲಂಘಿಸಿದ 11 ಖಾಸಗಿ ಆಸ್ಪತ್ರೆಗಳ ವಿರುದ್ಧ ದಾಳಿ ಮಾಡಿ ಕ್ರಮ ಕೈಗೊಳ್ಳಲಾಗಿದೆ.

8. ಕೋವಿಡ್-19 ರೋಗಿಗಳು ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ವಿವರ:ಎಸ್.ಎಸ್.ಐ.ಎಂ.ಎಸ್= 05 / ಬಾಪೂಜಿ= 06 / ಸಿಟಿ ಸೆಂಟ್ರಲ್ ಹಾಸ್ಪಿಟಲ್ 00 / ಸಂಜೀವಿನಿ ಆಸ್ಪತ್ರೆ 00, ಆಶ್ರಯ ಆಸ್ಪತ್ರೆ 02ಕೊವಿಡ್ ರೋಗಿಗಳನ್ನು ದಾಖಲು ಮಾಡಲಾಗಿದೆ. ತಪೋವನ, ಆರಾಧ್ಯ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಕೋವಿಡ್-19 ರೋಗಿಗಳನ್ನು ದಾಖಲು ಮಾಡಿಕೊಳ್ಳಲು ಅನುಬಂಧ-2 ರಂತೆ ಹೆಚ್ಚುವರಿಯಾಗಿ 19 ಖಾಸಗಿ ಆಸ್ಪತ್ರೆಗಳಲ್ಲಿ ಮುಂಜಾಗ್ರತೆಯಾಗಿ ಶೇಕಡ 50 ರಷ್ಟು ಹಾಸಿಗೆ ಕಾಯ್ದಿರಿಸಿ ಕ್ರಮವಹಿಸಲಾಗಿದೆ.

9. ಜಿಲ್ಲೆಯಲ್ಲಿ ಚಿಗಟೇರಿ ಜಿಲ್ಲಾ ಆಸ್ಪತ್ರೆ, ಎಸ್.ಎಸ್. ಆಸ್ಪತ್ರೆ, ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನಲ್ಲಿ ಪ್ರಯೋಗ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿ ದಿನ ಎರಡು ಪ್ರಯೋಗ ಶಾಲೆಗಳಲ್ಲಿ ಸರಾಸರಿ 300 ಪರೀಕ್ಷೆಗಳನ್ನು ಒಂದು ಪ್ರಯೋಗ ಶಾಲೆಯಲ್ಲಿ 500 ಪರೀಕ್ಷೆಗಳನ್ನು ನಡೆಸುತ್ತಿದ್ದು ಕಳೆದ 1 ವಾರದಲ್ಲಿ ಪ್ರತಿ ದಿನ ಸರಾಸರಿ 1100ರಷ್ಟು ಗಂಟಲು ದ್ರವದ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಿ ಕೊಡಲಾಗುತ್ತಿದೆ.

10. ಇದುವರೆಗೆ ಜಿಲ್ಲೆಯಿಂದ ತೀವ್ರ ಶ್ವಾಸಕೋಶದ ಸೋಂಕು (SARI) 4709 ಪ್ರಕರಣಗಳು ದಾಖಲಾಗಿದ್ದು 608 ಪಾಸಿಟಿವ್ ಇರುತ್ತವೆ. (ILI) ಪ್ರಕರಣಗಳು 10149 ಇದ್ದು 1465 ಪಾಸಿಟಿವ್ ಇರುತ್ತವೆ.

11. ಕೆ.ಪಿ.ಎಂ.ಇ ಕಾಯ್ದೆಯಡಿ ನೋಂದಣಿಯಾದ ಎಲ್ಲಾ ಆರೋಗ್ಯ ಸಂಸ್ಥೆಗಳಿಂದ ಮತ್ತು ಫಾರ್ಮಸಿಗಳಿಂದ ಮಾಹಿತಿ ಪಡೆದು ಎಲ್ಲಾ ಐ.ಎಲ್.ಐ/ಸಾರಿ ಪ್ರಕರಣಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

12. ಅಪರ ಜಿಲ್ಲಾಧಿಕಾರಿಗಳ ನೇತೃತ್ವದ ಕಾಂಟ್ಯಾಕ್ಟ್ ಟ್ರೇಸಿಂಗ್ ತಂಡ ಮತ್ತು ಸರ್ವೇಕ್ಷಣಾ ತಂಡದಿಂದ ಈವರೆಗೆ 1,20,460 ಪ್ರಾಥಮಿಕ ಸಂಪರ್ಕಗಳು, ಅವುಗಳ ಪೈಕಿ 3,345 ಪಾಸಿಟಿವ್ ಮತ್ತು 1,25,264 ದ್ವಿತೀಯ ಸಂಪರ್ಕಗಳನ್ನು ಅವುಗಳ ಪೈಕಿ 1,219 ಪಾಸಿಟಿವ್ ಪ್ರಕರಣಗಳನ್ನು ಪತ್ತೆ ಹಚ್ಚಿ ಚಿಕಿತ್ಸೆಗೆ ಒಳಪಡಿಸಲಾಗಿದೆ.

13. ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಅಕ್ಟೋಬರ್ ತಿಂಗಳಿಂದ ಲಿಕ್ವಿಡ್ ಮೆಡಿಕಲ್ ಆಕ್ಸಿಜನ್ ಕಾರ್ಯನಿರ್ವಹಿಸುತ್ತಿದೆ.

**14.**ದಿನಾಂಕ :20.11.2020ರಂದು ಜಿಲ್ಲಾ ಮಟ್ಟದ ಕೋವಿಡ್ ವಾರ್ ರೂಂ ಅನ್ನು ಜಿಲ್ಲಾಡಳಿತ ಭವನದಲ್ಲಿ ಸ್ಥಾಪಿಸಿದ್ದು, ಎಲ್ಲಾ ಅಗತ್ಯ ವೈದ್ಯಕೀಯ ಮತ್ತು ಇತರ ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.

(ಎಸ್.ಆರ್. ಉಮಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ದಾವಣಗೆರೆ ಜಿಲ್ಲೆ.

**ದಿನಾಂಕ 23-11-2020ರಂದು ಬೆಳಿಗ್ಗೆ:10-30 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಡಾ|| ಎಸ್. ಸೆಲ್ವಕುಮಾರ್, ಭಾ.ಆ.ಸೇ. , ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲನೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಶಿವಮೊಗ್ಗ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ನಡೆದ ಶಿವಮೊಗ್ಗ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ನಡವಳಿ**

***

ಅಧ್ಯಕ್ಷತೆ: ಡಾ|| ಎಸ್. ಸೆಲ್ವಕುಮಾರ್, ಭಾ.ಆ.ಸೇ.
ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಹಾಗೂ
ಸರ್ಕಾರದ ಕಾರ್ಯದರ್ಶಿಗಳು,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲನೆ ಮತ್ತು ಜೀವನೋಪಾಯ ಇಲಾಖೆ
ಹಾಗೂ ಶಿವಮೊಗ್ಗ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿಗಳು.

***

ಆರಂಭದಲ್ಲಿ ಜಿಲ್ಲಾಧಿಕಾರಿಗಳು ಸರ್ಕಾರದ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲನೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು, ಸಭೆಗೆ ಆಗಮಿಸಿದ ಪೋಲೀಸ್ ಅಧೀಕ್ಷಕರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ಸಭೆಯ ಕಲಾಪಗಳನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು.

1. <u>ಶಿವಮೊಗ್ಗ ಜಿಲ್ಲೆಯ ಅಂಕಿ ಅಂಶಗಳು</u>:

ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆಯ ಅಂಕಿ ಅಂಶಗಳ ಕುರಿತು ಮಾಹಿತಿಯನ್ನು ನೀಡುತ್ತಾ, ಜಿಲ್ಲೆಯಲ್ಲಿ 7 ತಾಲ್ಲೂಕುಗಳು, 2 ಉಪ ವಿಭಾಗಗಳಿದ್ದು, ಉಪ ವಿಭಾಗಾಧಿಕಾರಿಗಳು ಮತ್ತು ಎಲ್ಲಾ ತಾಲ್ಲೂಕಿನ ತಹಶೀಲ್ದಾರ್ ಗಳು ಇರುವುದಾಗಿ ತಿಳಿಸಿದರು.

2. <u>ಕೃಷಿ ಇಲಾಖೆ - ಮಳೆ ಮತ್ತು ಬೆಳೆ:</u>

ವಾರ್ಷಿಕ ಸರಾಸರಿ ವಾಡಿಕೆ ಮಳೆ 2237 ಮಿ.ಮೀ., ಆಗಸ್ಟ್, 2020ರಲ್ಲಿ ಶೇಕಡ 28ರಷ್ಟು ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಒಟ್ಟಾರೆ ಆಗಸ್ಟ್, ಸೆಪ್ಟೆಂಬರ್ ನಲ್ಲಿ ಹೆಚ್ಚು ಮಳೆಯಾಗಿದ್ದು, ಒಟ್ಟು ಜನವರಿ 1 ರಿಂದ ನವೆಂಬರ್ 19, 2020ರವರೆಗೆ 2305 ಮಿ.ಮೀ. ವಾಡಿಕೆ ಮಳೆ ಇದ್ದು, ಬಿದ್ದ ಮಳೆಯು 2114 ಮಿ.ಮೀ. ಆಗಿರುತ್ತದೆ. ಒಟ್ಟಾರೆ ಶೇಕಡ 8ರಷ್ಟು ಕಡಿಮೆ ಮಳೆಯಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ವಿವರಿಸಿದರು. ಮುಂದುವರಿದು ವಿವರಿಸುತ್ತಾ, 2020ರ ಮುಂಗಾರು ಹಂಗಾಮಿನ ಕೃಷಿ ಬೆಳೆ ವಿಸ್ತೀರ್ಣದ ಗುರಿ ಮತ್ತು ಸಾಧನೆ ಕುರಿತು ಮಾಹಿತಿ ನೀಡುತ್ತಾ, ಒಟ್ಟು 148333 ಹೆ. ಬಿತ್ತನೆ ಗುರಿ ಇದ್ದು, 143814 ಹೆ. ಸಾಧನೆಯಾಗಿರುತ್ತದೆ. (ಭತ್ತ-92000 (ಹೆ)ಗುರಿ, ಸಾಧನೆ-89796(ಹೆ), ಮುಸುಕಿನ ಜೋಳ ಗುರಿ-53000(ಹೆ), ಸಾಧನೆ-52097(ಹೆ), ಇತರೆ ಏಕದಳ (ರಾಗಿ ಮತ್ತು ಜೋಳ) ಗುರಿ-583(ಹೆ), ಸಾಧನೆ-264(ಹೆ), ವಾಣಿಜ್ಯ ಬೆಳೆ ಗುರಿ 2175(ಹೆ), ಸಾಧನೆ-1316(ಹೆ).) ಹಿಂಗಾರು ಹಂಗಾಮಿನ ಕೃಷಿ ಬೆಳೆ ಡಿಸೆಂಬರ್ ಮಾಹೆಯ ಮೂರನೇ ವಾರದವರೆಗೆ ಹಿಂಗಾರಿನ ಬಿತ್ತನೆಗೆ ಕಾಲಾವಕಾಶವಿರುತ್ತದೆ ಎಂದು ತಿಳಿಸಿದರು.

3. **ಬಿತ್ತನೆ ಬೀಜ ಮತ್ತು ರಸಗೊಬ್ಬರ ಬೇಡಿಕೆ ಮತ್ತು ದಾಸ್ತಾನು:**

ಜಂಟಿ ಕೃಷಿ ನಿರ್ದೇಶಕರು ವಿವರಿಸುತ್ತಾ, ಬಿತ್ತನೆ ಬೀಜ 29939 ಕ್ವಿಂಟಾಲ್ ಬೇಡಿಕೆ ಇದ್ದು, 20217 ವಿತರಣೆಯಾಗಿರುತ್ತದೆ. ರಸಗೊಬ್ಬರ ಬೇಡಿಕೆ ಮುಂಗಾರು ಹಂಗಾಮು ಅಕ್ಟೋಬರ್ ಅಂತ್ಯದವರೆಗೆ 95156 ಮೆಟ್ರಿಕ್ ಟನ್, 82256 ಮೆ.ಟನ್ ವಿತರಣೆಯಾಗಿರುತ್ತದೆ. ಹಾಲಿ ದಾಸ್ತಾನು 5856 ಮೆ.ಟನ್, ಖಾಸಗಿ+ಸ.ಸಂಘ 21317 ಮೆ.ಟನ್, ಒಟ್ಟು 27173 ಮೆಟ್ರಿಕ್ ಟನ್ ಇರುತ್ತದೆ. ಜಿಲ್ಲೆಯಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜಕ್ಕೆ ಯಾವುದೇ ಕೊರತೆಯಿರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ರೈತರಿಗೆ ರಸಗೊಬ್ಬರ ಮತ್ತು ಬಿತ್ತನೆ ಬೀಜಕ್ಕೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ನಿರ್ವಹಿಸುವಂತೆ ಸೂಚಿಸಿದರು.

(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಶಿವಮೊಗ್ಗ)

4. **ಪ್ರಕೃತಿ ವಿಕೋಪ ಪರಿಹಾರ:-**

ಜಿಲ್ಲಾಧಿಕಾರಿಗಳು **ನೆರೆ ಸಂತ್ರಸ್ಥ ಕುಟುಂಬಗಳಿಗೆ ನೀಡಿದ ಪರಿಹಾರ ಕುರಿತು ವಿವರಿಸುತ್ತಾ,** ಜಿಲ್ಲೆಯಲ್ಲಿನ ಒಟ್ಟು 220 ಬಾಧಿತ ಕುಟುಂಬಗಳಿಗೆ ತಕ್ಷಣದ ಪರಿಹಾರವಾಗಿ ಒಂದು ಕುಟುಂಬಕ್ಕೆ ರೂ.10000/- ದಂತೆ ಒಟ್ಟು ರೂ.22.00ಲಕ್ಷ ಪರಿಹಾರ ನೀಡಲಾಗಿರುತ್ತದೆ. ಜಿಲ್ಲೆಯಲ್ಲಿ **1 ಜೀವ ಹಾನಿಯಾಗಿದ್ದು**, ರೂ.5.00ಲಕ್ಷ ಪರಿಹಾರ ಮೊತ್ತವನ್ನು ವಿತರಿಸಲಾಗಿರುತ್ತದೆ ಎಂದು ತಿಳಿಸಿದರು. **ಒಟ್ಟು 16 ಜಾನುವಾರು ಹಾನಿಯಾಗಿದ್ದು**, ರೂ.3.45ಲಕ್ಷ ಪರಿಹಾರ ಧನ ವಿತರಿಸಲಾಗಿರುತ್ತದೆಂದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ನೆರೆ ಸಂತ್ರಸ್ಥ ಕುಟುಂಬಗಳಿಗೆ, ಜೀವ ಹಾನಿಯಾದಂತಹ ಕುಟುಂಬಗಳಿಗೆ ಹಾಗೂ ಜಾನುವಾರು ಹಾನಿಯಾಗಿದ್ದಲ್ಲಿ ಅಂತಹ ಕುಟುಂಬಗಳಿಗೆ ಸರ್ಕಾರದ ಮಾರ್ಗಸೂಚಿಯನ್ವಯ ವಿಳಂಬವಿಲ್ಲದೇ ಪರಿಹಾರವನ್ನು ವಿತರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದರು.

ಅಪರ ಜಿಲ್ಲಾಧಿಕಾರಿಗಳು, **2020-21ನೇ ಸಾಲಿನಲ್ಲಿ ಜಿಲ್ಲೆಯಲ್ಲಿ** ಮಳೆಯಿಂದ ಹಾನಿಯಾದ ಮನೆಗಳ ವಿವರ **ನೀಡುತ್ತಾ,** 120 ಮನೆಗಳು ಪೂರ್ಣ ಹಾನಿಯಾಗಿದ್ದು, ಕೆಟಗರಿ - ಬಿ ಮನೆಗಳು- 189 ಮತ್ತು ಕೆಟಗರಿ - ಸಿ ಮನೆಗಳು-617, ಒಟ್ಟು 926 ಮನೆಗಳು ಹಾನಿಯಾಗಿರುತ್ತವೆ. ಅದರಲ್ಲಿ ಪೂರ್ಣ ಹಾನಿಯಾದ ಮನೆಗಳ ಡಾಟಾ ಎಂಟ್ರಿ ಪೂರ್ಣವಾಗಿರುತ್ತದೆ. ಬಿ ಕೆಟಗರಿ ಮನೆಗಳಿಗೆ ಸಂಬಂದಿಸಿದಂತೆ 129 ಮತ್ತು ಸಿ ಕೆಟಗರಿಗೆ ಮನೆಗಳಿಗೆ ಸಂಬಂಧಿಸಿದಂತೆ 78 ಒಟ್ಟು 207 ಡಾಟಾ ಎಂಟ್ರಿಗೆ ಬಾಕಿ ಇರುತ್ತದೆ.

ಜಿಲ್ಲಾಧಿಕಾರಿಗಳು ವಿವರಿಸುತ್ತಾ, 47 ಮನೆಗಳಿಗೆ ಕಳೆದ ಸಾಲಿನಲ್ಲಿ ರೂ.1.00ಲಕ್ಷದಂತೆ ಪರಿಹಾರ ಧನವನ್ನು ವಿತರಿಸಲಾಗಿರುತ್ತದೆ. ಈಗ ಪುನ: ಬಿದ್ದುಹೋಗಿರುವುದರಿಂದ ಪರಿಹಾರ ಕೇಳುತ್ತಿದ್ದು, ಈ ಕುರಿತು ಕ್ರಮ ತೆಗೆದುಕೊಳ್ಳಲು ನಮಗೆ ಅವಕಾಶವಿರುವುದಿಲ್ಲ. ಆದ್ದರಿಂದ ಸ್ಪಷ್ಟೀಕರಣ ಕೋರಿ ಆರ್.ಜಿ.ಆರ್.ಹೆಚ್.ಸಿ.ಎಲ್.ಗೆ ಪತ್ರ ಬರೆಯಲಾಗಿರುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ವಸತಿ ನಿಗಮದೊಂದಿಗೆ ಮತ್ತೊಮ್ಮೆ ಪತ್ರ ವ್ಯವಹರಿಸಿ, ಅರ್ಹ ಫಲಾನುಭವಿಗಳಿಗೆ ಮಾರ್ಗಸೂಚಿಯನ್ವಯ ಪರಿಹಾರ ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)**

2020ರಲ್ಲಿ ಬಿದ್ದ ಮಳೆಯಿಂದ ಕೃಷಿ ಭೂಮಿ ನಷ್ಟ ಪರಿಹಾರ ಕುರಿತು ಜಿಲ್ಲಾಧಿಕಾರಿಗಳು ವಿವರಿಸುತ್ತಾ, ಒಟ್ಟು 102.30 ಹೆಕ್ಟೇರ್ ಭೂಮಿ ನಷ್ಟವಾಗಿದ್ದು, ರೂ.22.60ಲಕ್ಷ ಪರಿಹಾರ ನೀಡಲಾಗಿರುತ್ತದೆ ಎಂದು ತಿಳಿಸಿದರು.

ಪರಿಹಾರ ಪೋರ್ಟಲ್ ನಲ್ಲಿ ಅಂಕಿ ಅಂಶ ದಾಖಲೀಕರಣದ ಬಗ್ಗೆ ವಿವರಿಸುತ್ತಾ, 4290 ದಾಖಲೀಕರಣ ಮಾಡಲಾಗಿದೆ. 1108 ಗ್ರಾಮ ಲೆಕ್ಕಿಗರ ಹಂತದಲ್ಲಿ ಅನುಮೋದನೆಗಾಗಿ ಬಾಕಿ ಇದ್ದು, ಕಳೆದ 3 ದಿನದಿಂದ ಪರಿಹಾರ ತಂತ್ರಾಂಶದಲ್ಲಿ ಸಮಸ್ಯೆ ಇದ್ದು, ಶೀಘ್ರದಲ್ಲಿ ಡಾಟಾ ಎಂಟ್ರಿ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಅಂಕಿ-ಅಂಶಗಳ ದಾಖಲೀಕರಣಕ್ಕೆ ತಾಂತ್ರಿಕ ಸಮಸ್ಯೆ ಇದ್ದಲ್ಲಿ, ಅದರ ಬಗ್ಗೆ ಸಂಬಂಧಪಟ್ಟವರೊಂದಿಗೆ ಚರ್ಚಿಸಿ, ಪರಿಹರಿಸಿಕೊಂಡು, ಕೂಡಲೇ ದಾಖಲೀಕರಣ ಕಾರ್ಯವನ್ನು ಪೂರ್ಣಗೊಳಿಸಿ, ಅರ್ಹ ಫಲಾನುಭವಿಗಳಿಗೆ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

(ಕ್ರಮ: ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)

5. <u>ಜಿಲ್ಲಾಧಿಕಾರಿಗಳ ಎಸ್.ಡಿ.ಆರ್.ಎಫ್. ಖಾತೆ ವಿವರ:</u>

ಈ ಕುರಿತು ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡುತ್ತಾ, ಹಿಂದಿನ ಬಾಕಿ ಸೇರಿ ಒಟ್ಟು 2074.13ಲಕ್ಷ ಪಿ.ಡಿ. ಖಾತೆಯಲ್ಲಿ ಇದ್ದಂತಹ ಹಣದಲ್ಲಿ ಮುಂದುವರಿದ ಕಾಮಗಾರಿಗಳಿಗೆ ರೂ.234.54ಲಕ್ಷ, ಆರ್.ಜಿ.ಆರ್. ಹೆಚ್.ಸಿ.ಎಲ್. ರೂ.323.39ಲಕ್ಷ, ಕುಡಿಯುವ ನೀರಿನ ಬಾಬ್ತು ರೂ.100.00ಲಕ್ಷ ಮತ್ತು ಕೋವಿಡ್-19 ನಿರ್ವಹಣೆ ಬಾಬ್ತು ರೂ.217.74 ಸೇರಿ ಒಟ್ಟು ರೂ.875.67ಲಕ್ಷ ವೆಚ್ಚ ಭರಿಸಲಾಗಿದ್ದು, ಪ್ರಸ್ತುತ ರೂ.1198.468ಲಕ್ಷ ಹಣ ಪಿ.ಡಿ. ಖಾತೆಯಲ್ಲಿ ಲಭ್ಯವಿರುತ್ತದೆ ಎಂದು ತಿಳಿಸಿದರು.

(ಕ್ರಮ: ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)

6. <u>ಕೋವಿಡ್-19 ನಿರ್ವಹಣೆ ಬಗ್ಗೆ:-</u>

ಈ ಕುರಿತು ಜಿಲ್ಲಾಧಿಕಾರಿಗಳು ವಿವರಿಸುತ್ತಾ, ಜಿಲ್ಲೆಯಲ್ಲಿ 21115 ಪಾಸಿಟಿವ್ ಪ್ರಕರಣಗಳು ಕಂಡುಬಂದಿದ್ದು, ತೆಗೆದುಕೊಂಡ ಕ್ರಮದಿಂದಾಗಿ, ಪ್ರಸ್ತುತ ಕೋವಿಡ್-19 ಸಂಪೂರ್ಣ ನಿಯಂತ್ರಣದಲ್ಲಿರುತ್ತದೆ. 20591 ರೋಗಿಗಳು ಗುಣಮುಖರಾಗಿದ್ದು, 177 ಸಕ್ರಿಯ ಪ್ರಕರಣಗಳಿವೆ, 347 ಜನ ಮರಣ ಹೊಂದಿರುತ್ತಾರೆ. ಕೋವಿಡ್-19 ಪಾಸಿಟಿವಿಟಿ ರೇಟ್ ಆಗಸ್ಟ್-21%, ಸೆಪ್ಟೆಂಬರ್-17.6%, ಅಕ್ಟೋಬರ್-4.63%, ನವೆಂಬರ್ ಮಾಹೆಯಲ್ಲಿ ಈವರೆಗೆ 1.46% ಇರುತ್ತದೆ. ಪ್ರಕರಣದ ಸಾವಿನ ಪ್ರಮಾಣ ಆಗಸ್ಟ್-1.1%, ಸೆಪ್ಟೆಂಬರ್-2.3%, ಅಕ್ಟೋಬರ್-1%, ನವೆಂಬರ್ ಮಾಹೆಯಲ್ಲಿ ಈವರೆಗೆ 0.46% ಇರುತ್ತದೆ ಎಂದು ತಿಳಿಸಿದರು. ಕೋವಿಡ್ ನಿರ್ವಹಣೆಗಾಗಿ, ಜಿಲ್ಲೆಯಲ್ಲಿ 4-ಕೋವಿಡ್ ಕೇರ್ ಸೆಂಟರ್ ಗಳಿದ್ದು, ಕೋವಿಡ್ ಗಾಗಿ ಮೀಸಲಿಟ್ಟ ಆಸ್ಪತ್ರೆ -1, ಆರೋಗ್ಯ ಕೇಂದ್ರಗಳು -4, ಖಾಸಗಿ ಆಸ್ಪತ್ರೆ ಗಳು - 6, ಒಟ್ಟು ಲಭ್ಯವಿರುವ ಹಾಸಿಗೆಗಳು - 3155, ಲಭ್ಯವಿರುವ ಐ.ಸಿ.ಯು.ಹಾಸಿಗೆಗಳು - 152, ಲಭ್ಯವಿರುವ ಆಕ್ಸಿಜನ್ ಹಾಸಿಗೆಗಳು 658, 76 ವೆಂಟಿಲೇಟರ್ಸ್ ಲಭ್ಯತೆ ಇದೆ. ಕಾಂಟ್ಯಾಕ್ಟ್ ಟ್ರೇಸಿಂಗ್ ಆ್ಯಪ್ - ಪ್ರಾಥಮಿಕ ಸಂಪರ್ಕದ ಅನುಪಾತ 6.04, ದ್ವಿತೀಯ ಸಂಪರ್ಕದ ಅನುಪಾತ 5.25 ಇದ್ದು, ಕ್ವಾರೆಂಟೈನ್ ವಾಚ್ ಆ್ಯಪ್ ಪ್ರಗತಿಯು ಶೇಕಡ 44.18ರಷ್ಟಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು ಹಾಗೂ ಕೋವಿಡ್-19ರ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಕುರಿತು ಸವಿವರವಾದ ಮಾಹಿತಿ ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ವಿವರಿಸುತ್ತಾ, ಇಲ್ಲಿಯವರೆಗೆ 1,69,960 ಆರ್.ಟಿ.ಪಿ.ಸಿ.ಆರ್, 74,683 ಆರ್.ಎ.ಟಿ., 2,621 ಟ್ರೂನಾಟ್ ಟೆಸ್ಟ್, ಒಟ್ಟು 2,47,264 ಜನರನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, 21,181 ಜನರಲ್ಲಿ ಕೋವಿಡ್ ಸೋಂಕಿರುವುದು ದೃಢಪಟ್ಟಿದೆ ಎಂದು ತಾಲ್ಲೂಕುವಾರು ವಿವರವನ್ನು ಸಭೆಗೆ ನೀಡಿದರು.

20 ರಿಂದ 50 ವರ್ಷ ವಯೋಮಿತಿಯವರಲ್ಲಿ ಸೋಂಕಿನ ಪ್ರಮಾಣ ಹೆಚ್ಚಾಗಿ ಕಂಡುಬಂದಿದ್ದರೂ ಸಾವಿನ ಪ್ರಮಾಣ 50 ವರ್ಷ ಮೇಲ್ಪಟ್ಟವರಲ್ಲಿ ಪ್ರತಿಶತ 87ರಷ್ಟು ಹೆಚ್ಚಾಗಿದೆ. ಪ್ರಾರಂಭದಲ್ಲಿ ಕೋವಿಡ್ ಮಾದರಿಗಳನ್ನು ಪರೀಕ್ಷಿಸಲು ಜಿಲ್ಲಾಡಳಿತದ ಸಹಕಾರದಿಂದ ಮೆಗ್ಗಾನ್ ಬೋಧನಾ ಆಸ್ಪತ್ರೆಯ ಆವರಣದಲ್ಲಿ (VRDL) ಹಾಗೂ ಮಂಗನ ಕಾಯಿಲೆ ಪರಿಮಾಣು ಕ್ರಿಮಿ ಪರಿಶೋಧನಾ ಪ್ರಯೋಗ ಶಾಲೆ (VDL) ಮತ್ತು 2 ಖಾಸಗಿ ಪ್ರಯೋಗಾಲಯಗಳನ್ನು ಗುರುತಿಸಲಾಗಿದೆ. ಪ್ರತಿ ದಿನ 3000 ಆರ್.ಟಿ.ಪಿ.ಸಿ.ಆರ್. ಮಾದರಿಗಳನ್ನು ಪರೀಕ್ಷಿಸುವಷ್ಟು ಸಾಮರ್ಥ್ಯವನ್ನು ಹೊಂದಿದ್ದು, ಈಗ ಪ್ರತಿ ದಿನ 3000ಕ್ಕಿಂತ ಅಧಿಕ ಕೋವಿಡ್ ರೋಗದ ಮಾದರಿಗಳ ಪರೀಕ್ಷೆಯನ್ನು ಜಿಲ್ಲೆಯಲ್ಲಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮುಂದುವರಿದು ಡಿ.ಹೆಚ್.ಓ.ರವರು ವಿವರಿಸುತ್ತಾ, ಪ್ರತಿದಿನ ಕೋವಿಡ್ ಮಾದರಿ ಪರೀಕ್ಷೆಯ ನಂತರ ಫಲಿತಾಂಶವನ್ನು ಮಿಂಚಂಚೆಯ ಮೂಲಕ ಸಂಬಂಧಿಸಿದ ತಾಲ್ಲೂಕಿಗೆ ಮಾಹಿತಿ ಹಾಗೂ ಮೊಬೈಲ್ ಸಂದೇಶದ ಮುಖಾಂತರ ಸಂಬಂಧಿಸಿದವರಿಗೆ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಪ್ರತೀ ತಾಲ್ಲೂಕಿನಲ್ಲಿಯೂ ಕೋವಿಡ್ ದೃಢಪಟ್ಟ ಪ್ರಕರಣವನ್ನು ಜಿಲ್ಲಾ ಆಸ್ಪತ್ರೆಯ ಕೋವಿಡ್ ಕೇರ್ ಕೇಂದ್ರಕ್ಕೆ ಕರೆತರಲು ಪ್ರತೀ ತಾಲ್ಲೂಕಿಗೆ ಆ್ಯಂಬುಲೆನ್ಸ್ ವ್ಯವಸ್ಥೆ ಮಾಡಲಾಗಿರುತ್ತದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿದ್ದ ಒಟ್ಟು 21,181 ಸೋಂಕಿತ ಪ್ರಕರಣಗಳ ಪೈಕಿ 20,691 ಜನ ಗುಣಮುಖರಾಗಿದ್ದಾರೆ. ಹಾಲಿ 142 ಜನ ಚಿಕಿತ್ಸೆ ಪಡೆಯುತ್ತಿದ್ದಾರೆ ಹಾಗೂ 348 ಜನ ಮರಣ ಹೊಂದಿರುತ್ತಾರೆ, ಈ ಮರಣಗಳ ಡೆತ್ ಆಡಿಟ್ ಸಹ ಮಾಡಲಾಗಿರುತ್ತದೆಂದರು.

ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳ ಚಿಕಿತ್ಸೆಗಾಗಿ ಒಟ್ಟು 1 ಡಿ.ಸಿ.ಹೆಚ್.ಸಿ. ಮತ್ತು 4 ಸಿ.ಸಿ.ಸಿ. ಕೇಂದ್ರಗಳನ್ನು ಹಾಗೂ 6 ಖಾಸಗಿ ಆಸ್ಪತ್ರೆಗಳ ಸಹಕಾರದಿಂದ ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳ ಚಿಕಿತ್ಸೆಗಾಗಿ ಒಟ್ಟು 3155 ಬೆಡ್ ಗಳ ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ 152 ತೀವ್ರ ನಿಗಾ ಘಟಕದ ಬೆಡ್ ಗಳು ಹಾಗೂ 658 ಆಕ್ಸಿಜನ್ ಬೆಡ್ ಗಳಿರುತ್ತವೆ. ಗಂಭೀರ ಸ್ವರೂಪದ ಪ್ರಕರಣಗಳ ಚಿಕಿತ್ಸೆಗಾಗಿ 76 ವೆಂಟಿಲೇಟರ್ ಗಳ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಕೋವಿಡ್-19ರ ಸಮರ್ಪಕ ನಿರ್ವಹಣೆಗೆ ಅವಶ್ಯವಿರುವ ಹೆಚ್ಚುವರಿ ಮಾನವ ಸಂಪನ್ಮೂಲವನ್ನು ನೇಮಿಸಿಕೊಳ್ಳಲಾಗಿದೆ. ಕೋವಿಡ್ ಮಾದರಿ ಸಂಗ್ರಹಣೆಗೆ 77 ಲ್ಯಾಬ್ ಟೆಕ್ನಿಷಿಯನ್ಸ್, 59 ಡಾಟಾ ಎಂಟ್ರಿ ಆಪರೇಟರ್ಸ್ ಹಾಗೂ ಚಿಕಿತ್ಸೆಗಾಗಿ 18 ವೈದ್ಯರು, 31 ಶುಶ್ರೂಷಕಿಯರು ಮತ್ತು 35 ಫಾರ್ಮಸಿಸ್ಟ್ ರನ್ನು 6 ತಿಂಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.

ಜಿಲ್ಲೆಯಲ್ಲಿ ಗೃಹ ಅನಿರ್ಬಂಧಿತವಾಗಿ ಬರುವ ರೋಗಿಗಳ ಮೇಲೆ ನಿಗಾ ಇಡಲು ತಂಡವನ್ನು ತಾಲ್ಲೂಕುವಾರು ರಚಿಸಿದ್ದು, ಪ್ರತಿದಿನ ದೂರವಾಣಿ ಮೂಲಕ ರೋಗಿಗಳ ಮಾಹಿತಿಯನ್ನು ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಈವರೆಗೂ ಹೋಂ ಐಸೋಲೇಷನ್ ನಲ್ಲಿರುವ ಯಾವ ವ್ಯಕ್ತಿಯೂ ಸಾವಿಗೀಡಾಗಿರುವುದಿಲ್ಲವೆಂದು ತಿಳಿಸಿದರು. ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಕೋವಿಡ್ ರೋಗದ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಲು ಸಂಚಾರಿ ತಂಡದ ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯ ಪ್ರತಿ ಆಸ್ಪತ್ರೆಯಲ್ಲಿ ಕೋವಿಡ್ ರೋಗದ ಬಗ್ಗೆ ಮುಂಜಾಗ್ರತಾ ಕ್ರಮಗಳ

ಮಾಹಿತಿಯನ್ನು ಆಸ್ಪತ್ರೆಯಲ್ಲಿರುವ ಟಿ.ವಿ. ಮುಖಾಂತರ, ಕರಪತ್ರ ಹಾಗೂ ಪೋಸ್ಟರ್ಸ್ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ ಎಂದು ವಿವರಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸರ್ಕಾರದ ಇಲ್ಲಾ ಇಲಾಖೆಗಳು, ಜನ ಪ್ರತಿನಿಧಿಗಳ ಸಹಕಾರದಿಂದ ಸಾರ್ವಜನಿಕರಲ್ಲಿ ಕೋವಿಡ್-19 ರೋಗವನ್ನು ಶೀಘ್ರ ಪತ್ತೆ ಹಚ್ಚಿ ಗುಣಮಟ್ಟದ ಚಿಕಿತ್ಸೆ ನೀಡಿ, ನಿಯಂತ್ರಣದತ್ತ ಹೆಜ್ಜೆ ಹಾಕಲಾಗುತ್ತಿದೆ. ಆಗಸ್ಟ್ ತಿಂಗಳಿನಲ್ಲಿ ನಾನು ಪರೀಕ್ಷೆಗೆ ಒಳಪಡಿಸಿದವರ ಪೈಕಿ ಗರಿಷ್ಠ ಸೋಂಕಿನ ಪ್ರಮಾಣ ಶೇಕಡ 21, ಸೆಪ್ಟಂಬರ್ ನಲ್ಲಿ 19ರಷ್ಟಿತ್ತು. ಆದರೆ ಇಂದು ಶೇಕಡ 2ಕ್ಕೆ ತಲುಪಿದ್ದೇವೆ. ಅಂದರೆ ನಾವು 100 ಜನರನ್ನು ಪರೀಕ್ಷೆಗೆ ಒಳಪಡಿಸಿದರೆ ಅದರಲ್ಲಿ 1.40 ಜನ ಮಾತ್ರ ಸೋಂಕಿರುವುದು ಕಂಡುಬಂದಿರುತ್ತದೆ ಎಂದು ವಿವರಿಸಿದರು.

ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಗೂ ಇತರೆ ಇಲಾಖೆಗಳ ಸಹಕಾರದಿಂದ SARI, ILI ಇತರೆ ರೋಗದಿಂದ ಬಳಲುತ್ತಿರುವ ರೋಗಿಗಳನ್ನು ಸಮೀಕ್ಷೆಯ ಮೂಲಕ ಬೇಗ ಪತ್ತೆ ಹಚ್ಚಿ ಕೋವಿಡ್ ಪರೀಕ್ಷೆ ಮಾಡಿಸಿ, ರೋಗದ ಬಗ್ಗೆ ತ್ವರಿತ ಚಿಕಿತ್ಸೆ ನೀಡಲು ತಂಡ ರಚಿಸಿ ಕ್ರಮ ಕೈಗೊಳ್ಳಲಾಗಿದೆ ಎಂದರು. ಜಿಲ್ಲೆಯಲ್ಲಿ ಕೋವಿಡ್ ರೋಗ ನಿಯಂತ್ರಕ್ಕಾಗಿ ಪ್ರತಿಯೊಂದು ವಿಭಾಗದಿಂದ ವೈದ್ಯಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ತಂಡವನ್ನು ರಚಿಸಿ, ಕೋವಿಡ್ ರೋಗ ನಿಯಂತ್ರಣಕ್ಕೆ ತರಲಾಗಿದೆ. ಎಲ್ಲರ ಸಹಕಾರ ಮತ್ತು ಸಹಭಾಗಿತ್ವದಿಂದ ಸಮುದಾಯದಲ್ಲಿ ಕೋವಿಡ್-19ರ ನಿಯಂತ್ರಣದ ಕುರಿತು ಅರಿವು ಮೂಡಿಸುವುದು ಅವಶ್ಯಕವಾಗಿದೆ. ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಮತ್ತು ಪದೇ ಪದೇ ಸೋಪಿನಿಂದ ಕೈ ತೊಳೆಯುವುದರ ಮೂಲಕ ಸಾರ್ವಜನಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವುದು ಸಾಧ್ಯ ಎಂಬ ಮಾಹಿತಿ ನೀಡಿದರು.

ಗ್ರಾಮ ಪಂಚಾಯಿತಿಗಳಲ್ಲಿ ಜನ ಪ್ರತಿನಿಧಿಗಳ ಹಾಗೂ ಅಧಿಕಾರಿಗಳ ಜೊತೆ ರೋಗ ನಿಯಂತ್ರಣಕ್ಕೆ ಕ್ರಿಯಾ ಯೋಜನೆ, ತ್ವರಿತ ತಪಾಸಣೆ, ಪರೀಕ್ಷೆ ಹಾಗೂ ರೋಗಿಗಳ ಪ್ರತ್ಯೇಕತೆ ಮಾಡಲು ವ್ಯವಸ್ಥೆ ಮಾಡಲಾಗಿರುತ್ತದೆಂದರು. ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಯ ವೈದ್ಯರುಗಳಿಗೆ ಪ್ರಾರಂಭದಲ್ಲಿ ಸಭೆ ನಡೆಸಿ, ರೋಗದ ಬಗ್ಗೆ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಮಾಹಿತಿ ಹಾಗೂ ಪ್ರತಿ ನಿತ್ಯ ಚಿಕಿತ್ಸೆ ನೀಡಿದ ರೋಗಿಗಳ ಮತ್ತು ಮಾದರಿ ಸಂಗ್ರಹಿಸಿದ ಬಗ್ಗೆ ವರದಿ ನೀಡಲು ತಿಳಿಸಲಾಗಿದೆ ಎಂದರು. ಅಲ್ಲದೆ ಮಾಸ್ಕ್ ಧರಿಸದೆ ಇರುವ ವ್ಯಕ್ತಿಗೆ ದಂಡವನ್ನು ರಕ್ಷಣಾ ಇಲಾಖೆ, ಕಂದಾಯ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಹಾಕುವ ಕ್ರಮವನ್ನು ಕೈಗೊಳ್ಳಲಾಗಿದೆ ಎಂದರು. ಕೋವಿಡ್ ರೋಗಿಯ ಪ್ರಥಮ ಹಾಗೂ ದ್ವಿತೀಯ ಸಂಪರ್ಕ ಹೊಂದಿದ ವ್ಯಕ್ತಿಯ, ಪ್ರತಿ ರೋಗಿಗೆ 14ರಂತೆ ಪತ್ತೆ ಹಚ್ಚಿ, ಅವರ ಮಾದರಿ ಸಂಗ್ರಹಿಸಲಾಗುತ್ತಿದೆ. ಕೋವಿಡ್-19 ಗುಣಲಕ್ಷಣಗಳು ಕಾಣಿಸಿಕೊಂಡಾಗ ತಪ್ಪು ಕಲ್ಪನೆಗಳಿಗೆ ಅವಕಾಶ ನೀಡದೆ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಪರೀಕ್ಷಿಸಿಕೊಂಡರೆ ಚಿಕಿತ್ಸೆಗೆ ನೆರವಾಗುತ್ತದೆ. ಬೇಗನೆ ಅಂದರೆ ಪ್ರಾರಂಭಿಕ ಹಂತದಲ್ಲೇ ಪತ್ತೆ ಹಚ್ಚಿದರೆ ಸಾವಿನ ಪ್ರಮಾಣವನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಸಭೆಯಲ್ಲಿ ಹಾಜರಿದ್ದ ಸಿಮ್ಸ್ ನಿರ್ದೇಶಕರು, ಜಿಲ್ಲೆಯಲ್ಲಿ ಕೋವಿಡ್-19 ನಿರ್ವಹಣೆ ಬಗ್ಗೆ ಈ ಕೆಳಕಂಡ ಮಾಹಿತಿಯನ್ನು ತಮ್ಮ ಗಮನಕ್ಕೆ ತಂದರು.

1. ಸಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ಮೆಗ್ಗಾನ್ ಆಸ್ಪತ್ರೆಯನ್ನು ಪ್ರಾರಂಭದಲ್ಲಿ ಸಂಪೂರ್ಣವಾಗಿ ಕೋವಿಡ್ ರೋಗಿಗಳಿಗಾಗಿ ಹೆರಿಗೆ ಮತ್ತು ಮಕ್ಕಳ ವಿಭಾಗಗಳನ್ನು ಹೊರತುಪಡಿಸಿ ಉಪಯೋಗಿಸಿಕೊಳ್ಳಲಾಗುತ್ತಿತ್ತು.

ಆದ್ದರಿಂದ ನಾನ್ ಕೋವಿಡ್ ರೋಗಿಗಳನ್ನು ಎ.ಬಿ.ಎ.ಆರ್.ಕೆ. ಯೋಜನೆ ಅಡಿಯಲ್ಲಿ ಎ.ಬಿ.ಎ.ಆರ್.ಕೆ. ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಕಳುಹಿಸಲಾಗುತ್ತಿತ್ತು. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರುಗಳು ಹಾಗೂ ಜಿಲ್ಲಾಧಿಕಾರಿಗಳು ಮನಗಂಡು ಸಂಸ್ಥೆಯ ಅಧೀನದಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ತೀರ್ಮಾನಿಸಿ, ಅಲ್ಲಿಗೆ ಸ್ಥಳಾಂತರಿಸಲಾಯಿತು. ಮೆಗ್ಗಾನ್ ಆಸ್ಪತ್ರೆಯನ್ನು ಸಂಪೂರ್ಣವಾಗಿ ನಾನ್-ಕೋವಿಡ್ ಆಸ್ಪತ್ರೆಯಾಗಿ ಎಂದಿನಂತೆ ಚಿಕಿತ್ಸೆ ನೀಡಲು ಪ್ರಾರಂಭಿಸಲಾಯಿತು.

2. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪ್ರಾರಂಭಿಕವಾಗಿ ಆಕ್ಸಿಜನ್ ಪಾಯಿಂಟ್ ಗಳು ಕಡಿಮೆ ಇದ್ದು, ಅವುಗಳನ್ನು 175ಕ್ಕೆ ಹೆಚ್ಚಿಸಲಾಯಿತು. ಅದರಲ್ಲಿ 27 ಐ.ಸಿ.ಯು. ಹಾಸಿಗೆಗಳನ್ನು ಮಾಡಿ ಅಲ್ಲಿ ಹೆಚ್.ಎಫ್.ಎನ್.ಸಿ. ಮತ್ತು ಪ್ಯಾರಾಮೀಟರ್ ಗಳನ್ನು ಅಳವಡಿಸಲಾಯಿತು.

3. ಪ್ರಾರಂಭದಲ್ಲಿ ಕೋವಿಡ್ ಮತ್ತು ಮೆಗ್ಗಾನ್ ಆಸ್ಪತ್ರೆಗೆ ಲಿಕ್ವಿಡ್ ಆಕ್ಸಿಜನ್ ಕಂಟೈನರ್ ಮೂಲಕ ಸರಬರಾಜು ಮಾಡಲಾಗುತ್ತಿದ್ದು, ಕೋವಿಡ್ ರೋಗಿಗಳು ಹೆಚ್ಚಾಗುತ್ತಿದ್ದರಿಂದ ಹೆಚ್ಚುವರಿ ಆಕ್ಸಿಜನ್ ಅವಶ್ಯಕತೆ ಇರುವುದನ್ನು ಮನಗಂಡು 13 ಕೆ.ಎಲ್.ಡಿ. ಆಕ್ಸಿಜನ್ ಪ್ಲಾಂಟನ್ನು ಆಗಸ್ಟ್ ತಿಂಗಳಿನಲ್ಲಿ ಅಳವಡಿಸಿ, ಆಕ್ಸಿಜನ್ ಸರಬರಾಜು ಮಾಡಲಾಗುತ್ತಿದೆ. ಸೆಪ್ಟೆಂಬರ್/ ಅಕ್ಟೋಬರ್ ತಿಂಗಳಲ್ಲಿ ಕೋವಿಡ್ ರೋಗಿಗಳ ಸಂಖ್ಯೆ ಜಾಸ್ತಿಯಾದಾಗ ಮೆಗ್ಗಾನ್ ಆಸ್ಪತ್ರೆಯ ಮೊದಲನೇ ಮಹಡಿಯನ್ನು ಕೋವಿಡ್ ಬ್ಲಾಕ್ ಆಗಿ ಪರಿವರ್ತಿಸಿ, ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಮುಂದೆ ಇನ್ನೂ ಹೆಚ್ಚಾಗಬಹುದು ಮತ್ತು ಆಕ್ಸಿಜನ್ ಒತ್ತಡವನ್ನು ಒಂದೇ ಸಮನೇ ನಿರ್ವಹಿಸಲು ಸರ್ಕಾರಕ್ಕೆ ಪತ್ರವನ್ನು ಬರೆದು 6 ಕೆ.ಎಲ್.ಡಿ. ಆಕ್ಸಿಜನ್ ಪ್ಲಾಂಟನ್ನು ಮಂಜೂರು ಮಾಡಿಕೊಳ್ಳಲಾಗಿದ್ದು, ಪ್ರಾರಂಭಿಕ ಹಂತದಲ್ಲಿರುತ್ತದೆ.

4. ಸಂಸ್ಥೆಯಿಂದ 344 ಆಕ್ಸಿಜನ್ ಪಾಯಿಂಟ್ ಗಳನ್ನು ಎಸ್.ಡಿ.ಆರ್.ಎಫ್. ನಿಧಿಯಡಿಯಲ್ಲಿ ಹಾಗೂ ಸರ್ಕಾರದಿಂದ 450 ಆಕ್ಸಿಜನ್ ಪಾಯಿಂಟ್ ಗಳನ್ನು ಮೆಗ್ಗಾನ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಮಹಿಳಾ ಮತ್ತು ಮಕ್ಕಳ ವಿಭಾಗದಲ್ಲಿ ಅಳವಡಿಸಲಾಗಿರುತ್ತದೆ.

5. ಕೋವಿಡ್ ರೋಗಿಗಳಿಗೆ ಅನುಕೂಲವಾಗುವಂತೆ ಪ್ರತ್ಯೇಕವಾಗಿ ಒಂದು ಪ್ರಯೋಗಾಲಯ ಮತ್ತು ಎಕ್ಸ್-ರೇ ಯೂನಿಟ್ ನ್ನು ತೆರೆಯಲಾಗಿರುತ್ತದೆ. ಸಿಟಿ ಸ್ಕ್ಯಾನ್ ಗಾಗಿ ಸಮಯವನ್ನು ನಿಗಧಿಮಾಡಲಾಗಿದೆ.

6. ಕೋವಿಡ್ ರೋಗಿಗಳಿಗಾಗಿ ಪ್ರತ್ಯೇಕವಾಗಿ 4 ಡಯಾಲಿಸಿಸ್ ಯಂತ್ರವನ್ನು ಹಾಗೂ ತುರ್ತು ಶಸ್ತ್ರಚಿಕಿತ್ಸಾ ಕೊಠಡಿಯನ್ನು ಸೂಪರ್ ಸ್ಪೆಷಾಲಿಟಿ/ಕೋವಿಡ್ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿದೆ.

7. ಕೋವಿಡ್ ಪಾಸಿಟಿವ್ ಮಹಿಳಾ ಮತ್ತು ಮಕ್ಕಳ ಹೆರಿಗೆ ಮತ್ತು ಶಸ್ತ್ರಚಿಕಿತ್ಸೆ ಹಾಗೂ ಮಕ್ಕಳ ಚಿಕಿತ್ಸೆಗಾಗಿ ಪ್ರತ್ಯೇಕವಾಗಿ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಕೋವಿಡ್ ಘಟಕವನ್ನು ತೆರೆಯಲಾಗಿರುತ್ತದೆ.

8. ಕೋವಿಡ್ ರೋಗಿಗಳಿಗೆ ಪ್ಲಾಸ್ಮ ಚಿಕಿತ್ಸೆಯನ್ನು ನೀಡಲು ಅದಕ್ಕೆ ಬೇಕಾಗಿರುವ ಉಪಕರಣವನ್ನು ಖರೀದಿ ಮಾಡಿದ್ದು, ಪರವಾನಿಗೆಗೆ ಅನುಮತಿ ಕೋರಿದ್ದು, ಪರವಾನಿಗೆಯ ನಂತರ ಚಿಕಿತ್ಸೆಯನ್ನು ಪ್ರಾರಂಭಿಸಲಾಗುವುದು. ಐ.ಸಿ.ಯು.ನಲ್ಲಿರುವ ರೋಗಿಗಳಿಗೆ ಬ್ಲಡ್ ಕಲ್ಚರ್ ಮಾಡಲು ಆಟೋಮೆಟೆಡ್ ಬ್ಲಡ್ ಕಲ್ಚರ್ ಯಂತ್ರಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದ್ದು, ಸಧ್ಯದಲ್ಲಿಯೇ ಖರೀದಿ ಮಾಡಲಾಗುವುದು.

9. ಸಿಮ್ಸ್ ಸಂಸ್ಥೆಯಲ್ಲಿ 65 ಹೆಚ್.ಎಫ್.ಎನ್.ಸಿ.ಗಳು 40 ವೆಂಟಿಲೇಟರ್ ಗಳು 20 ವೆಂಟಿಲೇಟರ್ ವಿತ್ ಎನ್.ಐ.ವಿ. ಮೋಡ್. 50 ಮಲ್ಟಿಪ್ಯಾರಾ ಮೀಟರ್ಸ್, ಪೋರ್ಟಬಲ್ ಅಲ್ಟ್ರಾಸೌಂಡ್, ಡಿ-ಫಿಬ್ರಿಲೇಟರ್ ಇನ್ನಿತರ ಅವಶ್ಯಕ ಉಪಕರಣಗಳ ಸೌಲಭ್ಯವಿರುತ್ತದೆ.

10. 23-11-2020ರಲ್ಲಿ ಒಟ್ಟು 53 ಕೋವಿಡ್ ಪಾಸಿಟಿವ್ ರೋಗಿಗಳು ಚಿಕಿತ್ಸೆ ಪಡೆಯುತ್ತಿರುತ್ತಾರೆ.

11. ಸರ್ಕಾರದಿಂದ ಕೋವಿಡ್ ಗಾಗಿ 20 ಶುಶ್ರೂಷಕರು ಹಾಗೂ 5 ಡಿ ಗ್ರೂಪ್ ಹುದ್ದೆಗಳು ಮಂಜೂರಾಗಿದ್ದು, ರೋಗಿಗಳ ಸಂಖ್ಯೆ ಹೆಚ್ಚಾದಾಗ ಈ ಸಿಬ್ಬಂದಿಗಳ ಸಂಖ್ಯೆಯು ಕಡಿಮೆಯಾಗಿದ್ದರಿಂದ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾಧಿಕಾರಿಗಳ ಜೊತೆಗೆ ಸಮಾಲೋಚನೆ ಮಾಡಿ ಹೆಚ್ಚುವರಿಯಾಗಿ 30 ಶುಶ್ರೂಷಕರು ಹಾಗೂ 20 ಡಿ ಗ್ರೂಪ್ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುತ್ತದೆ. ಇನ್ನೂ ಹೆಚ್ಚಿನ ಕೋವಿಡ್ ರೋಗಿಗಳು ದಾಖಲಾದಾಗ ಪುನಃ 50 ಶುಶ್ರೂಷಕರುಗಳನ್ನು ಮತ್ತು 10 ಡಿ ಗ್ರೂಪ್ ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಅನುಮತಿಯನ್ನು ಪಡೆದುಕೊಂಡು, ಈಗ 85 ಶುಶ್ರೂಷಕರು ಹಾಗೂ 25 ಡಿ ಗ್ರೂಪ್ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಅವಶ್ಯಕತೆ ಇದ್ದಲ್ಲಿ ಇನ್ನೂ ಹೆಚ್ಚುವರಿಯಾಗಿ ಶುಶ್ರೂಕರು ಮತ್ತು ಡಿ ಗ್ರೂಪ್ ಸಿಬ್ಬಂದಿಗಳನ್ನು ತೆಗೆದುಕೊಳ್ಳಲಾಗುವುದು.

12. ಮಾನ್ಯ ಜಿಲ್ಲಾಧಿಕಾರಿಗಳು ಆಸ್ಪತ್ರೆಯ ಭೇಟಿಯ ಸಮಯದಲ್ಲಿ ತಿಳಿಸಿದಂತೆ ಹೆಚ್ಚುವರಿಯಾಗಿ 30 ಐ.ಸಿ.ಯು. ಹಾಸಿಗೆಗಳನ್ನು ಮಾಡಿಕೊಳ್ಳಲು ತಯಾರಿ ನಡೆದಿದ್ದು, ಈಗ ಆಕ್ಸಿಜನ್ ಅಳವಡಿಕೆಯು ಪ್ರಗತಿಯಲ್ಲಿದೆ.

13. ಸ್ಮಾರ್ಟ್ ಸಿಟಿಯಿಂದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮೊದಲನೇ ಮಹಡಿಯನ್ನು ಪೂರ್ಣಗೊಳಿಸುವ ಕಾಮಗಾರಿಗೆ ರೂ.4.50ಕೋಟಿಗಳು ಬಿಡುಗಡೆಯಾಗಿದ್ದು, ಸದರಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸಲು ಆದೇಶ ನೀಡಿದ್ದು, ಟೆಂಡರ್ ಆಗಿ ಅರ್ಹ ಟೆಂಡರ್ ದಾರರಿಗೆ ಆದೇಶ ನೀಡುವುದು ಬಾಕಿ ಇರುತ್ತದೆ. ದಯಮಾಡಿ ಆದೇಶವನ್ನು ತಕ್ಷಣವೇ ನೀಡಿ, ಕಾಮಗಾರಿಯನ್ನು ಪ್ರಾರಂಭಿಸಲು ಕೋರಿದರು ಹಾಗೂ ಮುಂದೆ ಈ ಆಸ್ಪತ್ರೆಯನ್ನು ಅವಶ್ಯಕತೆ ಬಿದ್ದರೆ ಕೋವಿಡ್ ಆಸ್ಪತ್ರೆಯಾಗಿ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಕೋವಿಡ್-19 ನಿಯಂತ್ರಣ ಕಾರ್ಯವನ್ನು ಇದೇ ರೀತಿ ಉತ್ತಮವಾಗಿ ನಿರ್ವಹಿಸಿ, ಮುಂದಿನ ದಿನಗಳಲ್ಲಿಯೂ ಕೋವಿಡ್ ಪ್ರಕರಣ ಜಾಸ್ತಿಯಾಗದಂತೆ ಮುಂಜಾಗ್ರತಾ ಹಾಗೂ ನಿಯಂತ್ರಣ ಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವಂತೆ ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಂಗನ ಕಾಯಿಲೆಗೆ ಕೈಗೊಂಡ ಮುಂಜಾಗ್ರತಾ ಕ್ರಮದ ಕುರಿತು ಸಭೆಗೆ ಮಾಹಿತಿಯನ್ನು ನೀಡುತ್ತಾ, ಕಳೆದ ಸಾಲಿನಲ್ಲಿ 341 ಪ್ರಕರಣಗಳು ಹಾಗೂ 12 ಮರಣ ಸಂಭವಿಸಿದ್ದು, 2020ರ ಸಾಲಿನಲ್ಲಿ ಈವರೆಗೆ 5541 ರಕ್ತ ಮಾದರಿಗಳನ್ನು ಪರೀಕ್ಷೆ ಮಾಡಿದ್ದು, 184 ಪ್ರಕರಣಗಳು ದೃಢಪಟ್ಟಿರುತ್ತದೆ. ಈವರೆಗೆ ತೀರ್ಥಹಳ್ಳಿ-145, ಸಾಗರ-37, ಹೊಸನಗರ-01 ಮತ್ತು ಶಿವಮೊಗ್ಗ-01 ಹಾಗೂ 148 ಮಂಗಗಳ ಮರಣ ವರದಿಯಾಗಿದ್ದು, 57 ಮಂಗಗಳ ಮರಣೋತ್ತರ ಪರೀಕ್ಷೆ ಮಾಡಿದ್ದು, 2 ಸೋಂಕಿತ ಪ್ರಕರಣ ದೃಢಪಟ್ಟಿರುತ್ತದೆ. ಈ ಕಾಯಿಲೆಯ ನಿಯಂತ್ರಣದ ಬಗ್ಗೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಡಿ.ಎಂ.ಪಿ. ತೈಲ ಹಾಗೂ ಮೆಲಾಥಿನ್ ಪೌಡರ್ ಅನ್ನು ವಿತರಿಸಲಾಗಿದೆ. ಆಗಸ್ಟ್ ತಿಂಗಳಿನಿಂದ ಮಂಗನ ಕಾಯಿಲೆ ಪ್ರಕರಣ ವರದಿಯಾದ 5 ಕಿ.ಮೀ. ವ್ಯಾಪ್ತಿಯಲ್ಲಿ

ಲಸಿಕೆ ನೀಡಲಾಗುತ್ತಿದೆ. ಲಸಿಕೆಯ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿದೆ. ಐ.ಇ.ಸಿ. ಕಾರ್ಯಕ್ರಮಕ್ಕಾಗಿ ವಾಹನಕ್ಕೆ ಭಿತ್ತಿ ಪತ್ರಗಳು, ಧ್ವನಿ ವರ್ಧಕದ ಮೂಲಕ ಪ್ರಚಾರಪಡಿಸಲಾಗಿದೆ ಎಂದು ವಿವರಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಮಂಗನ ಕಾಯಿಲೆ ದೃಢಪಟ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಸೂಕ್ತ ಚಿಕಿತ್ಸೆ ಕೊಡಿಸುವಲ್ಲಿ ಹೆಚ್ಚು ನಿಗಾವಹಿಸಲು, ಈ ಕಾಯಿಲೆ ಹರಡದಂತೆ ಎಲ್ಲಾ ರೀತಿಯ ನಿಯಂತ್ರಣಾ ಮತ್ತು ಮುಂಜಾಗ್ರತಾ ಕ್ರಮಗಳನ್ನು ಸಕಾಲದಲ್ಲಿ ತೆಗೆದುಕೊಳ್ಳುವಂತೆ ಸೂಚಿಸಿದರು. ಡಿ.ಎಂ.ಪಿ. ತೈಲ ಹಾಗೂ ಮೆಲಾಥಿನ್ ಪೌಡರ್ ನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನಿರಿಸಿಕೊಳ್ಳಲು ತಿಳಿಸಿದರು. ಈ ಕಾಯಿಲೆ ಬಗ್ಗೆ ಆ ಭಾಗದ ಜನರಲ್ಲಿ ಹೆಚ್ಚಿನ ಅರಿವು ಮೂಡಿಸಲು ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳುವಂತೆ ನಿರ್ದೇಶನ ನೀಡಿದರು.

(ಕ್ರಮ: ಜಿಲ್ಲಾ ಸರ್ಜನ್,ಮೆಗ್ಗಾನ್ ಶಿವಮೊಗ್ಗ/ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು/ಸಿಮ್ಸ್ ನಿರ್ದೇಶಕರು)

7. <u>ಕಂದಾಯ ಇಲಾಖೆಯಿಂದ ಪರಿಹಾರ ವಿತರಿಸಿರುವ ರೈತ ಆತ್ಮಹತ್ಯೆ, ಆಕಸ್ಮಿಕ ಮರಣ, ಹಾವು ಕಡಿತ ಮತ್ತು ಬೆಂಕಿ ಅರ್ಹ ಪ್ರಕರಣಗಳ ಬಗ್ಗೆ:</u>

ಜಿಲ್ಲಾಧಿಕಾರಿಗಳು ವಿವರಿಸುತ್ತಾ, ಜಿಲ್ಲೆಯಲ್ಲಿ 2019-20 ಮತ್ತು 2020-21ನೇ ಸಾಲಿನಲ್ಲಿ 18 ರೈತ ಆತ್ಮಹತ್ಯೆ ಪ್ರಕರಣವಿದ್ದು, ರೂ.90.00ಲಕ್ಷ ಪರಿಹಾರ ವಿತರಣೆಯಾಗಿರುತ್ತದೆ. ಆಕಸ್ಮಿಕ ಮರಣ/ಹಾವು ಕಡಿತದ ಒಟ್ಟು 27 ಪ್ರಕರಣಗಳಿಗೆ ರೂ.54.00ಲಕ್ಷ ಪರಿಹಾರ ಧನ ನೀಡಲಾಗಿರುತ್ತದೆ. 28 ಬಣವೆ ಬೆಂಕಿ ಪ್ರಕರಣಗಳಿಗೆ 3.33ಲಕ್ಷ ಪರಿಹಾರ ಧನವನ್ನು ವಿತರಿಸಲಾಗಿರುತ್ತದೆ ಎಂದು ತಿಳಿಸಿದರು.

8. <u>ಸಾಮಾಜಿಕ ಭದ್ರತೆ ಯೋಜನೆಗಳು</u>:-

ಸಾಮಾಜಿಕ ಭದ್ರತೆ ಯೋಜನೆಗಳಡಿ ಸ್ವೀಕೃತವಾದ ಅರ್ಜಿಗಳ ವಿಲೇವಾರಿ ಕುರಿತು ಕೆಳಕಂಡಂತೆ ಮಾಹಿತಿಯನ್ನು ನೀಡುತ್ತಾ, ಬಿಡುಗಡೆಯಾದ ಹಣವನ್ನು ತಹಶೀಲ್ದಾರ್ ರವರಿಂದ ಸಂಬಂಧಪಟ್ಟ ಫಲಾನುಭವಿಗಳಿಗೆ ಸಕಾಲ ಕಾಲಮಿತಿಯೊಳಗೆ ಪಾವತಿಸಲಾಗುತ್ತಿದೆ ಎಂದು ತಿಳಿಸಿದರು.

| ಕ್ರ. ಸಂ | ಯೋಜನೆ | ಆರಂಭ ಶಿಲ್ಕು | ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಿದ ಅರ್ಜಿಗಳು | ಒಟ್ಟು | ಮಂಜೂರಾದ ಪ್ರಕರಣಗಳು | ತಿರಸ್ಕೃತ ಪ್ರಕರಣಗಳು | ಬಾಕಿ |
|---|---|---|---|---|---|---|---|
| 1 | ಸಂಧ್ಯಾ ಸುರಕ್ಷಾ | 215 | 2581 | 2796 | 2022 | 613 | 161 |
| 2 | ವೃದ್ಧಾಪ್ಯ ವೇತನ | 93 | 1658 | 1751 | 1275 | 373 | 103 |
| 3 | ವಿಧವಾ ವೇತನ | 49 | 1505 | 1554 | 1243 | 217 | 94 |
| 4 | ಅಂಗವಿಕಲ ವೇನ (ಶೇ.75ಕ್ಕಿಂತ ಹೆಚ್ಚು ಅಂಗವಿಕಲತೆ) | 23 | 227 | 250 | 186 | 41 | 23 |
| 5 | ಅಂಗವಿಕಲ ವೇನ ಶೇ.75ಕ್ಕಿಂತ ಕಡಿಮೆ ಅಂಗವಿಕಲತೆ) | 2 | 88 | 90 | 65 | 20 | 5 |
| 6 | ಮನಸ್ವಿನಿ ಯೋಜನೆ | 6 | 95 | 101 | 64 | 28 | 9 |
| 7 | ಮೈತ್ರಿ ಯೋಜನೆ | 0 | 0 | 22 | 0 | 0 | 0 |
| 8 | ಆಸಿಡ್ ದಾಳಿಗೊಳಗಾದ ಮಹಿಳೆ/ಹೆಣ್ಣು ಮಕ್ಕಳಿಗೆ ಮಾಸಾಶನ | 0 | 0 | 4 | 0 | 0 | 0 |
| 9 | ಮೃತರಾದ ರೈತರ ಪತ್ನಿಗೆ ಮಾಸಾಶನ | 0 | 3 | 3 | 2 | 0 | 1 |

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ವಿವಿಧ ಸಾಮಾಜಿಕ ಭದ್ರತೆ ಯೋಜನೆಯಡಿ ಮೇಲ್ಕಂಡಂತೆ ಬಾಕಿ ಇರುವ ಪ್ರಕರಣಗಳನ್ನು ಪರಿಶೀಲಿಸಿ, ತ್ವರಿತವಾಗಿ ವಿಲೇವಾರಿಗೊಳಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)**

**9. ರಾಷ್ಟ್ರೀಯ ಸಾಮಾಜಿಕ ಭದ್ರತೆ ಯೋಜನೆಗಳು:-**

ಜಿಲ್ಲಾಧಿಕಾರಿಗಳು ವಿವರಿಸುತ್ತಾ, ರಾಷ್ಟ್ರೀಯ ಸಾಮಾಜಿಕ ಭದ್ರತೆ ಯೋಜನೆಗಳಡಿ ಹಿಂದಿನ ಸಾಲಿನಿಂದ 1556 ಅರ್ಜಿಗಳು ಮಂಜೂರಾತಿಯಾಗಿದ್ದು, ಎಲ್ಲಾ ಅರ್ಜಿಗಳ ವಿಲೇವಾರಿಗೆ ರೂ.311.20ಲಕ್ಷ ಅನುದಾನ ಬಿಡುಗಡೆ ಮಾಡಿಸಿಕೊಡುವಂತೆ ಕೋರಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಎಲ್ಲಾ ಅರ್ಜಿಗಳ ವಿಲೇವಾರಿಗೆ ಅವಶ್ಯವಿರುವ ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಮತ್ತೊಮ್ಮೆ ಪತ್ರವ್ಯವಹರಿಸಿ, ತಮ್ಮ ಗಮನಕ್ಕೆ ತರುವಂತೆ ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)**

**10. ಅಂತ್ಯ ಸಂಸ್ಕಾರ ಯೋಜನೆ:-**

ಜಿಲ್ಲಾಧಿಕಾರಿಗಳು ವಿವರಿಸುತ್ತಾ, ರಾಷ್ಟ್ರೀಯ ಸಾಮಾಜಿಕ ಭದ್ರತೆ ಯೋಜನೆಗಳಡಿ ಹಿಂದಿನ ಸಾಲಿನಿಂದ 2373 ಅರ್ಜಿಗಳು ಮಂಜೂರಾತಿಯಾಗಿದ್ದು, ಎಲ್ಲಾ ಅರ್ಜಿಗಳ ವಿಲೇವಾರಿಗೆ ರೂ.118.65ಲಕ್ಷ ಅನುದಾನ ಬಿಡುಗಡೆ ಮಾಡಿಸಿಕೊಡಲು ಕೋರಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಪತ್ರವ್ಯವಹರಿಸಿದ್ದಲ್ಲಿ ಅದರ ಮಾಹಿತಿಯನ್ನು ತಮಗೆ ನೀಡುವಂತೆ ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)**

**11. ಕಂದಾಯ ವಿಷಯಗಳು:-**

1. ಜಿಲ್ಲಾಧಿಕಾರಿಗಳು ವಿವರಿಸುತ್ತಾ, 94-ಎ ರಡಿ ಅನಧಿಕೃತ ಸಾಗುವಳಿ ಸಕ್ರಮೀಕರಣದ ನಮೂನೆ 50 ಅರ್ಜಿಗಳು ವಿಲೇವಾರಿಗೆ ಬಾಕಿ ಇರುವುದಿಲ್ಲ. ಕಲಂ 94-ಬಿರಡಿಯಲ್ಲಿ ಅನಧಿಕೃತ ಸಾಗುವಳಿ ಸಕ್ರಮೀಕರಣದ ನಮೂನೆ 53 ಅರ್ಜಿಗಳು 145601 ಸ್ವೀಕರಿಸಿದ್ದು, 125877 ಅರ್ಜಿಗಳು ತಿರಸ್ಕೃತಗೊಂಡಿರುತ್ತವೆ, 18649 ಅರ್ಜಿಗಳನ್ನು ವಿಲೇವಾರಿಗೊಳಿಸಿ, ಸಾಗುವಳಿ ಚೀಟಿ ನೀಡಲಾಗಿದೆ, ವಿಲೇವಾರಿಗೆ 1075 ಅರ್ಜಿಗಳು ಬಾಕಿ ಇರುತ್ತವೆ ಎಂದು ತಿಳಿಸಿದರು. ಕಲಂ 94-ಎ(4)ರಡಿ ಅನಧಿಕೃತ ಸಾಗುವಳಿ ಸಕ್ರಮೀಕರಣದ ನಮೂನೆ 57 - 78461 ಅರ್ಜಿಗಳು ಸ್ವೀಕೃತವಾಗಿದ್ದು, ವಿಲೇವಾರಿಗೆ ಬಾಕಿ ಇರುತ್ತದೆಂದರು. ಕಲಂ 94ಸಿ (ಗ್ರಾಮಾಂತರ)ರಡಿ 76449 ಅರ್ಜಿಗಳು ಸ್ವೀಕೃತವಾಗಿದ್ದು, 18827 ಮಂಜೂರಾತಿಯಾಗಿ, ಹಕ್ಕುಪತ್ರಗಳನ್ನು ನೀಡಲಾಗಿದೆ ಹಾಗೂ 56086 ಅರ್ಜಿಗಳು ತಿರಸ್ಕೃತಗೊಂಡಿರುತ್ತವೆ ಎಂದು ತಿಳಿಸಿದರು. ಕಲಂ 94ಸಿಸಿ (ನಗರ)ರಡಿಯಲ್ಲಿ 21343 ಸ್ವೀಕೃತ ಅರ್ಜಿಗಳ ಪೈಕಿ 5364 ಮಂಜೂರಾತಿ ನೀಡಿ, ಹಕ್ಕು ಪತ್ರಗಳನ್ನು ವಿತರಿಸಲಾಗಿದೆ ಹಾಗೂ 15652 ಅರ್ಜಿಗಳು ತಿರಸ್ಕೃತಗೊಂಡಿರುತ್ತವೆ ಎಂದರು. ಹಾಗೂ ಮೇಲ್ಕಂಡ ವಿವಿಧ ಪ್ರಕರಣಗಳಡಿ ಬಾಕಿ ಇರುವ ಅರ್ಜಿಗಳನ್ನು ವಿಳಂಬ ಮಾಡದೆ ತ್ವರಿತವಾಗಿ ವಿಲೇವಾರಿ ಮಾಡುವಂತೆ ತಹಶೀಲ್ದಾರ್ ಗಳಿಗೆ ಸೂಚಿಸಿದರು.

ಶಿವಮೊಗ್ಗ ತಾಲ್ಲೂಕು ತಹಶೀಲ್ದಾರ್ ರವರು ಮಾತನಾಡುತ್ತಾ, 94ಸಿಸಿ ರಡಿ ಅರ್ಜಿಗಳ ವಿಲೇವಾರಿಗೆ ಸ್ಥಳ ಪರಿಶೀಲನೆ ಮಾಡಬೇಕಿದ್ದು, ಈ ವಾರದಲ್ಲಿ ವಿಲೇವಾರಿಗೊಳಿಸಲಾಗುವುದೆಂದರು.

ಸೊರಬ ತಾಲ್ಲೂಕು ತಹಶೀಲ್ದಾರ್ ರವರು ಮಾತನಾಡಿ, ಹೆಚ್ಚುವರಿ ಅರ್ಜಿಗಳು ಸ್ವೀಕೃತಗೊಂಡಿರುವುದಾಗಿ ತಿಳಿಸಿದರು. ಕೂಡಲೇ ಪರಿಶೀಲನೆ ಮಾಡಿ ಸರಿ ಇದ್ದರೆ ವಿಲೇವಾರಿಗೊಳಿಸುವಂತೆ ಸೂಚಿಸಿದರು.

2. ಜಿಲ್ಲಾಧಿಕಾರಿಗಳು ರುದ್ರಭೂಮಿ ಸೌಲಭ್ಯ ಇರುವ/ಇಲ್ಲದಿರುವ ಗ್ರಾಮಗಳ ಮಾಹಿತಿ ನೀಡುತ್ತಾ, ಒಟ್ಟು 1618 ಗ್ರಾಮಗಳಿದ್ದು, ಬೇಚರಾಕ್ ಗ್ರಾಮಗಳು 147, ಜನವಸತಿ ಇರುವ ಗ್ರಾಮಗಳು 1471. ಜಿಲ್ಲೆಯಲ್ಲಿ 471 ಗ್ರಾಮಗಳಲ್ಲಿ ರುದ್ರಭೂಮಿ ಇದ್ದು, 791 ಗ್ರಾಮಗಳಲ್ಲಿ ರುದ್ರಭೂಮಿ ಇರುವುದಿಲ್ಲ. ರುದ್ರಭೂಮಿ ಇಲ್ಲದಿರುವ 331 ಗ್ರಾಮಗಳಲ್ಲಿ ಸರ್ಕಾರಿ ಜಮೀನು ಗುರುತಿಸಲಾಗಿದೆ, 10 ಗ್ರಾಮಗಳಲ್ಲಿ ಖಾಸಗಿ ಜಮೀನು ಖರೀದಿಸಲು ಉದ್ದೇಶಿಸಲಾಗಿದೆ, 457 ಗ್ರಾಮಗಳಲ್ಲಿ ಅರಣ್ಯ ಜಮೀನು, ಸೊಪ್ಪಿನಬೆಟ್ಟ, ಖಾನು, ನದಿ ದಂಡೆ, ಜಮೀನಿನಲ್ಲಿ ರುದ್ರಭೂಮಿ ಇದ್ದು, ಬಾಕಿ 202 ಗ್ರಾಮಗಳಿವೆ ಎಂದು ತಿಳಿಸಿದರು.

3. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣದ ಕುರಿತು ವಿವರಿಸುತ್ತಾ, ಸದರಿ ಉದ್ದೇಶಕ್ಕೆ 117 ಗ್ರಾಮ ಪಂಚಾಯಿತಿಗಳಲ್ಲಿ ಕಂದಾಯ ಇಲಾಖೆಯಿಂದ ಜಾಗ ಗುರುತಿಸಲಾಗಿದೆ. 61 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮಠಾಣಾಗಳಲ್ಲಿ ಜಾಗ ಗುರುತಿಸಲಾಗಿದೆ. 76 ಗ್ರಾಮ ಪಂಚಾಯಿತಿಗಳಲ್ಲಿ ಕಂದಾಯ ಜಮೀನಿನಲ್ಲಿ ಜಾಗ ಬೇಕಾಗಿರುತ್ತದೆ. 157 ಗ್ರಾಮ ಪಂಚಾಯಿತಿಗಳ ಡಿ.ಪಿ.ಆರ್. ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, 83 ಪ್ರಸ್ತಾವನೆಗಳಿಗೆ ಅನುಮೋದನೆ ದೊರೆತಿರುತ್ತದೆ. ಇನ್ನೂ 47 ಡಿ.ಪಿ.ಆರ್. ಆಗಿದ್ದು, ಒಟ್ಟು 271 ಗ್ರಾಮ ಪಂಚಾಯಿತಿಗಳ ಪೈಕಿ ಹಳೇ ಕಟ್ಟಡ ಸೇರಿ 204 ಆಗುತ್ತದೆ. ಈ ಹಿಂದೆ 35 ಗ್ರಾಮ ಪಂಚಾಯಿತಿಗಳಿಗೆ ಘಟಕ ನಿರ್ಮಾಣಕ್ಕೆ ರೂ.20.00ಲಕ್ಷ ಅನುದಾನ ದೊರೆಯುತ್ತಿತ್ತು. ಪ್ರಸ್ತುತ ರೂ.3.00ಲಕ್ಷ ದಿಂದ ರೂ.4.00ಲಕ್ಷದವರೆಗೆ ಸರ್ಕಾರದಿಂದ ಅನುದಾನ ದೊರೆಯಲಿದ್ದು, ಉಳಿಕೆ 15ನೇ ಹಣಕಾಸು, ನರೇಗಾ ಒಗ್ಗೂಡಿಸುವಿಕೆ ಮಾಡಿಕೊಂಡು ಘಟಕ ನಿರ್ಮಾಣ ಮಾಡಿಸಬೇಕಾಗಿರುತ್ತದೆ. 2021, ಮಾರ್ಚ್ ಅಂತ್ಯದೊಳಗೆ ಶೇಕಡ 100 ಕಸ ಸಂಗ್ರಹಣೆ, ವಿಂಗಡಣೆ ಮತ್ತು ವಿಲೇವಾರಿ ಮಾಡಲು ಘಟಕ ನಿರ್ಮಾಣ ಮಾಡಬೇಕೆಂಬ ಉದ್ದೇಶ ಹೊಂದಲಾಗಿರುತ್ತದೆ ಎಂಬ ಅಂಶವನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು.

**(ಕ್ರಮ: ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ)**

**12) ಆಹಾರ ಇಲಾಖೆ:**

ಸಭೆಯಲ್ಲಿ ಹಾಜರಿದ್ದ ಜಂಟಿ ನಿರ್ದೇಶಕರು ವಿವರಿಸುತ್ತಾ, ಜಿಲ್ಲೆಯಲ್ಲಿ ಅಗತ್ಯ ವಸ್ತು ಕಾಯ್ದೆಯಡಿ ಅಕ್ಟೋಬರ್,2020ರ ಮಾಹೆಯಲ್ಲಿ ಒಂದು ಕಡೆ ದಾಳಿ ನಡೆಸಿ, ಪ್ರಕರಣ ದಾಖಲಿಸಲಾಗಿದ್ದು, 68.50 ಕ್ವಿಂಟಾಲ್ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದ್ದು, ಇದರ ಅಂದಾಜು ಮೌಲ್ಯ ರೂ.1.70ಲಕ್ಷ ವಾಗಿರುತ್ತದೆ ಎಂದರು. ಅಕ್ಟೋಬರ್, 2020ರ ಮಾಹೆಯಲ್ಲಿ ಓ.ಎಂ.ಎಸ್.ಎಸ್.3267.05 ಕ್ವಿಂಟಾಲ್ ಅಕ್ಕಿ ಮತ್ತು 7110.56 ಕ್ವಿಂಟಾಲ್ ಗೋಧಿಯನ್ನು ಪಿ.ಎಂ.ಜಿ.ಕೆ.ಎ.ವೈ.ನಡಿ 61490.00 ಕ್ವಿಂಟಾಲ್ ಅಕ್ಕಿಯನ್ನು, 156 ಕೆ.ಎಲ್. ಸೀಮೆ ಎಣ್ಣೆಯನ್ನು

ಹಂಚಿಕೆ ಮಾಡಿದ್ದು, ಸಂಪೂರ್ಣ ಎತ್ತುವಳಿಯಾಗಿರುತ್ತದೆ ಎಂದು ತಿಳಿಸಿದರು. ಪಡಿತರ ಚೀಟಿ (PHH-BPL) ಕುರಿತು ಮಾಹಿತಿ ನೀಡುತ್ತಾ, ಒಟ್ಟಾರೆ 32951 ಅರ್ಜಿಗಳು ಸಲ್ಲಿಸಲಾಗಿದ್ದು, 21861 ಅರ್ಜಿಗಳು ಅನುಮೋದನೆಯಾಗಿರುತ್ತದೆ, 6804 ತಿರಸ್ಕೃತವಾಗಿರುತ್ತವೆ. 28665 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, 4286 ಅರ್ಜಿಗಳು ಬಾಕಿ ಇರುತ್ತವೆ. ಅದೇ ರೀತಿ ಪಡಿತರ ಚೀಟಿ (NPHH-APL) ಕುರಿತು ಮಾಹಿತಿ ನೀಡುತ್ತಾ, ಒಟ್ಟಾರೆ 9990 ಅರ್ಜಿಗಳು ಸಲ್ಲಿಸಲಾಗಿದ್ದು, 7821 ಅರ್ಜಿಗಳು ಅನುಮೋದನೆಯಾಗಿರುತ್ತದೆ. 679 ತಿರಸ್ಕೃತವಾಗಿರುತ್ತವೆ. 8500 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, 1490 ಅರ್ಜಿಗಳು ಬಾಕಿ ಇರುತ್ತವೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಬಾಕಿ ಇರುವ 1490 ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡುವಂತೆ ಸೂಚಿಸಿದರು.

(ಕ್ರಮ: ಜಂಟಿ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ)

**13.PM SVANIDHI SHIVAMOGGA DISTRICT ULB WISE ONLINE STATUS AS ON 20-11-2020**

ಈ ಕಾರ್ಯಕ್ರಮದಡಿ ಒಟ್ಟು 6238 ಪರಿಷ್ಕೃತ ಗುರಿ ನಿಗಧಿಪಡಿಸಿದ್ದು, 3475 ಅರ್ಜಿಗಳು ಸ್ವೀಕೃತವಾಗಿದ್ದು, ಶೇಕಡ 58ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ. 744 ಅರ್ಜಿಗಳ ಮಂಜೂರಾತಿಯಾಗಿದ್ದು, 270 ಜನರಿಗೆ ಸಾಲವಿತರಣೆ ಮಾಡಿ, ಅರ್ಜಿ ವಿಲೇವಾರಿ ಮಾಡಲಾಗಿರುತ್ತದೆ. 2372 LoR ಅರ್ಜಿಗಳು ಸ್ವೀಕೃತವಾಗಿದ್ದು, 2348 ಅರ್ಜಿಗಳು ಅನುಮೋದನೆಗೊಂಡಿರುತ್ತವೆ ಪ್ರಗತಿ ಸಾಧಿಸಲಾಗುತ್ತಿದೆ ಎಂದು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶರವರು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಈ ಕಾರ್ಯಕ್ರಮದಡಿ ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳನ್ನು ಅನುಸರಿಸಿ, ಅರ್ಜಿಗಳ ತ್ವರಿತ ವಿಲೇವಾರಿಗೆ ಕ್ರಮವಹಿಸುವಂತೆ ಸೂಚಿಸಿದರು.

(ಕ್ರಮ: ಆಯುಕ್ತರು, ಮಹಾನಗರ ಪಾಲಿಕೆ/ ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್/
ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ)

14. ಶಿವಮೊಗ್ಗ ಸ್ಮಾರ್ಟ್ ಸಿಟಿಗೆ ಸಂಬಂಧಿಸಿದ ಅಂಶಗಳು:-

ಸಭೆಯಲ್ಲಿ ಹಾಜರಿದ್ದ ಶಿವಮೊಗ್ಗ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರು ವಿವರಿಸುತ್ತಾ ಸ್ಮಾರ್ಟ್ ಸಿಟಿ ಅಭಿಯಾನದ ಅನುದಾನದಲ್ಲಿ 50 ಯೋಜನೆಗಳನ್ನು ಕೈಗೆತ್ತಿಗೊಳ್ಳಲಾಗಿದೆ. ಅದರಲ್ಲಿ ಈವರೆಗೆ 9 ಯೋಜನೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ. 40 ಯೋಜನೆಗಳು ಪ್ರಗತಿಯಲ್ಲಿವೆ.ಅಲ್ಲದೇ 3 ಯೋಜನೆಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿ.ಪಿ.ಪಿ.)ದಲ್ಲಿ ತೆಗೆದುಕೊಳ್ಳಲಾಗಿದ್ದು, ಅದರಲ್ಲಿ ಒಂದು ಯೋಜನೆ ಪಾರಂಪರಿಕ ಬೀದಿ ದೀಪಗಳನ್ನು ಎಲ್.ಇ.ಡಿ. ದೀಪಗಳಿಗೆ ಬದಲಾಯಿಸುವ ಯೋಜನೆಯಾಗಿದ್ದು, ಈಗಾಗಲೇ ಕಾರ್ಯಾದೇಶ ನೀಡಲ್ಾಗಿದೆ. ಮತ್ತೆರಡು ಯೋಜನೆಗಳು ಸೌರ ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದ್ದು, ಕಾಲುವೆ ಮೇಲ್ಭಾಗದ ಸೌರ ಶಕ್ತಿ ಉತ್ಪಾದನೆ ಮತ್ತು ಛಾವಣಿ ಮೇಲ್ಭಾಗದ ಸೌರ ಶಕ್ತಿ ಉತ್ಪಾದನೆ ಇವುಗಳು ಟೆಂಡರ್ ಹಂತದಲ್ಲಿವೆ ಎಂದು ತಿಳಿಸಿದರು.

ಮುಂದುವರಿದು ವ್ಯವಸ್ಥಾಪಕ ನಿರ್ದೇಶಕರು ವಿವರಿಸುತ್ತಾ, ಇತರೆ ಇಲಾಖೆಗಳ ಒಗ್ಗೂಡಿಸುವಿಕೆಯೊಂದಿಗೆ 31 ಯೋಜನೆಗಳ ಕಾರ್ಯಾನುಷ್ಠಾನ ಸ್ಮಾರ್ಟ್ ಸಿಟಿ ಯೋಜನಾ ವ್ಯಾಪ್ತಿಯ ಪ್ರದೇಶದಲ್ಲಿ

ಅನುಷ್ಠಾನಗೊಳಿಸಲಾಗುತ್ತಿದ್ದು, ಅದರಲ್ಲಿ 27 ಯೋಜನೆಗಳು ಪೂರ್ಣಗೊಂಡಿರುತ್ತವೆ, 4 ಯೋಜನೆಗಳು ಪ್ರಗತಿಯಲ್ಲಿವೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಸ್ಮಾರ್ಟ್ ಸಿಟಿ ಕಾಮಗಾರಿಗಳ ಅನುಷ್ಠಾನದಲ್ಲಿ ಅಂತರ್ ಇಲಾಖಾ ಸಮಸ್ಯೆಗಳಿದ್ದಲ್ಲಿ, ಆಗಿಂದಾಗ್ಗೆ ಜಿಲ್ಲಾಧಿಕಾರಿಗಳ ಅವಗಾಹನೆಗೆ ತಂದು ಪರಿಹರಿಸಿಕೊಳ್ಳಬೇಕೆಂದರು. ಹಾಗೂ ಶಿವಮೊಗ್ಗ ಜಿಲ್ಲೆಯ ಸ್ಮಾರ್ಟ್ ಸಿಟಿ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಿಗಧಿತ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಉತ್ತಮ ರೀತಿಯಲ್ಲಿ ಸಾಧಿಸುವ ಮೂಲಕ, ಪ್ರಸಕ್ತ ಶ್ರೇಣಿಯನ್ನು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಉತ್ತಮಗೊಳಿಸಲು ಸೂಚಿಸಿದರು.

ವ್ಯವಸ್ಥಾಪಕ ನಿರ್ದೇಶಕರು ಮುಂದುವರಿದು, ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಸಲಹೆ-15ರ ಬಗ್ಗೆ ವಿವರಣೆ ನೀಡುತ್ತಾ, ಕೋವಿಡ್-19ರ ತುರ್ತು ಸ್ಥಿತಿಯ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಮತ್ತು ಜಿಲ್ಲಾ ಮೆಗ್ಗಾನ್ ಬೋಧನಾ ಆಸ್ಪತ್ರೆಗೆ ವೈದ್ಯಕೀಯ ಉಪಕರಣಗಳ ಖರೀದಿ ಮತ್ತು ಆಸ್ಪತ್ರೆಯ ಸುಧಾರಣೆಗೆ ಹಣಕಾಸಿನ ನೆರವು ನೀಡಲಾಗಿದೆ ಎಂಬ ಅಂಶವನ್ನು ಮಾನ್ಯ ಕಾರ್ಯದರ್ಶಿಗಳ ಅವಗಾಹನೆಗೆ ತಂದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಕೋವಿಡ್-19ಗೆ ಸಂಬಂಧಿಸಿದ ಯೋಜನೆಗಳನ್ನು ಯಾವುದೇ ವಿಳಂಭಕ್ಕೆ ಅವಕಾಶ ನೀಡದಂತೆ ಆದ್ಯತೆ ಮೇರೆಗೆ ಪೂರ್ಣಗೊಳಿಸುವಂತೆ ಹಾಗೂ ಸ್ಮಾರ್ಟ್ ಸಿಟಿ ಯೋಜನೆಗಳ ನಿರ್ವಹಣೆ, ಮೇಲ್ವಿಚಾರಣೆ ಮತ್ತು ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಳಿಸುವ ಕಾಮಗಾರಿಗಳ ಕಾಲಮಿತಿಯ ಬಗ್ಗೆ ವಿವರಣೆ ಆಪೇಕ್ಷಿಸಿದ್ದು, PERT Chart ಮಾಹಿತಿ ಸಲ್ಲಿಸುವಂತೆ ಸೂಚಿಸಿದರು.

ಈ ಕುರಿತು ವ್ಯವಸ್ಥಾಪಕ ನಿರ್ದೇಶಕರು ವಿವರಣೆ ನೀಡುತ್ತಾ, ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಎಂ.ಐ.ಎಸ್. ಪೋರ್ಟ್ ಲ್ ನಲ್ಲಿ ಕಾಲಕಾಲಕ್ಕೆ ಮಾಹಿತಿಯನ್ನು ಇಂದೀಕರಣಗೊಳಿಸಲಾಗುತ್ತಿದೆ ಮತ್ತು ಕಾಮಗಾರಿಗಳ ಪ್ರಗತಿಯ PERT Chart ಹಾಗೂ S-Curve ಗಳನ್ನು ನಿಯಮಿತವಾಗಿ ತಯಾರಿಸಿ, ಮೇಲ್ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಪೌರಾಯುಕ್ತರು, ಶಿವಮೊಗ್ಗ ಮಹಾನಗರಪಾಲಿಕೆ ಇವರು ಶಿವಮೊಗ್ಗ ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಅನುಷ್ಠಾನವಾಗುತ್ತಿರುವ ವಿವಿಧ ಕಾಮಗಾರಿಗಳನ್ನು ಸಭೆಗೆ ಮಂಡಿಸುತ್ತಾ, ಅಮೃತ್ ಯೋಜನೆಯಡಿ 18 ಓವರ್ ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಅದೇ ರೀತಿ ಸ್ಮಾರ್ಟ್ ಸಿಟಿ ಯೋಜನೆಯಡಿ ವಿವಿಧ ಬಡಾವಣೆಗಳಲ್ಲಿ ಪಾರ್ಕ್‌ಗಳನ್ನು ನಿರ್ಮಿಸಲಾಗಿದೆ. ಆದರೆ ಸದರಿ ಪಾರ್ಕ್‌ಗಳಲ್ಲಿ ಕಾವಲುಗಾರರನ್ನು ನೇಮಿಸಲು ಸಾರ್ವಜನಿಕರಿಂದ ಬೇಡಿಕೆ ಬರುತ್ತಿದ್ದು, ಕಾವಲುಗಾರರನ್ನು ನೇಮಿಸಿಕೊಳ್ಳಲು ಅನುಮತಿ ನೀಡಿದಲ್ಲಿ ಅವರಿಗೆ ವೇತನವನ್ನು ಮಹಾನಗರಪಾಲಿಕೆಯ ವತಿಯಿಂದಲೇ ಪಾವತಿಸಲಾಗುವುದೆಂದು ತಿಳಿಸಿದರು.

ಮುಂದುವರೆದು, ಶಿವಮೊಗ್ಗ ಮಹಾನಗರಪಾಲಿಕೆಗೆ ರೂ.9.58 ಕೋಟಿ ಬಿಡುಗಡೆಯಾಗಿದ್ದು, ರೂ.3.19 ಕೋಟಿಗಳನ್ನು ಖರ್ಚು ಮಾಡಿದ್ದು, ಅಗತ್ಯವಿರುವ ಪ್ರಮಾಣದ ವಾಹನಗಳನ್ನು ಖರೀದಿಸಲಾಗಿದೆ ಎಂದರು. ಹೊಸನಗರ ಸ್ಥಳೀಯ ಸಂಸ್ಥೆಯನ್ನು ಹೊರತುಪಡಿಸಿ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಎಲ್ಲಾ ರೀತಿಯ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ಎಂದರು.

ನಗರ ಪ್ರದೇಶಗಳಲ್ಲಿ ಪಿ.ಎಂ.ಎ.ವೈ ಯೋಜನೆಯಡಿ 5815 ಮನೆಗಳು ಮಂಜೂರಾಗಿದ್ದು, ಶೇಕಡಾ 95ರಷ್ಟು ಸಾಧನೆ ಮಾಡಲಾಗಿದೆ. ಕೊರೋನಾ ವೈರಸ್ ಸೋಂಕಿನಿಂದಾಗಿ ಸದರಿ ಯೋಜನೆಯಡಿ ಪ್ರಗತಿ ಸಾಧಿಸುವಲ್ಲಿ ಸ್ವಲ್ಪ ತಡವಾಗಿದ್ದು, ಡಿಸೆಂಬರ್ ಅಂತ್ಯದೊಳಗಾಗಿ ನಿಗಧಿತ ಸಾಧನೆ ಮಾಡುವುದಾಗಿ ತಿಳಿಸಿದರು.

ಅದೇ ರೀತಿ ಎಲ್ಲಾ ಪೌರ ಕಾರ್ಮಿಕರಿಗೂ ಜಿ.ಪ್ಲಸ್ ಯೋಜನೆಯಡಿ ಮನೆ ನಿರ್ಮಿಸುವ ಗುರಿ ಹೊಂದಲಾಗಿದೆ. ರಾಜ್ಯ ಮಟ್ಟದ ಅಪ್ಪೆಸಲ್ ಸಮಿತಿ ಸಭೆಯಲ್ಲಿ ಇದಕ್ಕೆ ಮಂಜೂರಾತಿ ದೊರತಿದ್ದು, ಒಂದೇ ಪ್ಯಾಕೇಜ್‌ನಲ್ಲಿ ಒಟ್ಟು 125 ಕಟ್ಟಡಗಳನ್ನು ನಿರ್ಮಿಸಲು ಯೋಜಿಸಲಾಗಿದೆ ಎಂದರು.

**(ಕ್ರಮ: ವ್ಯವಸ್ಥಾಪಕ ನಿರ್ದೇಶಕರು ,ಶಿವಮೊಗ್ಗ ಸ್ಮಾರ್ಟ್ ಸಿಟಿ)**

15. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ :-

ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ಇವರು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈವರೆಗೆ ಸಾಧಿಸಿದ ಪ್ರಗತಿ ವರದಿಯನ್ನು ಸಭೆಗೆ ಮಂಡಿಸುತ್ತಾ, ಸದರಿ ಯೋಜನೆಯಡಿ 45.00 ವಾರ್ಷಿಕ ಮಾನವ ದಿನಗಳ ಗುರಿ ನಿಗಧಿಯಾಗಿದ್ದು, ನವೆಂಬರ್ ಮಾಹೆಯ ಗುರಿ 36.46ಕ್ಕೆ ಎದುರಾಗಿ ದಿನಾಂಕ:21-11-2020ವರೆಗೆ 33.09 ಮಾನವ ದಿನಗಳ ಸಾಧನೆ ಮಾಡಿದ್ದು, ವಾರ್ಷಿಕ ಗುರಿಗೆದುರಾಗಿ ಶೇಕಡಾ 73.53 ರಷ್ಟು ಸಾಧನೆಯನ್ನು ಮಾಡಲಾಗಿದೆ. ಅದೇ ರೀತಿ ರೂ.21862.35 ಲಕ್ಷಗಳ ಆರ್ಥಿಕ ಗುರಿಯನ್ನು ನಿಗಧಿಪಡಿಸಿದ್ದು, ನವೆಂಬರ್ ಮಾಹೆಯಲ್ಲಿ ರೂ.17,711.92 ಲಕ್ಷಗಳ ಆರ್ಥಿಕ ಗುರಿಗೆದುರಾಗಿ ನವೆಂಬರ್ ಮಾಹೆಯಲ್ಲಿ ರೂ.11,162.93 ಲಕ್ಷಗಳ ಆರ್ಥಿಕ ಸಾಧನೆ ಮಾಡಿದ್ದು, ನವೆಂಬರ್ ಮಾಹೆಯವರೆಗೆ ಶೇಕಡಾ 63.02 ರಷ್ಟು ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2020ನೇ ಸಾಲಿಗೆ ನಿಗಧಿಪಡಿಸಿರುವ ವಾರ್ಷಿಕ ಮಾನವ ದಿನಗಳ ಮತ್ತು ವಾರ್ಷಿಕ ಆರ್ಥಿಕ ಗುರಿ ಸಾಧನೆ ಮಾಡುವಂತೆ ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ)

16. ಅಂತರ್ಜಲ ಚೇತನ ಕಾಮಗಾರಿ :-

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಅಂತರ್ಜಲ ಚೇತನ ಕಾಮಗಾರಿಯಡಿ ಈವರೆಗೆ ಸಾಧಿಸಿದ ಪ್ರಗತಿಯನ್ನು ಸಭೆಗೆ ಮಂಡಿಸುತ್ತಾ, ಸದರಿ ಯೋಜನೆಯಡಿ 27,811 ಗುರಿ ನಿಗಧಿಪಡಿಸಿದ್ದು, 16,899 ಸ್ಥಳಗಳನ್ನು ಗುರುತಿಸಲಾಗಿದೆ. ಈ ಪೈಕಿ 1,170 ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, 362 ಕಾಮಗಾರಿಗಳು ಪ್ರಗತಿಯಲ್ಲಿದ್ದು, 808 ಕಾಮಗಾರಿಗಳು ಪೂರ್ಣಗೊಂಡಿದ್ದು, 96,102 ಮಾನವ ದಿನಗಳನ್ನು ಸೃಜಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಅಂತರ್ಜಲ ಚೇತನ ಕಾಮಗಾರಿಯಡಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಹಾಗೂ ವಾರ್ಷಿಕ ನಿಗಧಿತ ಗುರಿಯನ್ವಯ ಸಾಧನೆ ಮಾಡಿ ಪ್ರಗತಿ ಸಾಧಿಸುವಂತೆ ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ)**

17. ಸ್ವಚ್ಛ ಭಾರತ್ ಮಿಷನ್ ವೈಯಕ್ತಿಕ ಶೌಚಾಲಯಗಳು :-

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸ್ವಚ್ಛ ಭಾರತ್ ಮಿಷನ್ ವೈಯಕ್ತಿಕ ಶೌಚಾಲಯಗಳ ಪ್ರಗತಿ ಕುರಿತು ಸಭೆಗೆ ವಿಷಯವನ್ನು ಮಂಡಿಸುತ್ತಾ, ಸದರಿ ಯೋಜನೆಯಡಿ 13,835 ಗುರಿಗೆದುರಾಗಿ 13,556 ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿದ್ದು, ಇನ್ನು 279 ಶೌಚಾಲಯಗಳನ್ನು ನಿರ್ಮಿಸಲು ಬಾಕಿ ಇರುತ್ತದೆ ಎಂದು ತಿಳಿಸಿ, ನಿವೇಶನ ತಕರಾರು ಮತ್ತು ದಾಖಲಾತಿಗಳು ಅಪೂರ್ಣವಾಗಿರುವುದರಿಂದ ಈ ರೀತಿ ಬಾಕಿ ಉಳಿದಿದ್ದು, ಇದನ್ನು ಸರಿಪಡಿಸಿಕೊಂಡು ನಿಗಧಿತ ಸಾಧನೆ ಮಾಡಲಾಗುವುದೆಂದು ತಿಳಿಸಿದರು.

ಅದೇ ರೀತಿ ಗ್ರಾಮೀಣ ಸಮುದಾಯ ಶೌಚಾಲಯದ ಪ್ರಗತಿ ವರದಿಯನ್ನು ಮಂಡಿಸುತ್ತಾ, ಸದರಿ ಯೋಜನೆಯಡಿ 103 ಸಮುದಾಯ ಶೌಚಾಲಯ ನಿರ್ಮಿಸುವ ಗುರಿಯನ್ನು ನಿಗಧಿಪಡಿಸಿದ್ದು, 85 ಶೌಚಾಲಯ ನಿರ್ಮಿಸಲಾಗಿದೆ. 18 ಸಮುದಾಯ ಶೌಚಾಲಯಗಳು ಪ್ರಗತಿಯಲ್ಲಿರುವುದಾಗಿ ತಿಳಿಸಿದರು.

ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮದಡಿ, ವೈಯಕ್ತಿ ಶೌಚಾಲಯಗಳನ್ನು ನಿರ್ಮಿಸಲು ಇರುವಂತಹ ಸಮಸ್ಯೆಗಳನ್ನು ಸಂಬಂಧಪಟ್ಟವರೊಂದಿಗೆ ಚರ್ಚಿಸಿ, ಕೂಡಲೇ ಸಮಸ್ಯೆ ಪರಿಹರಿಸಿಕೊಂಡು, ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವಂತೆ ಹಾಗೂ ಪ್ರಗತಿಯಲ್ಲಿ 18 ಸಮುದಾಯ ಶೌಚಾಲಯಗಳನ್ನು ಸಹ ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ)**

**18. ಗ್ರಾಮೀಣ ವಸತಿ:-**

ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ ರವರು ವಿವಿಧ ವಸತಿ ಯೋಜನೆಯಡಿ ಈವರೆಗಿನ ಪ್ರಗತಿ ವಿವರವನ್ನು ಸಭೆಗೆ ಮಂಡಿಸುತ್ತಾ, ಬಸವ ವಸತಿ ಯೋಜನೆಯಡಿ 2018-19 ಸಾಲಿನ ಗುರಿ 5420 ಇದ್ದು, 1758 ಆಯ್ಕೆ ಮಾಡಲಾಗಿದೆ. ಗ್ರಾಮ ಸಭೆಯಲ್ಲಿ 3662 ಫಲಾನುಭವಿಗಳ ಆಯ್ಕೆ ಮಾಡಬೇಕಾಗಿದ್ದು, ಶೇಕಡ 32.43 ಸಾಧನೆ ಮಾಡಲಾಗಿರುತ್ತದೆ. ಡಾ. ಬಿ.ಆರ್. ಅಂಬೇಡ್ಕರ್ ನಿವಾಸ ಯೋಜನೆಯಡಿ 2017-18ನೇ ಸಾಲಿನ ಗುರಿ 2710 ನಿಗಧಿಯಾಗಿದ್ದು, 1378 ಫಲಾನುಭವಿಗಳ ಆಯ್ಕೆ ಮಾಡಲಾಗಿದ್ದು, ಗ್ರಾಮ ಸಭೆಯಲ್ಲಿ 1332 ಫಲಾನುಭವಿಗಳ ಆಯ್ಕೆ ಬಾಕಿ ಇದ್ದು, ಶೇಕಡ 50.85 ಸಾಧನೆಯಾಗಿರುತ್ತದೆ. ಈ ಎರಡು ವಸತಿ ಯೋಜನೆಗಳು ಸರ್ಕಾರದ ಹಂತದಲ್ಲಿ ಸ್ಥಗಿತವಾಗಿರುವುದರಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಸ್ಥಗಿತವಾಗಿರುತ್ತದೆಂದರು. ಹಾಗೂ ಪಿ.ಎಂ.ವೈ. (ಗ್ರಾಮೀಣ) ಅಡಿ 2019-20ನೇ ಸಾಲಿಗೆ 382 ಗುರಿ ನಿಗಧಿಯಾಗಿದ್ದು, 348 ಫಲಾನುಭವಿಗಳ ಆಯ್ಕೆ ಮಾಡಲಾಗಿದ್ದು, ಶೇಕಡ 91.10 ಸಾಧನೆ ಮಾಡಲಾಗಿರುತ್ತದೆ. ಉಳಿಕೆ 34 ಫಲಾನುಭವಿಗಳು ಬೇರೆ ಬೇರೆ ವಸತಿ ಯೋಜನೆಯಡಿ ಆಯ್ಕೆಗೊಂಡಿದ್ದು, ಅನರ್ಹ ಫಲಾನುಭವಿಗಳಾಗಿರುತ್ತಾರೆ. ಪಿ.ಎಂ.ವೈ. (ಗ್ರಾಮೀಣ) ಯೋಜನೆಯಡಿ 2020-21ನೇ ಸಾಲಿಗೆ ಪ್ರತೀ ಗ್ರಾಮ ಪಂಚಾಯಿತಿಗೆ 20 ಗುರಿ ನಿಗಧಿಯಾಗಿದ್ದು, ಈ ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿಗೆ ವಹಿಸಲಾಗಿರುತ್ತದೆಂದು ತಿಳಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ)**

19. ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು :-

ಕಾರ್ಯಪಾಲಕ ಇಂಜಿನಿಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ಇವರು ಜಿಲ್ಲೆಯಲ್ಲಿ ಸದರಿ ಯೋಜನೆಯಡಿ ಸಾಧಸಿದ ಪ್ರಗತಿಯನ್ನು ಸಭೆಗೆ ಮಂಡಿಸುತ್ತಾ, ಜಿಲ್ಲೆಗೆ ಒಟ್ಟು 1267

ಕಾಮಗಾರಿಗಳು ಮಂಜೂರಾಗಿದ್ದು, 1007 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 189 ಕಾಮಗಾರಿಗಳು ಪ್ರಗತಿಯಲ್ಲಿದ್ದು, 70 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದೆ. ಸದರಿ ಯೋಜನೆಯಡಿ ಕಾಮಗಾರಿಗಳ ಪ್ರಾರಂಭಕ್ಕೆ ಮೂರನೇ ಬಾರಿ ಟೆಂಡರ್ ಕರೆದಿದ್ದು, ಈಗ ಗುತ್ತಿಗೆದಾರರು ಕಾಮಗಾರಿ ನಿರ್ವಹಿಸಲು ಮುಂದೆ ಬಂದಿದ್ದಾರೆಂದು ತಿಳಿಸಿ, ತಮ್ಮ ಇಲಾಖೆಯಲ್ಲಿ ತಾಂತ್ರಿಕ ಸಿಬ್ಬಂದಿಗಳ ಕೊರತೆಯೂ ಇರುತ್ತದೆ ಎಂದು ತಿಳಿಸಿದರು

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸದರಿ ಯೋಜನೆಯಡಿ ನಿಗಧಿತ ಸಾಧನೆ ಮಾಡುವಂತೆ ತಿಳಿಸಿ, ಪ್ರಾರಂಭಿಸಬೇಕಾಗಿರುವ ಎಲ್ಲಾ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲು ಸೂಚಿಸಿದರು.

**(ಕ್ರಮ:- ಕಾರ್ಯಪಾಲಕ ಇಂಜಿನಿಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ)**

20. ಜಲ್ ಜೀವನ್ ಮಿಷನ್ :-

ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತ್ ಇವರು ಮಾತನಾಡಿ, 2020-21ನೇ ಸಾಲಿನ ಜಲ್ ಜೀವನ್ ಮಿಷನ್ ಯೋಜನೆಯಡಿ ಜಿಲ್ಲೆಯಲ್ಲಿ 995 ಕಾಮಗಾರಿಗಳು ರೂ.28,580.77 ಲಕ್ಷಗಳಿಗೆ ಮಂಜೂರಾಗಿದ್ದು, ಅಂದಾಜು ಪಟ್ಟಿಯನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

**21. 3054 ಗ್ರಾಮೀಣ ರಸ್ತೆಗಳ ನಿರ್ವಹಣೆ (ಲಮ್‌ಸಮ್) ಯೋಜನೆ ಮುಂದುವರೆದ ಕಾಮಗಾರಿಗಳು :-**

ಕಾರ್ಯಪಾಲಕ ಇಂಜಿನಿಯರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಇವರು ಮಾತನಾಡಿ, ಸದರಿ ಯೋಜನೆಯಡಿ 32 ಕಾಮಗಾರಿಗಳು ರೂ.1,560-00 ಗಳ ಅಂದಾಜು ಮೊತ್ತದಲ್ಲಿ ಮಂಜೂರಾಗಿದ್ದು, ದಿನಾಂಕ: 31-3-2020ರವರೆಗೆ ರೂ.591.37ಲಕ್ಷ ಖರ್ಚಾಗಿರುತ್ತದೆ. 3 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದ್ದು, 4 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 25 ಕಾಮಗಾರಿಗಳು ಮುಕ್ತಾಯಗೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ರೂ.15.96 ಲಕ್ಷ ವೆಚ್ಚವಾಗಿದ್ದು, ಕಾಮಗಾರಿಯ ಒಟ್ಟಾರೆ ವೆಚ್ಚ ರೂ.607.33 ಲಕ್ಷಗಳಾಗಿರುತ್ತವೆ ಎಂದು ತಿಳಿಸಿದರು.

**22. 5054 ಗ್ರಾಮೀಣ ರಸ್ತೆಗಳ ನಿರ್ವಹಣೆ ವಿಶೇಷ ಅಭಿವೃದ್ಧಿ ಕಾಮಗಾರಿಗಳು :-**

ಕಾರ್ಯಪಾಲಕ ಇಂಜಿನಿಯರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಇವರು ಮಾತನಾಡಿ, ಸದರಿ ಯೋಜನೆಯಡಿ 56 ಕಾಮಗಾರಿಗಳು ರೂ.4,050-00 ಗಳ ಅಂದಾಜು ಮೊತ್ತದಲ್ಲಿ ಮಂಜೂರಾಗಿದ್ದು, ದಿನಾಂಕ: 31-3-2020ರವರೆಗೆ ರೂ.203.91 ಲಕ್ಷ ಖರ್ಚಾಗಿರುತ್ತದೆ. 5 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದ್ದು, 24 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 27 ಕಾಮಗಾರಿಗಳು ಮುಕ್ತಾಯಗೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ರೂ.203.91 ಲಕ್ಷ ವೆಚ್ಚವಾಗಿದ್ದು, ಕಾಮಗಾರಿಯ ಒಟ್ಟಾರೆ ವೆಚ್ಚ ರೂ.1,811.86 ಲಕ್ಷಗಳಾಗಿರುತ್ತವೆ ಎಂದು ತಿಳಿಸಿದರು.

**23. 5054 ಗ್ರಾಮೀಣ ರಸ್ತೆ ಮತ್ತು ಸೇತುವೆ ಕಾಮಗಾರಿಗಳು (ಮಳೆ ಹಾನಿ) :-**

ಕಾರ್ಯಪಾಲಕ ಇಂಜಿನಿಯರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಇವರು ಮಾತನಾಡಿ, ಸದರಿ ಯೋಜನೆಯಡಿ 133 ಕಾಮಗಾರಿಗಳು ರೂ.3196.25-00 ಗಳ ಅಂದಾಜು ಮೊತ್ತದಲ್ಲಿ ಮಂಜೂರಾಗಿದ್ದು, ದಿನಾಂಕ:31-3-2020ರವರೆಗೆ ರೂ.203.91ಲಕ್ಷ ಖರ್ಚಾಗಿರುತ್ತದೆ. 02 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದ್ದು, 42 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 89 ಕಾಮಗಾರಿಗಳು ಮುಕ್ತಾಯಗೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ರೂ.900.39 ಲಕ್ಷ ವೆಚ್ಚವಾಗಿದ್ದು, ಕಾಮಗಾರಿಯ ಒಟ್ಟಾರೆ ವೆಚ್ಚ ರೂ. 900.39 ಲಕ್ಷಗಳಾಗಿರುತ್ತವೆ ಎಂದು ತಿಳಿಸಿದರು.

**24. ಸಂಜೀವಿನಿ (ಎನ್.ಆರ್.ಎಲ್.ಎಂ) :-**

ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ಇವರು ಮಾತನಾಡಿ, ಗ್ರಾಮ ಪಂಚಾಯತ್ ಮಟ್ಟದಲ್ಲಿ ಒಟ್ಟು 63 ಒಕ್ಕೂಟಗಳನ್ನು ರಚಿಸುವ ಗುರಿಗೆದುರಾಗಿ 31 ಒಕ್ಕೂಟಗಳನ್ನು ರಚಿಸಲಾಗಿದೆ 315 ವಾರ್ಡ್ ಮಟ್ಟದ ಒಕ್ಕೂಟಗಳನ್ನು ರಚಿಸುವ ಗುರಿಗೆದುರಾಗಿ 183 ಒಕ್ಕೂಟಗಳನ್ನು ರಚಿಸಲಾಗಿದೆ. ಒಕ್ಕೂಟದಡಿಯಲ್ಲಿ 2457 ಸ್ವಸಹಾಯ ಗುಂಪುಗಳನ್ನು ಸೇರ್ಪಡೆಗೊಳಿಸಬೇಕಾಗಿದ್ದು, ಈ ಪೈಕಿ 1178 (62 ಹೊಸ ಗುಂಪು ಮತ್ತು 1116 ಇತರೆ) ಗುಂಪುಗಳನ್ನು ಸೇರ್ಪಡೆಗೊಳಿಸಲಾಗಿದೆ 5,880 ಸ್ವಸಹಾಯ ಗುಂಪುಗಳ ಗ್ರೇಡಿಂಗ್ ಮಾಡುವ ಗುರಿಗೆದುರಾಗಿ 1880 ಗುಂಪುಗಳನ್ನು ಗ್ರೇಡಿಂಗ್ ಮಾಡಲಾಗಿದ್ದು, 287 ಗುಂಪುಗಳಿಗೆ ಸುತ್ತು ನಿಧಿ ಬಿಡುಗಡೆ ಮಾಡಲಾಗಿದೆ. 90 ಒಕ್ಕೂಟಗಳಿಗೆ ಸಮುದಾಯ ಬಂಡವಾಳ ನಿಧಿ ನೀಡಲಾಗಿದ್ದು, ಈಗಾಗಲೇ 84 ಒಕ್ಕೂಟಗಳಿಗೆ ರೂ.787.50 ಲಕ್ಷ ಬಿಡುಗಡೆ ಮಾಡಲಾಗಿದೆ. ಒಟ್ಟು 74 ತರಬೇತಿಗಳನ್ನು ನೀಡಲಾಗಿದ್ದು, ಈ ಪೈಕಿ ಸೊರಬ ತಾಲ್ಲೂಕಿನಲ್ಲಿ 8, ಹೊಸನಗರ ತಾಲ್ಲೂಕಿನಲ್ಲಿ 13, ಸಾಗರ ತಾಲ್ಲೂಕಿನಲ್ಲಿ 14, ತೀರ್ಥಹಳ್ಳಿ ತಾಲ್ಲೂಕಿನಲ್ಲಿ 8, ಶಿಕಾರಿಪುರ ತಾಲ್ಲೂಕಿನಲ್ಲಿ 3, ಶಿವಮೊಗ್ಗ ತಾಲ್ಲೂಕಿನಲ್ಲಿ 8 ಮತ್ತು ಭದ್ರಾವತಿ ತಾಲ್ಲೂಕಿನಲ್ಲಿ 20 ಗುಂಪುಗಳಿಗೆ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು. ಕೋವಿಡ್-19 ಪ್ರಯುಕ್ತ ಗುಂಪುಗಳಿಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಮುಂದೂಡಲಾಗಿತ್ತು. ಈಗ ಸದರಿ ಸಂಘಗಳಿಗೆ ತರಬೇತಿ ನೀಡುವ ಕಾರ್ಯ ಪ್ರಾರಂಭವಾಗಿದೆ ಎಂದು ತಿಳಿಸಿದರು.

**25.ಕೃಷಿ ಇಲಾಖೆ :-**

ಜಂಟಿ ಕೃಷಿ ನಿರ್ದೇಶಕರು ಇಲಾಖಾ ಕಾರ್ಯಕ್ರಮಗಳ ಕುರಿತು ಸಭೆಗೆ ಮಾಹಿತಿ ನೀಡುತ್ತಾ, ಕೃಷಿ ಇಲಾಖೆಯಲ್ಲಿ ಸಾಮಾನ್ಯ ರೈತರಿಗೆ ಶೇಕಡ 50ರ ರಿಯಾಯಿತಿ ದರದಲ್ಲಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇಕಡ 75ರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ, ಕೃಷಿ ಪರಿಕರಗಳಾದ ಹಸಿರೆಲೆ ಗೊಬ್ಬರ ಬೀಜ, ಕೃಷಿ ಸುಣ್ಣ, ಲಘು ಪೋಷಕಾಂಶಗಳು, ಸಾವಯವ ಗೊಬ್ಬರ, ಜೈವಿಕ ಗೊಬ್ಬರಗಳನ್ನು ವಿತರಿಸಲಾಗುತ್ತಿದೆ. ಅಲ್ಲದೆ ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಉತ್ಪನ್ನಗಳ ಸಂಸ್ಕರಣೆ ಕಾರ್ಯಕ್ರಮಗಳಡಿ, ಪವರ್ ಟಿಲ್ಲರ್ ಹಾಗೂ ಸುಧಾರಿತ ಹೈಟೆಕ್ ಕೃಷಿ ಯಂತ್ರೋಪಕರಣಗಳನ್ನು ಹಾಗೂ ಟಾರ್ಪಲಿನ್ ಗಳನ್ನು ಸಾಮಾನ್ಯ ರೈತರಿಗೆ ಶೇಕಡ 50ರ ರಿಯಾಯಿತಿ ದರದಲ್ಲಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇಕಡ 90ರ ರಿಯಾಯಿತಿ ದರದಲ್ಲಿ ಹಾಗೂ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ಎಲ್ಲಾ ವರ್ಗದ ರೈತರಿಗೆ ಶೇಕಡ 90ರ ಸಹಾಯಧನದಡಿ ತುಂತುರು ನೀರಾವರಿ ಘಟಕಗಳನ್ನು ವಿತರಿಸಲಾಗುತ್ತಿದೆ. ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ರೂ.3214.3 ಲಕ್ಷ ವಾರ್ಷಿಕವಾಗಿ ನಿಗಧಿಯಾಗಿದ್ದು, ಈ ಪೈಕಿ ಅಕ್ಟೋಬರ್ ಮಾಹೆಯ ಅಂತ್ಯಕ್ಕೆ ರೂ.2,307.18 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಇದರಲ್ಲಿ ರೂ.1,850.62 ಲಕ್ಷ ವೆಚ್ಚ ಭರಿಸಿದ್ದು, ಬಿಡುಗಡೆಯಾದ ಅನುದಾನಕ್ಕೆ ಶೇಕಡಾ 80.21 ರಷ್ಟು ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಕೃಷಿ ಇಲಾಖಾ ಕಾರ್ಯಕ್ರಮಗಳಲ್ಲಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಿ, ನಿಗಧಿತ ಭೌತಿಕ ಮತ್ತು ಆರ್ಥಿಕ ಗುರಿ ಸಾಧಿಸಲು ಸೂಚಿಸಿದರು.

**(ಕ್ರಮ:- ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ)**

**26. ತೋಟಗಾರಿಕಾ ಇಲಾಖೆ :-**

ಉಪ ನಿರ್ದೇಶಕರು, ತೋಟಗಾರಿಕಾ ಇಲಾಖೆ ಇವರು ಮಾತನಾಡಿ, ಪ್ರಸ್ತುತ ಸಾಲಿಗೆ ಇಲಾಖೆಯ ವಿವಿಧ ಯೋಜನೆಗಳಲ್ಲಿ ಹನಿ ನೀರಾವರಿ ಯೋಜನೆ (ಪಿ.ಎಂ.ಕೆ.ಎಸ್.ವೈ.)ಯಡಿ ಎಲ್ಲಾ ವರ್ಗದ ರೈತರಿ ಶೇಕಡ ೯೦ರಷ್ಟು ಸಹಾಯಧನ ಗರಿಷ್ಠ 5 ಹೆಕ್ಟೇರ್ ವರೆಗೆ ನೀಡಲಾಗುತ್ತಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ, ಕೃಷಿ ಹೊಂಡ ನಿರ್ಮಾಣ, ಹಸಿರು ಮನೆ, ನೆರಳು ಪರದೆ, ಸಂಸ್ಕರಣಾ ಘಟಕ, ಜೇನು ಕೃಷಿ, ಸಾವಯವ ಕೃಷಿ ಪರಿವರ್ತನೆ, ರೋಗ ಮತ್ತು ಕೀಟ ನಿಯಂತ್ರಣ, ಯಾಂತ್ರೀಕರಣದಡಿ ಮಿನಿ ಟ್ರ್ಯಾಕ್ಟರ್ ಇತ್ಯಾದಿ ಕಾರ್ಯಕ್ರಮಗಳಿಗೆ ಸಾಮಾನ್ಯ ವರ್ಗಕ್ಕೆ ಶೇಕಡ 40ರಷ್ಟು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಶೇಕಡ ೫೦ರಷ್ಟು ಸಹಾಯಧನ ನೀಡಲಾಗುವುದು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ವಿವಿಧ ಯಂತ್ರೋಪಕರಣಗಳ ಖರೀದಿಗೆ ಸಾಮಾನ್ಯ ವರ್ಗಕ್ಕೆ ಶೇಕಡ 40ರಷ್ಟು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಶೇಕಡ ೫೦ರಷ್ಟು ಸಹಾಯಧನ ನೀಡಲಾಗುವುದು. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಕೋವಿಡ್ - 19 ಲಾಕ್ ಡೌನ್ ಸಮಯದಲ್ಲಿ ಸಂಕಷ್ಟಕ್ಕೊಳಗಾದ ಹೂವು, ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರ ಧನವನ್ನು ನೀಡಲಾಗಿರುತ್ತದೆ. ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟ ಸಮಗ್ರ ನಿಯಂತ್ರಣ ಯೋಜನೆಯಡಿ, ತೋಟಗಾರಿಕೆ ಬೆಳೆಗಳಿಗೆ ಬಳಸುವಂತಹ ಮೈಲುತುತ್ತಾ ಹಾಗೂ ಇತರೆ ಔಷಧಿಗಳ ಖರೀದಿಗೆ ಸಾಮಾನ್ಯ ವರ್ಗಕ್ಕೆ ಶೇಕಡ 40ರಷ್ಟು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಶೇಕಡ ೫೦ರಷ್ಟು ಸಹಾಯಧನ ನೀಡಲಾಗುವುದು. ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ರೂ.2003.725 ಲಕ್ಷ ವಾರ್ಷಿಕವಾಗಿ ನಿಗಧಿಯಾಗಿದ್ದು, ರೂ.777.285 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಇದರಲ್ಲಿ ರೂ.688.26 ಲಕ್ಷ ವೆಚ್ಚ ಭರಿಸಿದ್ದು, ಬಿಡುಗಡೆಯಾದ ಅನುದಾನಕ್ಕೆ ಶೇಕಡಾ 88.54 ರಷ್ಟು ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಮುಂದುವರಿದು ಉಪ ನಿರ್ದೇಶಕರು ವಿವರಿಸುತ್ತಾ, ಕೇಂದ್ರ ಸರ್ಕಾರದ ಆರ್.ಐ.ಡಿ.ಎಫ್. ಯೋಜನೆಯಡಿ, ಜಿಲ್ಲೆಯಲ್ಲಿ ಶಿವಮೊಗ್ಗ ಮತ್ತು ಶಿಕಾರಿಪುರ ತಾಲ್ಲೂಕುಗಳಿಗೆ ಶೀಥಲ ಗೃಹಗಳ ನಿರ್ಮಾಣಕ್ಕೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆ ಪಡೆಯಲು ಕ್ರಮವಹಿಸಲಾಗಿದ್ದು, ಸದರಿ ಶೀಥಲ ಗೃಹಳ ನಿರ್ಮಾಣಕ್ಕೆ ಸೂಕ್ತ ಸ್ಥಳ ಆಯ್ಕೆಯಾದ ನಂತರ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುವುದು ಎಂಬ ಮಾಹಿತಿಯನ್ನು ನೀಡಿದರು ಹಾಗೂ ಜಿಲ್ಲೆಯಲ್ಲಿ ಹನಿ ನೀರಾವರಿ ಯೋಜನೆಗೆ ಹೆಚ್ಚಿನ ಬೇಡಿಕೆ ಇದ್ದು, ಕಳೆದ ಸಾಲಿನ ಅನುದಾನ ಸಹ ಬಿಡುಗಡೆಗೆ ಬಾಕಿ ಇರುತ್ತದೆ ಎಂಬ ಅಂಶವನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ತೋಟಗಾರಿಕೆ ಇಲಾಖಾ ಕಾರ್ಯಕ್ರಮಗಳಲ್ಲಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಿ, ನಿಗಧಿತ ಭೌತಿಕ ಮತ್ತು ಆರ್ಥಿಕ ಗುರಿ ಸಾಧಿಸಲು ಹಾಗೂ ಹನಿ ನೀರಾವರಿ ಯೋಜನೆಗೆ ಅವಶ್ಯವಿರುವ ಹೆಚ್ಚಿನ ಅನುದಾನದ ಕುರಿತು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ, ತುರ್ತಾಗಿ ಅನುದಾನವನ್ನು ಪಡೆದು, ಸಹಾಯಧನವನ್ನು ರೈತರಿಗೆ ವಿತರಿಸಲು ಕ್ರಮ ವಹಿಸುವಂತೆ ಸೂಚಿಸಿದರು.

(ಕ್ರಮ:- ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಶಿವಮೊಗ್ಗ)

**27. ಪಶುಪಾಲನಾ ಇಲಾಖೆ :-**

ಉಪ ನಿರ್ದೇಶಕರು, ತೋಟಗಾರಿಕಾ ಇಲಾಖೆ ಇವರು ಮಾತನಾಡಿ, ತಮ್ಮ ಇಲಾಖೆಗೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ.445.00 ಲಕ್ಷ ನಿಗಧಿಯಾಗಿದ್ದು, ಜಿಲ್ಲಾ ಪಂಚಾಯತ್ ವತಿಯಿಂದ ರೂ.134.93 ಲಕ್ಷ ಬಿಡುಗಡೆಯಾಗಿರುತ್ತದೆ. ರೂ.141.60 ಲಕ್ಷ ಉಳಿಕೆಯಾಗಿದ್ದು, ಬಿಡುಗಡೆಯಾದ ಅನುದಾನಕ್ಕೆ ಶೇಕಡಾ 49 ರಷ್ಟು ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಮಂಗನ ಕಾಯಿಲೆಗೆ ಸಂಬಂಧಿಸಿದಂತೆ ಅಗತ್ಯ ಪ್ರಮಾಣದ ಔಷಧಿ ರಾಸಾಯನಿಕಗಳು ದಾಸ್ತಾನಿದ್ದು, ಯಾವುದೇ ಸಮಸ್ಯೆ ಇರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಮಂಗನ ಕಾಯಿಲೆ ನಿಯಂತ್ರಣದ ಕುರಿತು ಜನಪ್ರತಿನಿಧಿಗಳ ಮತ್ತು ಇಲಾಖಾ ವತಿಯಿಂದ ಜನರಲ್ಲಿ ಜಾಗೃತಿ ಮೂಡಿಸಲು ತಿಳಿಸಿದರು.

(ಕ್ರಮ:- ಉಪ ನಿರ್ದೇಶಕರು, ಪಶುಪಾನಾ ಇಲಾಖೆ, ಶಿವಮೊಗ್ಗ)

**28. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :-**

ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ತಮ್ಮ ಇಲಾಖೆಯ ವಿವಿಧ ಕಾರ್ಯಕ್ರಮಗಳ ಪ್ರಗತಿ ವರದಿಯನ್ನು ಸಭೆಗೆ ಮಂಡಿಸುತ್ತಾ, ರಾಜ್ಯ ವಲಯ ಕಾರ್ಯಕ್ರಮದಡಿ ಜಿಲ್ಲೆಗೆ 7,245 ಭೌತಿಕ ಗುರಿಯನ್ನು ನಿಗಧಿಪಡಿಸಿದ್ದು, ಶೇಕಡಾ 98 ರಷ್ಟು ಸಾಧನೆ ಮಾಡಲಾಗಿದೆ. ಅದೇ ರೀತಿ ಕೇಂದ್ರ ವಲಯ ಕಾರ್ಯಕ್ರಮಗಳಡಿ ಜಿಲ್ಲೆಗೆ 1,23,259 ಭೌತಿಕ ಗುರಿಗೆದುರಾಗಿ ಶೇಕಡಾ 102 ರಷ್ಟು ಸಾಧನೆ ಮಾಡಲಾಗಿದೆ. ಅದೇ ರೀತಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ 1,30,513 ಭೌತಿಕ ಗುರಿಗೆದುರಾಗಿ ಶೇಕಡಾ 102 ರಷ್ಟು ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

**29. ಸಮಾಜ ಕಲ್ಯಾಣ ಇಲಾಖೆ :-**

ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರು ಮಾತನಾಡಿ, ರಾಜ್ಯ ವಲಯ ಕಾರ್ಯಕ್ರಮಗಳಲ್ಲಿ ಶೇಕಡಾ 88.17 ರಷ್ಟು, ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಲ್ಲಿ ಶೆಕಡಾ 1.21 ರಷ್ಟು, ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳಲ್ಲಿ ಶೇಕಡಾ 1.85 ರಷ್ಟು ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಜಿಲ್ಲಾ ಪಂಚಾಯತ್ ವಲಯ ಕಾರ್ಯಕ್ರಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ನಿಗಧಿಯಾಗಿರುವ ಅನುದಾನದ ಪೈಕಿ ಶೇಕಡಾ 50ರಷ್ಟು ಅನುದಾನ ಮಾತ್ರ ಬಿಡುಗಡೆಯಾಗಿರುವುದಾಗಿ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಈ ಕುರಿತು ಮತ್ತೊಮ್ಮೆ ಸರ್ಕಾರಕ್ಕೆ ಪತ್ರ ವ್ಯವಹರಿಸುವಂತೆ ಸೂಚಿಸಿದರು. ಹಾಗೂ ಅದರ ಮಾಹಿತಿಯನ್ನು ನೀಡಿದಲ್ಲಿ ತಾವು ಪರಿಶೀಲಿಸಿ ಕ್ರಮವಹಿಸುವುದಾಗಿ ತಿಳಿಸಿದರು.

**(ಕ್ರಮ:- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ, ಶಿವಮೊಗ್ಗ)**

**30. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ :-**

ಉಪ ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಮಾತನಾಡಿ, ರಾಜ್ಯ ವಲಯ 1.15.21 ರಷ್ಟು ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಮುಂದುವರೆದು, ತಮ್ಮ ಇಲಾಖಾ ವಿದ್ಯಾರ್ಥಿನಿಲಯಗಳಲ್ಲಿ ಹಾಸಿಗೆ ಮತ್ತು ಮಂಚಗಳ ಸರಬರಾಜಿಗಾಗಿ ಅಂದಾಜು ಪಟ್ಟಿ ತಯಾರಿಸಲಾಗಿದೆ. ಅದೇ ರೀತಿ ವಿದ್ಯಾರ್ಥಿನಿಲಯಗಳ ದುರಸ್ತಿಗಾಗಿ ಅಂದಾಜು ಪಟ್ಟಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಈ ಬಗ್ಗೆ ಪರಿಶೀಲಿಸಲು ಕೋರಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವುದಾಗಿ ತಿಳಿಸಿದರು.

**(ಕ್ರಮ:- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ., ಶಿವಮೊಗ್ಗ)**

**31. ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ:-**

ಇಲಾಖಾಧಿಕಾರಿಗಳು ವಿವರಿಸುತ್ತಾ, ಒಟ್ಟು 11 ವಿದ್ಯಾರ್ಥಿ ನಿಲಯಗಳಿದ್ದು, ಅದರಲ್ಲಿ 3 ಪ್ರಿ ಮೆಟ್ರಿಕ್ ಮತ್ತು 8 ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ನಿಲಯಗಳಿವೆ. ಅಂತಿಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು 157 ಜನರಿದ್ದು, ಸರ್ಕಾರದ ಆದೇಶದಂತೆ ದಿ:17-11-2020ರಿಂದ 33 ಜನ ದಾಖಲಾಗಿರುತ್ತಾರೆ. 4 ಮೊರಾರ್ಜಿ ಶಾಲೆ ಮತ್ತು 1 ಪಿ.ಯು. ಕಾಲೇಜು ಇದ್ದು, ಕೋವಿಡ್ ಇರುವುದರಿಂದ ಪ್ರಾರಂಭವಾಗಿರುವುದಿಲ್ಲವೆಂದು ತಿಳಿಸಿದರು.

**32. ಗಂಗಾ ಕಲ್ಯಾಣ ಯೋಜನೆ :-**

ಜಿಲ್ಲಾ ವ್ಯವಸ್ಥಾಪಕರು, ದೇವರಾಜ ಅರಸ್ ಅಭಿವೃದ್ಧಿ ನಿಗಮ ಇವರು ಮಾತನಾಡಿ, ಎಲ್ಲಾ ಅಭಿವೃದ್ಧಿ ನಿಗಮಗಳ ವತಿಯಿಂದ 2019-20 ಮತ್ತು 2020-21ನೇ ಸಾಲುಗಳ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಸಲು ರಾಜ್ಯ ಮಟ್ಟದಲ್ಲಿ ಏಜೆನ್ಸಿ ನಿಗಧಿಪಡಿಸಲಾಗುತ್ತಿದ್ದು, ಟೆಂಡರ್ ಅಂತಿಮವಾಗಿರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವುದಾಗಿ ತಿಳಿಸಿದರು.

**(ಕ್ರಮ:- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ, ಶಿವಮೊಗ್ಗ)**

33. ಶಿಕ್ಷಣ ಇಲ್ಲಾಖೆ :-

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ತಮ್ಮ ಇಲಾಖಾ ವತಿಯಿಂದ ವಿವಿಧ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿ ವರದಿಯನ್ನು ಸಭೆಗೆ ಮಂಡಿಸಿದರು. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಲಾಗಿದ್ದು, ಶೇಕಡಾ 98 ರಷ್ಟು ದಾಖಲಾತಿಯಾಗಿರುತ್ತದೆ ಎಂದು ತಿಳಿಸಿದರು.

ತಾಲ್ಲೂಕು ಮಟ್ಟದಲ್ಲಿ ಮಕ್ಕಳ ಪೋಷಕರು ಬಂದು ಆಹಾರ ಸಾಮಗ್ರಿಗಳನ್ನು ಪಡೆಯುತ್ತಿದ್ದಾರೆಂದು ತಿಳಿಸಿದರು.

ಸಂವೇದನಾ ಕಾರ್ಯಕ್ರಮದಡಿ ಚಂದನಾ ಟಿ.ವಿಯಲ್ಲಿ ಪಠ್ಯವನ್ನು ಬೋಧಿಸುತ್ತಿದ್ದು, ಸಂಬಂಧಪಟ್ಟ ವಿಷಯಗಳ ಶಿಕ್ಷಕರುಗಳು ವಿದ್ಯಾರ್ಥಿಗಳ ಮನೆಗೆ ತೆರಳಿ ಮಕ್ಕಳಿಗೆ ಪಠ್ಯದ ಬಗ್ಗೆ ಮನವರಿಕೆ ಮಾಡಿಕೊಡುತ್ತಿದ್ದಾರೆಂದು ತಿಳಿಸಿದರು.

(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ)

ಜಿಲ್ಲಾಧಿಕಾರಿಯವರು ಮಾತನಾಡಿ, ಸಿ.ಆರ್.ಎಫ್ ಯೋಜನೆಯಡಿ 828 ಶಾಲಾ ಕೊಠಡಿಗಳನ್ನು ನಿರ್ಮಿಸಲು ಮಂಜೂರಾಗಿದ್ದು, ಇದರಲ್ಲಿ ಉಳಿಕೆಯಾಗಿರುವ ಮೊತ್ತದಲ್ಲಿ ಹೆಚ್ಚುವರಿಯಾಗಿ 73 ಕೊಠಡಿಗಳನ್ನು ದುರಸ್ತಿ ಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

34. ಮೀನುಗಾರಿಕೆ ಇಲಾಖೆ:-

ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಗೆ ಇಲಾಖೆ ಇವರು ವಿವರಿಸುತ್ತಾ, ಜಿಲ್ಲಾ ಪಂಚಾಯತ್ ಕಾರ್ಯಕ್ರಮದ ಕ್ರಿಯಾ ಯೋಜನೆ ಅನುಮೋದನೆ ಆಗಿದ್ದು, ಇದುವರೆವಿಗೂ ಶೇಕಡ 50ರಷ್ಟು ಅನುದಾನ ಬಿಡುಗಡೆಯಾಗಿರುತ್ತದೆ. ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಯಡಿ ಫಲಾನುಭವಿಗಳ ಪಟ್ಟಿಗೆ ಅನುಮೋದನೆಯಾಗಿದ್ದು, ಡಿಸೆಂಬರ್ ತಿಂಗಳಲ್ಲಿ ಸಾಧನೆಯಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಕಾಲಮಿತಿಯೊಳಗೆ ನಿಗಧಿತ ಭೌತಿಕ ಮತ್ತು ಆರ್ಥಿಕ ಗುರಿ ಸಾಧನೆ ಮಾಡುವಂತೆ ಸೂಚಿಸಿದರು.

(ಕ್ರಮ: ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಗೆ ಇಲಾಖೆ, ಶಿವಮೊಗ್ಗ)

35. ಲೋಕೋಪಯೋಗಿ ಇಲಾಖೆ:-

ಕಾರ್ಯಪಾಲಕ ಇಂಜಿನಿಯರ್ ರವರು ವಿವರಿಸುತ್ತಾ, ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಸಮಸ್ಯೆ ಇರುವುದಿಲ್ಲ. ನಬಾರ್ಡ್-25ರಡಿ ಅಂಗನವಾಡಿ ಮತ್ತು ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಕರೆದು ಕಾಮಗಾರಿ ಅನಷ್ಠಾನಕ್ಕೆ ಏಜೆನ್ಸಿಯನ್ನು ಸಹ ನಿಗಧಿಪಡಿಸಲಾಗಿರುತ್ತದೆ. ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಗುಣಮಟ್ಟದ ಕಾಮಗಾರಿಯನ್ನು ನಿರ್ವಹಿಸಿ, ಕಾಲಮಿತಿಯೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸೂಚಿಸಿದರು.

(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಶಿವಮೊಗ್ಗ)

36. ಪ್ರವಾಸೋದ್ಯಮ ಇಲಾಖೆ:-

ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳಿರುವುದಿಲ್ಲ, ಅನುದಾನದ ಲಭ್ಯತೆ ಇರುತ್ತದೆ ಎಂದು ಇಲಾಖಾಧಿಕಾರಿಗಳು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಗುಣಮಟ್ಟದ ಕಾಮಗಾರಿಯನ್ನು ನಿರ್ವಹಿಸಿ, ಕಾಲಮಿತಿಯೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ)

37. ಸಣ್ಣ ನೀರಾವರಿ ಇಲಾಖೆ:-

ಕಾರ್ಯಪಾಲಕ ಇಂಜಿನಿಯರ್ ರವರು ವಿವರಿಸುತ್ತಾ, ಒಟ್ಟು 109 ಕೋಟಿ ರೂ.ಗಳ ಕಾಮಗಾರಿಗಳಿದ್ದು, 36 ಕೋಟಿ ರೂ.ಗಳಿಗೆ ಆರ್ಥಿಕ ಇಲಾಖೆ ಅನುಮೋದನೆ ದೊರೆತಿರುತ್ತದೆ. 73 ಕೋಟಿ ರೂ.ಗಳಿಗೆ ಆರ್ಥಿಕ ಇಲಾಖೆಯ ಅನುಮೋದೆ ನಿರೀಕ್ಷಣೆಯಲ್ಲಿದ್ದು, ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಈ ಬಗ್ಗೆ ತಾವು ಅನುಪಾಲನಾ ಕ್ರಮವಹಿಸುವುದಾಗಿ ತಿಳಿಸಿದರು.

(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ, ಶಿವಮೊಗ್ಗ)

38. ಪೋಲೀಸ್ ಇಲಾಖೆ:-

ಜಿಲ್ಲಾ ರಕ್ಷಣಾಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ. ಅದೇ ರೀತಿ ಜಿಲ್ಲೆಯಲ್ಲಿ ಕೆ.ಎಸ್.ಆರ್.ಪಿ ಬೆಟಾಲಿಯನ್‌ಗೆ ಸ್ಥಳಾವಕಾಶಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

(ಕ್ರಮ: ಜಿಲ್ಲಾ ರಕ್ಷಣಾಧಿಕಾರಿಗಳು, ಶಿವಮೊಗ್ಗ)

ಜಿಲ್ಲಾಧಿಕಾರಿಯವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

(ಡಾ. ಸೆಲ್ವಕುಮಾರ್),
ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು
ಹಾಗೂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ, ಬೆಂಗಳೂರು.

ಪ್ರತಿಯನ್ನು ಈ ಕೆಳಕಂಡವರುಗಳಿಗೆ ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ:-

1. ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
2. ಪೋಲಿಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
3. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ.
4. ಮುಖ್ಯ ಅರಣ್ಯಸಂರಕ್ಷಣಾಧಿಕಾರಿಗಳು, ಶಿವಮೊಗ್ಗ
5. ಮುಖ್ಯ ಅಭಿಯಂತರರು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ

6. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ.
7. ಆಯುಕ್ತರು, ಮಹಾನಗರ ಪಾಲಿಕೆ/ ವ್ಯವಸ್ಥಾಪಕ ನಿರ್ದೇಶಕರು,ಸ್ಮಾರ್ಟ್ ಸಿಟಿ, ಶಿವಮೊಗ್ಗ
8. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ,ಶಿವಮೊಗ್ಗ
9. ವಿಶೇಷ ಭೂಸ್ವಾಧೀನಾಧಿಕಾರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ,ಶಿವಮೊಗ್ಗ
10. ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಶಿವಮೊಗ್ಗ
11. ಜಂಟಿ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಶಿವಮೊಗ್ಗ
12. ಜಂಟಿ ನಿರ್ದೇಶಕರು, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ, ಶಿವಮೊಗ್ಗ
13. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ
14. ನಿರ್ದೇಶಕರು, ವೈದ್ಯಕೀಯ ವಿಜ್ಞಾನ ಸಂಸ್ಥೆ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
15. ಜಿಲ್ಲಾ ಆರೋಗ್ಯ ಅಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿವಮೊಗ್ಗ
16. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಶಿವಮೊಗ್ಗ
17. ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಶಿವಮೊಗ್ಗ.
18. ಜಿಲ್ಲಾ ಪರಿಶಿಷ್ಟವರ್ಗಗಳ ಕಲ್ಯಾಣಾಧಿಕಾರಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಶಿವಮೊಗ್ಗ
19. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು,ಜಿಲ್ಲಾ ಸಂಖ್ಯಾ ಸಂಗ್ರಹಣ ಇಲಾಖೆ, ಶಿವಮೊಗ್ಗ.
20. ಅಧೀಕ್ಷಕ ಅಭಿಯಂತರರು ಮೆಸ್ಕಾಂ, ಶಿವಮೊಗ್ಗ.
21. ಅಧೀಕ್ಷಕ ಅಭಿಯಂತರರು, KPTCL, ಶಿವಮೊಗ್ಗ
22. ಉಪ ಅರಣ್ಯಸಂರಕ್ಷಣಾಧಿಕಾರಿಗಳು, ಶಿವಮೊಗ್ಗ /ಭಧ್ರಾವತಿ/ಸಾಗರ
23. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯ ಜೀವಿ ವಿಭಾಗ, ಶಿವಮೊಗ್ಗ
24. ಉಪ ವಿಭಾಗಾಧಿಕಾರಿ, ಉಪ ವಿಬಾಗ, ಶಿವಮೊಗ್ಗ/ ಸಾಗರ
25. ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನಾ ವಿಭಾಗ, ತುಮಕೂರು
26. ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಶಿವಮೊಗ್ಗ
27. ಕಾರ್ಯಪಾಲಕ ಅಭಿಯಂತರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಶಿವಮೊಗ್ಗ.
28. ಕಾರ್ಯಪಾಲಕ ಅಭಿಯಂತರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ವಿಶೇಷ ವಿಭಾಗ) ಶಿವಮೊಗ್ಗ
29. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ/ಸಾಗರ
30. ಕಾರ್ಯಪಾಲಕ ಅಭಿಯಂತರು, ಸಣ್ಣ ನೀರಾವರಿ ಇಲಾಖೆ, ಶಿವಮೊಗ್ಗ
31. ಕಾರ್ಯಪಾಲಕ ಅಭಿಯಂತರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಮತ್ತು ಒಳಚರಂಡಿ ಮಂಡಳಿ, ಶಿವಮೊಗ್ಗ
32. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಶಿವಮೊಗ್ಗ.
33. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ವಿಭಾಗ,ವಿನೋಬನಗರ,
34. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಶಿವಮೊಗ್ಗ.
35. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಸಿ. ಎಲ್, ಶಿವಮೊಗ್ಗ.
36. ಕಾರ್ಯಾಪಾಲಕ ಅಭಿಯಂತರರು, ಕೆ.ಹೆಚ್.ಬಿ, ಶಿವಮೊಗ್ಗ (ಕರ್ನಾಟಕ ಗೃಹ ಮಂಡಳಿ)
37. ಸಾರಿಗೆ ಉಪ ಆಯುಕ್ತರು,ಶಿವಮೊಗ್ಗ.
38. ಉಪನಿರ್ದೇಶಕರು, ಸಮಾಜ ಕಲ್ಯಾಣಾಧಿಕಾರಿ, ಶಿವಮೊಗ್ಗ

39. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿವಮೊಗ್ಗ.
40. ಉಪ ನಿರ್ದೇಶಕರು, ತೋಟಗಾರಿಕಾ ಇಲಾಖೆ, ಶಿವಮೊಗ್ಗ
41. ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಶಿವಮೊಗ್ಗ
42. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
43. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಿವಮೊಗ್ಗ
44. ಉಪನಿರ್ದೇಶಕರು, ಭೂ ದಾಖಲೆಗಳ ವಿಭಾಗ (ಡಿ.ಡಿ. ಎಲ್.ಆರ್). ಶಿವಮೊಗ್ಗ
45. ತಹಶೀಲ್ದಾರ್, ಶಿವಮೊಗ್ಗ/ಭಧ್ರಾವತಿ/ಸಾಗರ/ಶಿಕಾರಿಪುರ/ಹೊಸನಗರ/ಸೊರಬ/ತೀರ್ಥಹಳ್ಳಿ/
46. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಶಿವಮೊಗ್ಗ/ಭಧ್ರಾವತಿ/ಸಾಗರ/ಶಿಕಾರಿಪುರ/ ಹೊಸನಗರ/ಸೊರಬ/ತೀರ್ಥಹಳ್ಳಿ/
47. ಹಿರಿಯ ಭೂವಿಜ್ಞಾನಿಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ,ಶಿವಮೊಗ್ಗ
48. ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಸಂಪರ್ಕ ಮತ್ತು ವಾರ್ತಾ ಇಲಾಖೆ, ಶಿವಮೊಗ್ಗ.
49. ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ,ಶಿವಮೊಗ್ಗ.
50. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ಶಿವಮೊಗ್ಗ.
51. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಶಿವಮೊಗ್ಗ.
52. ಸಹಾಯಕ ನಿರ್ದೇಶಕರು, ಜಿಲ್ಲಾ ಯುವಜನ ಸೇವಾ ಕ್ರೀಡಾ ಇಲಾಖೆ,ಶಿವಮೊಗ್ಗ
53. ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಶಿವಮೊಗ್ಗ.
54. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ, ಶಿವಮೊಗ್ಗ.

# ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ | ಅಂಶಗಳು | ವಿವರ |
|---|---|---|
| 1 | 2 | 3 |
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಚಿಕ್ಕಬಳ್ಳಾಪುರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಶ್ರೀ ಮನೋಜ್ ಕುಮಾರ್ ಮೀನಾ, ಭಾ.ಆ.ಸೇ.,<br>ಸರ್ಕಾರ ಕಾರ್ಯದರ್ಶಿಗಳು,<br>ವಸತಿ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. |
| 3 | ಪ್ರವಾಸ ಕೈಗೊಂಡ ದಿನಾಂಕ | 26/11/2020 |
| ಎ. | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | 1. ವಿವಿಧ ಇಲಾಖೆಗಳ ಅಂಕಿ ಅಂಶಗಳನ್ನೊಳಗೊಂಡ ಪ್ರಗತಿ ಪರಿಶೀಲನೆ ಬಗ್ಗೆ<br>2. ಜಿಲ್ಲೆಯಲ್ಲಿ ಹರಡುತ್ತಿರುವ ಕೋರೊನಾ ವೈರಾಣು (Covid-19) ಕುರಿತು ಜಿಲ್ಲಾಡಳಿತ ತೆಗೆದುಕೊಂಡಿರುವ ಕ್ರಮದ ಬಗ್ಗೆ.<br>3. ಮತದಾರರ ಪಟ್ಟಿಯ ಪರಿಷ್ಕರಣೆ ವೀಕ್ಷಕರಾಗಿ ಪರಿಶೀಲಿಸಿರುವ ಬಗ್ಗೆ. |
| ಬಿ. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ❖ **<u>ಕಂದಾಯ ಇಲಾಖೆ</u>:** ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ದಿನಾಂಕ: 25.11.2020 ರ ಅಂತ್ಯಕ್ಕೆ ಒಟ್ಟು 3591 ಪ್ರಕರಣಗಳು ಆರ್.ಟಿ.ಸಿ.ಕಾಲಂ 3&9 ತಿದ್ದುಪಡಿಗಳು ಬಾಕಿ ಇದ್ದು, ಈ ಬಗ್ಗೆ ಶೀಘ್ರವಾಗಿ ಎಲ್ಲಾ ತಹಶೀಲ್ದಾರ್ ರವರುಗಳು ಇತ್ಯರ್ಥಗೊಳಿಸಲು ಅವಶ್ಯಕ ಕ್ರಮ ಕೈಗೊಂಡು ಹೆಚ್ಚು ಪ್ರಗತಿಯನ್ನು ಸಾಧಿಸಲು ಸೂಚಿಸಲಾಯಿತು.<br>❖ ದಿನಾಂಕ: 25/11/2020 ರ ಅಂತ್ಯಕ್ಕೆ 1154 ನ್ಯಾಯಾಲಯದ ಪ್ರಕರಣಗಳು ವಿವಿಧ ರೀತಿಯ (Dispute Cases) ಗಳು ಬಾಕಿ ಇದ್ದು, ಈ ಪ್ರಕರಣಗಳನ್ನು ಆದ್ಯತೆ ಮೇರೆಗೆ ವಿಲ್, ನೊಟೀಸ್ ರಹಿತ, ಕ್ರಯದಂತೆ ಖಾತೆ ಹಾಗೂ ಇತರೆ ಪ್ರಕರಣಗಳನ್ನು ವಿಂಗಡಿಸಿಕೊಂಡು ಎಲ್ಲಾ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥ ಪಡಿಸಿ ನ್ಯಾಯಾಲಯದ ಪ್ರಕರಣಗಳ ಪ್ರಗತಿಯನ್ನು ಸಾಧಿಸಲು ಸೂಚಿಸಲಾಯಿತು.<br>❖ ಜಿಲ್ಲೆಯಲ್ಲಿ ಒಟ್ಟು 35,492 ಪೌತಿ ಖಾತೆ ಆರ್.ಟಿ.ಸಿ ಪ್ರಕರಣಗಳು ಬಾಕಿ ಇದ್ದು, ಈ ಪೈಕಿ 2390 ಪೌತಿ ಖಾತೆ ಅರ್ಜಿಗಳನ್ನು ಈಗಾಗಲೇ ಪಡೆದಿದ್ದು, ಇವುಗಳನ್ನು ನಿಗದಿತ ಅವಧಿಯಲ್ಲಿ ಇತ್ಯರ್ಥ ಪಡಿಸಿ ಆರ್.ಟಿ.ಸಿ ಯಲ್ಲಿ ಕಾಲೋಚಿತಗೊಳಿಸಲು ಸೂಚಿಸಲಾಯಿತು. ಮತ್ತು 6818 ಪೈಕಿ ಆರ್.ಟಿ.ಸಿ ಪ್ರಕರಣಗಳು ಬಾಕಿ ಇದ್ದು, ಆದ್ಯತೆ ಮೇರೆಗೆ ಜಿಲ್ಲೆಯಲ್ಲಿ ಎಲ್ಲಾ ಆರ್.ಟಿ.ಸಿಗಳನ್ನು ಪೈಕಿ ಮುಕ್ತ ಮಾಡಲು ಸೂಚಿಸಲಾಯಿತು.<br>❖ **<u>ಭೂ-ಪರಿವರ್ತನೆ</u>:-** ಪ್ರಸ್ತುತ ರಾಜ್ಯದಲ್ಲಿ ಅಫಿಡವಿಟ್ ಆಧಾರಿತ ಭೂ-ಪರಿವರ್ತನೆ ಪ್ರಕ್ರಿಯೆಯೂ ಚಾಲ್ತಿಯಲ್ಲಿದ್ದು, ಪ್ರಗತಿಯು ಬಹಳ ನಿಧಾನಗತಿಯಲ್ಲಿರುತ್ತದೆ. ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಪ್ರಗತಿಯೂ ಕುಂಠಿತವಾಗಿದ್ದು, 30 ದಿನಗಳೊಳಗಾಗಿ ಇತ್ಯರ್ಥ |

ಪಡಿಸಬೇಕಾಗಿರುವುದರಿಂದ ಈ ಬಗ್ಗೆ ಹೆಚ್ಚು ಗಮನಹರಿಸಿ ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು ರವರು ನಿಗದಿತ ಅವಧಿಯೊಳಗೆ ಆನ್‌ಲೈನ್‌ನಲ್ಲಿ ವರದಿಯನ್ನು ಸಲ್ಲಿಸಲು ಸೂಚಿಸಿ, ಒಂದು ವೇಳೆ ನಿಗದಿತ ಅವಧಿಯೊಳಗೆ ಸಂಬಂಧಿಸಿದ ಇಲಾಖೆಗಳು ವರದಿಯನ್ನು ಸಲ್ಲಿಸದಿದ್ದಲ್ಲಿ ಪರಿಭಾವಿತ ಭೂ–ಪರಿವರ್ತನೆ ಎಂದು ಭಾವಿಸಿ, ಭೂ–ಪರಿವರ್ತನೆ ಪ್ರಕರಣಗಳನ್ನು ಇತ್ಯರ್ಥ ಪಡಿಸಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಕಟ್ಟುನಿಟ್ಟಾಗಿ ಪಾಲನೆ ಮಾಡಲು ಸೂಚಿಸಲಾಯಿತು.

❖ ಜಿಲ್ಲಾಧಿಕಾರಿಗಳು ಮಾತನಾಡಿ, ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯ ಹಿಂದಿನ ಮಾಹೆಯ ಭೂಮಿ ರ್‍ಯಾಂಕಿಂಗ್ 27 ರಿಂದ 12ನೇ ಸ್ಥಾನಕ್ಕೆ ಪ್ರಗತಿಯು ಸಾಧಿಸಲಾಗಿ ಮುಂದಿನ ಮಾಹೆಯಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ಮೂಲಕ ಇನ್ನೂ ಹೆಚ್ಚಿನ ಸ್ಥಾನಕ್ಕೆ ಬರುವುದಾಗಿ ತಿಳಿಸಿದರು.

❖ <u>**ಸಾಮಾಜಿಕ ಭದ್ರತಾ ಯೋಜನೆ:–**</u> ಪಿಂಚಣಿ ಸೌಲಭ್ಯವನ್ನು ಪಡೆಯುವ ಎಲ್ಲಾ ಫಲಾನುಭವಿಗಳಿಗೆ ನೇರವಾಗಿ(ಡಿ.ಬಿ.ಟಿ ಮೂಲಕ) ಪಿಂಚಣಿ ದೊರಯುತ್ತಿರುವ ಬಗ್ಗೆ ದೃಢೀಕರಿಸಿಕೊಳ್ಳಲು ಮತ್ತು ಫಲಾನುಭವಿಗಳಿಗೆ ಅಂಚೆ ಮುಖಾಂತರ ಎಷ್ಟು ಇ.ಎಂ.ಓಗಳು ನೀಡಲಾಗುತ್ತಿದೆ, ಫಲಾನುಭವಿಗಳಿಗೆ ನೇರವಾಗಿ ಪಿಂಚಣಿ ಹಣ ಸಂದಾಯವಾಗುವಂತೆ ಅಂಚೆ ಕಛೇರಿಗಳಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಖಾತೆಯನ್ನು ತೆರೆದು ಆಧಾರ್ ಲಿಂಕ್ ಮಾಡುವ ಮೂಲಕ ಡಿ.ಬಿ.ಟಿ ಮೂಲಕ ಸಂದಾಯವಾಗಲು ಕ್ರಮವಹಿಸಲು ಸೂಚಿಸಲಾಯಿತು. 60 ವರ್ಷಕ್ಕೆ ಅರ್ಜಿ ಸಲ್ಲಿಸಿದ ಫಲಾನುಭವಿಗಳಿಗೆ 80 ವರ್ಷ ವಯಸ್ಸಾದ ನಂತರ ಮಾಶಾಸನದ ಹಣವು ತಾನಾಗಿಯೇ ಹೆಚ್ಚುವರಿಯಾಗುತ್ತದೆಯೆ ಅಥವಾ ಪುನಃ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕೆ ಎಂಬುದರ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲು ಸೂಚಿಸಲಾಯಿತು.

ಪಿಂಚಣಿ ಸೌಲಭ್ಯವನ್ನು ಪಡೆಯುವ ಎಲ್ಲಾ ಫಲಾನುಭವಿಗಳು ಜೀವಂತ ಇರುವ ಬಗ್ಗೆ ಸಂಬಂಧಿಸಿದ ಗ್ರಾಮಲೆಕ್ಕಾಧಿಕಾರಿಗಳು ಮರಣ ನೋಂದಣಾಧಿಕಾರಿಗಳಿಂದ ಮರಣ ಪ್ರಮಾಣ ಪತ್ರಗಳನ್ನು ಪಡೆದು ಪಿಂಚಣಿಯನ್ನು ರದ್ದು ಪಡಿಸಲು ಆಗಿಂದಾಗೆ ಕ್ರಮವಹಿಸಿ ಸರ್ಕಾರಕ್ಕೆ ಆರ್ಥಿಕ ಹೊರೆಯನ್ನು ತಪ್ಪಿಸಲು ಸೂಚಿಸಲಾಯಿತು.

ಪ್ರಸ್ತುತ ಜಾರಿಯಲ್ಲಿರುವ ಚುನಾವಣಾ ಪ್ರಕ್ರಿಯೆಯಂತೆ ಮರಣಹೊಂದಿದ ವ್ಯಕ್ತಿಗಳ ಪಿಂಚಣಿಯನ್ನು ರದ್ದು ಪಡಿಸಲು ಹಾಗೂ 60 ವರ್ಷ ವಯಸ್ಸಾದ ಅರ್ಹ ವ್ಯಕ್ತಿಗಳಿಗೆ ಪಿಂಚಣಿಯನ್ನು ಮಂಜೂರು ಮಾಡಲು ಕ್ರಮ ವಹಿಸಲು ಸೂಚಿಸಲಾಯಿತು.

❖ <u>**ಸಮಾಜ ಕಲ್ಯಾಣ ಇಲಾಖೆ:–**</u> ಸಮಾಜ ಕಲ್ಯಾಣ ಇಲಾಖೆಯವರು ಮಾತನಾಡಿ ಪದವಿ ಕಾಲೇಜುಗಳು ಪ್ರಾರಂಭವಾಗಿದ್ದು, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಈಗಾಗಲೇ ಸರ್ಕಾರದ ಆದೇಶದಂತೆ ವಸತಿ ನಿಯಲಗಳು ಕಾರ್ಯನಿರ್ವಹಿಸುತ್ತಿದ್ದು, 50% ವಿದ್ಯಾರ್ಥಿಗಳ ಅನುಪಾತದಲ್ಲಿ ಎಸ್.ಓ.ಪಿ ಯಂತೆ ಎಲ್ಲಾ ಕ್ರಮಗಳನ್ನು ಕೈಗೊಂಡು ಪ್ರಾರಂಭಿಸಿ ಕಾರ್ಯ ಚಟುವಟಿಕೆ ನಡೆಸುತ್ತಿರುವುದಾಗಿ ತಿಳಿಸಿದರು.

- ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರು ಸರ್ಕಾರದಿಂದ ನಿಗದಿಗೊಳಿಸಿರುವಂತೆ ಎಲ್ಲಾ ಕ್ರಮಗಳನ್ನು ಕೈಗೊಂಡಿರುತ್ತೇವೆ ಎಂದು

ತಿಳಿಸಲಾಗಿ, ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ನೀಡಲು ಸರ್ಕಾರದಿಂದ ಯಾವುದಾದರೂ ಮಾರ್ಗಸೂಚಿಗಳು ಬಂದಿರುವ ಬಗ್ಗೆ ಕೇಳಲಾಗಿ ಯಾವುದೇ ಮಾರ್ಗಸೂಚಿಗಳು ಬಂದಿರುವುದಿಲ್ಲ ಎಂದು ತಿಳಿಸಿದರು.

- ಪ್ರಸ್ತುತ ರಾಜ್ಯದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಯು ನಡೆಯುತ್ತಿದ್ದು, ಕರುಡು ಮತದಾರರ ಪಟ್ಟಿಯನ್ನು ನೀಡಿದ್ದು, ಡಿಸೆಂಬರ್‌ವರೆಗೆ ಸೇರ್ಪಡೆ, ರದ್ದುಗೊಳಿಸಲು, ತಿದ್ದುಪಡಿ ಮಾಡಲು ಅವಕಾಶವಿದ್ದು, ವಸತಿ ನಿಲಯಗಳಲ್ಲಿ ಇರುವ 18 ವರ್ಷ ಮೇಲ್ಪಟ್ಟ ಯಾವುದೇ ವಿದ್ಯಾರ್ಥಿಯು ಮತದಾರರ ಪಟ್ಟಿಯಲ್ಲಿ ಸೇರ್ಪಡೆ, ರದ್ದುಗೊಳಿಸಲು, ತಿದ್ದುಪಡಿ ಮಾಡುವ ಅವಕಾಶವನ್ನು ಬಳಸಿಕೊಳ್ಳಲು ಸೂಚಿಸಲಾಯಿತು.

❖ <u>**ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ:-**</u> ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಅಧಿಕಾರಿಯು ಮಾತಾನಾಡಿ ಕೆ.ಎಫ್.ಸಿ.ಎಸ್.ಸಿ ಗೋದಾಮಿನಿಂದ ಈಗಾಗಲೇ ಅಕ್ಕಿ ಮತ್ತು ಗೋದಿಯನ್ನು ಶಾಲೆಗಳಿಗೆ ಸರಬರಾಜು ಮಾಡಲಾಗುತ್ತಿದ್ದು, ಶಾಲೆಗಳಿಂದ ಪೋಷಕರಿಗೆ ಕರೆ ಮಾಡಿ ವಿದ್ಯಾರ್ಥಿಗಳು ಅಥವಾ ಪೋಷಕರು ಶಾಲೆಗಳಿಗೆ ಬಂದು ರಿಜಿಸ್ಟರ್‌ನಲ್ಲಿ ಸಹಿ ಪಡೆದುಕೊಂಡು ಪಡಿತರವನ್ನು ವಿತರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

❖ <u>**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾ ಇಲಾಖೆ:-**</u>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೋವಿಡ್ ಆಕ್ಟಿವ್ ಪ್ರಕರಣಗಳು ದಿನಾಂಕ: 25/11/2020 ರ ಅಂತ್ಯಕ್ಕೆ ಒಟ್ಟು 69 ಪ್ರಕರಣಗಳು ಇದ್ದು, ಈ ಪೈಕಿ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ 29, ಡಿ.ಸಿ.ಹೆಚ್.ಸಿ 11, Home Isolation 22 ಪ್ರಕರಣಗಳು, ಖಾಸಗಿ ಆಸ್ಪತ್ರೆ 7 ಪ್ರಕರಣಗಳು, ಕಳೆದ 15 ದಿನಗಳಲ್ಲಿ ಕೋವಿಡ್ ಪಾಸಿಟಿವ್ ಮರಣ ಪ್ರಕರಣಗಳು 0.9%, ಕಳೆದ 7 ದಿನಗಳಲ್ಲಿ ಕೋವಿಡ್ ಪಾಸಿಟಿವ್ ಮರಣ ಪ್ರಕರಣಗಳು 0.98%, 15 ದಿನಗಳಲ್ಲಿ Fatality Rate 0.3%, ಹಾಗೂ 7 Days 0% ಇರುವುದಾಗಿ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದರು. ಸರ್ಕಾರದಿಂದ ಈ ಜಿಲ್ಲೆಗೆ 3200 ಜನರಿಗೆ ಗಂಟಲು ದ್ರವ ಪರೀಕ್ಷೆ ಮಾಡಲು ಗುರಿ ನೀಡಿದ್ದು, ಅದರಂತೆ ಎಲ್ಲಾ ಮುಂಜಾಗೃತ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುವುದಾಗಿ ತಿಳಿಸಿದರು.

❖ ದೇಶಾದ್ಯಂತ 2025ಕ್ಕೆ ಕ್ಷಯರೋಗ ನಿರ್ಮೂಲನೆ ಗುರಿಯ ಅಂಗವಾಗಿ ದಿನಾಂಕ: 01.12.2020 ರಿಂದ ದಿನಾಂಕ: 31.12.2020 ರವರೆಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಕ್ರಿಯ ಕ್ಷಯರೋಗ ಪತ್ತೆ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಜಿಲ್ಲೆಯಾದ್ಯಂತ ಸಕ್ರಿಯ ಕ್ಷಯರೋಗ ಪತ್ತೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮದಲ್ಲಿ ಗಂಡಾಂತರ ಪ್ರದೇಶಗಳು, ಕೊಳಚೆ ಪ್ರದೇಶಗಳು, ಜನದಟ್ಟಣೆಯ ಸ್ಥಳಗಳು, ಜಲ್ಲಿ ಕ್ರಷರ್‌ಗಳ ಸ್ಥಳಗಳು, ಉಪಕೇಂದ್ರಗಳಿಂದ ತೀರ ದೂರವಿರುವ (Remote villages) ಗ್ರಾಮಗಳು ಇಲ್ಲಿನ ಜನಸಂಖ್ಯೆಯನ್ನು ಗುರಿಯಾಗಿಸಿಕೊಂಡು ಪ್ರತಿ ಮನೆ ಮನೆಗೂ ಬೇಟಿ ನೀಡಿ ಭಿತ್ತಿಪತ್ರಗಳನ್ನು, ಕರಪತ್ರಗಳನ್ನು, ಬ್ಯಾನರ್‌ಗಳನ್ನು ನೀಡುವ ಸಲುವಾಗಿ ದಿನಾಂಕ: 26.11.2020ರಂದು ಬಿಡುಗಡೆ ಮಾಡಲಾಯಿತು.

| | | |
|---|---|---|
| | | <br><br>ಕೋವಿಡ್–19 ಪ್ರಗತಿಯನ್ನು ಪರಿಶೀಲಿಸಿ ಕೋವಿಡ್ ಮಾದರಿಗಳನ್ನು ನಿಗಧಿಪಡಿಸಿರುವ ಗುರಿಗೆ ಅನುಗುಣವಾಗಿ ಸಂಗ್ರಹಿಸಿ, ಪರೀಕ್ಷಿಸಲು ಮತ್ತು ಹಳ್ಳಿಗಳಲ್ಲಿ ದೃಡಪಟ್ಟ ಕೋವಿಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಪರ್ಕಿಗಳಿಂದ 20 ರಿಂದ 30 ಮಾದರಿಗಳನ್ನು ಸಂಗ್ರಹಿಸಿ 14 ದಿನಗಳು, 7 ದಿನಗಳು, 3 ದಿನಗಳ ಕಾಲ ಪ್ರಕರಣವನ್ನು ಅನುಪಾಲನೆ ಮಾಡಿ ವರದಿ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.<br>• ನಂತರ ಜಿಲ್ಲಾ ಮಟ್ಟದಲ್ಲಿ ತೆರೆದಿರುವ ಕೋವಿಡ್ ವಾರ್ ರೂಂ ಅನ್ನು ಪರಿಶೀಲಿಸಿ ಇಲ್ಲಿ ಕಡ್ಡಾಯವಾಗಿ ಒಬ್ಬ ಎಪಿಡಮಾಲಜಿಸ್ಟ್ ನ್ನು ನಿಯೋಜಿಸಿ ಕೋವಿಡ್ ಪ್ರಗತಿಯ ಕುರಿತು Analysis ಮಾಡಲು ಸೂಚಿಸಲಾಯಿತು. |
| ಸಿ. | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | • ಕಂದಾಯ ಇಲಾಖೆಯಲ್ಲಿನ ಕಾರ್ಯಗಳಾದ ಭೂಮಿ ಪೆಂಡೆನ್ಸಿ, ಆರ್.ಟಿ.ಸಿ ತಿದ್ದುಪಡಿ, ನ್ಯಾಯಾಲಯದ ಪ್ರಕರಣಗಳು ಮತ್ತು ಭೂ ಪರಿವರ್ತನಾ ಪ್ರಕರಣಗಳನ್ನು ಶೀಘ್ರವಾಗಿ ಎಲ್ಲಾ ತಹಶೀಲ್ದಾರ್ ರವರುಗಳು ಇತ್ಯರ್ಥಗೊಳಿಸಲು ಅವಶ್ಯಕ ಕ್ರಮ ಕೈಗೊಂಡು ಹೆಚ್ಚು ಪ್ರಗತಿಯನ್ನು ಸಾಧಿಸಲು ಸೂಚಿಸಲಾಯಿತು.<br>• ಸಾಮಾಜಿಕ ಭದ್ರತಾ ಯೋಜನೆಯಡಿ ಫಲಾನುಭವಿಗಳಿಗೆ ನೇರವಾಗಿ ಪಿಂಚಣಿ ಹಣ ಸಂದಾಯವಾಗುವಂತೆ ಅಂಚೆ ಕಛೇರಿಗಳಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಖಾತೆಯನ್ನು ತೆರೆದು ಆಧಾರ್ ಲಿಂಕ್ ಮಾಡಿ ಡಿ.ಬಿ.ಟಿ ಮೂಲಕ ಸಂದಾಯ ಮಾಡಲು ಕ್ರಮವಹಿಸುವಂತೆ ಸೂಚಿಸಲಾಯಿತು ಮತ್ತು ಮರಣ ಹೊಂದಿದ ವ್ಯಕ್ತಿಗಳ ಮಾಹಿತಿಯನ್ನು ಜನನ–ಮರಣ ಅಧಿಕಾರಿಗಳಿಂದ ಪಡೆದು ಪಿಂಚಣಿಯನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br>• ಕೋವಿಡ್–19 ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಫ್ರಂಟ್‌ಲೈನ್ ಸಿಬ್ಬಂದಿಯವರು ಉತ್ತಮವಾದ ಮುಖಗವಸನ್ನು (ಮಾಸ್ಕ್) ಧರಿಸಿ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಂಡು ಕಾರ್ಯನಿರ್ವಹಿಸಲು ಸೂಚಿಸಲಾಯಿತು.<br>• ಜಿಲ್ಲೆಯಲ್ಲಿ ಕ್ಷಯ ರೋಗ ನಿಯಂತ್ರಣಕ್ಕೆ ಅಗತ್ಯ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಯಿತು.<br>• ಆಹಾರ ಇಲಾಖೆಯವರಿಗೆ ಆಹಾರ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| ಡಿ. | ಕ್ಷೇತ್ರ ವೀಕ್ಷಣೆ | ಯಾವುದು ಇರುವುದಿಲ್ಲ. |

| ಕ್ರ.ಸಂ | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| | ಯಾವುದು ಇರುವುದಿಲ್ಲ. | | |

(ಮನೋಜ್ ಕುಮಾರ್ ಮೀನಾ)
ಸರ್ಕಾರದ ಕಾರ್ಯದರ್ಶಿಗಳು,
ವಸತಿ ಇಲಾಖೆ ಹಾಗೂ ಚಿಕ್ಕಬಳ್ಳಾಪುರ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ದಿನಾಂಕ : 23-11-2020 ರಂದು ಮಧ್ಯಾಹ್ನ 03-00 ಘಂಟೆಗೆ ಬಾಗಲಕೋಟೆ ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜರುಗಿದ ಗ್ರಾಮ ಪಂಚಾಯತ ಚುನಾವಣೆಯ ಮುಂಜಾಗ್ರತಾ ಕ್ರಮ, ಕೋವಿಡ್-19ರ ಪ್ರಗತಿ, ಪ್ರವಾಹ/ಅತಿವೃಷ್ಟಿ, ಮತ್ತು ಜಿಲ್ಲೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ನಡುವಳಿಗಳು

************

ಅಧ್ಯಕ್ಷತೆ :

ಶ್ರೀ ಶಿವಯೋಗಿ ಸಿ. ಕಳಸದ, ಭಾಆಸೇ.,
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಾಗಲಕೋಟೆ ಜಿಲ್ಲೆ

ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಮಟ್ಟದ ಅಧಿಕಾರಿಗಳು:

1. ಜಿಲ್ಲಾಧಿಕಾರಿಗಳು, ಬಾಗಲಕೋಟೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ
3. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಬಾಗಲಕೋಟೆ
4. ಶ್ರೀ ಯಶವಂತ್ ವಿ. ಗುರುಕಾರ, ಐ.ಎ.ಎಸ್. (ಪರೀಕ್ಷಾರ್ಥ ಅಧಿಕಾರಿಗಳು) ಬಾಗಲಕೋಟೆ
5. ಅಪರ ಜಿಲ್ಲಾಧಿಕಾರಿಗಳು ಬಾಗಲಕೋಟೆ
6. ಉಪ ವಿಭಾಗಾಧಿಕಾರಿಗಳು, ಬಾಗಲಕೋಟೆ
7. ಉಪ ಕೃಷಿ ನಿರ್ದೇಶಕರು, ಬಾಗಲಕೋಟೆ
8. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಾಗಲಕೋಟೆ
9. ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಬಾಗಲಕೋಟೆ
10. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬಾಗಲಕೋಟೆ
11. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ
12. ಪೌರಾಯುಕ್ತರು, ನಗರಸಭೆ ಬಾಗಲಕೋಟೆ
13. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬಾಗಲಕೋಟೆ
14. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ
15. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಾಗಲಕೋಟೆ
16. ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನೀಯರ್ ವಿಭಾಗ, ಬಾಗಲಕೋಟೆ
17. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಾಗಲಕೋಟೆ
18. ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಬಾಗಲಕೋಟೆ
19. ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕಿಯ ಸೇವೆ, ಬಾಗಲಕೋಟೆ
20. ಉಪ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಾಗಲಕೋಟೆ
21. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬಾಗಲಕೋಟೆ
22. ಎಲ್ಲ ತಹಶೀಲದಾರರು
23. ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ
24. ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳು

*************

ಪ್ರಾರಂಭಿಕವಾಗಿ ಅಪರ ಜಿಲ್ಲಾಧಿಕಾರಿಗಳು, ಬಾಗಲಕೋಟೆರವರು ಸಭೆಯ ಅಧ್ಯಕ್ಷರಿಗೆ ಸ್ವಾಗತವನ್ನು ಬಯಸುತ್ತಾ, ಸಭೆಯಲ್ಲಿ ಹಾಜರಿದ್ದ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಪರೀಕ್ಷಾರ್ಥ ಐ.ಎ.ಎಸ್ ಅಧಿಕಾರಿಗಳು,

ಉಪ ವಿಭಾಗಾಧಿಕಾರಿಗಳು ಹಾಗೂ ಎಲ್ಲ ತಹಶೀಲದಾರರು, ಎಲ್ಲ ಇಲಾಖೆಯ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಪ್ರಗತಿ ಪರಿಶೀಲನಾ ಸಭೆ ಪ್ರಾರಂಭಿಸಲು ಸಭಾಧ್ಯಕ್ಷರಲ್ಲಿ ಕೋರಿದರು.

1) **ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ ಕುರಿತು ಕೈಗೊಂಡ ಕ್ರಮಗಳ ಬಗ್ಗೆ :**

ಪ್ರಥಮವಾಗಿ ಸಭೆಯನ್ನು ಪ್ರಾರಂಭಿಸುತ್ತಾ, ದಿನಾಂಕ 18.11.2020 ರಂದು ಮೊದಲನೆಯ ಹಂತದ ಮತದಾರ ಪಟ್ಟಿಯ ಕರಡು ಪ್ರತಿ ಪ್ರಕಟಿಸಲಾಗಿದೆ ಹಾಗೂ ಈ ಬಗ್ಗೆ ರಾಜಕೀಯ ಪಕ್ಷದ ಮುಖಂಡರ ಸಭೆ ಸಹಿತ ಜರುಗಿಸಿ ಮಾಹಿತಿ ನೀಡಲಾಗಿದೆ ಎಂದರು.

ಮತದಾರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಸ್ವೀಕೃತವಾದ ನಮೂನೆ 6, 7, 8, 8ಎ ಅರ್ಜಿಗಳ ಬಗ್ಗೆ AERO(ತಹಶೀಲದಾರ) 1% ರಷ್ಟು, ERO(ಉಪ ವಿಭಾಗಾಧಿಕಾರಿಗಳು) 10% ರಷ್ಟು, DEO(ಜಿಲ್ಲಾಧಿಕಾರಿಗಳು) 1% ರಷ್ಟು ಮತ್ತು ವಿಕ್ಷಕರು 1% ರಷ್ಟು ದಾಖಲೆ ಪರಿಶೀಲಿಸಲು ಚುನಾವಣೆ ಆಯೋಗದ ನಿರ್ದೇಶನವಿದ್ದು ಆ ಪ್ರಕಾರ ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ ಅನುಸರಣೆ ಸಲ್ಲಿಸಬೇಕು ಹಾಗೂ ಎಲ್ಲ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ಸೂಚಿಸಿದರು.

ಗ್ರಾಮ ಪಂಚಾಯತಿ ಚುನಾವಣೆಗೆ ಸಂಬಂಧಿಸಿದ ಎಲ್ಲ ಮತಗಟ್ಟೆಗಳಿಗೆ ತಹಶೀಲದಾರರು ಭೇಟಿ ನೀಡಿ ಮತಗಟ್ಟೆ ಸುಸ್ಥಿತಿಯಲ್ಲಿರುವ ಕುರಿತು ಪರಿಶೀಲಿಸಬೇಕೆಂದು ಹಾಗೂ ಪರಿಶೀಲಿಸಿದ ಬಗ್ಗೆ ಆಯಾ ಮತಗಟ್ಟೆಗಳ ಮುಂದೆ ಮತಗಟ್ಟೆಗಳ ಹೆಸರು ಕಾಣುವಂತೆ ನೋಟ್ ಕ್ಯಾಮ್ ಆ್ಯಪ್‌ನಲ್ಲಿ ಛಾಯಾ ಚಿತ್ರ ತೆಗೆದು ಭೇಟಿ ನೀಡಿದ ಬಗ್ಗೆ ಖಾತ್ರಿ ಪಡಿಸಬೇಕು ಹಾಗೂ ನೀವು ಯಾವ ರೀತಿ ಏನು ಕ್ರಮಗಳನ್ನು ಕೈಗೊಂಡಿದ್ದೀರಿ? ಎನ್ನುವುದರ ಬಗ್ಗೆ ಕಡ್ಡಾಯವಾಗಿ ದಿನಚರಿಯನ್ನು ಬರೆಯಬೇಕು ಎಂದು ಸೂಚಿಸಲಾಯಿತು.

ದಿನಾಂಕ: 01.01.2021ರಂದು 18 ವರ್ಷ ಮೇಲ್ಪಟ್ಟ ಎಲ್ಲ ಯುವ ಮತದಾರರನ್ನು ಸೇರ್ಪಡೆ ಮಾಡಲು, ಮೃತ ಮತದಾರರನ್ನು ಮತದಾರರ ಪಟ್ಟಿಯಿಂದ ಕಡಿಮೆಗೊಳಿಸಲು ನಿಯಮಾನುಸಾರ ದಾಖಲೆ ಪರಿಶೀಲಿಸಿ ಕ್ರಮ ವಹಿಸಲು ಸೂಚಿಸಲಾಯಿತು. ಸಾಮಾಜಿಕವಾಗಿ ಹಿಂದುಳಿದ ವರ್ಗವಾಗಲೀ, ಯಾವುದೇ ತಾಂಡಾದಲ್ಲಿರುವ ಕಾರ್ಮಿಕರು ಕೂಲಿ ಕೆಲಸಕ್ಕೆಂದು ಪರಸ್ಥಳಗಳಿಗೆ / ವಲಸೆ ಹೋಗಿರುವ ಮತದಾರರನ್ನು ಗುರುತಿಸಿ ಮತದಾನ ಮಾಡಲು ಅನುವು ಮಾಡಬೇಕೆಂದು ತಿಳಿಸುತ್ತಾ, ಹಾಗು ಒಂದು ವೇಳೆ ಅಂತಹವರು ಮತದಾನ ಮಾಡದೇ ಹೋದರೆ, ಮತದಾರರ ಮತದಾನ ಹಕ್ಕನ್ನು ನಾವು ಕಸಿದುಕೊಂಡಂತ್ತಾಗುತ್ತದೆ, ಹಾಗು ಕಳೆದ ಬಾರಿ ಬಿಟ್ಟು ಹೋಗಿರತಕ್ಕಂತಹ ಮತದಾರರಿಗೆ ಮತದಾನದ ಅರಿವು ಮೂಡಿಸಲು, ಮತದಾನದ ಜಾಗೃತಿಗಾಗಿ ಹಾಗೂ ಮತದಾರ ನೋಂದಣಿ ಕುರಿತು ಭಾರತ ಚುನಾವಣಾ ಆಯೋಗವು ವೇಳಾಪಟ್ಟಿ ಕುರಿತು ಹೆಚ್ಚಿನ ಪ್ರಚಾರವನ್ನು ಮಾಡಬೇಕೆಂದು ವಾರ್ತಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.

2) ಬೆಳೆ ಪರಿಹಾರ ಸಮೀಕ್ಷೆ ಕುರಿತು :

ಜಿಲ್ಲೆಯ ಋತುಮಾನ ಹಾಗೂ ಮಳೆ, ಪ್ರವಾಹದಿಂದ ಉಂಟಾದ ಹಾನಿ ಕುರಿತು ಜಂಟಿ ಕೃಷಿ ನಿರ್ದೇಶಕರು, ಬಾಗಲಕೋಟೆರವರು ಸಭೆಗೆ ವಿವರಿಸುತ್ತಾ, ಜಿಲ್ಲೆಯಲ್ಲಿ ದಿನಾಂಕ 25.07.2020 ರಿಂದ 25.10.2020ರ ವರೆಗೆ 528.5ಮೀ.ಮೀ ಮಳೆ ಆಗಿದ್ದು, ಪ್ರತಿಶತ 28 ಮಿ.ಮೀ ಮಳೆ ಜಾಸ್ತಿ ಆಗಿದೆ. ಜಿಲ್ಲೆಯಲ್ಲಿ ಜೋಳ ಬಿತ್ತನೆ ಕಾರ್ಯ ಮತ್ತು ಕಡಲೆ, ಗೋಧಿ ಬಿತ್ತನೆಯು ಈಗಾಗಲೇ 100% ಗುರಿ ತಲುಪಿರುವುದಾಗಿ, ಹಾಗೂ ಬೀಜ ರಸಗೊಬ್ಬರಗಳ ದಾಸ್ತಾನುಗಳ ಯಾವ ತೊಂದರೆ ಆಗಿಲ್ಲವೆಂದು ತಿಳಿಸಿದರು ಹಾಗೂ ಜಿಲ್ಲೆಯಲ್ಲಿ 9 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಹಾವು ಕಡಿತದಿಂದ 6 ಜನ ಮೃತ ಪಟ್ಟಿದ್ದಾಗಿ ಸಭಾಧ್ಯಕ್ಷರ ಗಮನಕ್ಕೆ ತಂದರು.

ಜಿಲ್ಲೆಯಲ್ಲಿ ದಿನಾಂಕ 25.07.2020 ರಿಂದ 25.10.2020 ರವರೆಗೆ ಪ್ರವಾಹ ಹಾಗೂ ಭಾರಿ ಮಳೆಯಿಂದ ಕೃಷಿ ಬೆಳೆಯ 65,489 ಹೆಕ್ಟರ ಕ್ಷೇತ್ರ ಹಾನಿಯಾಗಿದ್ದು ತೋಟಗಾರಿಕೆ ಬೆಳೆಯ 47,036 ಹೆಕ್ಟರ ಕ್ಷೇತ್ರ ಹಾನಿಯಾಗಿರುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ಹಾಗೂ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆಯವರು ಸಭೆಯಲ್ಲಿ ವಿವರಿಸಿದರು. ಜಿಲ್ಲೆಯಲ್ಲಿ ಈಗಾಗಲೇ 90,970 ಫಲಾನುಭವಿಗಳ ಡಾಟಾ ಎಂಟ್ರಿ ಕಾರ್ಯವನ್ನು ಪರಿಹಾರ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಅದರಲ್ಲಿ 19680 ಫಲಾನುಭವಿಗಳಿಗೆ ಸರ್ಕಾರದಿಂದ (ರೂ.20.98 ಕೋಟಿಗಳು) ಫಲಾನುಭವಿಗಳ ಖಾತೆಗೆ ಸರ್ಕಾರದಿಂದ ನೇರವಾಗಿ ಹಣ ಸಂದಾಯವಾಗಿರುತ್ತದೆಂದು ಹಾಗೂ ಕೇಂದ್ರ ನೆರವಿನ ಯೋಜನೆ, ರಾಜ್ಯ ವಲಯ ಯೋಜನೆ, ಜಿಲ್ಲಾ ವಲಯ ಯೋಜನೆಗಳ ಬಗ್ಗೆ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆರವರು ಸಭಾಧ್ಯಕ್ಷರಿಗೆ ತಿಳಿಸಿದರು.

3) ಕೋವಿಡ್-19 ಹರಡುವಿಕೆಯನ್ನು ತಡೆಗಟ್ಟುವ ಕುರಿತು ಪ್ರಗತಿ ಪರಿಶೀಲನೆ:

ಜಿಲ್ಲಾ ಸಮೀಕ್ಷಣಾಧಿಕಾರಿಗಳು ಸಭೆಗೆ ವಿವರಿಸುತ್ತಾ, ಜಿಲ್ಲೆಯಲ್ಲಿ ದಿನಾಂಕ 20.11.2020 ರಂದು 1614 ಕೋವಿಡ್-19 ಪರೀಕ್ಷೆಗಳನ್ನು ಮಾಡಲಾಗಿ, 23 ಪ್ರಕರಣಗಳಲ್ಲಿ ಸೋಂಕಿತರು ದೃಢಪಟ್ಟಿರುತ್ತಾರೆ, ಅದರಂತೆ ದಿ.21.11.2020 ರಂದು 1266 ಪರೀಕ್ಷೆಗಳನ್ನು ಮಾಡಲಾಗಿ ಅವುಗಳಲ್ಲಿ 10 ಪ್ರಕರಣಗಳು ಸೋಂಕಿತರೆಂದು ದೃಢಪಟ್ಟಿರುತ್ತವೆಂದು ಹಾಗೂ ದಿ.22.11.2020 ರಂದು 1138 ಪರೀಕ್ಷೆಗಳನ್ನು ಮಾಡಲಾಗಿ ಅವುಗಳಲ್ಲಿ ಕೇವಲ 4 ಪ್ರಕರಣಗಳು ಸೋಂಕಿತರೆಂದು ದೃಢಪಟ್ಟಿರುತ್ತವೆಂದು ಸಭೆಯಲ್ಲಿ ವಿವರಿಸಿದರು.

ಈಗಾಗಲೇ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಪ್ರತಿ ದಿನ ಕೋವಿಡ್-19 ಪರೀಕ್ಷಾ 3400 ಗುರಿ ನಿಗದಿಪಡಿಸಿದ್ದು ಇರುತ್ತದೆ. ಅವುಗಳಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆ 2900, ರ್‍ಯಾಟ್ ಪರೀಕ್ಷೆ 500 ರಂತೆ ಗುರಿ ಸಾಧಿಸಲು ಜಿಲ್ಲಾಧಿಕಾರಿಗಳು ಸೂಚಿಸಿದಾಗ, ಈಗ ಪ್ರತಿ ದಿನ 2000 ಮಾತ್ರ ಪರೀಕ್ಷೆ ಮಾಡುತ್ತಿರುವುದಾಗಿ ಹೇಳಿದರು. ಇದು ಶೇ.33 ಪರೀಕ್ಷೆಗಳ ಕಡಿಮೆ ಪ್ರಮಾಣದಲ್ಲಿ ಆಗಿರುವುದರ ಬಗ್ಗೆ ಹಾಗೂ ಒಂದು ವೇಳೆ ಸರ್ಕಾರದವರು ಇನ್ನೂ ಹೆಚ್ಚಿನ ಗುರಿಯನ್ನು ಸಾಧಿಸಲು ಸೂಚಿಸಿದರೆ ಯಾವ ರೀತಿ ಕ್ರಮ ಕೈಗೊಳ್ಳುವಿರಿ ಎಂದು ಪ್ರಶ್ನಿಸಿದಾಗ, ಅದಕ್ಕೆ ಜಿಲ್ಲಾ ಸಮೀಕ್ಷಣಾಧಿಕಾರಿಗಳು ವಿವರಿಸುತ್ತಾ,

ಈಗಾಗಲೇ ನಮ್ಮಲ್ಲಿ 11 ಲ್ಯಾಬ್ ಟೆಕ್ನಿಶಿಯನ್‌ಗಳು ಮಾತ್ರ ಇರುವರು, ಅವರಲ್ಲಿ ಕೆಲವರು ಆರೋಗ್ಯದ ಸಮಸ್ಯೆಯಿಂದ ರಜೆ ಮೇಲಿರುತ್ತಾರೆ, ಆದುದರಿಂದ ಇನ್ನು 4-5 ಜನ ಲ್ಯಾಬ್ ಟೆಕ್ನಿಶಿಯನ್‌ಗಳು ಬೇಕಾಗಿರುವುದಾಗಿ ಜಿಲ್ಲಾ ಶಸ್ತ್ರ ಚಿಕಿತ್ಸಕರು ಸಭೆಯ ಗಮನಕ್ಕೆ ತಂದು, ಮಾನವ ಶಕ್ತಿ (Man Power) ಕೊರತೆ ಇರುವುದಾಗಿ ತಿಳಿಸಿದರು. ಅದಕ್ಕೆ ಹೊಸದಾಗಿ ಸಿಬ್ಬಂದಿಯನ್ನು ನೇಮಕಮಾಡಿಕೊಂಡು ಇಲ್ಲವೇ ಬೇರೆ ಸಂಸ್ಥೆಗಳಲ್ಲಿನ ಸಿಬ್ಬಂದಿ ಎರವಲು ಪಡೆದುಕೊಂಡು ಪ್ರತಿದಿನ 3400 ಪರೀಕ್ಷಾ ಗುರಿಯನ್ನು ಸಾಧಿಸುವಂತೆ, ಹಾಗೂ ಆರ್‌ಟಿಪಿಸಿಆರ್ ಪದ್ಧತಿಯಲ್ಲಿ ಪೂಲಿಂಗ್ ಪರೀಕ್ಷೆಯನ್ನು ಮಾಡುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸ್ಥಳೀಯ ಜನರು ಗುಂಪು ಗುಂಪಾಗಿ ಸೇರುವ ಪ್ರದೇಶವನ್ನು ಗುರುತಿಸಿ, ಅಂತಹ ಸ್ಥಳಗಳಲ್ಲಿ ಸಾರ್ವಜನಿಕರು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ತಿಳುವಳಿಕೆ ನೀಡಲು ಹಾಗೂ ಮಾಸ್ಕ್ ಧರಿಸದ ಹಾಗೂ ಕೋವಿಡ್-19ರ ನಿಯಮ ಪಾಲಿಸದವರಿಗೆ ದಂಡ ವಸೂಲಿ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಸ್ಥಳಿಯ ಸಂಸ್ಥೆಗಳ ಅಧಿಕಾರಿಗಳಿಗೆ ಸೂಚಿಸಲಾಯಿತು.

4) <u>ಮನೆ ಹಾನಿ ಪ್ರಗತಿ ಕುರಿತು :</u>

ಜಿಲ್ಲೆಯಲ್ಲಿ ಪ್ರವಾಹ / ಮಳೆಯಿಂದ ಮನೆ ಹಾನಿ ಹಾಗೂ RGRHCL ತಂತ್ರಾಂಶದಲ್ಲಿ ಅಳವಡಿಸಿದ ಪರಿಹಾರ ವಿತರಿಸಿದ ಬಗ್ಗೆ ವಿವರಿಸಲು ಹಾಗೂ ಜಿಲ್ಲೆಯಲ್ಲಿ 2020ರ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಆದ ಅತಿವೃಷ್ಟಿ ಹಾಗೂ ಪ್ರವಾಹದಿಂದ ಹಾನಿಗೊಳಗಾದ ಮನೆಗಳ ಸಮೀಕ್ಷೆ ಸಂಪೂರ್ಣಗೊಂಡ ಬಗ್ಗೆ ಹಾಗೂ ಸದರಿ ಮನೆಗಳ ಹಾನಿ ಬಗ್ಗೆ RGRHCL ತಂತ್ರಾಂಶದಲ್ಲಿ ಅಳವಡಿಸಿದ ಬಗ್ಗೆ ಕೇಳಲಾಗಿ, ತಹಶೀಲದಾರ ಜಮಖಂಡಿ 622, ರಬಕವಿ-ಬನಹಟ್ಟಿ 712, ಮುಧೋಳ 1029, ಬಾಗಲಕೋಟೆ 506, ಹುನಗುಂದ 334, ಗುಳೇದಗುಡ್ಡ 421, ಬದಾಮಿ 510, ಇಲಕಲ್ 305, ಬೀಳಗಿ 422, ಮನೆಗಳ ಡಾಟಾ ಎಂಟ್ರಿ ಮಾಡಿರುವುದಾಗಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶರವರು ತಿಳಿಸಿದರು. ಜಿಲ್ಲಾಧಿಕಾರಿಗಳು, ಯಾವುದೇ ರೀತಿಯ ತೊಂದರೆಗಳಿದ್ದರೂ ಅವುಗಳನ್ನು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಸರಿಪಡಿಸಿಕೊಳ್ಳಲು ತಹಶೀಲದಾರರಿಗೆ ನಿರ್ದೇಶಿಸಿ, ಅದರಂತೆ ಈವರೆಗೆ "ಎ, ಬಿ1, ಬಿ2, ಸಿ" ಕ್ಯಾಟಗರಿಯ ಒಟ್ಟು 3711 ಮನೆಗಳಿಗೆ ಈ ಕಛೇರಿಯಿಂದ ಅನುಮೋದನೆ ನೀಡಲಾಗಿದೆ. ಅದರನ್ವಯ 'ಸಿ' ಕ್ಯಾಟಗರಿಯ ಮನೆ ಹಾನಿಗೆ ಸಂಬಂಧಿಸಿದಂತೆ ತಕ್ಷಣ ಅನುದಾನ ಬಿಡುಗಡೆ ಮಾಡಿ "ಪೇ ಜನರೇಟ್" ಮಾಡಲು ಹಾಗೂ 2676 ಅನುಮೋದಿಸಿದ ಮನೆಗಳಿಗೆ ಸಂಬಂಧಿಸಿದಂತೆ "ಜಿಪಿಎಸ್" ಆಧಾರಿತ ಫೋಟೊಗಳನ್ನು ಅಪ್‌ಲೋಡ್ ಮಾಡಲು ನಿರ್ದೇಶನ ನೀಡಲಾಯಿತು. ಅಲ್ಲದೆ ಹಂತವಾರು ನಿಗದಿತ ಅವಧಿಯಲ್ಲಿ ಪ್ರಗತಿ ಸಾಧಿಸಲು ಸೂಚಿಸಲಾಯಿತು.

2019-20ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಯಾದ ಮನೆಗಳಿಗೆ ಮೊದಲ ಹಂತದಲ್ಲಿ ರೂ.1,00,000/- ಅನುದಾನ ಬಿಡುಗಡೆಯಾಗಿದ್ದು, ಅವುಗಳಲ್ಲಿ ಕೆಲವು ಮನೆಗಳ ಕಟ್ಟಡ ಪ್ರಾರಂಭಿಸಿರುವುದಿಲ್ಲ. ಅನುದಾನ ಬಿಡುಗಡೆಯಾಗಿದ್ದರಿಂದ ಬಿಡುಗಡೆಯಾದ ಅನುದಾನವನ್ನು ಕಟ್ಟಡ ಪ್ರಾರಂಭಿಸದೇ ಇರುವ ಫಲಾನುಭವಿಗಳಿಂದ

ವಸೂಲಿ ಆಗದೇ ಇರುವಂತಹ ಮನೆಗಳ ಆಸ್ತಿ ಮೇಲೆ ಭೋಜಾ ದಾಖಲಿಸಲು, ನಿಯಮಾನುಸಾರ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

5) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರವರು :

2020-21ನೇ ಸಾಲಿನ ನಿಗಮದ ಯೋಜನೆಗಳಾದ **"ಉದ್ಯೋಗಿನಿ ಯೋಜನೆ"** ಅಡಿಯಲ್ಲಿ 54 ಭೌತಿಕ ನಿಗದಿತ ಗುರಿ 54 ಫಲಾನುಭವಿಗಳ ಯಾದಿಯನ್ನು ಮಾನ್ಯ ಶಾಸಕರಿಗೆ ಆಯ್ಕೆಗಾಗಿ ಸಲ್ಲಿಸಲಾಗಿದ್ದು, ಇನ್ನೂ ಆಯ್ಕೆಯಾಗಿರುವುದಿಲ್ಲವೆಂದು ಸಭಾಧ್ಯಕ್ಷರ ಗಮನಕ್ಕೆ ತಂದರು. **"ಲಿಂಗತ್ವ ಅಲ್ಪ ಸಂಖ್ಯಾತರ ಪುನರವಸತಿ ಯೋಜನೆ"** ಅಡಿಯಲ್ಲಿ 20 ಅರ್ಜಿಗಳು, **"ಚೇತನ ಯೋಜನೆ"** ಅಡಿಯಲ್ಲಿ 22 ಅರ್ಜಿಗಳು, **"ಧನಶ್ರೀ ಯೋಜನೆ"** ಅಡಿಯಲ್ಲಿ 42 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಸದರಿ ಮಾಹೆಯಲ್ಲಿ ಆಯ್ಕೆ ಮಾಡಲಾಗುವುದು ಹಾಗೂ **"ಕಿರುಸಾಲ ಯೋಜನೆ, ಸಮೃದ್ಧಿ ಯೋಜನೆ"** ಸದರಿ ವರ್ಷದಲ್ಲಿ ಕ್ರಿಯಾ ಯೋಜನೆ ಬಂದಿರುವುದಿಲ್ಲ ಎಂದು ಸಭಾಧ್ಯಕ್ಷರಿಗೆ ತಿಳಿಸಿದರು.

ಜಿಲ್ಲೆಯಲ್ಲಿರುವ ಕಾರ್ಯನಿರತ ಲೈಂಗಿಕ ಕಾರ್ಯಕರ್ತೆಯರ ಪೈಕಿ 36 ಜನ ಮಹಿಳೆಯರಿಗೆ ಪಡಿತರ ಚೀಟಿ ಇರುವುದಿಲ್ಲವೆಂದು ಉಪ ನಿರ್ದೇಶಕರು, ಮ.ಮ.ಕ.ಇ.ರವರು ಸಭಾಧ್ಯಕ್ಷರಿಗೆ ತಿಳಿಸಿದರು.

ಜಿಲ್ಲೆಯಲ್ಲಿರುವ ಕಾರ್ಯನಿರತ ಲೈಂಗಿಕ ಕಾರ್ಯಕರ್ತೆಯರ ಪೈಕಿ 36 ಜನ ಮಹಿಳೆಯರ ಪಟ್ಟಿಯನ್ನು ಉಪ ನಿರ್ದೇಶಕರು, ಮ.ಮ.ಕ.ಇ.ರವರಿಂದ ಪಡೆದುಕೊಂಡು ಪರಿಶೀಲಿಸಿ, ಒಂದು ವಾರದಲ್ಲಿ ವಿತರಿಸುವಂತೆ ಉಪ ನಿರ್ದೇಶಕರು, ಆ.ನಾ.ಸ ಹಾಗೂ ಗ್ರಾ.ವ್ಯ.ಇ.ರವರಿಗೆ ಸೂಚಿಸಲಾಯಿತು.

6) ಪಂಚಾಯತ ರಾಜ್ ಎಂಜಿನಿಯರಿಂಗ್ ವಿಭಾಗ :

2020-21ನೇ ಸಾಲಿನ ಅತಿವೃಷ್ಟಿಯಿಂದ 1539.11 ಕಿ.ಮೀ. ಗ್ರಾಮೀಣ ರಸ್ತೆಗಳು ಹಾನಿಯಾಗಿದ್ದು, ರೂ.6,934.35 ಲಕ್ಷಗಳು ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಹಾಗೂ 34 ಬ್ರಿಡ್ಜ್/ಬಂದಾರಗಳು ಹಾನಿಯಾಗಿದ್ದು ರೂ. 140.50 ಲಕ್ಷಗಳು ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ ಹಾಗೂ 29 ಗ್ರಾಮೀಣ ಕುಡಿಯುವ ಮತ್ತು ನೈರ್ಮಲ್ಯ ವಿಭಾಗದ ಕಾಮಗಾರಿಗಳು ಹಾನಿಯಾಗಿದ್ದು ರೂ. 160.00 ಲಕ್ಷಗಳು ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಮೇಲಿನ ಕಾಮಗಾರಿಗಳಿಗೆ ಯಾವುದೇ ರೀತಿಯ ಅನುದಾನ ಈವರೆಗೂ ಸರ್ಕಾರದಿಂದ ಬಿಡುಗಡೆಯಾಗಿರುವುದಿಲ್ಲವೆಂದು ಸಭೆಗೆ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇ.ವಿ.ರವರು ತಿಳಿಸಿದರು.

ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ಒಟ್ಟು ಮಂಜೂರಾದ ಕಾಮಗಾರಿಗಳ ಸಂಖ್ಯೆ 140, ಅಂದಾಜು ಮೊತ್ತ ರೂ. 2470.00 ಲಕ್ಷಗಳು, ಟೆಂಡರಿಗಿಟ್ಟ ಮೊತ್ತ ರೂ. 1859.02 ಲಕ್ಷಗಳು ಹಾಗೂ ಟೆಂಡರ್ / ತುಂಡು ಗುತ್ತಿಗೆ ವಹಿಸಿದ ಗುತ್ತಿಗೆ ಮೊತ್ತ ರೂ. 1815.02 ಲಕ್ಷಗಳ ವಿವರಣೆಯನ್ನು ಸಲ್ಲಿಸಿದರು.

2019-20ನೇ ಸಾಲಿನ ಜಿಲ್ಲೆಯಲ್ಲಿ ವಿಧಾನಸಭಾ ಮತಕ್ಷೇತ್ರದ ಒಟ್ಟು 72 ಕಾಮಗಾರಿಗಳು ಮುಕ್ತಾಯಗೊಂಡಿದ್ದು, 55 ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ ಯಾವುದೇ ಅನುದಾನ ಸರ್ಕಾರದಿಂದ ಬಿಡುಗಡೆ ಆಗಿರುವುದಿಲ್ಲವೆಂದು ಸಭಾಧ್ಯಕ್ಷರ ಗಮನಕ್ಕೆ ತಂದರು.

7) <u>ಪದವಿ ಕಾಲೇಜು ಸಂಯೋಜಕರು :</u>

ಜಿಲ್ಲೆಯಲ್ಲಿ ಒಟ್ಟು 63 ಪದವಿಗಳು ಕಾಲೇಜುಗಳಿವೆ, ಅವುಗಳಲ್ಲಿ 18 ಸರ್ಕಾರಿ ಪದವಿ ಕಾಲೇಜುಗಳು, 45 ಖಾಸಗಿ ಹಾಗೂ ಅನುದಾನಿತ ಪದವಿ ಕಾಲೇಜು ಇರುವುದರ ಬಗ್ಗೆ ಮಾಹಿತಿಯನ್ನು ನೀಡಿದರು. ದಿ.17.11.2020 ರಿಂದ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳ ತರಗತಿಗಳು ಪ್ರಾರಂಭವಾಗಿರುತ್ತವೆ. ಸುಮಾರು 15000 ವಿದ್ಯಾರ್ಥಿಗಳು ಪದವಿ ಅಂತಿಮ ವರ್ಷ ವ್ಯಾಸಂಗ ಮಾಡುತ್ತಿದ್ದಾರೆ. ಕೋವಿಡ್-19 (ಎಸ್‌ಓಪಿ) ಸರ್ಕಾರದ ನಿರ್ದೇಶನದಂತೆ ಕೊಠಡಿಗಳಿಗೆ ಸ್ಯಾನಿಟೈಸ್ ಮಾಡಲಾಗಿರುತ್ತದೆ. ಥರ್ಮಲ್ ಸ್ಕ್ಯಾನಿಂಗ್ ವ್ಯವಸ್ಥೆ ಕೂಡ ಲಭ್ಯವಿದ್ದು, ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಹಾಗೂ ಗುಂಪು ಗುಂಪಾಗಿ ಸೇರುವುದನ್ನು ನಿಷೇಧಿಸಲಾಗಿದೆ ಎಂದರು. ಸದರಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪಾಲಕರ ಒಪ್ಪಿಗೆ ಪತ್ರ ಹಾಗೂ ಕೋವಿಡ್-19 ರ‍್ಯಾಪಿಡ್ ಟೆಸ್ಟ್ ಪತ್ರವನ್ನು ಒಪ್ಪಿಸುವುದು ಕಡ್ಡಾಯವಾಗಿರುತ್ತದೆ. ಅನೇಕ ವಿದ್ಯಾರ್ಥಿಗಳು ಕೋವಿಡ್-19ರ ತಪಾಸಣೆ ಇರುವುದರಿಂದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಾಲೇಜುಗಳಿಗೆ ಬರುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಕೇವಲ 10% ವಿದ್ಯಾರ್ಥಿಗಳು ಮಾತ್ರ ಕಾಲೇಜುಗಳಿಗೆ ಬರುತ್ತಿರುವುದಲ್ಲದೆ, ವಿದ್ಯಾರ್ಥಿನಿಯರ ಸಂಖ್ಯೆ ಅಧಿಕವಾಗಿರುತ್ತದೆ. ಕೆಲವು ವಿದ್ಯಾರ್ಥಿಗಳಿಗೆ ಕೋವಿಡ್-19ರ ಪರೀಕ್ಷೆ ಮಾಡಿದರೂ ಕೂಡಾ ಇನ್ನು ಪರೀಕ್ಷಾ ವರದಿ ಬಂದಿರುವುದಿಲ್ಲ ಎಂದು ಸಂಯೋಜಕರು ಸಭೆಯ ಗಮನಕ್ಕೆ ತಂದರು.

8) <u>ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ :</u>

ಜಿಲ್ಲೆಯಲ್ಲಿ ಪ್ರವಾಹ / ಮಳೆಯಿಂದ ಗ್ರಾಮೀಣ ಭಾಗದಲ್ಲಿರುವ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದರ ಬಗ್ಗೆ ವಿವರಿಸಲು ತಿಳಿಸಿದಾಗ,

ಜಿಲ್ಲೆಯಲ್ಲಿ ಯಾವುದೇ ಗ್ರಾಮದಲ್ಲಿ ನೀರಿನ ಸಮಸ್ಯೆ ಇರುವುದಿಲ್ಲವೆಂದು ಕಾರ್ಯನಿರ್ವಾಹಕ ಅಭಿಯಂತರರು ಆರ್‌ಡಬ್ಲ್ಯೂಎಸ್ ರವರು ಸಭೆಗೆ ವಿವರಿಸಿದರು.

9) <u>ಘನ ತ್ಯಾಜ್ಯ ವಸ್ತು ಸಂಗ್ರಹಣ ಸ್ಥಳ :</u>

ಜಿಲ್ಲೆಯಲ್ಲಿ ಎಲ್ಲ ಗ್ರಾಮ ಪಂಚಾಯತ ಪ್ರದೇಶದಲ್ಲಿ ಘನ ತ್ಯಾಜ್ಯ ವಸ್ತುಗಳ ಸಂಗ್ರಹಕ್ಕಾಗಿ ಸ್ಥಳಗಳನ್ನು ಗುರುತಿಸಲಾಗುತ್ತಿದ್ದು ಕಂದಾಯ ಇಲಾಖೆ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಜಮೀನುಗಳನ್ನು ಜಿಲ್ಲಾಧಿಕಾರಿಗಳು ಈಗಾಗಲೇ ಮಂಜೂರಿಸಿದ್ದು, 9 ಗ್ರಾಮ ಪಂಚಾಯತಗಳಲ್ಲಿ ಸ್ಥಳವಿಲ್ಲದೇ ಇರುವುದರಿಂದ ಕೃಷ್ಣಾ ಮೇಲ್ದಂಡೆ ಯೋಜನೆ ವ್ಯಾಪ್ತಿಯ ಪುನರ್ ವಸತಿ ಕೇಂದ್ರಗಳಲ್ಲಿ ಜಾಗೆ ಮಂಜೂರಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರು ಸಭಾಧ್ಯಕ್ಷರಿಗೆ ಕೋರಲಾಗಿ, ಪುನರ್ ವಸತಿ ಕೇಂದ್ರಗಳಲ್ಲಿ ಈಗಾಗಲೇ ತಿಪ್ಪೆಗುಂಡಿಗಾಗಿ ಜಾಗೆ ಕಾಯ್ದಿರಿಸಿದ್ದು, ಸಂಬಂಧಿಸಿದ ಗ್ರಾಮ ಪಂಚಾಯತಗಳಿಗೆ ಸದರಿ ಜಾಗೆ ಉಪಯೋಗಿಸಲು ಮಂಜೂರಾತಿ ಬಗ್ಗೆ ಕ್ರಮ ವಹಿಸಲು ಮಹಾ ವ್ಯವಸ್ಥಾಪಕರಿಗೆ ಸೂಚಿಸಲಾಯಿತು.

ಕೊನೆಯದಾಗಿ, ಜಿಲ್ಲೆಯ ಎಲ್ಲ ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲದಾರರು ಸ್ಮಶಾನವಿಲ್ಲದ ಗ್ರಾಮಗಳನ್ನು ಗುರುತಿಸಿ ಸ್ಮಶಾನದ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲು, ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ವಿವಿಧ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳನ್ನು ಆರ್‌ಟಿಸಿಗಳಲ್ಲಿ ಇಂದೀಕರಣಗೊಳಿಸುವುದು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರು ಭೂಸ್ವಾಧೀನವಾದ ಕ್ಷೇತ್ರದ ಬಗ್ಗೆ ಕೆಜೆಪಿ ಮಾಡುವ ಕ್ರಮ ವಹಿಸಲು, ಸದರಿ ಕಾರ್ಯದಲ್ಲಿ ಸಾಧಿಸಿದ ಪ್ರಗತಿ ವರದಿ ಮೇಲಿಂದ ಮೇಲೆ ಆಯುಕ್ತರಿಗೆ ಸಲ್ಲಿಸುವಂತೆ ನಿರ್ದೇಶನ ನೀಡಲಾಯಿತು.

ಕೊನೆಯದಾಗಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ಸಂಸ್ಥೆ, ಬೆಂಗಳೂರು
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಾಗಲಕೋಟೆ ಜಿಲ್ಲೆ

**ಶ್ರೀ ಎಸ್.ಆರ್.ಉಮಾಶಂಕರ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ದಿನಾಂಕ 30.11.2020ರಂದು ದಾವಣಗೆರೆ ಜಿಲ್ಲೆಯಲ್ಲಿನ ಕೋವಿಡ್ –19 ನಿಯಂತ್ರಿಸಲು ಕೈಗೊಂಡ ಕ್ರಮಗಳ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿ.**

1. ಜಿಲ್ಲೆಯಲ್ಲಿ ಈ ದಿನದವರೆಗೆ 15 ಹೊಸ ಪ್ರಕರಣಗಳು ಸೇರಿದಂತೆ ಒಟ್ಟು 21,597ಕೋವಿಡ್ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು 21,093 ವ್ಯಕ್ತಿಗಳನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿರುತ್ತದೆ. (ಶೇ.1%) 241 ಸಕ್ರಿಯ ಪ್ರಕರಣಗಳು ಇರುತ್ತವೆ. ಜಿಲ್ಲೆಯ ಪಾಸಿಟಿವಿಟಿ ದರವು ಶೇ.1 ರಷ್ಟು ಇರುತ್ತದೆ.

2. ಜಿಲ್ಲೆಯಿಂದ ದಿನಾಂಕ: 29.11.2020ರವರೆಗೆ 1,62,614 ಗಂಟಲು ದ್ರವದ ಮಾದರಿಗಳನ್ನು ಕೋವಿಡ್ ಪರೀಕ್ಷೆಗಾಗಿ ಕಳುಹಿಸಿದ್ದು 14,095 ಪಾಸಿಟಿವ್ ಬಂದಿರುತ್ತವೆ, 1,48,519 ನೆಗೆಟಿವ್ ಬಂದಿರುತ್ತವೆ. 2,145 ಗಂಟಲು ದ್ರವದ ಮಾದರಿಗಳ ಫಲಿತಾಂಶವು ಬಾಕಿ ಇದ್ದು ಈ ದಿನ ಸಂಜೆಯೊಳಗೆ 840 ಫಲಿತಾಂಶಗಳು ನಿರೀಕ್ಷೆಯಲ್ಲಿರುತ್ತವೆ. ಉಳಿದ ಫಲಿತಾಂಶಗಳನ್ನು 24 ಗಂಟೆಗಳ ಒಳಗಾಗಿ ಪಡೆಯಲಾಗುವುದು ಹಾಗೂ ರ್‍ಯಾಪಿಡ್ ಅಂಟಿಜೆನ್ ನಮ್ಮ ಜಿಲ್ಲೆಯಲ್ಲಿ 92,113 ಪರೀಕ್ಷೆ ಮಾಡಲಾಗಿದ್ದು, 7,502 ಪಾಸಿಟಿವ್ ಬಂದಿದ್ದು 84,611 ನೆಗೆಟಿವ್ ಬಂದಿರುತ್ತದೆ.

3. ಜಿಲ್ಲೆಯಲ್ಲಿ ಈವರೆಗೆ 263 ಮರಣಗಳು ಸಂಭವಿಸಿರುತ್ತವೆ. ಇವುಗಳ ಪೈಕಿ 21 ವ್ಯಕ್ತಿಗಳು ಹೊರ ಜಿಲ್ಲೆಯವರಾಗಿದ್ದಾರೆ. ಜಿಲ್ಲೆಯ ಫ್ಯಾಟಿಲಿಟಿ ದರವು ಶೇ.1 ರಷ್ಟು ಇರುತ್ತದೆ. ಜಿಲ್ಲೆಯ ಗುಣಮುಖ ಸರಾಸರಿ ಶೇ.98ರಷ್ಟು ಇರುತ್ತದೆ. ಸಕ್ರಿಯ ಪ್ರಕರಣಗಳು ಶೇ.1 ರಷ್ಟು ಇರುತ್ತದೆ.

4. ಮೃತಪಟ್ಟ ಎಲ್ಲಾ ವ್ಯಕ್ತಿಗಳನ್ನು ಕೋವಿಡ್–19 ಮಾರ್ಗಸೂಚಿಗಳು ಮತ್ತು ನಿಯಮಾನುಸಾರ ದಾವಣಗೆರೆ ಜಿಲ್ಲೆಯಲ್ಲಿ ಅಂತ್ಯಸಂಸ್ಕಾರ ಮಾಡಲಾಗಿರುತ್ತದೆ.

5. ಜಿಲ್ಲೆಯಲ್ಲಿ ಯಾವುದೇ ಪ್ರದೇಶಗಳಲ್ಲಿ 20 ಕ್ಕಿಂತ ಹೆಚ್ಚು ಪ್ರಕರಣಗಳು ಕಂಡು ಬಂದಿರದ ಕಾರಣ ಕಂಟೈನ್‌ಮೆಂಟ್ ವಲಯಗಳು ಇರುವುದಿಲ್ಲ.

6. ಜಿಲ್ಲೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ 400 ಬೆಡ್‌ಗಳ ಕೋವಿಡ್ ಆಸ್ಪತ್ರೆಯೆಂದು ಗುರುತಿಸಲಾಗಿದೆ. ಈ ದಿನ 37 ಖಚಿತಪಟ್ಟ ಕೋವಿಡ್ ಪ್ರಕರಣಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಹೆಚ್ಚುವರಿ 250 ಬೆಡ್‌ಗಳ ಐಸೋಲೇಶನ್ ವಾರ್ಡ್ ಅನ್ನು ಗುರುತಿಸಲಾಗಿದೆ. ಜಿಲ್ಲೆಯ 4 ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ 50 ಐಸೋಲೇಷನ್ ಬೆಡ್‌ಗಳನ್ನು ಸ್ಥಾಪಿಸಲಾಗಿದೆ. ಹರಿಹರ–01, ಹೊನ್ನಾಳಿ–03, ಚನ್ನಗಿರಿ–0, ಜಗಳೂರು–02, ಮತ್ತು ಪ್ರತಿ ತಾಲ್ಲೂಕಿನಲ್ಲಿ ಲಕ್ಷಣಗಳು ಇಲ್ಲದ ಪಾಸಿಟಿವ್ ಪ್ರಕರಣಗಳನ್ನು ಚಿಕಿತ್ಸೆಗೆ ಒಳಪಡಿಸಲು 100 ಬೆಡ್‌ಗಳ ಕೋವಿಡ್ ಕೇರ್ ಸೆಂಟರ್‌ಗಳಾಗಿ ಕಾರ್ಯನಿರ್ವಹಿಸಲು ಗುರುತಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಸಿಸಿಸಿ ಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್ ರೋಗಿಗಳು : ದಾವಣಗೆರೆ–00, ಹರಿಹರ–00, ಹೊನ್ನಾಳಿ–00, ಚನ್ನಗಿರಿ–00, ಜಗಳೂರು–00. ಕೋವಿಡ್ ಕೇರ್ ಸೆಂಟರ್‌ಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದ್ದು, ಮುಂಬರುವ ದಿನಗಳಲ್ಲಿ ಹೆಚ್ಚಿನ ಕೋವಿಡ್ ಪ್ರಕರಣಗಳು ಕಂಡು ಬಂದರೆ ಮನಃ ಪ್ರಾರಂಭ ಮಾಡಲಾಗುವುದು.

Home Isolation = 158
ದಾವಣಗೆರೆ–73, ಹರಿಹರ–12, ಹೊನ್ನಾಳಿ–43, ಚನ್ನಗಿರಿ–10, ಜಗಳೂರು–20ಕೋವಿಡ್–19 ರೋಗಿಗಳನ್ನು ಇರಿಸಲಾಗಿದೆ. ಹಾಗೂ ಶೇಕಡಾ 50 ರಷ್ಟು ಪ್ರಾ.ಆ.ಕೇಂದ್ರಗಳಲ್ಲಿ ಜ್ವರದ ಕ್ಲಿನಿಕ್‌ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

7. ಜಿಲ್ಲೆಯಲ್ಲಿ ಕೆ.ಪಿ.ಎಂ.ಇ ಅಡಿ ನೊಂದಾಯಿತ ಎಲ್ಲಾ ಖಾಸಗಿ ಕ್ಲಿನಿಕ್/ ಪಾಲಿಕ್ಲಿನಿಕ್/ ಡೇಕೇರ್ ಸೆಂಟರ್/ ನರ್ಸಿಂಗ್ ಹೋಂ/ ಆಸ್ಪತ್ರೆಗಳನ್ನು ತಕ್ಷಣದಿಂದ ಕಡ್ಡಾಯವಾಗಿ ತೆರೆದು ಸೇವೆ ಒದಗಿಸಲು ಸೂಚಿಸಿದೆ ಮತ್ತು ಕಡ್ಡಾಯವಾಗಿ ಜ್ವರ, ಐ.ಎಲ್.ಐ. ಮತ್ತುಎಸ್.ಎ.ಆರ್.ಐ. (ತೀವ್ರ ತರಹದ ಶ್ವಾಸಕೋಶದ ಸೋಂಕು) ಪ್ರಕರಣಗಳನ್ನು ವರದಿ ಮಾಡಲು ಸೂಚಿಸಿದೆ. ಈ ಸೂಚನೆಯನ್ನು ಉಲ್ಲಂಘಿಸಿದ 11 ಖಾಸಗಿ ಆಸ್ಪತ್ರೆಗಳ ವಿರುದ್ಧ ದಾಳಿ ಮಾಡಿ ಕ್ರಮ ಕೈಗೊಳ್ಳಲಾಗಿದೆ.

8. ಕೋವಿಡ್-19 ರೋಗಿಗಳು ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ವಿವರ:ಎಸ್.ಎಸ್.ಐ.ಎಂ.ಎಸ್= 05 / ಬಾಪೂಜಿ= 06 / ಸಿಟಿ ಸೆಂಟ್ರಲ್ ಹಾಸ್ಪಿಟಲ್ 00 / ಸಂಜೀವಿನಿ ಆಸ್ಪತ್ರೆ 00, ಆಶ್ರಯ ಆಸ್ಪತ್ರೆ 02ಕೊವಿಡ್ ರೋಗಿಗಳನ್ನು ದಾಖಲು ಮಾಡಲಾಗಿದೆ. ತಪೋವನ, ಆರಾಧ್ಯ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಕೋವಿಡ್-19 ರೋಗಿಗಳನ್ನು ದಾಖಲು ಮಾಡಿಕೊಳ್ಳಲು ಅನುಬಂಧ-2 ರಂತೆ ಹೆಚ್ಚುವರಿಯಾಗಿ 19 ಖಾಸಗಿ ಆಸ್ಪತ್ರೆಗಳಲ್ಲಿ ಮುಂಜಾಗ್ರತೆಯಾಗಿ ಶೇಕಡ 50 ರಷ್ಟು ಹಾಸಿಗೆ ಕಾಯ್ದಿರಿಸಿ ಕ್ರಮವಹಿಸಲಾಗಿದೆ.

9. ಜಿಲ್ಲೆಯಲ್ಲಿ ಚಿಗಟೇರಿ ಜಿಲ್ಲಾ ಆಸ್ಪತ್ರೆ, ಎಸ್.ಎಸ್. ಆಸ್ಪತ್ರೆ, ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನಲ್ಲಿ ಪ್ರಯೋಗ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿ ದಿನ ಎರಡು ಪ್ರಯೋಗ ಶಾಲೆಗಳಲ್ಲಿ ಸರಾಸರಿ 300 ಪರೀಕ್ಷೆಗಳನ್ನು ಒಂದು ಪ್ರಯೋಗ ಶಾಲೆಯಲ್ಲಿ 500 ಪರೀಕ್ಷೆಗಳನ್ನು ನಡೆಸುತ್ತಿದ್ದು ಕಳೆದ 1 ವಾರದಲ್ಲಿ ಪ್ರತಿ ದಿನ ಸರಾಸರಿ 1100ರಷ್ಟು ಗಂಟಲು ದ್ರವದ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಿ ಕೊಡಲಾಗುತ್ತಿದೆ.

10. ಇದುವರೆಗೆ ಜಿಲ್ಲೆಯಿಂದ ತೀವ್ರ ಶ್ವಾಸಕೋಶದ ಸೋಂಕು (SARI) 4709 ಪ್ರಕರಣಗಳು ದಾಖಲಾಗಿದ್ದು 608 ಪಾಸಿಟಿವ್ ಇರುತ್ತವೆ. (ILI) ಪ್ರಕರಣಗಳು 10149 ಇದ್ದು 1465 ಪಾಸಿಟಿವ್ ಇರುತ್ತವೆ.

11. ಕೆ.ಪಿ.ಎಂ.ಇ ಕಾಯ್ದೆಯಡಿ ನೋಂದಣಿಯಾದ ಎಲ್ಲಾ ಆರೋಗ್ಯ ಸಂಸ್ಥೆಗಳಿಂದ ಮತ್ತು ಫಾರ್ಮಸಿಗಳಿಂದ ಮಾಹಿತಿ ಪಡೆದು ಎಲ್ಲಾ ಐ.ಎಲ್.ಐ/ಸಾರಿ ಪ್ರಕರಣಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

12. ಅಪರ ಜಿಲ್ಲಾಧಿಕಾರಿಗಳ ನೇತೃತ್ವದ ಕಾಂಟ್ಯಾಕ್ಟ್ ಟ್ರೇಸಿಂಗ್ ತಂಡ ಮತ್ತು ಸರ್ವೇಕ್ಷಣಾ ತಂಡದಿಂದ ಈವರೆಗೆ 1,20,460 ಪ್ರಾಥಮಿಕ ಸಂಪರ್ಕಗಳು, ಅವುಗಳ ಪೈಕಿ 3,345 ಪಾಸಿಟಿವ್ ಮತ್ತು 1,25,264 ದ್ವಿತೀಯ ಸಂಪರ್ಕಗಳನ್ನು ಅವುಗಳ ಪೈಕಿ 1,219 ಪಾಸಿಟಿವ್ ಪ್ರಕರಣಗಳನ್ನು ಪತ್ತೆ ಹಚ್ಚಿ ಚಿಕಿತ್ಸೆಗೆ ಒಳಪಡಿಸಲಾಗಿದೆ.

13. ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಅಕ್ಟೋಬರ್ ತಿಂಗಳಿಂದ ಲಿಕ್ವಿಡ್ ಮೆಡಿಕಲ್ ಆಕ್ಸಿಜನ್ ಕಾರ್ಯನಿರ್ವಹಿಸುತ್ತಿದೆ.

**14.**ದಿನಾಂಕ :20.11.2020ರಂದು ಜಿಲ್ಲಾ ಮಟ್ಟದ ಕೋವಿಡ್ ವಾರ್ ರೂಂ ಅನ್ನು ಜಿಲ್ಲಾಡಳಿತ ಭವನದಲ್ಲಿ ಸ್ಥಾಪಿಸಿದ್ದು, ಎಲ್ಲಾ ಅಗತ್ಯ ವೈದ್ಯಕೀಯ ಮತ್ತು ಇತರ ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.

(ಎಸ್.ಆರ್. ಉಮಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ದಾವಣಗೆರೆ ಜಿಲ್ಲೆ.

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ/02/ಆಶಾ/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 23-11-2020

ಇವರಿಗೆ :

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

ಮಾನ್ಯರೆ,

ವಿಷಯ : ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಬೆಳಗಾವಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ಕುರಿತು ವರದಿ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಳಗಾವಿ ಜಿಲ್ಲೆಗೆ ಉಸ್ತುವಾರಿ ಕಾರ್ಯದರ್ಶಿಯಾಗಿ ದಿನಾಂಕ : 19-11-2020 ರಂದು ಭೇಟಿ ನೀಡಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯನ್ನು ಹಾಗೂ ಕೋವಿಡ್ ರೋಗ ನಿಯಂತ್ರಣದ ಕುರಿತು ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯ ಪರಿಶೀಲನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

23/11/2020

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

# ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಜಿಲ್ಲೆಯಲ್ಲಿ ನಡೆಸಿದ ಪ್ರಗತಿ ಪರಿಶಿಲನಾ ಸಭೆಯ ವರದಿ

ದಿನಾಂಕ: 19-11-2020 ರಂದು ಬೆಳಗಾವಿ ಜಿಲ್ಲೆಗೆ ಭೇಟಿ ನೀಡಿ ನೆರೆ ಪರಿಸ್ಥಿತಿಯ ಕುರಿತು ಹಾಗೂ ಕೋವಿಡ್ ನಿಯಂತ್ರಣದ ಬಗ್ಗೆ ಜಿಲ್ಲಾಡಳಿತ ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನಾ ಸಭೆ ಜಿಲ್ಲಾಧಿಕಾರಿ ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು.

ಸಭೆಯಲ್ಲಿ ಎಲ್ಲಾ ಇಲಾಖೆಗಳ ಜಿಲ್ಲಾ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಗಿರುತ್ತದೆ.

ಸದರಿ ಸಭೆಯಲ್ಲಿ ಅತಿವೃಷ್ಠಿಯಿಂದ ಹಾನಿಗೊಳಗಾದ ರಸ್ತೆಗಳ ಕುರಿತು, ಬೆಳೆ ಹಾನಿ ಕುರಿತು ವಿವರವಾಗಿ ಚರ್ಚಿಸಲಾಯಿತು. ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿಗಾಗಿ ಬೀಜ ಪೂರೈಕೆಯ ಬಗ್ಗೆ ವಿವರಣೆ ಪಡೆಯಲಾಗಿದ್ದು, ವಿವಿಧ ಯೋಜನೆಗಳಡಿ ಫಲಾನುಭವಿಗಳ ಪಟ್ಟಿಯನ್ನು ಸಾಕಷ್ಟು ಮುಂಚಿತವಾಗಿ ಸಿದ್ಧಪಡಿಸಿಕೊಂಡಲ್ಲಿ ಆರ್ಥಿಕ ಮತ್ತು ಭೌತಿಕ ಪ್ರಗತಿ ಸಾಧಿಸಬಹುದಾಗಿ ಸೂಚನೆ ನೀಡಲಾಯಿತು.

ಮುಂದುವರೆದು, ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಲಾಯಿತು. ಈ ಯೋಜನೆಯಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಮಾಡುವಂತೆ ಸೂಚನೆ ನೀಡಲಾಗಿರುತ್ತದೆ.

ಜಲ ಜೀವನ ಮಿಷನ್ ಮಿಷನ್ ಯೋಜನೆಯಡಿ ಪ್ರಗತಿಯನ್ನು ತ್ವರತಿವಾಗಿ ಮಾಡುವಂತೆ ಹಾಗೂ ನಿರ್ವಹಣೆ ಹಾಗೂ ದುರಸ್ಥಿ ಆಗಬೇಕಾದ ಘಟಕಗಳನ್ನು ಕೂಡಲೇ ಸರಿಪಡಿಸುವಂತೆ ಸೂಚನೆ ನೀಡಲಾಯಿತು.

ಜಿಲ್ಲೆಯ ಶಾಲೆ ಹಾಗೂ ತರಗತಿಗಳನ್ನು ಸ್ವಚ್ಛಗೊಳಿಸಲಾಗಿದ್ದು ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದ ಆದೇಶಕ್ಕಾಗಿ ನಿರೀಕ್ಷೆಯಲ್ಲಿರುವುದಾಗಿ ಶಿಕ್ಷಣ ಇಲಾಖೆಯ ಅದಿಕಾರಿಗಳು ಮಾಹಿತಿ

ನೀಡಿರುತ್ತಾರೆ. ಈ ಸಂದರ್ಭದಲ್ಲಿ ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯಗಳ ಬಗ್ಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಜರುಗಿಸಲು ಸೂಚನೆ ನೀಡಲಾಯಿತು.

**ಕೋವಿಡ್ ಪರಿಸ್ಥಿತಿಯ ಕುರಿತು ವರದಿ:**

- ಜಿಲ್ಲೆಯಲ್ಲಿ ಇಲ್ಲಿಯವರೆಗೆ 2,55,770 ಗಂಟಲು ಮಾದರಿಗಳನ್ನು ಸಂಗ್ರಹ ಮಾಡಲಾಗಿದ್ದು, ಇವುಗಳಲ್ಲಿ 25,315 ಪಾಸಿಟಿವ್ ಪ್ರಕರಣಗಲು ಇರುತ್ತದೆ.

- 24,581 ರೋಗಿಗಳು ಗುಣಮುಖರಾಗಿ ಬಿಡುಗಡೆ ಹೊಂದಿರುತ್ತಾರೆ. 428 ಸಕ್ರಿಯ ಪ್ರಕರಣಗಳಿದ್ದು, ಅದರಲ್ಲಿ 298 ಜನರು ಹೋಮ್ ಐಸೋಲೆಷನ್ ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 130 ಪ್ರಕಣರಗಳಲ್ಲಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

- ಜಿಲ್ಲೆಯಲ್ಲಿ ಚಿಕಿತ್ಸೆಗಾಗಿ 2325 ಹಾಸಿಗೆಗಳು ಲಭ್ಯವಿದ್ದು, 130 ಹಾಸಿಗೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, 2195 ಹಾಸಿಗೆಗಳು ಖಾಲಿ ಇರುತ್ತವೆ. 17 ಖಾಸಗಿ ಆಸ್ಪತ್ರೆಗಳು ಚಿಕಿತ್ಸೆ ನೀಡಲು ಲಭ್ಯವಿರುತ್ತದೆ.

- ಮುಂದಿನ ದಿನಗಳಲ್ಲಿ ಕೋವಿಡ್ 19 ಸೋಂಕಿನ 2ನೇ ಅಲೆ ಬರುವ ಸಾಧ್ಯತೆ ಇರುವುದರಿಂದ, ಈ ಕುರಿತಂತೆ ಆರೋಗ್ಯ ಇಲಾಖೆಯವರು ಪೂರ್ವ ಸಿದ್ಧತೆಗಳನ್ನು ಹಾಘೂ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತದೆ.

(ಎಲ್.ಕೆ.ಅತೀಕ್)

ಸರ್ಕಾರದ ಪ್ರಧಾನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಹಾಗೂ

ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಶ್ರೀ ನವೀನ್ ರಾಜ್ ಸಿಂಗ್ ಭಾ.ಆ.ಸೇ., ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 25-11-2020 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಕೋವಿಡ್-19, ಪ್ರಕೃತಿ ವಿಕೋಪ ಹಾಗೂ ಇತರೆ ವಿಷಯಗಳ ಸಂಬಂಧ ನಡೆದ ಸಭಾ ನಡವಳಿ.**

★★★★★★★

ಹಾಜರಿದ್ದವರು:

1. ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ.
3. ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ.
4. ಅಪರ ಜಿಲ್ಲಾಧಿಕಾರಿಗಳು, ಹಾಸನ.
5. ಉಪವಿಭಾಗಾಧಿಕಾರಿಗಳು, ಹಾಸನ/ಸಕಲೇಶಪುರ ಉಪವಿಭಾಗ.
6. ನಿರ್ದೇಶಕರು, ಹಿಮ್ಸ್, ಹಾಸನ.
7. ಜಿಲ್ಲಾ ಶಸ್ತ್ರ ತಜ್ಞರು, ಹಿಮ್ಸ್, ಹಾಸನ.
8. ಜಿಲ್ಲಾ ಆರೋಗ್ಯಾಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾಸನ.
9. ಜಿಲ್ಲಾ ಸರ್ವೇಕ್ಷಣಾಧಿಕಾರಿ, ಹಾಸನ.
10. ಇತರೆ ಅಧಿಕಾರಿಗಳು.
11. ತಾಲ್ಲೂಕು ತಹಸೀಲ್ದಾರ್/ಆರೋಗ್ಯಾಧಿಕಾರಿಗಳು ವಿಡಿಯೋ ಸಂವಾದದ ಮೂಲಕ ಹಾಜರಿದ್ದರು.

ಸಭೆಯಲ್ಲಿ ಉಪಸ್ಥಿತರಿದ್ದವರೆಲ್ಲರನ್ನು ಜಿಲ್ಲಾಧಿಕಾರಿಗಳು, ಹಾಸನ ರವರು ಸ್ವಾಗತಿಸುತ್ತಾ, ಅಧ್ಯಕ್ಷತೆವಹಿಸಿ ಸಭೆಯನ್ನು ನಡೆಸಿಕೊಡಲು ಮಾನ್ಯ ಸಭಾಧ್ಯಕ್ಷರನ್ನು ಕೋರಿದರು.

ಜಿಲ್ಲೆಯಲ್ಲಿ ಕೊರೋನಾ ವೈರಸ್ (COVID-19) ಹರಡದಂತೆ ಕಟ್ಟುನಿಟ್ಟಿನ ಕ್ರಮವಹಿಸುವ ಹಿನ್ನೆಲೆಯಲ್ಲಿ ಸರ್ಕಾರದ ನಿರ್ದೇಶನದಂತೆ ಸಾರ್ವಜನಿಕ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಮತ್ತು ಸುರಕ್ಷತೆಯ ದೃಷ್ಟಿಯಿಂದ ಜಿಲ್ಲೆಯಲ್ಲಿ ಈವರೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು ಹಾಗೂ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಿ ಸೂಚನೆಗಳನ್ನು ನೀಡಲಾಯಿತು.

- ಜಿಲ್ಲೆಯಲ್ಲಿ ಕಂಡು ಬಂದಿರುವ ಪಾಸಿಟೀವ್ ಪ್ರಕರಣಗಳ ಬಗ್ಗೆ ಜಿಲ್ಲಾಧಿಕಾರಿಗಳು ಹಾಸನ ರವರು ಸಭೆಯಲ್ಲಿ ವಿವರಿಸಿದರು. ದಿನಾಂಕ: 24-11-2020 ರವರೆಗೆ ಒಟ್ಟು 26,749 ಪಾಸಿಟೀವ್ ಪ್ರಕರಣಗಳು ವರದಿಯಾಗಿದ್ದು, ಈವರೆಗೆ ಒಟ್ಟು 25,987 ಪ್ರಕರಣಗಳಲ್ಲಿ ರೋಗಿಗಳು ಗುಣಮುಖರಾಗಿರುತ್ತಾರೆ ಹಾಗೂ 762 ಆಕ್ಟೀವ್ ಪ್ರಕರಣಗಳಿಗೆ ಕೋವಿಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ತಹಲ್‌ವರೆಗೆ ಕೊರೋನಾ ವೈರಸ್ ತಗುಲಿ ಒಟ್ಟು 451 ವ್ಯಕ್ತಿಗಳು ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು.

- ಹಾಸನ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಕೋವಿಡ್-19 ಪರೀಕ್ಷೆಯ ಮಾಹಿತಿಯನ್ನು ಪರಿಶೀಲಿಸಲಾಯಿತು. ಈ ಸಂಬಂಧ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ ಎಂದು ತಿಳಿಸಿದರು ಹಾಗೂ Positve rate ಆಧಾರದ ಮೇಲೆ ಕೋವಿಡ್ ಪರೀಕ್ಷೆಯ ಗುರಿಯನ್ನು ಎಲ್ಲಾ ತಾಲ್ಲೂಕುಗಳಿಗೆ ನೀಡಲಾಗಿದೆ ಎಂದು ತಿಳಿಸಿದರು. ಜಿಲ್ಲೆಯ ಎಲ್ಲಾ ತಾಲ್ಲೂಕು

ಆರೋಗ್ಯಾಧಿಕಾರಿಗಳ ಜೊತೆಯಲ್ಲಿ ಸಮನ್ವಯ ಸಾಧಿಸಿ ಕೋವಿಡ್-19 ಪರೀಕ್ಷೆಯ ಗುರಿಯನ್ನು ನಿಗಧಿಪಡಿಸಲು ಸೂಚಿಸಲಾಯಿತು. ತಾಲ್ಲೂಕುವಾರು ಕೋವಿಡ್-19 ಪರೀಕ್ಷೆಗಳ ಮೌಲ್ಯಮಾಪನ ನಡೆಸಿ ತಾಲ್ಲೂಕುವಾರು ನಿಗಧಿತ ಗುರಿಯನ್ನು ಸಾಧಿಸುವಂತೆ ಸಭೆಯಲ್ಲಿ ತಿಳಿಸಲಾಯಿತು.

- ಕೋವಿಡ್-19 ರ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸುವ ಕಾರ್ಯವನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕಂದಾಯ ಇಲಾಖಾ ಅಧಿಕಾರಿಗಳು ಹಾಗೂ ನಗರ ಪ್ರದೇಶಗಳಲ್ಲಿ ಮುನಿಸಿಪಾಲಿಟಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ತಂಡಗಳನ್ನು ರಚಿಸಿಕೊಂಡು ಅಗತ್ಯ ಕ್ರಮವಹಿಸಲು ಜಿಲ್ಲಾ ಪೊಲೀಸ್ ಅಧೀಕ್ಷಕರು, ಹಾಸನ ರವರಿಗೆ ತಿಳಿಸಲಾಯಿತು. ಮಾಸ್ಕ್ ಕಡ್ಡಾಯ ಬಳಕೆಯ ಬಗ್ಗೆ ಜಿಲ್ಲೆಯ ಜನತೆಯಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

- ಸಭೆ ಹಾಗೂ ಮದುವೆ ಸಮಾರಂಭಗಳಲ್ಲಿ ಜನ-ಜಂಗುಳಿಯನ್ನು ತಡೆಗಟ್ಟುವ ಸಂಬಂಧ ಅಗತ್ಯ ಕ್ರಮವಹಿಸತಕ್ಕದ್ದು. ಕಲ್ಯಾಣ ಮಂಟಪಗಳ ಮುಂದೆ ಕೋವಿಡ್ ನಿಯಂತ್ರಿಸುವ ಸಂಬಂಧ ಪಾಲಿಸಬೇಕಾದ ಕ್ರಮಗಳ ಕುರಿತು ಫಲಕಗಳನ್ನು ಅಳವಡಿಸಲು ಕಲ್ಯಾಣ ಮಂಟಪ ಮಾಲೀಕರಿಗೆ ತಿಳಿಸಿ ಎಚ್ಚರಿಕೆ ನೀಡಬೇಕು. ಮದುವೆ ಸಮಾರಂಭಗಳಲ್ಲಿ ಬಿಗಿಯಾದ ಕಾನೂನು ಅಳವಡಿಸಲು ಹಾಗೂ ನಿಯಮ ಉಲ್ಲಂಘನೆ ಆಗುವ ಕಲ್ಯಾಣ ಮಂಟಪದ ಮಾಲೀಕರ ಮೇಲೆ ಶಿಸ್ತು ಕ್ರಮ ಜರುಗಿಸಲು ಹಾಗೂ ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಸಾರ್ವಜನಿಕರಿಗೆ ಪ್ರಚಾರ ನೀಡಲು ಸೂಚಿಸಲಾಯಿತು.

- ಕೊರೋನಾ ವೈರಸ್ ಹರಡುವುದನ್ನು ತಡೆಗಟ್ಟುವ ಸಂಬಂಧ ಜಿಲ್ಲೆಯಲ್ಲಿರುವ ಔಷಧಿಗಳ ಲಭ್ಯತೆ ಬಗ್ಗೆ ಪರಿಶೀಲಿಸಲಾಯಿತು. ಹಿಮ್ಸ್ ನ ನಿರ್ದೇಶಕರು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳು, ಹಾಸನ ರವರು ಜಿಲ್ಲೆಯಲ್ಲಿ ಕೋವಿಡ್ ಚಿಕಿತ್ಸೆಗಾಗಿ ಯಾವುದೇ ಔಷಧಿಗಳ ಕೊರತೆ ಇಲ್ಲದಿರುವುದಾಗಿ ಹಾಗೂ ಆಮ್ಲಜನಕದ ಲಭ್ಯತೆ ಇರುತ್ತದೆ ಎಂಬ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು.

- ಕೋವಿಡ್-19 ನಿಂದ ಮರಣ ಹೊಂದಿದವರ ಅಂಕಿ-ಅಂಶಗಳ ಬಗ್ಗೆ ಪರಿಶೀಲಿಸಲಾಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ ಈವರೆಗೆ ಒಟ್ಟು 451 ವ್ಯಕ್ತಿಗಳು ಕೋವಿಡ್-19 ನಿಂದ ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು. ಕೋವಿಡ್-19 ರಿಂದಾಗುವ ಮೃತರ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡುವ ಸಂಬಂಧ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲು ಹಾಗೂ ಪ್ರತಿ ಮರಣ ಪ್ರಕರಣದ ಕುರಿತು ಖುದ್ದು ಪರಿಶೀಲನೆ ನಡೆಸಲು ನಿರ್ದೇಶಕರು, ಹಿಮ್ಸ್, ಹಾಸನ ರವರಿಗೆ ತಿಳಿಸಲಾಯಿತು.

- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳು ಮಾತನಾಡಿ ತಾಲ್ಲೂಕು ಆಸ್ಪತ್ರೆಯ ಸಬಲೀಕರಣ ಹಾಗೂ ಪ್ರತಿವಾರಕೊಮ್ಮೆ Expert Committee video conference ಸಭೆಯನ್ನು ನಡೆಸಲಾಗುತ್ತಿದೆ (ಪ್ರತಿ ಸೋಮವಾರ) ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ಸರಿಯಾದ ತರಬೇತಿ ನೀಡಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು ಹಾಗೂ ಮುಂದಿನ Expert Committee video conference ಸಭೆಯಲ್ಲಿ ತಾವು ಭಾಗವಹಿಸುವುದಾಗಿ ತಿಳಿಸಲಾಯಿತು.

- Microbiologist, VRDL, HIMS, Hassan ರವರು ಕೋವಿಡ್ ಲ್ಯಾಬ್‌ಗೆ Anti biogram machine ಒದಗಿಸಿಕೊಡಲು ಕೋರಿದರು. ಸದರಿ ಸಲಕರಣೆಯ ಅವಶ್ಯಕತೆ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ವರದಿ ಸಲ್ಲಿಸಲು ನಿರ್ದೇಶಕರು, ಹಿಮ್ಸ್, ಹಾಸನ ರವರಿಗೆ ಸೂಚಿಸಲಾಯಿತು. ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿರುವ ಕೋವಿಡ್ ಲ್ಯಾಬ್ ಗೆ ಅಗತ್ಯವಿರುವ ಸಲಕರಣೆಗಳ ಅವಶ್ಯಕತೆ ಬಗ್ಗೆ ತ್ವರಿತವಾಗಿ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ಸಿಎಸ್‌ಆರ್ ನಿಧಿಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಎಂದು ನಿರ್ದೇಶಕರು, ಹಿಮ್ಸ್, ಹಾಸನ ರವರಿಗೆ ತಿಳಿಸಲಾಯಿತು.

- ಜಿಲ್ಲೆಯ Dedicated Covid Hospital ನಲ್ಲಿರುವ ಕೋವಿಡ್ ಲ್ಯಾಬ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ಊಟೋಪಚಾರದ ವ್ಯವಸ್ಥೆಯನ್ನು ಜಿಲ್ಲಾಡಳಿತದ ವತಿಯಿಂದ ಕೊಡಿಸಿಕೊಡಲು ಕೋರಿದರು. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮವಹಿಸಲು ಜಿಲ್ಲಾಧಿಕಾರಿಗಲು, ಹಾಸನ ರವರಿಗೆ ತಿಳಿಸಲಾಯಿತು.

- ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಲಭ್ಯವಿರುವ ಹಾಸಿಗೆಗಳ ಮಾಹಿತಿ ಬಗ್ಗೆ ಪರಿಶೀಲಿಸಲಾಗಿ, ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೋವಿಡ್-19 ಚಿಕಿತ್ಸೆಗಾಗಿ ಮೀಸಲಿರಿಸಲಾಗಿದ್ದ ಒಟ್ಟು 400 ಹಾಸಿಗೆಗಳ ಪೈಕಿ 200 ಹಾಸಿಗೆಗಳನ್ನು ಕೋವಿಡೇತರ ಚಿಕಿತ್ಸೆಗಾಗಿ ಬಳಸಲಾಗುತ್ತಿದ್ದು, ಪ್ರಸ್ತುತ 200 ಕೋವಿಡ್ ಹಾಸಿಗೆಗಳ ಪೈಕಿ 52 ಹಾಸಿಗೆಗಳು ಭರ್ತಿಯಾಗಿರುತ್ತವೆ ಎಂದು ನಿರ್ದೇಶಕರು, ಹಿಮ್ಸ್, ಹಾಸನ ರವರು ಸಭೆಯ ಗಮನಕ್ಕೆ ತಂದರು. ಕೋವಿಡ್ ಪ್ರಕರಣಗಳು ಹೆಚ್ಚಾಗುವ ಸಂದರ್ಭದಲ್ಲಿ ಅವಶ್ಯ ಹಾಸಿಗೆಗಳು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳೊಂದಿಗೆ ತಯಾರಿರುವ ಬಗ್ಗೆ ಕಟ್ಟುನಿಟ್ಟಿನ ಕ್ರಮವಹಿಸಲು ಸೂಚಿಸಲಾಯಿತು.

- ಕೋವಿಡ್-19 ವಾಕ್ಸೀನೇಷನ್ ಕಾರ್ಯದ ಪ್ರಕ್ರಿಯೆ ಕುರಿತು ಪರಿಶೀಲಿಸಲಾಗಿ, ಕೋವಿಡ್ ವಾಕೀನೇಷನ್ ಸಂಬಂಧ ಸಕಲ ಸಿದ್ಧತೆಗಳನ್ನು ಕೈಗೊಂಡಿದ್ದು, ಈವರೆಗೆ ಒಟ್ಟು 12,174 Frontline worker ಗಳ ಲೈನ್‌ಲಿಸ್ಟ್ ಮಾಡಲಾಗಿರುತ್ತದೆ. ವಾಕ್ಸೀನೇಷನ್ ಸಂಬಂಧ ಜಿಲ್ಲೆಯಲ್ಲಿ ಒಟ್ಟು 115 Ice Lined Refrigerators ಮತ್ತು 115 De-freezer ಗಳ ಲಭ್ಯತೆಯಿದ್ದು, 1500 ಜನರು ಲಸಿಕೆ ಹಾಕುವವರು ಇರುತ್ತಾರೆ. ಈಲ್ಲೆಯಲ್ಲಿ ಒಟ್ಟು 78 cold boxes, 1962 vaccine carriers, 01 vaccine van ಮತ್ತು 142 stabilizer ಗಳ ಲಭ್ಯತೆ ಇರುತ್ತದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ, ಹಾಸನ ರವರು ಸಭೆಯ ಗಮನಕ್ಕೆ ತಂದರು.

- ಕೋವಿಡ್ ಲಸಿಕೆ ಬಂದಂತಹ ಸಂದರ್ಭದಲ್ಲಿ ಲಸಿಕೆ ನೀಡಲು ಜಿಲ್ಲೆಯಲ್ಲಿ ಕೋವಿಡ್ ಸಂಬಂಧ ಕಾರ್ಯನಿರತರಾಗಿರುವ ಕೋವಿಡ್ ವಾರಿಯರ್ಸ್‌ಗಳ ಪಟ್ಟಿಯನ್ನು ತಯಾರಿಟ್ಟುಕೊಳ್ಳುವ ಬಗ್ಗೆ ತುರ್ತು ಕ್ರಮವಹಿಸಲು ಹಾಗೂ ತಯಾರಿಸುವ ಪಟ್ಟಿಯಲ್ಲಿ ಕಂದಾಯ ಇಲಾಖೆ ಹಾಗೂ ಇತರೆ ಇಲಾಖೆಗಳಲ್ಲಿ ಕೋವಿಡ್ ಕಾರ್ಯದಲ್ಲಿ ತೊಡಗಿರುವವನ್ನು ತಪ್ಪದೇ ಪರಿಗಣಿಸಲು ಸೂಚಿಸಲಾಯಿತು.

- ಮುಂದುವರೆದು ಜಿಲ್ಲೆಯ ಮಳೆ ಪರಿಸ್ಥಿತಿಯನ್ನು ಪರಿಶೀಲಿಸಲಾಗಿ, ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ ರವರು ಮಾತನಾಡಿ ಜಿಲ್ಲೆಯಲ್ಲಿ ನವೆಂಬರ್ 24 ರವರೆಗೆ 1127.00 ಮಿ.ಮೀ. ವಾಡಿಕೆ ಮಳೆಯಾಗಬೇಕಾಗಿದ್ದು, 1145.00 ಮಿ.ಮೀ. ಮಳೆ ವಾಸ್ತವಿಕವಾಗಿ ಉಂಟಾಗಿದ್ದು, ಶೇ.2 ರಷ್ಟು ಹೆಚ್ಚು ಮಳೆಯಾಗಿರುತ್ತದೆ. ಜಿಲ್ಲೆಯಲ್ಲಿ ಬಿತ್ತನೆ ಮಾಡಿರುವ ಬೆಳೆಗಳು ಉತ್ತಮವಾಗಿದ್ದು, ಜನ-ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವು ಕೊರತೆ ಇರುವುದಿಲ್ಲ ಹಾಗೂ ಜಿಲ್ಲೆಯಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆ ಇರುವುದಿಲ್ಲ. ಜನ-ಜಾನುವಾರುಗಳಿಗೆ ಯಾವುದೇ ಕೊರತೆ ಉಂಟಾಗದಂತೆ ನಿಯಮಾನುಸಾರ ಕ್ರಮವಹಿಸಲು ಹಾಗೂ ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಪ್ರವಾಹ/ಅತಿವೃಷ್ಟಿಯನ್ನು ಸಮರ್ಪಕವಾಗಿ ಎದುರಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಮುಂಜಗ್ರತ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳಲು ತಿಳಿಸಲಾಯಿತು.

- 2020-21ನೇ ಸಾಲಿನ ಅತಿವೃಷ್ಟಿಯಿಂದ ಉಂಟಾಗಿರುವ ಬೆಳೆ ನಷ್ಟದ ಪ್ರಕರಣಗಳಿಗೆ ಸೂಕ್ತ ಪರಿಹಾರ ನೀಡುವ ಸಂಬಂಧ ಪರಿಹಾರ ತಂತ್ರಾಂಶದಲ್ಲಿ ಬೆಳೆ ನಷ್ಟದ ವಿವರಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಬೆಳೆ ನಷ್ಟದ ವಿವರಗಳನ್ನು ಸರ್ಕಾರದಿಂದ ನಿಗಧಿಪಡಿಸಿರುವ ಸಮಯದೊಳಗೆ ಅಳವಡಿಸಿ ಉತ್ತಮ ಪ್ರಗತಿ ಸಾಧಿಸಲು ನಿರ್ದೇಶನ ನೀಡಲಾಯಿತು.

- ನಂತರ ಜಿಲ್ಲಾಧಿಕಾರಿಗಳು, ಹಾಸನ ರವರು ಮಾತನಾಡಿ ಜಿಲ್ಲೆಯಲ್ಲಿ ಮೆಕ್ಕೆಜೋಳದ ಬೆಳೆಯ ಬೆಲೆ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಸದರಿ ಬೆಳೆಗೆ ಸೂಕ್ತ ಬೆಲೆ ನೀಡಲು ರೈತರು ಪ್ರತಿಭಟನೆ ನಡೆಸುತ್ತಿರುತ್ತಾರೆ. ಆದ್ದರಿಂದ ಮೆಕ್ಕೆಜೋಳದ ಬೆಳೆಗೆ ಬೆಂಬಲ ಬೆಲೆ ನಿಗಧಿಪಡಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ ಎಂದು ತಿಳಿಸಿದರು.

- ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪರಿಶೀಲಿಸಲಾಯಿತು. ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಒಟ್ಟು 530 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಸಂಬಂಧ ಬಹುಗ್ರಾಮ ಯೋಜನೆ ಕಾರ್ಯದಲ್ಲಿದ್ದು, ಜಿಲ್ಲೆಯಲ್ಲಿ ಯಾವುದೇ ಕುಡಿಯುವ ನೀರು ಸಮಸ್ಯೆ ಇರುವುದಿಲ್ಲವೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಸನ ರವರು ತಿಳಿಸಿದರು.

- ಅಪರ ಜಿಲ್ಲಾಧಿಕಾರಿಗಳು, ಹಾಸನ ರವರು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್ ಲಾಕ್‌ಡೌನ್ ಸಮಯಕ್ಕೂ ಮುಂಚೆ ಅಧಿಸೂಚನೆ ಹೊರಡಿಸಲಾಗಿದ್ದ ಗ್ರಾಮಲೆಕ್ಕಾಧಿಕಾರಿಗಳ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುವ ಬಗ್ಗೆ ನಿರ್ದೇಶನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸರ್ಕಾರಕ್ಕೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಯಿತು.

- ಕಾರ್ಯಪಾಲಕ ಇಂಜಿನಿಯರ್, ಚೆಸ್ಕಾಂ, ಹಾಸನ ರವರು 2020-21ನೇ ಸಾಲಿನ ಅತಿವೃಷ್ಟಿಯಿಂದ ಹಾನಿಯಾಗಿರುವ 1141 ವಿದ್ಯುತ್ ಕಂಬಗಳ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ಅನುದಾನದ ಅವಶ್ಯಕತೆ ಇದ್ದು, ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಿಕೊಡುವ ಬಗ್ಗೆ ಕೋರಿದರು. ಈ ಬಗ್ಗೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಯಿತು.

- ಹೊಳೆನರಸೀಪುರ ತಾಲ್ಲೂಕು ಕಛೇರಿಯಿಂದ ವಿಡಿಯೋ ಸಂವಾದದಲ್ಲಿ ಭಾಗವಹಿಸಿದ್ದ ಮಾನ್ಯ ಶಾಸಕರು, ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ರವರು ಮಾತನಾಡಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಆಗಸ್ಟ್-2020ರ ಮಾಹೆಯಲ್ಲಿ ಸುರಿದ ಭಾರಿ ಮಳೆಯಿಂದ ಮನೆ, ಬೆಳೆ ಹಾಗೂ ಮೂಲಭೂತ ಸೌಕರ್ಯ ಉಂಟಾಗಿದ್ದರೂ ಸಹ ಹೊಳೆನರಸೀಪುರ ತಾಲ್ಲೂಕನ್ನು ಪ್ರವಾಹಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ಕೈಬಿಟ್ಟಿದ್ದು, ಹೊಳೆನರಸೀಪುರ ತಾಲ್ಲೂಕನ್ನು ಪ್ರವಾಹಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ತಿಳಿಸಿದರು. ಜಿಲ್ಲಾಧಿಕಾರಿಗಳು, ಹಾಸನ ರವರು ಮಾತನಾಡಿ ಮಾನ್ಯರ ನಿರ್ದೇಶನದಂತೆ ಹೊಳೆನರಸೀಪುರ ತಾಲ್ಲೂಕನ್ನು ಆಗಸ್ಟ್-2020 ಮಾಹೆಯ ಪ್ರವಾಹಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಈಗಾಗಲೇ ಸಲ್ಲಿಸಲಾಗಿದ್ದು, ಮತ್ತೊಮ್ಮೆ ಸಲ್ಲಿಸುವುದಾಗಿ ತಿಳಿಸಿದರು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ನವೀನ್‌ರಾಜ್ ಸಿಂಗ್, ಭಾ.ಆ.ಸೇ.)
ಮಾನ್ಯ ಪ್ರಾದೇಶಿಕ ಆಯುಕ್ತರು,
ಬೆಂಗಳೂರು ವಿಭಾಗ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು.

ಶ್ರೀ ಮೊಹಮ್ಮದ್ ಮೊಹಸಿನ್, ಭಾ.ಆ.ಸೇ ಮಾನ್ಯ ರಾಜ್ಯ ಆಯುಕ್ತರು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಮತ್ತು ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:19-11-2020 ರಂದು ಬೆಳಗ್ಗೆ 10.00 ಗಂಟೆಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜರುಗಿದ ಗದಗ ಜಿಲ್ಲೆ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

ಹಾಜರಿದ್ದವರು:- ಹಾಜರಾತಿ ಲಗತ್ತಿಸಿದೆ.

ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಗಳು, ಮಾನ್ಯ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಸಭೆಯ ಅಧ್ಯಕ್ಷತೆ ವಹಿಸುವಂತೆ ಕೋರಿ, ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾಧಿಕಾರಿಗಳು,ಗದಗ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ,ಗದಗ, ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ಹಾಜರಿದ್ದ ಎಲ್ಲ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುವದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1) ಕಂದಾಯ ಇಲಾಖೆ:- ಗದಗ ಜಿಲ್ಲೆಯು ಒಟ್ಟು 7 ತಾಲೂಕುಗಳನ್ನು ಹೊಂದಿದ್ದು, ಆಗಷ್ಟ, ಸಪ್ಟೆಂಬರ ಹಾಗೂ ಅಕ್ಟೋಬರ ತಿಂಗಳುಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಿ ಬೆಳೆಗಳು ಹಾಳಾಗಿರುತ್ತವೆ. ಮಳೆಯಿಂದ ಹಾನಿಯಾದ ಬೆಳೆಗಳ ಕುರಿತು ಪರಿಹಾರ ತಂತ್ರಾಂಶದಲ್ಲಿ ಭರ್ತಿ ಮಾಡಲಾಗುತ್ತಿದ್ದು ಸಧ್ಯ ಶೇಕಡಾ 50% ರಷ್ಟು ಪರಿಹಾರ ಭರ್ತಿ ಮಾಡಲು ಕಾರ್ಯ ಪ್ರಗತಿಯಲ್ಲಿದ್ದು, ಬಾಕಿ ಉಳಿದವುಗಳನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದೆಂದು, ಬರ ಹಾಗೂ ಪ್ರವಾಹದಡಿ ಜಿಲ್ಲಾಡಳಿತದಲ್ಲಿ ಸಾಕಷ್ಟು ಅನುದಾನ ಇರುವುದಾಗಿ ಅಪರ ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

(ಕ್ರಮ: ಜಿಲ್ಲೆಯ ಎಲ್ಲಾ ತಹಶೀಲ್ದಾಗಳು)

ಕೋವಿಡ್-19 ಸಾಂಕ್ರಾಮಿಕ ಕಾಯಿಲೆ ಗದಗ ಜಿಲ್ಲೆಯಲ್ಲಿ ಕ್ರಮೇಣ ಕಡಿಮೆಯಾಗುತ್ತಿದ್ದು, ಕೋವಿಡ್ ರೋಗಿಗಳ ಆರೈಕೆಗಾಗಿ ಜಿಲ್ಲೆಯ ಎಲ್ಲ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಮೀಸಲಿರಿಸಲಾಗಿದೆ. ಸರ್ಕಾರದ ಮಾರ್ಗಸೂಚಿಗಳನುಸಾರ ಗಂಟಲುದ್ರವ ಪರೀಕ್ಷೆ ಮಾಡಿ ಮನೆ ಹಾಗೂ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕೋವಿಡ್-19 ನಿಯಂತ್ರಣಕ್ಕೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು ಯಾವುದೇ ಸಮಸ್ಯೆಗಳಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

(ಕ್ರಮ: ನಿರ್ದೇಶಕರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಹಾಗೂ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಗದಗ.)

2) ಕೋವಿಡ್-19 ಕಾಯಿಲೆ ನಿಯಂತ್ರಣ ಕುರಿತು:- ಮಾನ್ಯ ಅಧ್ಯಕ್ಷರು ಮಾತನಾಡಿ ಗದಗ ಜಿಲ್ಲೆಯಲ್ಲಿ ಕೋವಿಡ್-19 ಕಾಯಿಲೆ ಕ್ರಮೇಣ ನಿಯಂತ್ರಣಕ್ಕೆ ಬರುತ್ತಿದ್ದು, ತೀವ್ರ ಚಳಿಯ ದಿನಗಳಲ್ಲಿ ಕಾಯಿಲೆ ಮತ್ತೆ ಹೆಚ್ಚಾಗುವ ಸಾಧ್ಯತೆಗಳಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಸಾರ್ವಜನಿಕರು ಮಾಸ್ಕ, ಸ್ಯಾನಿಟೈಜರ ಬಳಸುವ ಹಾಗೂ ಅಂತರ ಕಾಪಾಡುವ ಕುರಿತು ಆರೋಗ್ಯ ಇಲಾಖೆಯಿಂದ ಜಾಗೃತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು. ಕೋವಿಡ್-19 ಕಾಯಿಲೆಗಾಗಿ ಮನೆಯಲ್ಲಿಯೇ ಆರೈಕೆ ಪಡೆಯುವವರಿಗೆ ವೈದ್ಯರು ನಿಯಮಿತವಾಗಿ ಅವರ ಮನೆಗಳಿಗೆ ಭೇಟಿ ನೀಡಿ ತಪಾಸಣೆ ಮಾಡಿ ಅವಶ್ಯಕವಿರುವ ಮಾತ್ರೆಗಳ ವಿತರಣೆ ಮಾಡುವುದು. ಆನಲೈನದಲ್ಲಿ ಚಿಕಿತ್ಸೆ ಪಡೆಯುವವರಿಗೆ ವೈದ್ಯರು 24*7 ಲಭ್ಯವಿದ್ದು ಔಷಧಿಗಳ ಕುರಿತು ಮಾಹಿತಿ ನೀಡುವಂತ ವ್ಯವಸ್ಥೆಯನ್ನು ಜಿಲ್ಲಾ ಆರೋಗ್ಯಾಧಿಕಾರಿಗಳು ಮಾಡುವಂತೆ ಸೂಚಿಸಲಾಯಿತು.

(ಕ್ರಮ: ಜಿಲ್ಲಾ ಆರೋಗ್ಯಾಧಿಕಾರಿಗಳು,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,ಗದಗ)

**3)ಪದವಿ ಕಾಲೇಜುಗಳಲ್ಲಿ ಕೋವಿಡ್-19 ಮಾರ್ಗಸೂಚಿಗಳನ್ನು ಅನುಸರಿಸುವ ಕುರಿತು:-** ದೀರ್ಘಾವದಿಯ ನಂತರ ಕಾಲೇಜುಗಳು ಪ್ರಾರಂಭವಾಗಿದ್ದು, ನಿಯಮಿತವಾಗಿ ಕಾಲೇಜುಗಳಲ್ಲಿ ಸ್ಯಾನಿಟೈಜ ಮಾಡುವುದು ಹಾಗೂ ವಿದ್ಯಾರ್ಥಿಗಳು ಮಾಸ್ಕ ಧರಿಸುವ ಕುರಿತು ನಿಗಧಿತ ಅಂತರ ಕಾಪಾಡುವ ಬಗ್ಗೆ ಕಾಲೇಜುಗಳಲ್ಲಿ ತಿಳುವಳಿಕೆ ನೀಡುವುದು. ಕುಡಿಯುವ ನೀರು, ಶೌಚಾಲಯಗಳು ಸುವ್ಯವಸ್ಥಿತವಾಗಿರುವ ಕುರಿತು ಆಯಾ ಕಾಲೇಜು ಪ್ರಾಂಶುಪಾಲರು ನಿಗಾ ವಹಿಸುವುದು. ಕಾಲೇಜುಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಗಂಟಲುದ್ರವ ಪರೀಕ್ಷೆಯನ್ನು ಆರೋಗ್ಯ ಇಲಾಖೆಯವರು 24 ತಾಸಿನೊಳಗೆ ವರದಿ ನೀಡಲು ಜಿಲ್ಲಾ ಆರೋಗ್ಯಾಧಿಕಾರಿಗಳು ಕ್ರಮ ವಹಿಸುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿದರು. ಮುಂದುವರೆದು ಜಿಲ್ಲಾ ಆರೋಗ್ಯಾಧಿಕಾರಿಗಳು ಗದಗ ಜಿಲ್ಲೆಯ ಎಲ್ಲ ತಾಲೂಕಿನ ಪದವಿಕಾಲೇಜುಗಳ ಪ್ರಾಂಶುಪಾಲರು ಹಾಗೂ ತಾಲೂಕು ವೈದ್ಯಾಧಿಕಾರಿಗಳೊಂದಿಗೆ ಸಭೆಯನ್ನು ಜರುಗಿಸಿ ಗಂಟಲು ದ್ರವ ಪರೀಕ್ಷೆ ತ್ವರಿತಗತಿಯಲ್ಲಿ ಮಾಡಲು ಕ್ರಮ ವಹಿಸುವುದು ಕೋವಿಡ್-19 ಬಗ್ಗೆ ಕಾಲೇಜುಗಳಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಜಿಲ್ಲೆಯ ಎಲ್ಲ ಕಾಲೇಜುಗಳಿಗೆ ಸುತ್ತೋಲೆಯನ್ನು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಗದಗ, ಜಿಲ್ಲಾ ಆರೋಗ್ಯಾಧಿಕಾರಿಗಳು, ಆರೋಗ್ಯ ಇಲಾಖೆ,ಗದಗ/ ಪದವಿ ಕಾಲೇಜ ನೋಡಲ್ ಪ್ರಾಂಶುಪಾಲರು, ಸರ್ಕಾರಿ ಡಿಗ್ರಿ ಕಾಲೇಜು, ಗದಗ)**

**4)ನಮೂನೆ ನಂ-53ರಲ್ಲಿ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿಗೊಳಿಸುವ ಕುರಿತು:-** ಕರ್ನಾಟಕ ಭೂ ಕಂದಾಯ 1964ರ ಕಲಂ 94ಬಿ ಪ್ರಕಾರ ನಮೂನೆ-53ರಲ್ಲಿ ಗದಗ ತಾಲೂಕಿನಲ್ಲಿ ಬಾಕಿ ಇರುವ 4 ಪ್ರಕರಣಗಳನ್ನು ಸಂಬಂಧಪಟ್ಟ ಸಮಿತಿ ಸಭೆಯಲ್ಲಿ ಪ್ರಕರಣವನ್ನು ವಿಲೇವಾರಿಗೊಳಿಸಲು ತಹಶೀಲ್ದಾರ,ಗದಗರವರು ಕ್ರಮ ವಹಿಸುವಂತೆ ಸೂಚಿಸಲಾಯಿತು. ಮೇಲ್ಮನವಿಯಾಗಿ ಉಪ ವಿಭಾಗಾಧಿಕಾರಿಗಳಿಗೆ ಸಲ್ಲಿಸಿದಲ್ಲಿ ತ್ವರಿತವಾಗಿ ವಿಲೇವಾರಿಗೊಳಿಸಲು ಉಪ ವಿಭಾಗಾಧಿಕಾರಿಗಳು ಕ್ರಮ ವಹಿಸುವಂತೆ ಸೂಚಿಸಲಾಯಿತು.

**(ಕ್ರಮ: ಉಪ ವಿಭಾಗಾಧಿಕಾರಿಗಳು,ಗದಗ /ತಹಶೀಲ್ದಾರ,ಗದಗ)**

**5)ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಲು ಖರ್ಚಾದ ಅನುದಾನ ಬಳಕೆ ಪ್ರಮಾಣಪತ್ರ ಸಲ್ಲಿಸುವ ಕುರಿತು:-** ಜಿಲ್ಲೆಯಲ್ಲಿ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಲು ಮುಂಡರಗಿ ತಾಲೂಕಿನ ಅತ್ತಿಕಟ್ಟಿ ಗ್ರಾಮದಲ್ಲಿ 56ಎ.0ಗು ಹಾಗೂ ನರಗುಂದ ತಾಲೂಕ ಚಿಕ್ಕನರಗುಂದ ಗ್ರಾಮದ 7ಎ. 26ಗುಂ ಇನ್ನು ಒಟ್ಟು 63ಎ.27 ಗುಂ ತೆರವುಗೊಳಿಸಲು ಬಾಕಿ ಇರುವುದಾಗಿ ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಿ ಬೇಲಿ ಹಾಕಲು ಸರ್ಕಾರದಿಂದ ಈಗಾಗಲೇ ಬಿಡುಗಡೆಯಾದ ಅನುದಾನವು ಬಳಕೆಯಾದ ಕುರಿತು ಅನುದಾನ ಬಳಕೆ ಪ್ರಮಾಣಪತ್ರಗಳನ್ನು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಸಲು ತಹಶೀಲ್ದಾರರು ಕ್ರಮ ವಹಿಸುವಂತೆ ಸೂಚಿಸಲಾಯಿತು.

**(ಕ್ರಮ: ಎಲ್ಲ ತಹಶೀಲ್ದಾರರು, ಗದಗ ಜಿಲ್ಲೆ)**

**6)ರುದ್ರಭೂಮಿ ಜಮೀನು:-** ರುದ್ರಭೂಮಿಗಾಗಿ ಒಟ್ಟು 40 ಗ್ರಾಮಗಳಲ್ಲಿ ಖಾಸಗಿ ಜಮೀನು ಖರೀದಿಸಲು ರೂ. 2,10,00,000/- ಅನುದಾನ ಬಿಡುಗಡೆಗಾಗಿ ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ರುದ್ರಭೂಮಿ ಉದ್ದೇಶಕ್ಕಾಗಿ ಖಾಸಗಿ ಜಮೀನುಗಳನ್ನು ಖರೀದಿಸುವ ಬದಲು ಸರ್ಕಾರಿ ಜಮೀನುಗಳನ್ನು ರುದ್ರಭೂಮಿ ಉದ್ದೇಶಕ್ಕಾಗಿ ಮೀಸಲಿರಿಸಲು ತಹಶೀಲ್ದಾರರು ಕ್ರಮ ವಹಿಸುವಂತೆ ಸೂಚಿಸಲಾಯಿತು. ಈಗಾಗಲೇ ಖಾಸಗಿ ಜಮೀನುಗಳಲ್ಲಿ ಶವಸಂಸ್ಕಾರ ಮಾಡುತ್ತಿದ್ದಲ್ಲಿ ಅದೇ ಜಮೀನನ್ನು ದಾನವಾಗಿ ಅಥವಾ ಖರೀದಿಸಲು ಕೂಡಾ ತಹಶೀಲ್ದಾರರು ಕ್ರಮ ವಹಿಸುವುದು ಸೂಕ್ತವೆಂದು ತಿಳಿಸಿದರು.

**(ಕ್ರಮ: ಎಲ್ಲ ತಹಶೀಲ್ದಾರರು, ಗದಗ ಜಿಲ್ಲೆ/ ಉಪ ವಿಭಾಗಾಧಿಕಾರಿಗಳು,ಗದಗ)**

7)ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸಲ್ಲಿಸಬೇಕಾದ ಪ್ರಕರಣಗಳು:- ಜಿಲ್ಲೆಯಲ್ಲಿ 31 ಗ್ರಾಮಗಳು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಬಾಕಿ ಇದ್ದು, ಪ್ರಾಥಮಿಕ ಅಧಿಸೂಚನೆಗಾಗಿ ಸರ್ಕಾರಕ್ಕೆ ಒಂದು ಪ್ರಕರಣ ಸಲ್ಲಿಸಿ, ಅಧಿಸೂಚನೆ ಹೊರಡಿಸಲು ಒಂದು ಪ್ರಕರಣ ಬಾಕಿ , ಪ್ರಾಥಮಿಕ ಅಧಿಸೂಚನೆಗಾಗಿ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ಸಲ್ಲಿಸಲು ತಹಶೀಲ್ದಾರ,ಗದಗ-4, ಮುಂಡರಗಿ-8, ಶಿರಹಟ್ಟಿ-1, ಗಜೇಂದ್ರಗಡ-2 ಹಾಗೂ ಲಕ್ಷ್ಮೇಶ್ವರ-4 ಹೀಗೆ ಒಟ್ಟು 19 ಪ್ರಕರಣಗಳು ಬಾಕಿ ಇರುವುದಾಗಿ ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ತಹಶೀಲ್ದಾರರಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ತಹಶೀಲ್ದಾರರು ಸೂಕ್ತ ದಾಖಲಾತಿಗಳೊಂದಿಗೆ ಒಂದು ವಾರದೊಳಗಾಗಿ ಪ್ರಸ್ತಾವನೆಗಳನ್ನು ಜಿಲ್ಲಾದಿಕಾರಿಗಳಿಗೆ ಸಲ್ಲಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಯಿತು.

(ಕ್ರಮ: ತಹಶೀಲ್ದಾರ,ಗದಗ,ಮುಂಡರಗಿ,ರೋಣ,ಶಿರಹಟ್ಟಿ,ಗಜೇಂದ್ರಗಡ, ಲಕ್ಷ್ಮೇಶ್ವರ)

8)ಸಕಾಲ ಯೋಜನೆ:- ಸಕಾಲ ಯೋಜನೆಯಡಿ ವಿವಿಧ ಇಲಾಖೆಗಳಿಂದ ನೀಡಲಾಗುವ ಸೇವೆಗಳನ್ನು ನಿಗದಿಪಡಿಸಿದ ಅವಧಿಯೊಳಗೆ ನೀಡಲಾಗುತ್ತಿದ್ದು, ಈ ಕುರಿತು ಪ್ರತಿವಾರ ಎಲ್ಲ ತಹಶೀಲ್ದಾರರು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿ ಸಕಾಲದೊಳಗೆ ಪ್ರಕರಣಗಳನ್ನು ವಿಲೇವಾರಿಗೊಳಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುತ್ತಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಸಕಾಲ ಯೋಜನೆಯಡಿ ಅವಧಿ ಮೀರಿ ಬಾಕಿ ಇರುವ ಪೋಡಿ ಪ್ರಕರಣಗಳು, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಕೂಡಲೇ ವಿಲೇವಾರಿಗೊಳಿಸಲು ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ, ಜಿಲ್ಲಾ ಸಮಾಲೋಚಕರಿಗೆ ಸೂಚಿಸಲಾಯಿತು.

(ಕ್ರಮ: ಉಪ ನಿರ್ದೇಶಕರು, ಭೂಮಾಪನ ಇಲಾಖೆ,ಗದಗ/ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ,ಗದಗ ಹಾಗೂ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು ಮತ್ತು ಮುಖ್ಯಾಧಿಕಾರಿಗಳು, ಜಿಲ್ಲಾ ಸಕಾಲ ಸಮಾಲೋಚಕರು, ಗದಗ)

9)ಇಂದಿರಾ ಕ್ಯಾಂಟಿನಗಳನ್ನು ತ್ವರಿತವಾಗಿ ಪ್ರಾರಂಭಿಸುವ ಕುರಿತು:- ಗದಗ ಜಿಲ್ಲೆಗೆ 6 ಇಂದಿರಾ ಕ್ಯಾಂಟಿನಗಳನ್ನು ಪ್ರಾರಂಭಿಸಲು ಸರ್ಕಾರದಿಂದ ನಿರ್ದೇಶನಗಳಿದ್ದು, ಇವುಗಳಲ್ಲಿ ಮುಂಡರಗಿ ಹಾಗೂ ಶಿರಹಟ್ಟಿ ಪಟ್ಟಣದಲ್ಲಿ 2 ಇಂದಿರಾ ಕ್ಯಾಂಟಿನಗಳು ಕಾರ್ಯ ನಿರ್ವಹಿಸುತ್ತಿವೆ. ಗದಗ ಹಾಗೂ ರೋಣ ಪಟ್ಟಣದಲ್ಲಿ ನಿವೇಶನದ ಕುರಿತು ತಕರಾರು ಇರುವುದರಿಂದ ಇನ್ನು 2 ಕ್ಯಾಂಟಿನಗಳು ಪ್ರಾರಂಭವಾಗಿರುವುದಿಲ್ಲವೆಂದು ಕಾರ್ಯನಿರ್ವಾಹಕ ಇಂಜನೀಯರ, ಜಿಲ್ಲಾ ನಗರಾಭಿವೃದ್ಧಿ ಕೋಶ,ಗದಗರವರು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಇಂದಿರಾ ಕ್ಯಾಂಟಿನಗಳನ್ನು ಪ್ರಾರಂಭಿಸಿರುವುದು ಶ್ರಮಿಕರು, ಹಾಗೂ ಕಡುಬಡವರಿಗೆ ಕಡಿಮೆ ದರದಲ್ಲಿ ಉಪಾಹಾರವನ್ನು ಒದಗಿಸುವುದು ಸರ್ಕಾರದ ಉದ್ದೇಶವಾಗಿದ್ದು, ಕಾರಣ ಗದಗ ನಗರದಲ್ಲಿ ಶ್ರಮಿಕರು ಹಾಗೂ ಬಡವರು ಹೆಚ್ಚಿರುವ ಎ.ಪಿ.ಎಂ.ಸಿ. ಯಾರ್ಡ ಹಾಗೂ ರೋಣ ನಗರದಲ್ಲಿ ಬಸಸ್ಟಾಂಡ ಹತ್ತಿರದಲ್ಲಿ ಇಂದಿರಾ ಕ್ಯಾಂಟಿನಗಳನ್ನು ತ್ವರಿತವಾಗಿ ಪ್ರಾರಂಭಿಸಲು ಮುಖ್ಯಾಧಿಕಾರಿಗಳು ಕ್ರಮವಹಿಸಿ ಸಂಬಂಧಪಟ್ಟ ತಹಶೀಲ್ದಾರರು ನಿವೇಶನಗಳನ್ನು ಒದಗಿಸಲು ಸೂಕ್ತ ಕ್ರಮ ವಹಿಸುವಂತೆ ಸೂಚಿಸಲಾಯಿತು.

( ಕ್ರಮ: ಪೌರಾಯುಕ್ತರು, ಗದಗ-ಬೆಟಗೇರಿ ನಗರಸಭೆ/ ಮುಖ್ಯಾಧಿಕಾರಿಗಳು, ಪುರಸಭೆ,ರೋಣ/ ತಹಶೀಲ್ದಾರ,ಗದಗ ಹಾಗೂ ರೋಣ)

10)ನಗರಸ್ಥಳೀಯ ಸಂಸ್ಥೆಗಳ ವಿವಿಧ ಯೋಜನೆಗಳಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಕುರಿತು:- ಮಾನ್ಯ ಅಧ್ಯಕ್ಷರು ಮಾತನಾಡಿ, 14ನೇ ಹಣಕಾಸು ಯೋಜನೆಯಡಿ ಬಾಕಿ ಇರುವ 24 ಕಾಮಗಾರಿಗಳು ಹಾಗೂ ಸ್ವಚ್ಛ ಭಾರತ

(ನಗರ) ಯೋಜನೆಯಡಿ ಬಾಕಿ ಇರುವ 38 ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಕ್ರಮ ವಹಿಸುವಂತೆ ಕಾಮಗಾರಿಯ ಗುಣಮಟ್ಟ ಹಾಗೂ ಕಾಮಗಾರಿ ಪೂರ್ಣಗೊಳಿಸುವ ಕುರಿತು ಕಾರ್ಯನಿರ್ವಾಹಕ ಇಂಜನೀಯರ್, ಜಿಲ್ಲಾ ನಗರಾಭಿವೃದ್ಧಿ ಕೋಶರವರು ಮೇಲ್ವಿಚಾರಣೆ ನಡೆಸುವಂತೆ ಸೂಚಿಸಲಾಯಿತು.

**(ಕ್ರಮ ಕಾರ್ಯನಿರ್ವಾಹಕ ಇಂಜನೀಯರ, ಜಿಲ್ಲಾ ನಗರಾಭಿವೃದ್ಧಿ ಕೋಶ,ಗದಗ/ ಎಲ್ಲ ಮುಖ್ಯಾಧಿಕಾರಿಗಳು, ಪುರಸಭೆ ಹಾಗೂ ಪಟ್ಟಣ ಪಂಚಾಯತ, ಗದಗ ಜಿಲ್ಲೆ)**

**11)ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮನೆಗಳ ನಿರ್ಮಾಣ ಪ್ರಗತಿ ವಿವರ:-** ಗದಗಜಿಲ್ಲೆಯಲ್ಲಿ ವಾರ್ಷಿಕ 11140 ಗುರಿಗೆ 6845 ಮನೆಗಳಿಗೆ ಅನುಮೋದನೆಯಾಗಿ 2475 ಮನೆಗಳು ಪೂರ್ಣಗೊಂಡು 792 ಮನೆಗಳ ಕಾಮಗಾರಿ ಪ್ರಗತಿಯಲ್ಲಿದ್ದು, ಇನ್ನು 3598 ಮನೆಗಳ ಕಾಮಗಾರಿ ಪ್ರಾರಂಭಿಸಿರುವುದಿಲ್ಲವೆಂದು ಕಾರ್ಯನಿರ್ವಾಹಕ ಇಂಜನೀಯರ, ಜಿಲ್ಲಾ ನಗರಾಭಿವೃದ್ಧಿ ಕೋಶರವರು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಪ್ರಗತಿಯಲ್ಲಿರುವ ಮನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಹಾಗೂ ಇನ್ನು ಕಾಮಗಾರಿ ಪ್ರಾರಂಭವಾಗದೇ ಇರುವ ಮನೆಗಳನ್ನು ಫಲಾನುಭವಿಗಳ ಮನವೊಲಿಸಿ ಮನೆಗಳ ಕಾಮಗಾರಿಗಳನ್ನು ಪ್ರಾರಂಭಿಸಲು ಮುಖ್ಯಾಧಿಕಾರಿಗಳು ಹಾಗೂ ಪೌರಾಯುಕ್ತರು ಕ್ರಮವಹಿಸುವಂತೆ ಸೂಚಿಸಲಾಯಿತು.

**(ಕ್ರಮ:ಪೌರಾಯುಕ್ತರು,ಗದಗ-ಬೆಟಗೇರಿ ನಗರಸಭೆ/ ಎಲ್ಲ ಮುಖ್ಯಾಧಿಕಾರಿಗಳು, ಪುರಸಭೆ,ಪಟ್ಟಣ ಪಂಚಾಯತ,ಗದಗ ಜಿಲ್ಲೆ)**

**12)ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ:-** ಗದಗ ಜಿಲ್ಲೆಯಲ್ಲಿ ಅಂತ್ಯೋದಯ ಹಾಗೂ ಬಿಪಿಎಲ್ ಯೋಜನೆಯಡಿ ಒಟ್ಟು 2,26,156 ಕಾರ್ಡುಗಳಿದ್ದು ಕೋವಿಡ್-19 ರ ಪ್ರಯುಕ್ತ ಲಾಕಡೌನ ಅವಧಿಯಲ್ಲಿ ಪಡಿತರ ಚೀಟಿದಾರರಿಗೆ ಉಚಿತವಾಗಿ ಪಡಿತರ ವಿತರಣೆ ಮಾಡಿರುವುದಾಗಿ ಹಾಗೂ ಪ್ರತಿತಿಂಗಳು ನಿಯಮಿತವಾಗಿ ಪಡಿತರ ಪೂರೈಸಲಾಗುತ್ತಿದೆಯೆಂದು ಉಪ ನಿರ್ದೇಶಕರು, ಆಹಾರ ಇಲಾಖೆರವರು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಆರ್ಥಿಕವಾಗಿ ಹಿಂದುಳಿದವರಿಗೆ ನೀಡಲಾಗುವ ಪಡಿತರ ಧಾನ್ಯಗಳು ಪ್ರತಿತಿಂಗಳು ನಿಯಮಿತವಾಗಿ ವಿತರಣೆಯಾಗುತ್ತಿರುವ ಕುರಿತು ಅಹಾರ ಇಲಾಖೆಯ ಅಧಿಕಾರಿಗಳು ಪಡಿತರ ವಿತರಣೆ ಅಂಗಡಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಖಚಿತಪಡಿಸಿಕೊಳ್ಳುವಂತೆ ಸೂಚಿಸಲಾಯಿತು. ಈ ಕುರಿತು ಉಪ ನಿರ್ದೇಶಕರು ಮೇಲ್ವಿಚಾರಣೆ ನಡೆಸುವಂತೆ ಸೂಚಿಸಲಾಯಿತು.

**(ಕ್ರಮ: ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ,ಗದಗ)**

**13)ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳನ್ನು ಸರ್ಕಾರದ ಉದ್ದೇಶಕ್ಕೆ ನೀಡುವ ಕುರಿತು:-** ಗದಗ ಜಿಲ್ಲೆಯಲ್ಲಿ 1998 ರಲ್ಲಿ ಪ್ರಾಧಿಕಾರ ರಚನೆಯಾಗಿದ್ದು, ಪ್ರಾಧಿಕಾರದಲ್ಲಿ 230 ನಿವೇಶನಗಳು ಲಭ್ಯವಿದ್ದು, 82 ಮಂಜೂರಿಯಾಗಿದ್ದು ಇನ್ನು 149 ನಿವೇಶನಗಳು ಹಂಚಿಕೆಗಾಗಿ ಬಾಕಿ ಉಳಿದಿರುವುದಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ,ಗದಗರವರು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿರುವ ನಿವೇಶನಗಳನ್ನು ಸರ್ಕಾರಿ ಉದ್ದೇಶಕ್ಕಾಗಿ ನೀಡುವ ಕುರಿತು ನಿರ್ದೇಶನಗಳಿದ್ದರೂ ಕೂಡಾ ನಿವೇಶನಗಳನ್ನು ಸರಿಯಾಗಿ ಹಂಚಿಕೆ ಮಾಡದೇ ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಕಾರಣ ಅಂಗನವಾಡಿ ಕಟ್ಟಡಗಳು, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವಸತಿ ನಿಲಯಗಳಿಗಾಗಿ ಅವಶ್ಯವಿರುವ ಹಾಗೂ ಇನ್ನುಳಿದ ಎಲ್ಲ ಇಲಾಖೆಗಳಿಗೆ ಅವಶ್ಯವಿರುವ ನಿವೇಶನಗಳನ್ನು ನೀಡಲು ಆಯುಕ್ತರು ಕ್ರಮ ವಹಿಸುವುದು. ನಗರಾಭಿವೃದ್ಧಿ

ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯಗಳ ನಿವೇಶನಗಳ ಮಾಹಿತಿಯನ್ನು ಮುಂದಿನ ಸಭೆಗೆ ನೀಡುವಂತೆ ಸೂಚಿಸಲಾಯಿತು.

(ಕ್ರಮ: ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ,ಗದಗ/ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,ಗದಗ/ಉಪ ನಿರ್ದೇಶಕರು, ಸಮಾಜ ಕಲ್ಯಾಣ/ಹಿಂದುಳಿದ ವರ್ಗಗಳ ಕಲ್ಯಾಣ/ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,ಗದಗ)

14)ಗ್ರಾಮೀಣ ಪ್ರದೇಶಗಳ ಬಯಲು ಬಹಿರ್ದೇಸೆ ಮುಕ್ತಪ್ರದೇಶ ( ಒ.ಡಿ.ಎಫ್.) ಪ್ರಗತಿ:- ಗದಗ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತಗಳು ಬಯಲು ಬಹಿರ್ದೇಸೆ ಮುಕ್ತಪ್ರದೇಶಗಳೆಂದು ಘೋಷಣೆಯಾಗಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,ಜಿಲ್ಲಾ ಪಂಚಾಯತ, ಗದಗರವರು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಒ.ಡಿ.ಎಫ್. ಘೋಷಣೆಯಾಗಿರುವ ಕುರಿತು ಬರೀ ಘೋಷಣೆಯಾಗದೇ ವಾಸ್ತವಿಕವಾಗಿ ಎಲ್ಲ ಪ್ರದೇಶಗಳಲ್ಲಿ ಮುಕ್ತವಾಗಿರುವ ಕುರಿತು ಸ್ಥಳೀಯ ಮಟ್ಟದಲ್ಲಿ ಪರಿಶೀಲನೆ ನಡೆಸಿ ಖಚಿತಪಡಿಸಿಕೊಳ್ಳುವಂತೆ ಸೂಚಿಸಲಾಯಿತು. ಒ.ಡಿ.ಎಫ್. ಸರಿಯಾಗಿ ನಿರ್ವಹಣೆಯಾಗಿರುವ ಕುರಿತು ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಗುರಿಯನ್ನು ನಿಗದಿಪಡಿಸುವಂತೆ ಹಾಗೂ ಖಚಿತವಾದ ಮಾಹಿತಿ ಪಡೆಯಲು ಗ್ರಾಮೀಣ ಪ್ರದೇಶಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸುವಂತೆ ಸೂಚಿಸಲಾಯಿತು.

(ಕ್ರಮ:ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ,ಗದಗ/ ಎಲ್ಲ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ಗದಗ ಜಿಲ್ಲೆ)

15)ಬೆಳೆಹಾನಿ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸುವ ಕುರಿತು:- ಕಳೆದ ಆಗಷ್ಟ, ಸಪ್ಟೆಂಬರ ಹಾಗೂ ಅಕ್ಟೋಬರ ಮಾಹೆಗಳಲ್ಲಿ ಸುರಿದ ಭಾರಿ ಮಳೆಯಿಂದ ಹಾನಿಯಾದ ಬೆಳೆಗಳಿಗೆ ಪರಿಹಾರ ನೀಡುವ ಕುರಿತಂತೆ ಪರಿಹಾರ ತಂತ್ರಾಂಶದಲ್ಲಿ ಮಾಹಿತಿಯನ್ನು ದಾಖಲಿಸುವ ಕುರಿತು ಈಗಾಗಲೇ ಶೇಕಡಾ 50% ರಷ್ಟು ಪ್ರಗತಿಯಾಗಿರುವುದಾಗಿ ಅಪರ ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಪರಿಹಾರ ತಂತ್ರಾಂಶದಲ್ಲಿ ಬೆಳೆಹಾನಿಯನ್ನು ದಾಖಲಿಸುವುದನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ತಹಶೀಲ್ದಾರರು ಕ್ರಮ ವಹಿಸುವಂತೆ ಸೂಚಿಸಲಾಯಿತು.

(ಕ್ರಮ: ಎಲ್ಲ ತಹಶೀಲ್ದಾರರು, ಗದಗ ಜಿಲ್ಲೆ)

16)ಆಯುಷ್ಮಾನ ಭಾರತ ಆರೋಗ್ಯ ಕರ್ನಾಟಕ :- ಜಿಲ್ಲಾ ಆರೋಗ್ಯಾಧಿಕಾರಿಗಳು ಮಾತನಾಡಿ 15-11-2018 ರಿಂದ ಆಯುಷ್ಮಾನ ಭಾರತ ಯೋಜನೆ ಜಾರಿಯಾಗಿದ್ದು, ಬಿ.ಪಿ.ಎಲ್ ಚೀಟಿದಾರರು ಉಚಿತವಾಗಿ ಹಾಗೂ ಎ.ಪಿ.ಎಲ್ ಪಡಿತರ ಚೀಟಿದಾರರು 1.5 ಲಕ್ಷದವರೆಗೆ ಉಚಿತ ಚಿಕಿತ್ಸೆ ಪಡೆಯಬಹುದಾಗಿದೆ. ಇಲ್ಲಿಯವರೆಗೆ ಗದಗ ಜಿಲ್ಲೆಯಲ್ಲಿ ಸುಮಾರು 30,000 ಕಾರ್ಡುಗಳ ವಿತರಣೆಯಾಗಿರುವುದಾಗಿ ಸಭೆಗೆ ಮಾಹಿತಿ ನಿಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಜಿಲ್ಲೆಯಲ್ಲಿರುವ ಜನಸಂಖ್ಯೆಗೆ ತಕ್ಕಂತೆ ಕಾರ್ಡುಗಳ ವಿತರಣೆಯಾಗಿರುವುದಿಲ್ಲ. ಸಾರ್ವಜನಿಕರ ಆರೋಗ್ಯ ರಕ್ಷಣೆಗಾಗಿ ಜಾರಿಗೆ ತಂದಿರುವ ಯೋಜನೆಯು ಜಿಲ್ಲೆಯಲ್ಲಿ ಸಕಾರಾತ್ಮಕವಾಗಿ ಜಾರಿಯಾಗಿರುವುದಿಲ್ಲ. ಆರೋಗ್ಯ ಸೌಲಭ್ಯಗಳನ್ನು ಪಡೆಯಲು ಯೋಜನೆಯ ಕಾರ್ಡ ಅವಶ್ಯವಾಗಿದ್ದು, ಕಾರಣ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಚಾರ ಕೈಗೊಂಡು, ತಾಲೂಕು ಆಸ್ಪತ್ರೆಗಳಿಗೆ ಕಾರ್ಡಗಳನ್ನು ನೀಡಲು ಗುರಿ ನಿಗದಿಪಡಿಸಿ ಹೆಚ್ಚಿನ ಪ್ರಮಾಣದಲ್ಲಿ ಯೋಜನೆಯ ಕಾರ್ಡಗಳ ವಿತರಣೆಗೆ ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಜಿಲ್ಲಾ ಆರೋಗ್ಯಾಧಿಕಾರಿಗಳು, ಆರೋಗ್ಯ ಇಲಾಖೆ,ಗದಗ )

**17)ಖಾಲಿ ಇರುವ ಆಶಾ ಕಾರ್ಯಕರ್ತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು**:- ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಗೆ ಒಟ್ಟು 767 ಆಶಾ ಕಾರ್ಯಕರ್ತರ ನೇಮಕಾತಿಗೆ ಅನುಮೋದನೆ ಇದ್ದು, ಸದ್ಯಕ್ಕೆ 16 ಆಶಾ ಕಾರ್ಯಕರ್ತರ ಹುದ್ದೆಗಳು ಖಾಲಿ ಇರುವುದಾಗಿ ಜಿಲ್ಲಾ ಆರೋಗ್ಯಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಆರೋಗ್ಯ ಇಲಾಖೆಯ ಯೋಜನೆಗಳ ಕುರಿತು ಸ್ಥಳೀಯ ಮಟ್ಟದಲ್ಲಿ ಪ್ರಚಾರ ಮಾಡುವವರು ಕಾರ್ಯಗತಗೊಳಿಸುವವರು ಆಶಾ ಕಾರ್ಯಕರ್ತರಾಗಿದ್ದು, ಕಾರಣ ಕೂಡಲೇ ಖಾಲಿ ಇರುವ ಎಲ್ಲಾ ಆಶಾ ಕಾರ್ಯಕರ್ತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಜಿಲ್ಲಾ ಆರೋಗ್ಯಾಧಿಕಾರಿಗಳು ಕ್ರಮ ವಹಿಸುವಂತೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾ ಆರೋಗ್ಯಾಧಿಕಾರಿಗಳು, ಆರೋಗ್ಯ ಇಲಾಖೆ,ಗದಗ)**

**18)ಸಾರ್ವಜನಿಕ ಶಿಕ್ಷಣ ಇಲಾಖೆ**:- ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಗದಗವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾದವರು 14038 ಹಾಗೂ 7875 ಉತ್ತೀರ್ಣರಾಗಿದ್ದು ಶೇಕಡಾ 56.09 ಇರುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಎಸ್.ಎಸ್.ಎಲ್.ಸಿ.ಫಲಿತಾಂಶ ಗಮನಿಸಲಾಗಿ ಜಿಲ್ಲೆಯ ಪ್ರಗತಿ ಶೇಕಡಾ 56.09 ಇರುವುದು ತೀರಾ ವಿಷಾದನೀಯ. ತಾಲೂಕುವಾರು ಪ್ರಗತಿ ಪರಿಶೀಲನೆ ಮಾಡಲಾಗಿ ನರಗುಂದದಲ್ಲಿ ಶೇಕಡಾ 37.84 ಇರುತ್ತದೆ. ಶೇಕಡಾವಾರು ಉತ್ತೀರ್ಣತೆ ಕಡಿಮೆ ಇರುವಲ್ಲಿ ವಿಷಯವಾರು ಗಮನಿಸಿ ಮಕ್ಕಳಿಗೆ ಕಷ್ಟವಾಗಿರುವ ವಿಷಯಗಳಲ್ಲಿ ಶಿಕ್ಷಕರಿಂದ ಹೆಚ್ಚುವರಿ ಅವಧಿ ತರಗತಿಗಳನ್ನು ನಡೆಸಲು ಶಿಕ್ಷಕರಿಗೆ ಉತ್ತೇಜನ ನೀಡುವುದು. ಶಿಕ್ಷಕರಿಗೆ ತರಬೇತಿ ನೀಡಲು ಕಾರ್ಯಾಗಾರಗಳನ್ನು ನಡೆಸಲು ಉಪ ನಿರ್ದೇಶಕರು, ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಯಿತು.

ಎಸ್.ಎಸ್.ಎಲ್.ಸಿ. ಜಿಲ್ಲೆಯ ಪ್ರಗತಿಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ,ಗದಗರವರು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಭೆಗಳನ್ನು ನಡೆಸಿ ಗುಣಮಟ್ಟದ ಶಿಕ್ಷಣ ನೀಡುವುದಕ್ಕಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ,ಗದಗ/ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಗದಗ/ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗದಗ ಜಿಲ್ಲೆ)**

**19)ಆರ್.ಐ.ಡಿ.ಎಫ್.ಯೋಜನೆಯಡಿ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸುವ ಕುರಿತು**:- 2019-20ನೇ ಸಾಲಿನಲ್ಲಿ ಅಧಿಕ ಮಳೆಯಿಂದ ಹಾನಿಯಾದ ಸರ್ಕಾರಿ ಶಾಲಾ ಕೊಠಡಿಗಳ ಮರು ನಿರ್ಮಾಣಕ್ಕಾಗಿ ಆರ್.ಐ.ಡಿ.ಎಫ್. ನಬಾರ್ಡ-25 ಯೋಜನೆಯಡಿ ರೂ.3822.60 ಲಕ್ಷ ಬಿಡುಗಡೆಯಾಗಿ ರೂ.19.89 ಲಕ್ಷ ಖರ್ಚಾಗಿದ್ದು ಒಟ್ಟು 314 ಕಾಮಗಾರಿಗಳಲ್ಲಿ 60 ಕಾಮಗಾರಿಗಳು ವಿವಿದ ಹಂತಗಳಲ್ಲಿ ಪ್ರಗತಿಯಲ್ಲಿರುವುದಾಗಿ ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಆರ್.ಐ.ಡಿ.ಎಫ್. ಯೋಜನೆಯಡಿ ಬಿಡುಗಡೆಯಾದ ಅನುದಾನ ಬಳಕೆಯಾಗಿರುವ ಕುರಿತು ಹಂತಹಂತವಾಗಿ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಲು ಕ್ರಮ ವಹಿಸುವಂತೆ ಉಪನಿರ್ದೇಶಕರಿಗೆ ಸೂಚಿಸಲಾಯಿತು.

**(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಗದಗ/ ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿಇಲಾಖೆ,ಗದಗ)**

**20)ವಿವಿಧ ನಿಗಮಗಳಡಿ ಗಂಗಾ ಕಲ್ಯಾಣ ಯೋಜನೆಯನ್ನು ಸರಿಯಾಗಿ ಅನುಷ್ಠಾನಗೊಳಿಸುವ ಕುರಿತು**:- ಮಾನ್ಯ ಅಧ್ಯಕ್ಷರು ಮಾತನಾಡಿ, ಅಂಬೇಡ್ಕರ ಅಭಿವೃದ್ಧಿ ನಿಗಮ/ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ/ ದೇವರಾಜ ಅರಸ ಅಭಿವೃದ್ಧಿ ನಿಗಮಗಳಡಿ ಗಂಗಾ ಕಲ್ಯಾಣ ಯೋಜನೆಯಡಿ ಬೋರವೆಲ್ ಕೊರೆದು ವಿದ್ಯುದೀಕರಣ ಮಾಡುವಲ್ಲಿ ಹೆಸ್ಕಾಂ,ಗದಗ ಹಾಗೂ ನಿಗಮಗಳಡಿ

ನಂ. ಆಡಳಿತ/ವಹಿ-　　/2020-21　　　　　　　　　　ದಿನಾಂಕ:　　-11-2020

ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

1) ಜಿಲ್ಲಾಧಿಕಾರಿಗಳು, ಗದಗ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಗದಗ.
3) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, (ಸಾಮಾಜಿಕ/ ಪ್ರಾದೇಶಿಕ) ಗದಗ.
4) ಉಪ ವಿಭಾಗಾಧಿಕಾರಿಗಳು, ಗದಗ.
5) ಉಪ ನಿರ್ದೇಶಕರು, ಭೂದಾಖಲೆಗಳ ಇಲಾಖೆ, ಗದಗ.
6) ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಗದಗ.
7) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗದಗ.
8) ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಗದಗ.
9) ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗದಗ.
10) ಕಾರ್ಯನಿರ್ವಾಹಕ ಇಂಜಿನೀಯರರು. ಲೋ.ಬಂ ಮತ್ತು ಒ.ಜ.ಸಾ ಇಲಾಖೆ, ಗದಗ.
11) ಕಾರ್ಯನಿರ್ವಾಹಕ ಇಂಜಿನೀಯರರು. ಹೆಸ್ಕಾಂ, ಗದಗ.
12) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಗದಗ.
13) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಗದಗ.
14) ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ.
15) ಪ್ರಾಚಾರ್ಯರು, ಸರ್ಕಾರಿ ಮಹಾ ವಿದ್ಯಾಲಯ, ಗದಗ.
16) ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ.
17) ಪೌರಾಯುಕ್ತರು, ನಗರಸಭೆ, ಗದಗ-ಬೆಟಗೇರಿ.
18) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಗದಗ.
19) ವ್ಯವಸ್ಥಾಪಕರು, ದೇವರಾಜ ಅರಸು ಅಭಿವೃದ್ಧಿ ನಿಗಮ, ಗದಗ.
20) ವ್ಯವಸ್ಥಾಪಕರು, ಡಾ॥ ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮ, ಗದಗ.
21) ವ್ಯವಸ್ಥಾಪಕರು, ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ನಿಗಮ, ಗದಗ.
　ತಹಶೀಲ್ದಾರ ಗದಗ/ ಗಜೇಂದ್ರಗಡ/ ಲಕ್ಷ್ಮೇಶ್ವರ/ ಮುಂಡರಗಿ/ ನರಗುಂದ/ ರೋಣ/ ಶಿರಹಟ್ಟಿ
22) ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾ,
　ಗದಗ/ ಗಜೇಂದ್ರಗಡ/ ಲಕ್ಷ್ಮೇಶ್ವರ/ ಮುಂಡರಗಿ/ ನರಗುಂದ/ ರೋಣ/ ಶಿರಹಟ್ಟಿ

ಸಾಮರಸ್ಯವಿಲ್ಲದಿರುವುದು ಕಂಡುಬರುತ್ತಿದೆ. ನಿಗಮಗಳು ಹಾಗೂ ಹೆಸ್ಕಾಂ,ಗದಗರವರು ಯೋಜನೆಯಡಿ ಫಲಾನುಭವಿಗಳ ವಿವರ, ಬಿಡುಗಡೆಯಾದ ಅನುದಾನ ಹಾಗೂ ಹೆಸ್ಕಾಂನಲ್ಲಿರುವ ಬಾಕಿ ಇರುವ ವಿದ್ಯುದೀಕರಣ ಮಾಹಿತಿ ಕುರಿತು ಹೊಂದಾಣಿಕೆ ಮಾಡಿಕೊಂಡು ಸರಿಯಾದ ಮಾಹಿತಿಯನ್ನು ನೀಡುವಂತೆ ಹಾಗೂ ಈ ಕುರಿತು ನಿಗಮಗಳು ಹಾಗೂ ಹೆಸ್ಕಾಂ,ಗದಗರವರೊಂದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಯನ್ನು ನಡೆಸಿ ನಿಖರವಾದ ಮಾಹಿತಿಯನ್ನು ಪಡೆದುಕೊಳ್ಳುವುದು. ಗಂಗಾ ಕಲ್ಯಾಣ ಯೋಜನೆಯು ಸರಿಯಾಗಿ ಕಾರ್ಯಗತವಾಗುವ ಕುರಿತು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ನಿಯಮಿತವಾಗಿ ಸಭೆಗಳನ್ನು ನಡೆಸುವಂತೆ ಸೂಚಿಸಲಾಯಿತು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ,ಗದಗ/ ಕಾರ್ಯನಿರ್ವಾಹಕ ಇಂಜನೀಯರ, ಹೆಸ್ಕಾಂ,ಗದಗ/ಜಿಲ್ಲಾ ಅಧಿಕಾರಿಗಳು, ಅಂಬೇಡ್ಕರ/ದೇವರಾಜ ಅರಸ/ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ನಿಗಮ,ಗದಗ)**

**21)ಸಾಮಾಜಿಕ ಅರಣ್ಯೀಕರಣ:-** ಮಾನ್ಯ ಅಧ್ಯಕ್ಷರು ಮಾತನಾಡಿ ಜಿಲ್ಲೆಯಲ್ಲಿ ಶೇಕಡಾ 7 ರಷ್ಟು ಮಾತ್ರ ಅರಣ್ಯವಿದ್ದು, ಇದು ತೀರಾ ಕಡಿಮೆ ಪ್ರಮಾಣದಲ್ಲಿದ್ದು, ಕಾರಣ ಶಾಲಾ, ಕಾಲೇಜುಗಳಲ್ಲಿ ಹಾಗೂ ಇತರೆ ಸರ್ಕಾರಿ ಕಟ್ಟಡಗಳಲ್ಲಿ ಖಾಲಿಯಿರುವ ಜಾಗದಲ್ಲಿ ಗಿಡಗಳನ್ನು ನೆಟ್ಟು ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾ ಅರಣ್ಯಾಧಿಕಾರಿಗಳು, ಸಾಮಾಜಿಕ ಅರಣ್ಯ ಇಲಾಖೆ,ಗದಗ)**

**22)ತೋಟಗಾರಿಕೆ ಇಲಾಖೆಯಿಂದ ಉತ್ಪನ್ನಗಳನ್ನು ಶೇಖರಿಸಲು ಸಂಗ್ರಹಾಗಾರಗಳನ್ನು ನಿರ್ಮಿಸುವ ಕುರಿತು:-** ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ,ಗದಗರವರು ಮಾತನಾಡಿ ಜಿಲ್ಲೆಯಲ್ಲಿ ಈರುಳ್ಳಿ, ಮೆಣಸಿನಕಾಯಿ, ಟೊಮ್ಯಾಟೊ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಅತೀಯಾದ ಮಳೆಯಿಂದ ತೋಟಗಾರಿಕೆ ಬೆಳೆಗಳು ಹಾನಿಯಾಗಿದ್ದು, ಪರಿಹಾರ ತಂತ್ರಾಂಶದಲ್ಲಿ ದಾಖಲಿಸಲಾಗುತ್ತಿದೆಯೆಂದು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಜಿಲ್ಲೆಯಲ್ಲಿ ಈರುಳ್ಳಿ ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ರೈತರಿಗೆ ಹೆಚ್ಚಿನ ಬೆಳೆ ದೊರೆಯಲು ಸಂಗ್ರಹಾಗಾರಗಳ ಅವಶ್ಯಕತೆಯಿದ್ದು, ಸಂಗ್ರಹಾಗಾರಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವುದು ಹಾಗೂ ಈರುಳ್ಳಿ ಬೆಳೆಯಲ್ಲಿ ಹಲವಾರು ವಿಧಗಳಿದ್ದು ಗುಣಮಟ್ಟದ ಹಾಗೂ ಸಂಗ್ರಹಿಸಲು ಯೋಗ್ಯವಾದ ಈರುಳ್ಳಿ ಬೆಳೆಯಲು ರೈತರನ್ನು ಪ್ರೋತ್ಸಾಹಿಸಲು ಹಾಗೂ ತೋಟಗಾರಿಕೆ ಬೆಳೆಗಳ ಕ್ಷೇತ್ರವನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳುವಂತೆ ತೋಟಗಾರಿಕೆ ಅಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ: ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ,ಗದಗ)**

ಕೊನೆಯಲ್ಲಿ ಜಿಲ್ಲಾಧಿಕಾರಿಗಳ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಮೊಹಮ್ಮದ ಮೊಹಸಿನ್) ಭಾ.ಆ.ಸೇ
**ಮಾನ್ಯ ರಾಜ್ಯ ಆಯುಕ್ತರು,
ಪುನರ್ ವಸತಿ ಮತ್ತು ಪುನರ್ ನಿರ್ಮಾಣ
ಹಾಗೂ ಪದನಿಮಿತ್ತ ಸರ್ಕಾರದ
ಕಾರ್ಯದರ್ಶಿಗಳು,
ಕಂದಾಯ ಇಲಾಖೆ ಮತ್ತು**
ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ದಿನಾಂಕ: 28.10.2020 ರಂದು ಶ್ರೀಮತಿ ಬಿ.ಬಿ.ಕಾವೇರಿ ಭಾ.ಆ.ಸೇ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ವಿವಿಧ ವಿಷಯಗಳ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1) ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
2) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ.
3) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಆರೋಗ್ಯ ಇಲಾಖೆ, ಚಾಮರಾಜನಗರ.
4) ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಸಾರ್ವಜನಿಕ ಆಸ್ಪತ್ರೆ, ಚಾಮರಾಜನಗರ.
5) ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಚಾಮರಾಜನಗರ.
6) ಸಹಾಯಕ ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್, ಚಾಮರಾಜನಗರ.
7) ಪೌರಾಯುಕ್ತರು, ನಗರಸಭೆ, ಚಾಮರಾಜನಗರ.
8) ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ.
9) ಮುಖ್ಯಾಧಿಕಾರಿ, ಪುರಸಭೆ, ಗುಂಡ್ಲುಪೇಟೆ.
10) ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಯಳಂದೂರು.

********

ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ ಇವರು ಸಭೆಯಲ್ಲಿ ಹಾಜರಿದ್ದ ಜಿಲ್ಲಾಧಿಕಾರಿಗಳು ಹಾಗೂ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಮಾನ್ಯ ಸಭಾಧ್ಯಕ್ಷರನ್ನು ಸಭೆ ನಡೆಸಿಕೊಡುವಂತೆ ಕೋರಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಮಾತನಾಡುತ್ತಾ, ಕೋವಿಡ್-19 ಅವಧಿಯಲ್ಲಿ ತೊಂದರೆಗೊಳಗಾದ ಬೀದಿ ಬದಿ ವ್ಯಾಪಾರಿಗಳ ಆರ್ಥಿಕ ಸಬಲೀಕರಣಕ್ಕಾಗಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಪ್ರಧಾನಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ್ ನಿಧಿ ವಿಶೇಷ ಕಿರು ಸಾಲ ಸೌಲಭ್ಯ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಚಾಮರಾಜನಗರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಒಟ್ಟು ಜನ ಸಂಖ್ಯೆಯ ಶೇ.1 ರಷ್ಟನ್ನು ಗುರಿ ನಿಗಧಿಪಡಿಸಲಾಗಿರುತ್ತದೆ.

ಅದರಂತೆ ಜಿಲ್ಲೆಯ 05 ನಗರ ಸ್ಥಳೀಯ ಸಂಸ್ಥೆಗಳಿಗೆ 1750 ಗುರಿಯನ್ನು ನಿಗಧಿಪಡಿಸಲಾಗಿದ್ದು, ಈ ಪೈಕಿ 767 ಸಾಲದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಬ್ಯಾಂಕುಗಳಿಗೆ ಸಲ್ಲಿಸಲಾಗಿದ್ದು, ಇದರಲ್ಲಿ ಕೇವಲ 37 ಅರ್ಜಿಗಳಿಗೆ ಸಾಲ ಮಂಜೂರಾತಿಯನ್ನು ನೀಡಿದ್ದು, 22 ಅರ್ಜಿಗಳಿಗೆ ಸಾಲ ಬಿಡುಗಡೆ ಮಾಡಲಾಗಿದ್ದು, ಇನ್ನೂ 730 ಅರ್ಜಿಗಳು ವಿವಿಧ ಬ್ಯಾಂಕುಗಳಲ್ಲಿಯೇ ಬಾಕಿಯಿರುವುದು ತುಂಬಾ ವಿಷಾಧನೀಯವಾಗಿರುತ್ತದೆ.

ಬ್ಯಾಂಕುಗಳು ಬೀದಿ ಬದಿ ವ್ಯಾಪಾರಿಗಳಿಗೆ ಸಹಾಯ ಮಾಡುವುದರ ಜೊತೆಗೆ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯನ್ನು ಸಕಾಲದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಎಲ್ಲರ ಜವಬ್ದಾರಿಯಾಗಿರುತ್ತದೆ. ಚಾಮರಾಜನಗರ ಜಿಲ್ಲೆಗೆ ನಿಗಧಿಯಾಗಿರುವ 1750 ಗುರಿಗೆ ಅನುಗುಣವಾಗಿ ಶೇ.100 ರಷ್ಟು ಪ್ರಗತಿ ಸಾಧಿಸಲು ಸೂಚಿಸಲಾಯಿತು. ಪ್ರಗತಿ ಸಾಧಿಸಲು ವಿಳಂಬಕ್ಕೆ ಆಸ್ಪದ ನೀಡದೇ ಕಾರ್ಯ ನಿರ್ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಪೌರಾಯುಕ್ತರು, ಮುಖ್ಯಾಧಿಕಾರಿಗಳಿಗೆ ಸೂಚಿಸಲಾಯಿತು.

ಮುಂದುವರೆದು, ನಗರ ಸ್ಥಳೀಯ ಸಂಸ್ಥೆವಾರು ನಿಗಧಿಯಾಗಿರುವ ಗುರಿಗೆ ಅನುಗುಣವಾಗಿ ಸಾಲದ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಕಾಲೋಚಿತಗೊಳಿಸಿರುವ ಬಗ್ಗೆ ಈ ಕೆಳಕಂಡಂತೆ ನಗರ ಸ್ಥಳೀಯ ಸಂಸ್ಥೆವಾರು ಪ್ರಗತಿ ಪರಿಶೀಲನೆ ನಡೆಸಲಾಯಿತು.

1) **ನಗರಸಭೆ, ಚಾಮರಾಜನಗರ:** ಪೌರಾಯುಕ್ತರು, ನಗರಸಭೆ, ಚಾಮರಾಜನಗರ ಇವರು ಮಾತನಾಡುತ್ತಾ, 321 ಅರ್ಜಿಗಳನ್ನು ಆನ್‌ಲೈನ್ ಮೂಲಕ ಬ್ಯಾಂಕುಗಳಿಗೆ ಕಾಲೋಚಿತಗೊಳಿಸಲಾಗಿದ್ದು, 17 ಅರ್ಜಿಗಳಿಗೆ ಮಂಜೂರಾತಿ ನೀಡಿ 11 ಅರ್ಜಿಗಳಿಗೆ ಮಾತ್ರ ಸಾಲ ಬಿಡುಗಡೆ ಮಾಡಲಾಗಿದ್ದು, ಇನ್ನೂ ಸಹ ವಿವಿಧ ಬ್ಯಾಂಕುಗಳಲ್ಲಿ 339 ಅರ್ಜಿಗಳು ಬಾಕಿಯಿರುವುದಾಗಿ ಸಭೆಗೆ ತಿಳಿಸಿದರು.

2) **ನಗರಸಭೆ, ಕೊಳ್ಳೇಗಾಲ :** ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ ಇವರು ಮಾತನಾಡುತ್ತಾ, ಕಿರು ಸಾಲ ಯೋಜನೆಗಾಗಿ 239 ಅರ್ಜಿಗಳನ್ನು ವಿವಿಧ ಬ್ಯಾಂಕುಗಳಿಗೆ ಸಲ್ಲಿಸಲಾಗಿದು, ಈ ಪೈಕಿ 11 ಅರ್ಜಿಗಳಿಗೆ ಅನುಮೋದನೆಯನ್ನು ನೀಡಿ, 11 ಅರ್ಜಿಗಳಿಗೆ ಸಾಲ ಬಿಡುಗಡೆ ಮಾಡಿದ್ದು, ಇನ್ನೂ ಸಹ 228 ಅರ್ಜಿಗಳು ಬ್ಯಾಂಕಿನಲ್ಲಿಯೇ ಇರುತ್ತವೆಂದು ಸಭೆಗೆ ತಿಳಿಸುತ್ತಾ, ಕರ್ನಾಟಕ ಬ್ಯಾಂಕಿಗೆ 72 ಅರ್ಜಿಗಳನ್ನು ಆನ್‌ಲೈನ್ ಮೂಲಕ ಕಾಲೋಚಿತಗೊಳಿಸಲಾಗಿದ್ದು, 11 ಅರ್ಜಿಗಳಿಗೆ ಮಂಜೂರಾತಿ ನೀಡಿ 11 ಅರ್ಜಿಗಳಿಗೆ ಸಾಲ ಬಿಡುಗಡೆ ಮಾಡಲಾಗಿದ್ದು, 41 ಅರ್ಜಿಗಳು ಬ್ಯಾಂಕಿನಲ್ಲಿಯೇ ಬಾಕಿಯಿರುತ್ತವೆಂದು ಹಾಗೂ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಕಂಪನಿಗೆ 52 ಅರ್ಜಿಗಳನ್ನು ಆನ್‌ಲೈನ್ ಮೂಲಕ ಕಾಲೋಚಿತಗೊಳಿಸಿದ್ದು, ಕೇವಲ 02 ಅರ್ಜಿಗಳಿಗೆ ಮಾತ್ರ ಮಂಜೂರಾತಿ ನೀಡಿ ಇನ್ನೂ 50 ಅರ್ಜಿಗಳು ಬ್ಯಾಂಕಿನಲ್ಲಿಯೇ ಇರುತ್ತವೆಂದು ಮತ್ತು ಆಕ್ಸಿಸ್ ಬ್ಯಾಂಕಿಗೆ 78 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಯಾವುದೇ ಮಂಜೂರಾತಿ ಮತ್ತು ಸಾಲ ಬಿಡುಗಡೆಯನ್ನು ಮಾಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

3) **ಪುರಸಭೆ, ಗುಂಡ್ಲುಪೇಟೆ:** ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಮಾತನಾಡುತ್ತಾ, ಗುಂಡ್ಲುಪೇಟೆ ಪುರಸಭೆಗೆ 281 ಗುರಿಯನ್ನು ನಿಗಧಿಪಡಿಸಿದ್ದು, ಈ ಪೈಕಿ 120 ಅರ್ಜಿಗಳನ್ನು ಮಾತ್ರ ಆನ್‌ಲೈನ್ ಮಾಡಿ ಶೇ.41 ರಷ್ಟು ಪ್ರಗತಿ ಸಾಧಿಸಲಾಗಿದ್ದು, ಪ್ರಗತಿಯು ತೃಪ್ತಿದಾಯಕವಾಗಿರುವುದಿಲ್ಲ.

4) **ಪಟ್ಟಣ ಪಂಚಾಯಿತಿ, ಹನೂರು:** ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಮಾತನಾಡುತ್ತಾ, ಹನೂರು ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು ಸಭೆಗೆ ಗೈರು ಹಾಜರಗಿರುವುದನ್ನು ಗಂಭೀರವಾಗಿ ಪರಿಗಣಿಸಿ ಯೋಜನಾ ನಿರ್ದೇಶಕರಿಗೆ ಕಾರಣ ಕೇಳಿ ನೋಟೀಸ್ ನೀಡುವಂತೆ ತಿಳಿಸಿದರು ಹಾಗೂ ಬಾಕಿಯಿರುವ ಎಲ್ಲಾ

ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಕಾಲೋಚಿತಗೊಳಿಸುವಂತೆ ಸಭೆಯಲ್ಲಿ ಹಾಜರಿದ್ದ ಸಮುದಾಯ ಸಂಘಟಕರಿಗೆ ಸೂಚಿಸಿದರು.

5) **ಪಟ್ಟಣ ಪಂಚಾಯಿತಿ, ಯಳಂದೂರು:** ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಯಳಂದೂರು ಇವರು ಮಾತನಾಡುತ್ತಾ, ಬ್ಯಾಂಕುಗಳಿಗೆ 20 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಉಳಿದ ಬ್ಯಾಂಕುಗಳಿಗೆ ಮ್ಯಾಪಿಂಗ್ ಆಗದ ಕಾರಣ ಅರ್ಜಿಗಳನ್ನು ಆನ್‌ಲೈನ್ ಮಾಡಲು ಸಾಧ್ಯವಾಗಿರುವುದಿಲ್ಲವೆಂಬ ಅಂಶವನ್ನು ಸಭೆಗೆ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಮಾತನಾಡುತ್ತಾ, ಮ್ಯಾಪಿಂಗ್ ಆಗದೇ ಇರುವ ಬಗ್ಗೆ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಇವರು ಬ್ಯಾಂಕಿನವರೊಡನೆ ಸಮಾಲೋಚನೆ ಮಾಡಿಕೊಂಡು ಮ್ಯಾಪಿಂಗ್ ಮಾಡಿಸುವಂತೆ ಹಾಗೂ ಮ್ಯಾಪಿಂಗ್ ಆದ ತಕ್ಷಣವೇ ಗುರಿಯನುಸಾರ ಪ್ರಗತಿ ಸಾಧಿಸಲು ಸೂಚಿಸಿದರು.

ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗಧಿಯಾಗಿರುವ ಗುರಿಗಳ ಪೈಕಿ ಆನ್‌ಲೈನ್‌ನಲ್ಲಿ ಕಾಲೋಚಿತಗೊಳಿಸಿರುವ ಅರ್ಜಿಗಳನ್ನು ಕಡಿಮೆ ಇದ್ದು ಸಮುದಾಯ ಸಂಘಟನಾಧಿಕಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು ಕಾರ್ಯಪ್ರವೃತ್ತರಾಗಲು ತಿಳಿಸಲಾಯಿತು. ಈಗಾಗಲೇ ಬೀದಿ ಬದಿ ವ್ಯಾಪಾರಿಗಳನ್ನು ಗುರುತಿಸಿದ್ದು, ಅವರಿಗೆ ಯೋಜನೆಯ ಬಗ್ಗೆ ಅರಿವು ಮೂಡಿಸಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈಗಾಗಲೇ ರಚಿಸಿರುವ ಪಟ್ಟಣ ಮಾರಾಟ ಸಮಿತಿ ಸದಸ್ಯರೊಂದಿಗೆ ಸಮನ್ವಯ ಮಾಡಿಕೊಂಡು ಆದ್ಯತೆಯ ಮೇರೆಗೆ ಸದರಿ ಯೋಜನೆಯಡಿ ಶೇ.100 ರಷ್ಟು ಪ್ರಗತಿ ಸಾಧಿಸಿ ಸಂಬಂಧಿಸಿದ ಬ್ಯಾಂಕುಗಳಿಗೆ ಭೇಟಿ ನೀಡುವ ಮೂಲಕ ಸಾಲ ಮಂಜೂರಾತಿ ಮತ್ತು ಸಾಲ ಬಿಡುಗಡೆಗೆ ವೇಗ ನೀಡುವಂತೆ ಸೂಚಿಸಲಾಯಿತು.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಈಗಾಗಲೇ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ, ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು/ ಮುಖ್ಯಾಧಿಕಾರಿಗಳು ಮತ್ತು ಸಮುದಾಯ ಸಂಘಟನಾಧಿಕಾರಿ/ ಸಮುದಾಯ ಸಂಘಟಕರು, ಡೇ-ನಲ್ಮ್ ಯೋಜನೆಯ ನಗರ ಅಭಿಯಾನ ವ್ಯವಸ್ಥಾಪಕರುಗಳು ಮತ್ತು ಮಲ್ಟಿ ಟಾಸ್ಕಿಂಗ್ ಸಿಬ್ಬಂದಿಗಳನ್ನು ಒಳಗೊಂಡಂತೆ 02 ಬಾರಿ ಸಭೆಗಳನ್ನು ನಡೆಸಿ ಆತ್ಮ ನಿರ್ಭರ್ ನಿಧಿ ಯೋಜನೆಯಡಿ ಜಿಲ್ಲೆಗೆ ನಿಗಧಿಯಾಗಿರುವ ಗುರಿಯಂತೆ ಶೇ.100 ರಷ್ಟು ಗುರಿಯನ್ನು ಸಾಧಿಸುವಂತೆ ಹಾಗೂ ಪ್ರತಿ ದಿನ ಆನ್‌ಲೈನ್ ಮಾಡುವ ಅರ್ಜಿಗಳ ಮಾಹಿತಿಯನ್ನು ಹಾಗೂ ಇನ್ನಿತರೆ ವಿಷಯಗಳನ್ನು ವಾಟ್ಸ್‌ಆಪ್ ಗ್ರೂಪ್‌ನಲ್ಲಿ ಹಾಕುವಂತೆ ತಿಳಿಸಲಾಗಿರುತ್ತದೆ. ಮುಂದಿನ ಒಂದು ವಾರದೊಳಗೆ ಶೇ.100 ರಷ್ಟು ಪ್ರಗತಿ ಸಾಧಿಸಲು ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿರುತ್ತದೆ ಎಂಬ ಅಂಶವನ್ನು ಅಧ್ಯಕ್ಷರ ಗಮನಕ್ಕೆ ತಂದರು.

ಸಹಾಯಕ ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್, ಚಾಮರಾಜನಗರ ಇವರು ಮಾತನಾಡುತ್ತಾ, ಎಲ್ಲಾ ಬ್ಯಾಂಕ್ ವ್ಯವಸ್ಥಾಪಕರೊಂದಿಗೆ ಚರ್ಚಿಸಿ ಸಾಲ ಮಂಜೂರಾತಿ ಮಾಡಿಸಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಮಾತನಾಡುತ್ತಾ, ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು ಅರ್ಜಿಗಳನ್ನು ಆನ್‌ಲೈನ್ ಮಾಡುವಲ್ಲಿ ಶೇ.42 ರಷ್ಟು ಗುರಿಯನ್ನು ಸಾಧಿಸಿದ್ದು, ಮಂಜೂರಾತಿ ಮತ್ತು ಬಿಡುಗಡೆಯಲ್ಲಿಯೂ ಸಹ ಪ್ರಗತಿಯು ತೀರ ಕುಂಠಿತಗೊಂಡಿರುವುದು ವಿಷಾಧನೀಯವಾಗಿರುತ್ತದೆ. ಯೋಜನಾ ನಿರ್ದೇಶಕರು ಸದರಿ ಯೋಜನೆಯನ್ನು ಆದ್ಯತೆಯ ಮೇರೆಗೆ ಪರಿಗಣಿಸಿ, ತಮ್ಮ ವೈಯಕ್ತಿಕ ಗಮನಹರಿಸಿ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು, ಮುಖ್ಯಾಧಿಕಾರಿಗಳು ಹಾಗೂ ಸಮುದಾಯ ಸಂಘಟನಾಧಿಕಾರಿ ಮತ್ತು ಸಮುದಾಯ ಸಂಘಟಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಕ್ರಮವಹಿಸುವಂತೆ ಸೂಚಿಸಿದರು. ಒಂದು ವೇಳೆ ಪ್ರಗತಿಯನ್ನು ಸಾಧಿಸುವಲ್ಲಿ ವಿಫಲವಾದಂತಹ ಅಧಿಕಾರಿಗಳು/ ಸಿಬ್ಬಂಧಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಶಿಫಾರಸ್ಸು ಮಾಡುವಂತೆ ಸೂಚಿಸಿದರು.

ಮುಂದುವರೆದು, ಡೇ-ನಲ್ಮ್ ಯೋಜನೆಯಡಿ ಕೆಸಲ ನಿರ್ವಹಿಸುತ್ತಿರುವ ನಗರ ಅಭಿಯಾನ ವ್ಯವಸ್ಥಾಪಕರು ಮತ್ತು ಮಲ್ಟಿ ಟಾಸ್ಕಿಂಗ್ ಅಫೀಶಿಯಲ್ಸ್ ಇವರುಗಳು ನಗರ ಸ್ಥಳೀಯ ಸಂಸ್ಥೆಗಳಿಗೆ ಆಗಿಂದ್ದಾಗೆ ಭೇಟಿ ನೀಡಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಕಾಲೋಚಿತಗೊಳಿಸುತ್ತಿರುವ ಬಗ್ಗೆ ಪರಿಶೀಲಿಸುವುದು ಹಾಗೂ ಆನ್‌ಲೈನ್‌ನಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ಆಗಿಂದ್ದಾಗೆ ಬ್ಯಾಂಕುಗಳಿಗೆ ಭೇಟಿ ನೀಡಿ ಸಾಲ ಮಂಜೂರಾತಿ ಮಾಡಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು.

ಬೀದಿ ಬದಿ ವ್ಯಾಪಾರಿಗಳು ಡಿಜಿಟಲ್ ಪೇಮೆಂಟ್ ಮೂಲಕ ಅಂದರೆ, ಗೂಗಲ್ ಪೇ, ಫೋನ್ ಪೇ, ಪೇಟಿಎಂ ಇನ್ನಿತರ ಡಿಜಿಟಲ್ ಪೇಮೆಂಟ್ ಅಗ್ರೀಗೇಟರ್‌ಗಳನ್ನು ಬಳಸಿಕೊಂಡು ಸಾಲ ಮರುಪಾವತಿ ಮಾಡಲು ಉತ್ತೇಜಿಸುವಂತೆ ಸೂಚಿಸಿದರು.

ಚಾಮರಾಜನಗರ ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪರಿಶೀಲಿಸಲಾಗಿ ಈವರೆಗೆ ಒಟ್ಟು 5852 ಕೋವಿಡ್ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 5407 ಜನ ಗುಣಮುಖರಾಗಿದ್ದು, 323 ಪ್ರಕರಣಗಳು ಸಕ್ರಿಯವಾಗಿರುತ್ತದೆ ಹಾಗೂ 103 ಜನ ಮೃತರಾಗಿರುತ್ತಾರೆ. ಈವರೆಗೆ 94416 ಜನರಿಂದ ಸ್ವಾಬ್‌ಗಳನ್ನು ಪರೀಕ್ಷೆಗೆ ತಗೆದುಕೊಳ್ಳಲಾಗಿದೆ. ಕೋವಿಡ್ ಸೋಂಕು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಆಗಿಂದ್ದಾಗ್ಗೆ ನೀಡಲಾಗುತ್ತಿರುವ ಸೂಚನೆಗಳನ್ವಯ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**ಕೋವಿಡ್ ಸಕ್ರಿಯ ಪ್ರಕರಣಗಳ ತಾಲ್ಲೂಕುವಾರು ಮಾಹಿತಿ**

| ಕ್ರ.ಸಂ. | ತಾಲ್ಲೂಕು | ಸಕ್ರಿಯ ಪ್ರಕರಣಗಳ ಸಂಖ್ಯೆ |
|---|---|---|
| 1 | ಚಾಮರಾಜನಗರ | 110 |
| 2 | ಗುಂಡಪ್ಲುಪೇಟೆ | 80 |

| | | |
|---|---|---|
| 3 | ಯಳಂದೂರು | 40 |
| 4 | ಕೊಳ್ಳೇಗಾಲ | 61 |
| 5 | ಹನೂರು | 20 |
| 6 | ಇತರೆ | 12 |
| | ಒಟ್ಟು | 323 |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಇವರು ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

ಚಾಮರಾಜನಗರ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು
ಹಾಗೂ ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ:**

1) ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
2) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ.
3) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಆರೋಗ್ಯ ಇಲಾಖೆ, ಚಾಮರಾಜನಗರ.
4) ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಸಾರ್ವಜನಿಕ ಆಸ್ಪತ್ರೆ, ಚಾಮರಾಜನಗರ.
5) ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ, ಚಾಮರಾಜನಗರ.
6) ಸಹಾಯಕ ಪ್ರಧಾನ ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಾಮರಾಜನಗರ– ಇವರಿಗೆ ಸಲ್ಲಿಸುತ್ತಾ ಸಂಬಂಧಿಸಿದ ಎಲ್ಲಾ ಬ್ಯಾಂಕುಗಳಿಗೆ ಕಳುಹಿಸಲು ಕೋರಿದೆ.
7) ಪೌರಾಯುಕ್ತರು, ನಗರಸಭೆ, ಚಾಮರಾಜನಗರ.
8) ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ.
9) ಮುಖ್ಯಾಧಿಕಾರಿ, ಪುರಸಭೆ, ಗುಂಡ್ಲುಪೇಟೆ.
10) ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಯಳಂದೂರು.
11) ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಹನೂರು.
12) ಕಛೇರಿ ಪ್ರತಿ.

ದಿನಾಂಕ:19-11-2020 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

ಪ್ರಾರಂಭದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಪಂಚಾಯತಿಯ ಪರವಾಗಿ ಮತ್ತು ಸಭೆಗೆ ಆಗಮಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸಿದರು.

ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಸಭೆಯಲ್ಲಿ ಅತಿವೃಷ್ಟಿ ಮತ್ತು ಪ್ರವಾಹದ ಕುರಿತು ಮಾಹಿತಿಯನ್ನು ನೀಡಿದರು. ಮಳೆಯ ಪ್ರಮಾಣ ಅಕ್ಟೋಬರ 2020 ರ ಅಂತ್ಯದವರೆಗೆ ಶೇ 39 ರಷ್ಟು ಮಳೆಯಾಗಿದ್ದು, ಬಿತ್ತನೆ ಸಹ ಆಗಿದ್ದು, ಮಳೆ ಹಾನಿ ಆದ ಬಗ್ಗೆ ಸರ್ವೆಯೂ ಸಹ ಮಾಡಲಾಗಿದೆ. 1,34,641 ಹೆಕ್ಟರ ಸರ್ವೆ ಮಾಡಿ ದೃಢೀಕರಿಸಲಾಗಿದೆ. ಕೃಷಿ ಅಧಿಕಾರಿ ಮತ್ತು ತೋಟಗಾರಿಕೆ ಅಧಿಕಾರಿಗಳು ಜಂಟಿಯಾಗಿ ಸರ್ವೆ ಮಾಡಿ ಈಗಾಗಲೇ ಪರಿಹಾರ ತಂತ್ರಾಂಶದಲ್ಲಿ 1,11,361 ಪ್ರಕರಣಗಳ ವಿವರಗಳನ್ನು ಇಂಧೀಕರಿಸಲಾಗಿದೆ ಅಂತಾ ಮಾಹಿತಿ ನೀಡಿದರು. 31,140 ರೈತರಿಗೆ ಈಗಾಗಲೇ ರೂ.20.14 ಕೋಟಿ ಜಮೆಯಾಗಿದೆ ಅಂತಾ ಮಾಹಿತಿ ನೀಡಿದರು. ಸದರಿ ಮಾಹಿತಿಯು ಬೆಳೆ ಹಾನಿಗೆ ಸಂಬಂಧಪಟ್ಟಿದ್ದು, ಇನ್ನು ಮನೆಗಳಿಗೆ ಸಂಬಂಧಿಸಿದಂತೆ ವರ್ಗ "ಎ" ವರ್ಗ "ಬಿ" ಮತ್ತು ವರ್ಗ "ಸಿ" ಅಂತಾ ವಿಂಗಡಿಸಲಾಗಿದೆ. 110 "ಎ" ವರ್ಗದಲ್ಲಿ ನೋಂದಣಿಯಾಗಿದ್ದು, ವರ್ಗ "ಬಿ" 644 ವರ್ಗ "ಸಿ" 1341 ಒಟ್ಟು 2095 ಪ್ರಕರಣಗಳನ್ನುತಂತ್ರಾಂಶದಲ್ಲಿ ಜಿಲ್ಲೆಯ ತಹಶೀಲ್ದಾರರು ದಾಖಲಿಸಿರುತ್ತಾರೆ. ಈ ಪೈಕಿ 1510 ಪ್ರಕರಣಗಳಿಗೆ ಈಗಾಗಲೇ ಅನುಮೋದನೆ ನೀಡಲಾಗಿದೆ. ಎ ಮತ್ತು ಬಿ ವರ್ಗೀಕರಣದ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜೀವ ಗಾಂಧಿ ವಸತಿ ನಿಗಮದಿಂದ ಕ್ರಮ ಜರುಗಿಸಬೇಕಾಗಿರುತ್ತದೆ. "ಸಿ" ವರ್ಗೀಕರಣದ ಪ್ರಕರಣಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ ಅವರಿಗೆ ಪರಿಹಾರ ವಿತರಿಸಲು ಅಧಿಕಾರ ನೀಡಲಾಗಿದೆ. ಸಾರ್ವಜನಿಕ ಆಸ್ತಿಗಳ ಹಾನಿಗೆ ಸಂಬಂದಿಸಿದಂತೆ ಉದಾಹರಣೆಗಾಗಿ ರಸ್ತೆ, ಕಟ್ಟಡಗಳಿಗೆ ಸಂಬಂಧಿಸಿದಂತೆ ಅನುದಾನ ಬಂದಿರುವುದಿಲ್ಲ. ಅನುದಾನ ಬಂದ ನಂತರ ಕ್ರಮ ಜರುಗಿಸಲಾಗುವುದೆಂದು ಸಭೆಯಲ್ಲಿ ಮಾಹಿತಿ ನೀಡಿದರು.

**ಅತಿವೃಷ್ಟಿಯಿಂದ ಹಾನಿಗೊಳಗಾದ ರಸ್ತೆಗಳ ವಿವರ:**

ಮಾನ್ಯರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯಿಂದ ಬೆಳಗಾವಿ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ಹಾನಿಗೊಳಗಾದ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆ ಮಾಡಿದ ಅನುದಾನವನ್ನು ಕೈಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆಯೇ? ಎಂದು ವಿಚಾರಿಸಿದಾಗ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ ವಿಭಾಗ ಚಿಕ್ಕೋಡಿ ಇವರು 2019-20ನೇ ಸಾಲಿನಲ್ಲಿ ಬಿಡುಗಡೆಯಾದ ರೂ.20.00 ಕೋಟಿ ಅನುದಾನದಲ್ಲಿ ರೂ.3.00 ಕೋಟಿಗಳನ್ನು ಮಾತ್ರ ಅನುದಾನ ವಿನಿಯೋಗಿಸಲಾಗಿರುತ್ತವೆ. ಉಳಿದ ರೂ.17.00 ಕೋಟಿ ಅನುದಾನ ವ್ಯಪಗತವಾಗಿರುತ್ತವೆ. ಸದರಿ ವ್ಯಪಗತವಾದಂತಹ ಅನುದಾನವು ಸರ್ಕಾರದಿಂದ ಬಿಡುಗಡೆಯಾದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುವುದು ಅಂತಾ ತಿಳಿಸಿರುತ್ತಾರೆ. ಅದರಂತೆ ಬೆಳಗಾವಿ ವಿಭಾಗದಲ್ಲಿ ರೂ.1.5 ಕೋಟಿ ಅನುದಾನ ಖರ್ಚು ಮಾಡಿ ರೂ.9.00 ಕೋಟಿ ಅನುದಾನ ವ್ಯಪಗತವಾಗಿರುತ್ತವೆ. ಸದರಿ ಅನುದಾನವನ್ನು ಸರ್ಕಾರದಿಂದ ಬಿಡುಗಡೆಯಾದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ಅಂತಾ ತಿಳಿಸಿರುವದು.

**ಆರೋಗ್ಯ ಇಲಾಖೆ**

ಆರೋಗ್ಯ ಇಲಾಖೆ ಅಧಿಕಾರಿಗಳು ಕೋವಿಡ್-19 ಬಗ್ಗೆ ಒಟ್ಟು ಇಲ್ಲಿಯವರೆಗೆ 2,55,770 ಗಂಟಲು ಮಾದರಿಗಳನ್ನು ಸಂಗ್ರಹ ಮಾಡಲಾಗಿದೆ. 25,315 ಪಾಸಿಟಿವ್ ಪ್ರಕರಣಗಳು ಇದ್ದು, 24581 ರೋಗಿಗಳು ಗುಣಮುಖರಾಗಿ ಬಿಡುಗಡೆ ಹೊಂದಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟು 428 ಸಕ್ರಿಯ ಪ್ರಕರಣಗಳಿದ್ದು ಅದರಲ್ಲಿ 298 Home Isolation ಚಿಕಿತ್ಸೆ ಪಡೆಯುತ್ತಿದ್ದು ಹಾಗೂ ಕೋವಿಡ್ ಆಸ್ಪತ್ರೆಯಲ್ಲಿ 130 ಪ್ರಕರಣಗಳು ಚಿಕಿತ್ಸೆ ಪಡೆಯುತ್ತಿರುತ್ತಾರೆ. ಜಿಲ್ಲೆಯಲ್ಲಿ ಆಮ್ಲಜನಕ ಕೊರತೆ ಇರುವುದಿಲ್ಲ. ಜಿಲ್ಲೆಯಲ್ಲಿ ಚಿಕಿತ್ಸೆಗಾಗಿ 2325 ಹಾಸಿಗೆಗಳು ಲಭ್ಯವಿರುತ್ತವೆ. ಇವುಗಳಲ್ಲಿ 130

ಹಾಸಿಗೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಇದರಲ್ಲಿ 2195 ಹಾಸಿಗೆಗಳು ಖಾಲಿ ಇರುತ್ತವೆ. ಅದೇ ರೀತಿ ಚಿಕಿತ್ಸೆ ನೀಡಲು 17 ಖಾಸಗಿ ಆಸ್ಪತ್ರೆ ಲಭ್ಯವಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 174 Ventilator ಗಳು ಲಭ್ಯವಿದೆ. ಅದರಲ್ಲಿ ಬೀಮ್ಸ್ (ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ) 68, ತಾಲೂಕ ಮಟ್ಟದ ಕೋವಿಡ್ ಆಸ್ಪತ್ರೆಯಲ್ಲಿ 54 ಹಾಗೂ ಖಾಸಗಿ ಆಸ್ಪತೆಗಳಲ್ಲಿ 52 Ventilator ಗಳು ಲಭ್ಯವಿರುತ್ತವೆ. ನಿಗದಿತ ಕೋವಿಡ್–19 ಆಸ್ಪತ್ರೆಯಾಗಿರುವ ಜಿಲ್ಲಾ ಆಸ್ಪತ್ರೆಯಲ್ಲಿ ಹೊರರೋಗಿಗಳ ವಿಭಾಗ ಸೇರಿದಂತೆ ಇತರೆ ಚಿಕಿತ್ಸಾ ಸೌಲಭ್ಯ ಆರಂಭಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಜಿಲ್ಲೆಯಲ್ಲಿ ಮಾಸ್ಕ ಹಾಕದೆ ಇರುವ ಹಾಗೂ ಸಾಮಾಜಿಕ ಅಂತರ ಉಲ್ಲಂಘಣೆ ಮಾಡಿರುವ ಪ್ರಕರಣಗಳಲ್ಲಿ ರೂ.67.00 ಲಕ್ಷ ದಂಡವನ್ನು ವಿಧಿಸಿ ಮೊತ್ತವನ್ನು ಸಂಗ್ರಹಿಸಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ಸಭಾಧ್ಯಕ್ಷರು ಮುಂದಿನ ದಿನಗಳ ಕೋವಿಡ್–19 ಸೋಂಕಿನ 2ನೇ ಅಲೆ ಬರುವ ಸಾಧ್ಯತೆಗಳಿದ್ದು, ಈ ಕುರಿತಂತೆ ಆರೋಗ್ಯ ಇಲಾಖೆಯವರು ಪೂರ್ವ ಸಿದ್ಧತೆಗಳನ್ನು ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

**ಕೃಷಿ ಇಲಾಖೆ:**

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಕೃಷಿ ಅಧಿಕಾರಿಗಳಿಗೆ ಕೃಷಿ ಇಲಾಖೆಯ ಮಾಹಿತಿಯನ್ನು ಸಭೆಯಲ್ಲಿ ವಿವರಿಸುವಂತೆ ತಿಳಿಸಿದರು. ಕೃಷಿ ಅಧಿಕಾರಿಗಳು ಮಾತನಾಡಿ ಪ್ರಸ್ತುತ ವರ್ಷ ಮಳೆ ಉತ್ತಮವಾಗಿದ್ದು, ಕೆಲವೊಂದು ಸ್ಥಳದಲ್ಲಿ ಹೆಸರು ಬೆಳೆ ಹಾನಿಯಾಗಿದ್ದು, ಇನ್ನುಳಿದಂತೆ ಉತ್ತಮವಾಗಿರುತ್ತದೆ ಅಂತಾ ತಿಳಿಸಿದರು. ಇಲಾಖೆಯ ಕಾರ್ಯಕ್ರಮದ ಬಗ್ಗೆ ವಿವರಿಸುತ್ತ ಜಿಲ್ಲಾ ಪಂಚಾಯತ ಕಾರ್ಯಕ್ರಮ್ಮದಡಿಯಲ್ಲಿ ವಾರ್ಷಿಕವಾಗಿ ರೂ.2038.32 ಲಕ್ಷ ಅನುದಾನ ನಿಗದಿಪಡಿಸಲಾಗಿದ್ದು, ಇಲ್ಲಿಯವರೆಗೆ ರೂ.1358.37 ಲಕ್ಷ ಬಿಡುಗಡೆಯಾಗಿದ್ದು, ಒಟ್ಟಾರೆ ವೆಚ್ಚ ರೂ.1075.26 ಲಕ್ಷ ವೆಚ್ಚವಾಗಿದೆ. ಶೇ 79.16 ಸಾಧನೆಯಾಗಿದೆ ಅಂತಾ ಸಭೆಯಲ್ಲಿ ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಮುಂದಿನ ಸಭೆಯಲ್ಲಿ ರಾಜ್ಯ ವಲಯ ಮತ್ತು ಕೇಂದ್ರ ವಲಯ ಕಾರ್ಯಕ್ರಮಗಳನ್ನೊಳಗೊಂಡ ಮಾಹಿತಿಯನ್ನು ಒದಗಿಸುವಂತೆ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿಗೆ 20 ಸಾವಿರ ಕ್ವಿಂಟಲ್ ಬಿತ್ತನೆ ಬೀಜ ಪೂರೈಕೆಯಾಗಿದ್ದು, ಅದರಲ್ಲಿ 15 ಸಾವಿರ ಕ್ವಿಂಟಲ್ ಬೀಜ ವಿತರಣೆ ಮಾಡಲಾಗಿದ್ದು, ಇನ್ನು 5 ಸಾವಿರ ಕ್ವಿಂಟಲ್ ಬೀಜ ದಾಸ್ತಾನು ಇದೆ ಎಂದು ಕೃಷಿ ಅಧಿಕಾರಿಗಳು ತಿಳಿಸಿದರು. 27 ಸಾವಿರ ಮೆಟ್ರಿಕ ಟನ್ ಗೊಬ್ಬರ ದಾಸ್ತಾನು ಇದೆ. ಯಾವುದೇ ರೀತಿಯ ಕೊರತೆ ಇರುವುದಿಲ್ಲವೆಂದು ತಿಳಿಸಿದರು. ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳು ವಿವಿಧ ಯೋಜನೆಗಳಡಿ ಫಲಾನುಭವಿಗಳನ್ನು ಸಾಕಷ್ಟು ಮುಂಚಿತವಾಗಿ ಸಿದ್ಧಪಡಿಸಿಟ್ಟುಕೊಳ್ಳಬೇಕೆಂದು ಅಂದಾಗ ಮಾತ್ರ ಆರ್ಥಿಕ ಮತ್ತು ಭೌತಿಕ ಪ್ರಗತಿ ಸಾಧಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

**ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:**

ಉಪ ಕಾರ್ಯದರ್ಶಿಗಳು (ಅಭಿವೃದ್ಧಿ) ಇವರು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳ ಅಂಕಿ ಅಂಶಗಳನ್ನು ಸಭೆಗೆ ವಿವರಿಸಿದಂತೆ 661241 ಮನೆಗಳನ್ನು ನೊಂದಣಿ ಮಾಡಿದ್ದು, ಪ್ರಸ್ತುತ ವರ್ಷದಲ್ಲಿ ಹೊಸದಾಗಿ 47292 ಕೆಲಸ ನಿಡಲಾಗಿದೆ. 43115 ಕೆಲಸಗಾರರು ಭಾಗವಹಿಸಿರುತ್ತಾರೆ ಅಂತಾ ಮಾಹಿತಿ ನೀಡಿದರು.ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ 73.10 ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. 56000 ಉದ್ಯೋಗ ಚೀಟಿಗಳನ್ನು ವಿತರಿಸಲಾಗಿದೆ. ಆದರೆ, ನಿಪ್ಪಾಣಿ ಭಾಗದಲ್ಲಿ ಮಾನವ ದಿನಗಳನ್ನು ಶೇ 44.38 ಮಾತ್ರ ಸೃಜಿಸಲಾಗಿದ್ದು, ಕಡಿಮೆ ಪ್ರಗತಿ ಇದೆ. ವಿವರಿಸುವಂತೆ ತಿಳಿಸಿದರು. ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತ ಬೆಳಗಾವಿ ಇವರು ಮಾತನಾಡುತ್ತ ನಿಪ್ಪಾಣಿ ಭಾಗದಲ್ಲಿ ಎಮ್.ಆಯ್.ಡಿ.ಸಿ. ಕಾರ್ಖಾನೆ ಇರುವುದರಿಂದ ಸ್ಥಳೀಯರು ಕಾರ್ಖಾನೆಗೆ ಹೆಚ್ಚಾಗಿ ಕೆಲಸಕ್ಕೆ ಹೋಗುತ್ತಾರೆ ಅಂತಾ ಉತ್ತರಿಸಿದರು. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ ವೈಯಕ್ತಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಶ್ಯಸ್ತೆ ನೀಡಲು ಸೂಚನೆ ನೀಡಿದರು.

ನಿಪ್ಪಾಣಿ, ಕಾಗವಾಡ, ಬೆಳಗಾವಿ ಸಸಿಗಳನ್ನು ನೆಡುವುದು ಮತ್ತು ಉಜಾಂ ಖಿಚಿಂರುಟಿಂ ದಲ್ಲಿ ಶೇ 75 ರಷ್ಟು ಸಾಧನೆಯಾಗಿದ್ದು, ಹೆಚ್ಚಿನ ಸಾಧನೆ ಮಾಡಲು ಸೂಚನೆ ನೀಡಿದರು. ನರೇಗಾ ಯೋಜನೆಯಡಿಯಲ್ಲಿ ರಿಚಾರ್ಜ ಪಿಟಗಳನ್ನು ಮಾಡುವಾಗ ಭೂವಿಜ್ಞಾನಿಗಳ ಅಭಿಪ್ರಾಯ ಪಡೆದು ಸೂಚನೆ ನೀಡಿದರು. ಪವಿತ್ರ ವನ ನಿರ್ಮಾಣ ಮಾಡುವಾಗ ಮಧ್ಯದಲ್ಲಿ ಮೇವು ಬೆಳೆಯನ್ನು ಬೆಳೆದು ಗ್ರಾಮ ಪಂಚಾಯತಿಗಳು ರೈತರಿಗೆ ಕಟಾವು ಮಾಡಿಕೊಂಡು ಹೋಗಲು ಅನುಕೂಲ ಮಾಡಿಕೊಡಬೇಕು. ಪವಿತ್ರ ವನ ನಿರ್ಮಿಸುವಾಗ ಜಮೀನುಗಳ ಲಭ್ಯತೆ ಇಲ್ಲದೇ ಇದ್ದರೆ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಗಾಯರಾಣಾ ಜಮೀನುಗಳನ್ನು ಪಡೆಯಲು ಕ್ರಮ ವಹಿಸತಕ್ಕದ್ದು. ರಿಚಾರ್ಜ ಕ್ಯಾಪ್ ಪಕ್ಕದಲ್ಲಿ ಮತ್ತೊಂದು ಬೋರವೆಲ್‌ನ್ನು ಕೊರೆದು ಅದರ ಮುಖಾಂತರ ನೀರು ಹರಿಯುವ ಹಾಗೆ ಮಾಡಿ ಅದರ ಪಕ್ಕದಲ್ಲಿಯೇ ಸಸಿಗಳನ್ನು ನೆಡುವಂತೆ ಸೂಚನೆ ನೀಡಿದರು. ಪವಿತ್ರ ವನ ಕಾರ್ಯಕ್ರಮವು ಇದೊಂದು ಪೈಲೆಟ್ ಯೋಜನೆಯಾಗಿರುವುದರಿಂದ ಸಫಲ ಆದಲ್ಲಿ ಬೇರೆ ಜಿಲ್ಲೆಗಳಲ್ಲಿಯೂ ಸಹ ಅನುಷ್ಠಾನ ಮಾಡಲು ಕ್ರಮ ಕೈಕೊಳ್ಳಲಾಗಿವುದು. ಉಪ ಕಾರ್ಯದರ್ಶಿಗಳು (ಅಭಿವೃದ್ಧಿ) ಇವರು ಮಾತನಾಡಿ ಭೂ ವಿಜ್ಞಾನಿಗಳ ಅಭಿಪ್ರಾಯ ಪಡೆದು 6–10 ಕೆರೆಗಳನ್ನು ತೆಗೆದುಕೊಳ್ಳಲಾಗಿದೆ ಅಂತಾ ಸಭೆಯಲ್ಲಿ ತಿಳಿಸಿದರು. ಮತ್ತು ಇಂಗು ಗುಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನರೇಗಾದಲ್ಲಿ 22336 ಅನುಷ್ಠಾನಗೊಳಿಸಿದ್ದೇವೆ. ಕಳೆದ ಬಾರಿ 90000 ಇಂಗು ಗುಂಡಿ ನಿರ್ಮಾಣ ಮಾಡಿರುತ್ತೇವೆ ಅಂತಾ ಸಭೆಯಲ್ಲಿ ತಿಳಿಸಿದರು.

ನರೇಗಾ ಜಿಲ್ಲೆಯ ಪ್ರಗತಿ ತೃಪ್ತಿದಾಯಕವಾಗಿದೆ. ನಿಪ್ಪಾಣಿ ಬೆಳಗಾವಿ ಹಾಗೂ ಕಾಗವಾಡ ತಾಲೂಕಿನಲ್ಲಿ ವೈಯಕ್ತಿಕ ಸೌಲಭ್ಯ ಒದಗಿಸುವ ಮೂಲಕ ಇನ್ನಷ್ಟು ಪ್ರಗತಿ ಸಾಧಿಸುವಂತೆ ತಿಳಿಸಿದರು. ಅದೇ ರೀತಿ ನರೇಗಾ ಯೋಜನೆಯಡಿ ಕೂಲಿಪಾವತಿ 100ಕ್ಕೆ 100 ರಷ್ಟು ಸಾಧನೆ ಮಾಡುವಂತೆ ಸೂಚನೆ ನೀಡಿದರು.

<u>ಕುಡಿಯುವ ನೀರು ಸರಬರಾಜು ಯೋಜನೆ/ ಜಲ ಜೀವನ ಮಿಷನ್ ಯೋಜನೆ:</u>

ಜಿಲ್ಲೆಯಲ್ಲಿ ಜಲಜೀವನ ಮಿಷನ್ ಯೋಜನೆಯಡಿ ಪ್ರತಿಯೊಂದು ಮನೆಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ರೈತರು ಹಾಗೂ ಪ್ರತಿ ಮನೆಗೆ ನಳಗಳನ್ನು ಕೊಡುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಈಗಾಗಲೇ ಕಾರ್ಯವು ಪ್ರಗತಿಯಲ್ಲಿದ್ದು, ಡಿಸೆಂಬರ ಕೊನೆಯ ವಾರದವರೆಗೆ ಪೂರ್ಣಗೊಳಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ ಅಂತಾ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬೆಳಗಾವಿ/ ಚಿಕ್ಕೋಡಿ ಇವರು ತಿಳಿಸಿದರು.

ಜಲಜೀವನ ಮಿಷನ್ ಕಾಮಗಾರಿಗಳನ್ನು ತಕ್ಷಣ ಆರಂಭಿಸಬೇಕು. ಶುದ್ಧ ಕುಡಿಯುವ ನೀರು ಘಟಕಗಳು ಚಾಲ್ತಿಯಲ್ಲಿರುವಂತೆ ಕ್ರಮ ಕೈಗೊಳ್ಳಬೇಕು. ನಿರ್ವಹಣೆ ಅಥವಾ ದುರಸ್ತಿ ಆಗಬೇಕಾದ ಘಟಕಗಳನ್ನು ಕೂಡಲೇ ಸರಿಪಡಿಸಬೇಕು ಸಭಾಧ್ಯಕ್ಷರು ಸೂಚನೆ ನೀಡಿದರು.

<u>ಸ್ವಚ್ಛಭಾರತ ಮಿಷನ್ ಯೋಜನೆ:</u>

ಸ್ವಚ್ಛಭಾರತ ಮಿಷನ್ ಯೋಜನೆಚುಡಿಯಲ್ಲಿ ಗ್ರಾಮ ಪಂಚಾಯತಿಗಳು ಹಾಗೂ ಅಂಗನವಾಡಿ ಕೇಂದ್ರಗಳು ಮತ್ತು ಶಾಲೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಸಭೆಯ ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು. ಉಪ ಕಾರ್ಯದರ್ಶಿಗಳು (ಆಡಳಿತ) ಇವರು ಮಾತನಾಡಿ ಜಿಲ್ಲೆಯಲ್ಲಿರುವ ಎಲ್ಲ ಅಂಗನವಾಡಿ ಹಾಗೂ ಶಾಲೆಗಳಲ್ಲಿ, ಗ್ರಾಮ ಪಂಚಾಯತಿಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುತ್ತೇವೆ ಎಂದು ಸಭೆಯಲ್ಲಿ ತಿಳಿಸಿದರು.

ವೈಯಕ್ತಿಕ ಶೌಚಾಲಯ ನಿರ್ಮಾಣದ ಗಡುವು ಈಗಾಗಲೇ ಮುಗಿದಿರುವುದರಿಂದ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ಸಮುದಾಯ ಶೌಚಾಲಯಗಳ ನಿರ್ಮಾಣಕ್ಕೆ ಆದ್ಯತೆ ನೀಡಬೇಕು, ಸಾಧ್ಯವಾದಷ್ಟು ದೇವಸ್ಥಾನ, ಬಸ್‌ನಿಲ್ದಾಣ ಹಾಗೂ ಜನಸಂದಣಿ ಹೆಚ್ಚಾಗಿರುವ ಸ್ಥಳಗಳನ್ನು ಗುರುತಿಸಿ ಸಮುದಾಯ ಶೌಚಾಲಯ ನಿರ್ಮಿಸುವಂತೆ ಸೂಚನೆ ನೀಡಿದರು.

**<u>ಸಾರ್ವಜನಿಕ ಶಿಕ್ಷಣ ಇಲಾಖೆ</u>**

ಸಭಾಧ್ಯಕ್ಷರು ಮಾತನಾಡುತ್ತ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಶಾಲೆಗಳ ಪ್ರಾರಂಭವಾಗುವ ಬಗ್ಗೆ ಹಾಗೂ ಅವರ ಕಲಿಕೆಯ ಬಗ್ಗೆ ಮಾಹಿತಿಯನ್ನು ಕೇಳಿದರು. ಶಿಕ್ಷಣ ಅಧಿಕಾರಿಗಳು ಈಗಾಗಲೇ ಆನ್‌ಲೈನನಲ್ಲಿ ತರಗತಿಗಳು ಪ್ರಾರಂಭವಾಗಿರುತ್ತವೆ. ವಿಷಯವಾರು ಶಿಕ್ಷಕರು ಗ್ರಾಮಗಳಲ್ಲಿ ಮಕ್ಕಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತಿದ್ದಾರೆ. ಹಾಗೂ ಇದುವರೆಗೆ ಸರ್ಕಾರದಿಂದ ಶಾಲೆಗಳು ಪ್ರಾರಂಭ ಯಾವುದೇ ಆದೇಶ ಬಂದಿರುವುದಿಲ್ಲ. ಕೇವಲ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳ ತರಗತಿಗಳನ್ನು ಪ್ರಾರಂಭಿಸಲು ಆದೇಶಿಸಿರುತ್ತಾರೆ. ಈಗಾಗಲೇ ನಾವು ಎಲ್ಲ ಶಾಲೆಗಳನ್ನು ಹಾಗೂ ತರಗತಿಗಳನ್ನು ಸ್ವಚ್ಛಗೊಳಿಸಿದ್ದು ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದ ಆದೇಶಕ್ಕಾಗಿ ನಿರೀಕ್ಷೆಯಲ್ಲಿದ್ದೇವೆ ಅಂತಾ ತಿಳಿಸಿದರು. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ ಕುಡಿಯುವ ನೀರು ಮತ್ತು ಶೌಚಾಲಯಗಳ ಬಗ್ಗೆ ಹೆಚ್ಚಿನ ಪ್ರಾಧ್ಯಾನತೆ ನೀಡಬೇಕು ಮತ್ತು ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಬೇಕೆಂದು ಸೂಚನೆ ನೀಡಿದರು.

**<u>ಶಾಲೆಗಳಲ್ಲಿ ನೀರು ಶೌಚಾಲಯ ಅಂಗನವಾಡಿ ವಿದ್ಯುತ್ ಸಂಪರ್ಕ ಒದಗಿಸಲು ಕಟ್ಟುನಿಟ್ಟಿನ ಸೂಚನೆ</u>**

ಜಿಲ್ಲೆಯ ಪ್ರತಿ ಶಾಲೆಯಲ್ಲಿ ಕುಡಿಯುವ ನಿರು ಮತ್ತು ಶೌಚಾಲಯ ವ್ಯವಸ್ಥೆಯನ್ನು ಕಡ್ಡಾಯವಾಗಿ ಒಸಗಿಸಬೇಕೆಂದು ಅದೇ ರೀತಿ ಪ್ರತಿಯೊಂದು ಅಂಗನವಾಡಿ ಕೇಂದ್ರಕ್ಕು ವಿದ್ಯುತ್ ಸಂಪರ್ಕ ಒದಗಿಸಬೇಕೆಂದು. ವಿದ್ಯುತ್ ಸಂಪರ್ಕ ಒದಗಿಸಲು ವಿಶೇಷ ಅಭಿಯಾನ ಹಮ್ಮಿಕೊಳ್ಳಬೇಕು ಎಂದು ಸಭಾಧ್ಯಕ್ಷರು ಸೂಚಿಸಿದರು. ಸದರಿಯವರು ನೀರು ಶೌಚಾಲಯ ಮತ್ತು ವಿದ್ಯುತ್ ಸಂಪರ್ಕ ಇವುಗಳನ್ನು ಒದಗಿಸಲು ಗ್ರಾಮ ಪಂಚಾಯತಿ ವತಿಯಿಂದ ಅಗತ್ಯ ನೆರವು ನೀಡಲು ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ದೂರದರ್ಶನ ಮೂಲಕ ಶಾಲಾ ಮಕ್ಕಳಿಗೆ ಪಾಠ ಬೋಧನೆ ನಡೆಯುತ್ತಿರುವುದರಿಂದ ಯಾವ ಮನೆಯಲ್ಲಿ ಟಿವಿ ಇರುವುದಿಲ್ಲವು ಅಂತಹ ಮಕ್ಕಳಿಗೆ ಪಾಠ ಕೇಳಲು ಅನುಕೂಲವಾಗುವಂತೆ ಗ್ರಾಮ ಪಂಚಾಯತಿಯ ಆವರಣದಲ್ಲಿ ಟಿವಿ ಸೌಲಭ್ಯ ಕಲ್ಪಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು. ಈ ಬಗ್ಗೆ ಗ್ರಾಮ ಪಂಚಾಯತಿಗಳು ಕೂಡ ಮಕ್ಕಳ ಶಿಕ್ಷಣಕ್ಕೆ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಅನುದಾನ ಲಭ್ಯವಿರುವ ಕಡೆಗಳಲ್ಲಿ ಸಾಧ್ಯವಿದಷ್ಟು ದೊಡ್ಡ ಪರದೆಯ ಟಿವಿಗಳನ್ನು ಖರೀದಿಸವಹುದು. ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಗ್ರಾಮ ಪಂಚಾಯತಿಗೆ ಸೂಕ್ತ ನಿರ್ದೇಶನ ನೀಡಿದರು. ಉಪ ಕಾರ್ಯದರ್ಶಿಗಳು (ಅಭಿವೃದ್ಧಿ) ಇವರು ಮಾತನಾಡಿ ಗ್ರಾಮ ಪಂಚಾಯತಿಯಲ್ಲಿರುವ ಗ್ರಂಥಾಲಯದಲ್ಲಿ ಸಣ್ಣ ಟಿವಿಯ ಪರದೆಗಳನ್ನು ಈಗಾಗಲೇ ಅಳವಡಿಸಲಾಗಿರುತ್ತದೆ ಅಂತಾ ಮಾಹಿತಿ ನೀಡಿದರು. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮ ಪಂಚಾಯತಿಗಳು ಕನಿಷ್ಠ 42 ಇಂಚಿನ ಎಲ್‌ಇಡಿ ಟಿವಿಯನ್ನು ಗ್ರಾಮ ಪಂಚಾಯತಿ ಮುಖಾಂತರ ಅಳವಡಿಸುವಂತೆ ಸೂಚನೆ ನೀಡಿದರು.

**<u>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:</u>**

ಸಭಾಧ್ಯಕ್ಷರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಗಳಿಗೆ ತಮ್ಮ ಇಲಾಖೆ ಮಾಹಿತಿಯನ್ನು ನೀಡಲು ಸೂಚಿಸಿದರು. ಅದರಂತೆ ಅಧಿಕಾರಿಗಳು ಜಿಲ್ಲೆಯಲ್ಲಿರುವ ಎಲ್ಲ ಅಂಗನವಾಡಿ ಕೇಂದ್ರಗಳು ಸ್ವಚ್ಛಗೊಳಿಸಿದ್ದು, ಸರ್ಕಾರದಿಂದ ಬರುವಂತಹ ಆಹಾರವನ್ನು ಪ್ರತಿ ಮಕ್ಕಳ ಮನೆಗೆ ಅಂಗನವಾಡಿ ಸಹಾಯಕರು ಕಿಟ್ಟಗಳನ್ನು ತಯಾರಿಸಿ ವಿತರಿಸುತ್ತಿದ್ದಾರೆ. ವಿತರಿಸಿದ ನಂತರ ಅವರಿಂದ ಸ್ವೀಕೃತಿಯನ್ನು ಪಡೆಯಲಾಗುತ್ತದೆ ಅಂತಾ ಮಾಹಿತಿ ನೀಡಿದರು. ಇವರ ಮೇಲೆ ತಾಲೂಕಿನ ಮೇಲ್ವಿಚಾರಕರು ನಿಗಾವಹಿಸುತ್ತಿದ್ದು, ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಸರಿಯಾಗಿ ಆಹಾರವನ್ನು ವಿತರಿಸುತ್ತಿದ್ದೇವೆ ಅಂತಾ ತಿಳಿಸಿದರು.

ಸಾಲ/ ಸೌಲಭ್ಯ ಒದಗಿಸುವ ಉದ್ಯೋಗಿನಿ, ದೇವದಾಸಿ ಪುನರ್ವಸತಿ ಯೋಜನೆ ಮತ್ತು ಮತ್ತಿತರೆ ಯೋಜನೆಗಳ ಫಲಾನುಭವಿಗಳ ಆಯ್ಕೆ ವಿಳಂಬದ ಕುರಿತು ನೀಡಿದ ಅಂಕಿ ಅಂಶಗಳನ್ನು ಸರಿಯಾಗಿ ಇರುವುದಿಲ್ಲ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಸಭೆಗೆ ಅಂಕಿ ಅಂಶಗನ್ನು ತರದೇ ಪೂರ್ವ ಸಿದ್ಧತೆಯೊಂದಿಗೆ ಬಂದಿರುವುದಿಲ್ಲವಾದ್ದರಿಂದ ಸಭಾಧ್ಯಕ್ಷರು ಅಸಮಾಧಾನ ವ್ಯಕ್ತ ಪಡಿಸಿದರು. ಸಭಾಧ್ಯಕ್ಷರು ಈ ಬಗ್ಗೆ ಇಲಾಖಾ ಅಧಿಕಾರಿಗಳು ವಿಶೇಷ ಗಮನಹರಿಸಿ ಪ್ರಗತಿ ಸಾಧಿಸುವಂತೆ ಸೂಚಿಸಿದರು. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ ವಿದ್ಯುತ್ ಸಂಪರ್ಕ ಹೊಂದದೇ ಇರುವ 1195 ಅಂಗನವಾಡಿಗಳಿದ್ದು ಇವುಗಳಿಗೆ ವಿದ್ಯುತ್ ಸಂಪರ್ಕವನ್ನು ಬೇರೆ ಇತರೆ ಯೋಜನೆಗಳಿಂದ ಗ್ರಾಮ ಪಂಚಾಯತ ಮುಖಾಂತರ ಒದಗಿಸುವಂತೆ ಸೂಚನೆ ನೀಡಿದರು. ಇದಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿ ಚಿಕ್ಕೋಡಿ ಇವರಿಗೆ ವಿದ್ಯುತ್ ಸಂಪರ್ಕ ಒದಗಿಸಲು ಖರ್ಚಾಗುವ ಮೊತ್ತದ ಬಗ್ಗೆ ವಿವರಿಸುವಂತೆ ತಿಳಿಸಿದರು. ಸದರಿಯವರು ಸುಮಾರು ರೂ.10000 ಖರ್ಚು ತಗಲುವದೆಂದು ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿದ್ದ ಹೆಸ್ಕಾಂ ಅಧಿಕಾರಿ ವಿದ್ಯುತ್ ಸಂಪರ್ಕ ಒದಗಿಸಲು ಇಲಾಖೆಯಿಂದ ಸುಮಾರು ರೂ.2000 ರಿಂದ 3000 ವರೆಗೆ ಮೀಟರ ಸಂಪರ್ಕ ಒದಗಿಸಲು ಠೇವಣಿ ತೆಗೆದುಕೊಳ್ಳಲಾಗುತ್ತದೆ ಅಂತಾ ತಿಳಿಸಿದರು.

ಹೆಸ್ಕಾಂ ಅಧೀಕ್ಷಕ ಅಭಿಯಂತರರು ಮಾತನಾಡುತ್ತ ಗ್ರಾಮ ಪಂಚಾಯತಿಗಳಿಂದ ಸುಮಾರು ರೂ.44.00 ಕೋಟಿ ವಿದ್ಯುತ್ ಬಾಕಿ ಇರುವುದಾಗಿ ತಿಳಿಸಿ ಗ್ರಾಮ ಪಂಚಾಯತಿಗಳು ತುಂಬುತ್ತಿಲ್ಲವೆಂದು ತಿಳಿಸಿದರು. ಉಪ ಕಾರ್ಯದರ್ಶಿ (ಅಭಿವೃದ್ಧಿ) ಇವರಿಗೆ ಪರಿಶೀಲನೆ ಮಾಡಲು ಸೂಚಿಸಲಾಯಿತು.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮುಂದುವರೆಯುತ್ತ ಪಂಚಾಯತ ರಾಜ್ ಇಂಜನೀಯರಿಂಗ ಇಲಾಖೆಗಳ ಪ್ರಗತಿಯನ್ನು ಪರಿಶೀಲನೆ ಮಡಲಾಗಿರುವುದರಿಂದ ಅಂಗನವಾಡಿ ಕಟ್ಟಡಗಳ ನಿರ್ಮಾಣ ಅತಿವೃಷ್ಟಿಯಿಂದ ಹಾನಿಗೊಳಗಾದ ರಸ್ತೆ ಸೇತುವೆ ದುರಸ್ತಿ, ನೀರಾವರಿ, ಲಸಿಕೆ ಕಾರ್ಯಕ್ರಮ, ಜಿಲ್ಲಾ ತಾಲೂಕು ಮತ್ತು ಗ್ರಾಮ ಪಂಚಾಯತಿಗಳ ಕ್ರಿಯಾ ಯೋಜನೆ ಅನುಮೋದನೆ, ಸ್ವಚ್ಛಭಾರತ ಮಿಷನ್, ಗ್ರಾಮೀಣ ವಸತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ಈ ಎಲ್ಲ ಇಲಾಖೆಗಳು ಶೇ 100 ರಷ್ಟು ಪ್ರಗತಿಯನ್ನು ಸಾಧಿಸುವಂತೆ ಸಭಾಧ್ಯಕ್ಷರು ಸೂಚಿಸಿದರು.

**ಸಮಾಜ ಕಲ್ಯಾಣ ಇಲಾಖೆ:**

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ವಸತಿ ನಿಲಯಗಳ ಬಗ್ಗೆ ಮಾನ್ಯ ಸಭಾಧ್ಯಕ್ಷರು ವಿಚಾರಿಸಿದರು. ಮತ್ತು ಕೋವಿಡ್ ಕೇಂದ್ರಗಳನ್ನಾಗಿ ಪರಿವರ್ತಿಸಲಾದ ವಸತಿ ನಿಲಯಗಳನ್ನು ಸ್ಯಾನಿಟೈಸ್ ಮಾಡಲಾಗಿದೆ ಹೇಗೆ ಮತ್ತು ಅದೇ ಹಾಸಿಗೆಗಳನ್ನು ಉಪಯೋಗಿಸಲಾಗುತ್ತಿದೆಯೇ ಅಂತಾ ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಪ್ರಶ್ನಿಸಿದರು. ಇಲಾಖಾ ಅಧಿಕಾರಿಗಳು ಮಾತನಾಡಿ ಯಾವುದೇ ವಸತಿ ನಿಲಯಗಳು ಪ್ರಾರಂಭ ಇರುವುದಿಲ್ಲ. ಆದರೆ, ವಸತಿ ನಿಲಯಗಳಲ್ಲಿ "ಡಿ" ದರ್ಜೆಯ ನೌಕರರ ಮುಖಾಂತರ ಸ್ಯಾನಿಟೈಸ್ ಮಾಡಿರುತ್ತೇವೆ ಅಂತಾ ಸಭೆಯಲ್ಲಿ ತಿಳಿಸಿದರು.

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿ ವೇತನದ ಅರ್ಜಿಗಳನ್ನು ಪ್ರಾರಂಭಿಸಲು ಸರ್ಕಾರದಿಂದ ನಿರ್ದೇಶನ ಬಂದಿರುವುದಿಲ್ಲ. ಕಳೆದ ವರ್ಷದ ವಿದ್ಯಾರ್ಥಿ ವೇತನದ ಅರ್ಜಿಗಳನ್ನು ವಿಲೇವಾರಿ ಮಾಡಿ ವಿದ್ಯಾರ್ಥಿಗಳ ಖಾತೆಗೆ ವಿದ್ಯಾರ್ಥಿ ವೇತನ ಜಮೆ ಮಾಡಲಾಗಿದೆ ಅಂತಾ ಸಭೆಯಲ್ಲಿ ತಿಳಿಸಿದರು.

**ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:**

ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿ ವೇತನದ ಅರ್ಜಿಗಳನ್ನು ಪ್ರಾರಂಭಿಸಲು ಸರ್ಕಾರದಿಂದ ನಿರ್ದೇಶನ ಬಂದಿರುವುದಿಲ್ಲ. ಕಳೆದ ವರ್ಷದ ವಿದ್ಯಾರ್ಥಿ ವೇತನದ ಅರ್ಜಿಗಳನ್ನು ವಿಲೇವಾರಿ ಮಾಡಿ ವಿದ್ಯಾರ್ಥಿಗಳ ಖಾತೆಗೆ ವಿದ್ಯಾರ್ಥಿ ವೇತನ ಜಮೆ ಮಾಡಲಾಗಿದೆ ಅಂತಾ ಸಭೆಯಲ್ಲಿ ತಿಳಿಸಿದರು.

**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ:**

ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿ ವೇತನದ ಅರ್ಜಿಗಳನ್ನು ಪ್ರಾರಂಭಿಸಲು ಸರ್ಕಾರದಿಂದ ನಿರ್ದೇಶನ ಬಂದಿರುವುದಿಲ್ಲ. ಕಳೆದ ವರ್ಷದ ವಿದ್ಯಾರ್ಥಿ ವೇತನದ ಅರ್ಜಿಗಳನ್ನು ವಿಲೇವಾರಿ ಮಾಡಿ ವಿದ್ಯಾರ್ಥಿಗಳ ಖಾತೆಗೆ ವಿದ್ಯಾರ್ಥಿ ವೇತನ ಜಮೆ ಮಾಡಲಾಗಿದೆ ಅಂತಾ ಸಭೆಯಲ್ಲಿ ತಿಳಿಸಿದರು.

**ಅರಣ್ಯ ಇಲಾಖೆ**

ಅರಣ್ಯ ಅಧಿಕಾರಿಗಳು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಣೆ ನೀಡಿದರು. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಮಾತನಾಡಿ ಎಷ್ಟು ಹೆಕ್ಟರ ಸಸಿಗಳನ್ನು ನೆಡಲಾಗಿದೆ ಅಂತಾ ಪ್ರಶ್ನಿಸಿದರು. ಇಲಾಖಾ ಅಧಿಕಾರಿಗಳು ಮಾತನಾಡಿ ಈವರೆಗೆ 3.00 ಲಕ್ಷ ಸಸಿಗಳನ್ನು ನೆಡಲಾಗಿದೆ ಅಂತಾ ವಿವರಣೆ ನೀಡಿದರು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡುತ್ತ ನಿಮ್ಮ ಜಿಲ್ಲೆಯಿಂದ 1.00 ಕೋಟಿ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಅಂತಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ. ನಿಮ್ಮಲ್ಲಿ ಸೌಲಭ್ಯ ಸಾಮಗ್ರಿಗಳೇನು ಇಷ್ಟು ಸಸಿಗಳನ್ನು ನೆಡಲಿಕ್ಕೆ ಕಾರ್ಯಕ್ರಗಳನ್ನು ಹೇಗೆ ರೂಪಿಸಿಕೊಂಡಿರುವಿರಿ. ಸರ್ಕಾರದ ನರ್ಸರಿಗಳು ಎಷ್ಟು, ಖಾಸಗಿ ನರ್ಸರಿಗಳೆಷ್ಟು ಅವುಗಳಿಂದ ತ್ವರಿತವಾಗಿ ಸಸಿಗಳನ್ನು ಪೂರೈಸಲು ಸಾಧ್ಯವೆ ಅಂತಾ ಪ್ರಶ್ನಿಸಿದರು. ಮತ್ತು ಇವುಗಳೆಲ್ಲ ನೀವು ಸಾಧನೆ ಮಾಡಬೇಕಾದಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದರು. ಉಪ ಕಾರ್ಯದರ್ಶಿ (ಅಭಿವೃದ್ಧಿ) ಇವರು ಮಾತನಾಡಿ ಪ್ರಸ್ತುತ ವರ್ಷ 63.00 ಲಕ್ಷ ಸಸಿಗಳನ್ನು ನೆಡಲು ಕ್ರಿಯಾ ಯೋಜನೆ ತಯಾರಿಸಲಾಗಿದೆ ಅಂತಾ ಸಭೆಯಲ್ಲಿ ಉತ್ತರಿಸಿದರು.

**ಮೀನುಗಾರಿಕೆ ಇಲಾಖೆ**

ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಇಲಾಖೆಯ ಪ್ರಗತಿಯನ್ನು ಸಭೆಯಲ್ಲಿ ವಿವರಿಸಿದರು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ ಇಲಾಖೆಯ ಪ್ರಗತಿ ತುಂಬಾ ಕಡಿಮೆ ಇದೆ. ಮಾನಸೂನ ಮುಗಿಯುವದೊಳಗಾಗಿ ಮೀನುಗಳ ಬಿತ್ತನೆಯನ್ನು ಮಾಡಬೇಕೆಂದು ಸೂಚನೆ ನೀಡಿದರು. ಇಲಾಖೆ ಕೆರೆಗಳು ಇವೆ ಎಂದು ಪ್ರಶ್ನಿಸಿದರು. ಇಲಾಖಾ ಅಧಿಕಾರಿಗಳು ಮಾತನಾಡಿ ಒಟ್ಟು 150 ಕೆರೆಗಳಲ್ಲಿ ಬಿತ್ತನೆ ಮಾಡಲು ಗುರಿ ಇದ್ದು, ಇಲ್ಲಿಯವರೆಗೆ 116 ಕೆರೆಗಳಲ್ಲಿ 36.00 ಲಕ್ಷ ಮೀನುಮರಿಗಳನ್ನು ಬಿತ್ತನೆ ಮಾಡಲಾಗಿದೆ ಅಂತಾ ಉತ್ತರಿಸಿದರು. ಆಗ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ ಸರ್ಕಾರಕ್ಕೆ ನಿಮ್ಮ ಇಲಾಖೆಯಿಂದ ಬರುವ ಆದಾಯದ ಬಗ್ಗೆ ವಿವರಗಳನ್ನು ಮುಂದಿನ ಸಭೆಗೆ ಬರುವಾಗ ತರಬೇಕೆಂದು ಸೂಚನೆ ನೀಡಿದರು.

**ಸಹಕಾರ ಇಲಾಖೆ**

ಸಹಕಾರ ಇಲಾಖೆ ವತಿಯಿಂದ ಜಾರಿಗೊಳಿಸಲಾಗುತ್ತಿರುವ ವಿವಿಧ ಸಾಲ ಮನ್ನಾ, ಸಾಲ ಸೌಲಭ್ಯ ಯೋಜನೆಗಳ ನಿರೀಕ್ಷಿತ ಪ್ರಗತಿ ಸಾಧಿಸುತ್ತಿಲ್ಲ. ಈ ಕುರಿತು ಹೆಚ್ಚಿನ ಗಮನಹರಿಸುವಂತೆ ಜಿಲ್ಲಾಧಿಕಾರಿಗಳು ಇತರೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಧಿಕಾರಿಯು ಸರಿಯಾದ ಮಾಹಿತಿಯನ್ನು ನೀಡಿರುವುದಿಲ್ಲವೆಂದು ಅಸಮಾಧಾನ ವ್ಯಕ್ತಿಪಡಿಸಿ ಮುಂದಿನ ಸಭೆಯಲ್ಲಿ ಸಂಪೂರ್ಣ ಮಾಹಿತಿಯೊಂದಿಗೆ ಬರುವಂತೆ ಸೂಚನೆ ನೀಡಿದರು.

ಸಭಾಧ್ಯಕ್ಷರು ಮಾತನಾಡುತ್ತ ಮುಂದಿನ ಸಭೆಯಲ್ಲಿ ಎಲ್ಲ ಇಲಾಖೆಗಳು ರಾಜ್ಯ ವಲಯ ಹಾಗೂ ಕೇಂದ್ರ ವಲಯದ ಮಾಹಿತಿಯೊಂದಿಗೆ ಸಭೆಗೆ ಹಾಜರಾಗಲು ಸೂಚನೆ ನೀಡಿದರು.

ಕೊನೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಸಭೆಯನ್ನು ನಡೆಸಿಕೊಟ್ಟಿರುವುದಕ್ಕೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ವಂದನೆಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

23/11/2020

(ಎಲ್.ಕೆ. ಅತೀಕ)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬೆಂಗಳೂರು

ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

1. ಜಿಲ್ಲಾಧಿಕಾರಿಗಳು, ಬೆಳಗಾವಿ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
3. ಮುಖ್ಯ ಇಂಜನೀಯರ ಕರ್ನಾಟಕ ನೀರಾವರಿ ನಿಗಮ ನಿಯಮಿತ, ಉತ್ತರ ವಲಯ, ಬೆಳಗಾವಿ.
4. ಉಪ ಕಾರ್ಯದರ್ಶಿಗಳು (ಆಡಳಿತ), (ಅಭಿವೃದ್ಧಿ), ಜಿಲ್ಲಾ ಪಂಚಾಯತ ಬೆಳಗಾವಿ.
5. ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಜಿಲ್ಲಾ ಪಂಚಾಯತ ಬೆಳಗಾವಿ.
6. ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
7. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
8. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ.
9. ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ.
10. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಳಗಾವಿ.
11. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಳಗಾವಿ.
12. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ/ಚಿಕ್ಕೋಡಿ.
13. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ/ಚಿಕ್ಕೋಡಿ.
14. ಕಾರ್ಯನಿರ್ವಾಹಕ ಅಬಿಯಂತರರು, ವಸತಿ ಮಂಡಳಿ (ಕೆಎಚ್‌ಬಿ) ಬೆಳಗಾವಿ.
15. ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬೆಳಗಾವಿ/ಚಿಕ್ಕೋಡಿ.
16. ಕಾರ್ಯನಿರ್ವಾಹಕ ಅಭಿಯಂತರರು, ಕೆಯುಡಬ್ಲ್ಯೂಎಸ್‌ಬಿ ಬೆಳಗಾವಿ.
17. ಕಾರ್ಯನಿರ್ವಾಹಕ ಅಭಿಯಂತರರು, ಜಲಸಂವರ್ಧನ ಸಂಘ, ಮಹಾಂತೇಶನಗರ ಬೆಳಗಾವಿ.
18. ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬೆಳಗಾವಿ/ಚಿಕ್ಕೋಡಿ.
19. ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ ಬೆಳಗಾವಿ.
20. ಉಪ ನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ಬೆಳಗಾವಿ/ಚಿಕ್ಕೋಡಿ.
21. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ/ ಚಿಕ್ಕೋಡಿ.
22. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಬೆಳಗಾವಿ.
23. ಜಿಲ್ಲಾ ನೊಂದಣಿ ಅದಿಕಾರಿಗಳು ಬೆಳಗಾವಿ.
24. ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ ಬೆಳಗಾವಿ.
25. ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತ ಇಲಾಖೆ ಬೆಳಗಾವಿ.
26. ಜಿಲ್ಲಾ ಅಲ್ಪಸಂಖ್ಯಾತ ಅಧಿಕಾರಿಗಳು, ಬೆಳಗಾವಿ.
27. ಜಿಲ್ಲಾ ಪರಿಶಿಷ್ಟ ವರ್ಗಗಳ ಅಧಿಕಾರಿ, ನೆಹರುನಗರ ಬೆಳಗಾವಿ.
28. ಉಪ ನಿಬಂಧಕರು, ಸಹಕಾರ ಸಂಘಗಳ ಇಲಾಖೆ, ಗೋವಾವೇಸ ಬೆಳಗಾವಿ.
29. ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಬೆಳಗಾವಿ.
30. ಉಪ ನಿರ್ದೇಶಕರು, ಕೆಯುಆಯ್‌ಡಿಎಫ್‌ಸಿ, ಗೋವಾವೇಸ ಬೆಳಗಾವಿ.
31. ಉಪ ನಿರ್ದೇಶಕರು, ಭೂದಾಖಲೆಗಳ ಇಲಾಖೆ ಬೆಳಗಾವಿ.
32. ಉಪ ನಿರ್ದೇಶಕರು ವಾರ್ತಾ ಇಲಾಖೆ ಬೆಳಗಾವಿ.
33. ಉಪ ನಿರ್ದೇಶಕರು, ಪ್ರವಾಸ ಉದ್ಯಮ ಇಲಾಖೆ ಬೆಳಗಾವಿ.
34. ಉಪ ನಿರ್ದೇಶಕರು ಯುವಜನ ಸೇವಾ ಇಲಾಖೆ, ಬೆಳಗಾವಿ.
35. ತಾಂತ್ರಿಕ ವ್ಯವಸ್ಥಾಪಕರು ಹಾಗೂ ಎಸ್‌ಎಲ್ ಎಓ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಶಿವಬಸವ ನಗರ ಬೆಳಗಾವಿ.
36. ಕಾರ್ಯನಿರ್ವಾಹಕ ಅಭಿಯಂತರರು, ಕೆಎಸ್‌ಎಚ್‌ಆಯ್‌ಪಿ, ಕ್ಲಬ್ ರೋಡ ಬೆಳಗಾವಿ.
37. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ, ಉಪ ವಿಭಾಗ ಕಿಲ್ಲಾ ಬೆಳಗಾವಿ.
38. ಹಿರಿಯ ಸಹಾಯಕ ನಿರ್ದೇಶಕರು ಮೀನುಗಾರಿಕೆ ಇಲಾಖೆ ಬೆಳಗಾವಿ.
39. ಉಪ ನಿರ್ದೇಶಕರು, ರೇಷ್ಮೆ ಇಲಾಖೆ ಬೆಳಗಾವಿ.
40. ಜಿಲ್ಲಾ ಪರಿಸರ ಅಧಿಕಾರಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ.

41. ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ/ಚಿಕ್ಕೋಡಿ.
42. ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಬೆಳಗಾವಿ/ಚಿಕ್ಕೋಡಿ.
43. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಅಥಣಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ ಹಾಗೂ ರಾಯಬಾಗ.
44. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಅಥಣಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ ಹಾಗೂ ರಾಯಬಾಗ.
45. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ಉಪ ವಿಭಾಗ ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಅಥಣಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ ಹಾಗೂ ರಾಯಬಾಗ.

ದಿನಾಂಕ:17.10.2020 ರಂದು ಚಿತ್ರದುರ್ಗ ಜಿಲ್ಲೆಗೆ ಭೇಟಿ ನೀಡುವ ಮೂಲಕ ವಿವಿಧ ಕ್ಷೇತ್ರಗಳ ಅಡಿಯಲ್ಲಿ ಜಿಲ್ಲಾ ಪ್ರಗತಿ ಪರಿಶೀಲನೆಯನ್ನು ಕೈಗೊಂಡಿರುತ್ತೇನೆ. ಪ್ರಗತಿ ಪರಿಶೀಲನೆಯಲ್ಲಿನ ಪ್ರಮುಖ ಅಂಶಗಳು ಹೀಗಿವೆ.

1. **ಆರೋಗ್ಯ ಇಲಾಖೆ :**

ಜಿಲ್ಲೆಯಲ್ಲಿ ಕೋವಿಡ್-19ರ ನಿಯಂತ್ರಣದಲ್ಲಿ 10953-ಪಾಸಿಟಿವ್ ಪ್ರಕರಣಗಳು ಇದ್ದು, ಒಟ್ಟು ಮೃತರಾದವರು-49 ಎಂಬ ಮಾಹಿತಿ ತಿಳಿದು ಬಂದಿದೆ. 82936 ಜನರ ಸ್ಯಾಂಪಲ್ ಟೆಸ್ಟ್ ಮಾಡಲಾಗಿರುತ್ತದೆ. ಗುಣಮುಖರಾಗಿ ಡಿಸ್ಚಾರ್ಜ್ ಆಗಿರುವ ರೋಗಿಗಳು 9465 ಇದ್ದು, ಪ್ರತಿನಿತ್ಯ 1900 ಜನರಿಗೆ ಸ್ಯಾಂಪಲ್ ಟೆಸ್ಟ್ ಮಾಡಲಾಗುತ್ತಿದೆ, 1552 ಜನರು ಹೋಂ ಐಸೋಲೇಷನ್‌ನಲ್ಲಿ ಇರುವುದನ್ನು ಗಮನಿಸಲಾಯಿತು.

ತಾಲ್ಲೂಕುವಾರು ಹೋಂ ಐಸೋಲೇಷನ್ ಇರುವವರ ವಿವರಣೆಯಲ್ಲಿ **ಚಿತ್ರದುರ್ಗ-612, ಹಿರಿಯೂರು-158, ಹೊಳಲ್ಕೆರೆ-17-, ಹೊಸದುರ್ಗ-371, ಚಳ್ಳಕೆರೆ-182, ಮೊಳಕಾಲ್ಮೂರು-212 ಒಟ್ಟು 1552** ಎಂದು ತಿಳಿದುಬಂದಿದೆ. ಒಂದು ವಾರಕ್ಕೆ ಎಷ್ಟು ಸ್ಯಾಂಪಲ್ ಟೆಸ್ಟ್ ಮಾಡಬೇಕೆಂದು ನಿರ್ದೇಶನ ನೀಡಿದೆಯೋ ಅದರಂತೆ ಕಳೆದ 3 ತಿಂಗಳ ಮಾಹಿತಿಯನ್ನು ಸಹ ಪಡೆಯಲಾಯಿತು.

ಔಷಧಗಳ ಲಭ್ಯತೆ, ಪಿ.ಪಿ.ಇ ಕಿಟ್, ಹೋಂ ಐಸೋಲೇಷನ್ ಇರುವವರಿಗೆ ಯಾವ ರೀತಿ ಚಿಕಿತ್ಸೆ ನೀಡಲಾಗುತ್ತಿದೆ ಎಂಬ ಬಗ್ಗೆಯೂ ಚರ್ಚಿಸಲಾಗಿದೆ. ಕೋವಿಡ್‌ನಿಂದ ಮೃತರಾದ ಕರೋನಾ ವಾರಿಯರ್ಸ್‌ಗಳಿಗೆ ಸಮರ್ಪಕವಾಗಿ ಪರಿಹಾರ ನೀಡಲಾಗುತ್ತಿದೆಯೇ ಎಂದು ಪ್ರಶ್ನಿಸಿದಾಗ ಅಧಿಕಾರಿಗಳು ರೂ.30.00ಲಕ್ಷಗಳ ಪರಿಹಾರ ನೀಡಲಾಗುತ್ತಿದೆ ಎಂದೂ ವೈದ್ಯರ ಕೊರತೆ ಎದುರಾಗಿದೆ ಎಂದು ತಿಳಿಸಿರುತ್ತಾರೆ.

ಜಿಲ್ಲಾ ರಕ್ಷಣಾಧಿಕಾರಿಗಳನ್ನು ಪ್ರಶ್ನಿಸಿದಾಗ ಸಾರ್ವಜನಿಕರು ಹೆಚ್ಚಾಗಿ ಸೇರುವ ಕಡೆ ಮಾಸ್ಕ್ ಧರಿಸದೇ ಇರುವವರಿಗೆ ದಂಡ ವಿಧಿಸಿ ಕ್ರಮವಹಿಸಲಾಗುತ್ತಿದೆ ಹಾಗೂ ಪ್ರತಿಯೊಬ್ಬರು ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ. ಹಾಗೆಯೇ ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ಪರೀಕ್ಷೆ ಮಾಡುವ ಬಗ್ಗೆ ಪ್ರಶ್ನಿಸಿದಾಗ ಅಧಿಕಾರಿಗಳು ಮೊಬೈಲ್ ಟೀಮ್ ಮೂಲಕ ಕೋವಿಡ್ ಪರೀಕ್ಷೆ ಮಾಡಿ ಕ್ರಮವಹಿಸಲಾಗುತ್ತಿರುವ ಅಂಶವನ್ನು ಗಮನಿಸಲಾಗಿರುತ್ತದೆ.

ಐ.ಇ.ಸಿ ಚಟುವಟಿಕೆಗಳ ಬಗ್ಗೆ ವಿವರಿಸುವುದಾದಲ್ಲಿ ಜಿಲ್ಲೆಯಲ್ಲಿ 1464 ಆಶಾ ಕಾರ್ಯಕರ್ತೆಯರಿದ್ದು ತಾಲ್ಲೂಕುವಾರು ಪ್ರತಿ ಮನೆಗೂ ಭೇಟಿ ನೀಡಿ ಮಾನಿಟರಿಂಗ್ ಮಾಡುತ್ತಿದ್ದಾರೆ ಅಲ್ಲದೇ ಬ್ಯಾನರ್ಸ್, ಬಿತ್ತಿಪತ್ರಗಳ ಮೂಲಕ ಜಾಗೃತಿ ಮೂಡಿಸುವ ಕ್ರಮ ವಹಿಸಲಾಗುತ್ತಿದೆ ಎಂಬ ಮಾಹಿತಿ ಪಡೆಯಲಾಯಿತು. ಜಿಲ್ಲಾಧಿಕಾರಿಗಳು, ಜಿಲ್ಲಾ ರಕ್ಷಣಾಧಿಕಾರಿಗಳು ಹಾಗೂ ಲೈನ್ ಅಧಿಕಾರಿಗಳ ಪ್ರತ್ಯೇಕ ಸಭೆ ಕರೆದು ಐ.ಇ.ಸಿ ಚಟುವಟಿಕೆಗಳನ್ನು ನಡೆಸುವ ಬಗ್ಗೆ ಕ್ರಮವಹಿಸಲಾಗಿದೆ ಎಂಬ ಅಂಶವನ್ನು ಅಪರ ಜಿಲ್ಲಾಧಿಕಾರಿಗಳಿಂದ ಪಡೆಯಲಾಗಿರುತ್ತದೆ. ಒಂದು ಏರಿಯಾದಲ್ಲಿ 20 ಜನ ಕೋವಿಡ್ ಪಾಸಿಟಿವ್ ರೋಗಿಗಳಿದ್ದಲ್ಲಿ ಆ ಪ್ರದೇಶವನ್ನು "ಕಂಟೇನ್ಮೆಂಟ್ ಜೋನ್" ನಲ್ಲಿ ಇರಿಸಬೇಕಾಗುತ್ತದೆ ಎಂಬ ವಿಚಾರದಲ್ಲಿ ಜಿಲ್ಲೆಯಲ್ಲಿ

ಅಂತಹ ಪ್ರಕರಣಗಳು ಯಾವುದೂ ಇಲ್ಲವೆಂಬ ಸ್ಪಷ್ಟತೆಯನ್ನು ಜಿಲ್ಲಾ ಹಂತದ ಅಧಿಕಾರಿಗಳಿಂದ ಪಡೆಯಲಾಗಿದೆ.

ಇದೇ ಸಂದರ್ಭದಲ್ಲಿ ಅಧಿಕಾರಿಗಳು ಐ.ಇ.ಸಿ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಗಮನಹರಿಸಿ ಡಾಕ್ಯುಮೆಂಟ್ ನಿರ್ವಹಿಸಬೇಕು, ಸಾರ್ವಜನಿಕರು ಹೆಚ್ಚಾಗಿ ಸೇರುವ ಕಡೆ ಕೋವಿಡ್ ಪರೀಕ್ಷೆ ಕಡ್ಡಾಯಗೊಳಿಸುವ ಮೂಲಕ ಕ್ರಮವಹಿಸಬೇಕೆಂದು ಸೂಚಿಸಲಾಯಿತು. ಕೋವಿಡ್ ಪರೀಕ್ಷೆಗಳ ಸಂಖ್ಯೆ ಹೆಚ್ಚಳವಾಗಬೇಕು ಮತ್ತು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರ ಟ್ರೇಸಿಂಗ್ ಅನ್ನೂ ಪರಿಣಾಮಕಾರಿಗೊಳಿಸಬೇಕು ಎಂದು ಸೂಚಿಸಲಾಯಿತು.

2. **ಕೃಷಿ ಇಲಾಖೆ :**

ಕೃಷಿ ಇಲಾಖೆ ಕ್ಷೇತ್ರದಲ್ಲಿ ಜಂಟಿ ಕೃಷಿ ನಿರ್ದೇಶಕರ ಮಾಹಿತಿ ಪ್ರಕಾರ ಜಿಲ್ಲೆಯಲ್ಲಿ ಕಡ್ಲೆಕಾಳು ಬಿತ್ತನೆಗೆ 11,000 ಕ್ವಿಂ.ಟಾಲ್ ನಷ್ಟು ಬೀಜ ಸರಬರಾಜಾಗಿದ್ದು, ಈಗಾಗಲೇ ಎಲ್ಲವನ್ನು ವಿತರಿಸಲಾಗಿರುತ್ತದೆ. ಈ ಬಾರಿ ಈರುಳ್ಳಿ ಬೆಳೆ ನಾಶವಾಗಿರುವ ಹಿನ್ನೆಲೆಯಲ್ಲಿ ಕಡ್ಲೆಕಾಳು ಬಿತ್ತನೆ ಬೀಜಕ್ಕೆ ಹಿಂಗಾರಿಗೆ ಹೆಚ್ಚಿನ ಬೇಡಿಕೆ ಇರುವುದಾಗಿ ತಿಳಿಸುತ್ತಾ, ಜಿಲ್ಲೆಯಲ್ಲಿ 20,000 ಹೆಕ್ಟೇರಿನಲ್ಲಿ ಬೆಳೆದ ಈರುಳ್ಳಿ ಬೆಳೆಯು ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ 8000 ಕ್ವಿಂಟಾಲ್‌ನಲ್ಲಿ ಬೆಳೆದ ಈರುಳ್ಳಿ ನಾಶವಾಗಿದ್ದು, ಉಳಿದ 12,000 ಕ್ವಿಂಟಾಲ್‌ನಲ್ಲಿರುವ ಈರುಳ್ಳಿ ಅತಿವೃಷ್ಟಿಯಿಂದ ತೇವಾಂಶ ಹೆಚ್ಚಾದ ಕಾರಣ ಈರುಳ್ಳಿಯನ್ನು ಈಗಾಗಲೇ ಕಟಾವು ಮಾಡಿರುವ ಅಂಶವನ್ನು ಅವಗಾಹಿಸಿದೆ. 15000 ಕ್ವಿಂಟಾಲ್ ಕಡ್ಲೆಕಾಳು ಬೀಜಕ್ಕೆ ರೈತರಿಂದ ಬೇಡಿಕೆ ಬರಬಹುದೆಂದು ಅಂದಾಜಿಸಲಾಗಿದ್ದು, ಅದರಂತೆ 11,000 ಕ್ವಿಂಟಾಲ್ ಜೊತೆಗೆ 15,000 ಕ್ವಿಂಟಾಲ್ ಕಡ್ಲೆಕಾಳನ್ನು ಹೆಚ್ಚುವರಿಯಾಗಿ ಒದಗಿಸಬೇಕೆಂದು ಕೃಷಿ ನಿರ್ದೇಶಕರು ಕೋರಿರುತ್ತಾರೆ.

ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಹೆಚ್ಚಿನ ಶೇಂಗಾ ಬೆಳೆಯುತ್ತಿದ್ದು ಪ್ರಸ್ತುತ ಒಂದೂವರೆ ಲಕ್ಷ ಹೆಕ್ಟೇರಿನಲ್ಲಿ ಶೇಂಗಾ ಬಿತ್ತನೆ ಮಾಡಲಾಗಿದ್ದು ಪ್ರಸ್ತುತ ಅತಿವೃಷ್ಟಿಯಿಂದ ಇಳುವರಿ ಕಡಿಮೆಯಾಗುವ ಸಾಧ್ಯತೆಗಳಿರುವುದರಿಂದ ಶೇಂಗಾ ಖರೀದಿ ಕೇಂದ್ರವನ್ನು ಪ್ರಾರಂಭಿಸುವ ಅಗತ್ಯತೆ ಇರುವುದಾಗಿ ಸರ್ಕಾರದ ಗಮನಕ್ಕೆ ತರುವಂತೆ ಮನವಿ ಮಾಡಿರುವುದನ್ನು ಇಲ್ಲಿ ಉಲ್ಲೇಖಿಸಿದೆ.

ಜಿಲ್ಲೆಯಲ್ಲಿ ಈಗಾಗಲೇ ಮೆಕ್ಕೆಜೋಳವನ್ನು ಬಿತ್ತನೆ ಮಾಡಿದ್ದು ವಿವಿಧ ರೈತ ಸಂಘಗಳು ಬೆಂಬಲ ಬೆಲೆಯಲ್ಲಿ ಶೇಂಗಾ ಖರೀದಿಸಲು ಮೆಕ್ಕೆಜೋಳ ಖರೀದಿ ಕೇಂದ್ರವನ್ನು ಪ್ರಾರಂಭಿಸಲು ಒತ್ತಾಯ ಬರುತ್ತಿರುವುದರಿಂದ ಮೆಕ್ಕೆಜೋಳ ಖರೀದಿ ಕೇಂದ್ರವನ್ನೂ ಸಹ ಪ್ರಾರಂಭಿಸಲು ಸರ್ಕಾರದ ಗಮನಕ್ಕೆ ಮನವಿಯನ್ನು ಪ್ರಸ್ತಾಪಿಸಲು ಅಧಿಕಾರಿಗಳು ಕೋರಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಸದರಿ ಪ್ರಸ್ತಾವನೆಯನ್ನು ಕಳುಹಿಸಿದಲ್ಲಿ ಅಗತ್ಯ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

ಜಂಟಿ ಕೃಷಿ ನಿರ್ದೇಶಕರ ಪ್ರಸ್ತಾಪದಲ್ಲಿ ಪ್ರಸ್ತುತ ವರ್ಷದಲ್ಲಿ **ರೈತರ ಆತ್ಮಹತ್ಯೆ ಪ್ರಕರಣಗಳು** ಒಟ್ಟು 17 ಇದ್ದು ಅಂಗೀಕೃತ–7 ತಿರಸ್ಕೃತ–2 ಇತ್ಯರ್ಥಕ್ಕೆ ಬಾಕಿಯಿರುವುದು–8 ಎಂದು ತಿಳಿಸಿದರು. ಹಾಗೂ ಪ್ರಕೃತಿ ವಿಕೋಪ ನಿಧಿಯಡಿ ಪಾವತಿಸಲು ಸರ್ಕಾರದ ಆದೇಶ ಇರುವುದಾಗಿ ಸಭೆಯ ಗಮನಕ್ಕೆ ತಂದರು. ಆ

ರೀತಿ ಆದೇಶ ಇದ್ದಲ್ಲಿ ಬಾಕಿಯಿರುವ 8 ಪ್ರಕರಣಗಳಲ್ಲಿ ಪಾವತಿಗಾಗಿ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿ ಪರಿಹಾರ ಧನವನ್ನು ಕೂಡಲೇ ಪಾವತಿಸಲು ಕ್ರಮವಹಿಸಬೇಕೆಂದು ತಿಳಿಸಲಾಯಿತು.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿ ಎಂ ಕೆ ಎಸ್ ವೈ) ಬಗ್ಗೆ ವಿಷಯ ಪ್ರಸ್ತಾಪಿಸುತ್ತಾ, ಅಕ್ಟೋಬರ್ ಮಾಹೆಯ ಅಂತ್ಯದಲ್ಲಿರುವುದರಿಂದ ಸದರಿ ಅನುದಾನವನ್ನು ತುರ್ತಾಗಿ ವೆಚ್ಚಮಾಡಲು ಕ್ರಮವಹಿಸುವಂತೆ ಸೂಚನೆ ನೀಡಲಾಗಿರುತ್ತದೆ.

3. **ತೋಟಗಾರಿಕೆ ಇಲಾಖೆ :**

ಸದರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಉಪ ನಿರ್ದೇಶಕರು ಮಾತನಾಡಿ, ಜಿಲ್ಲೆಯಲ್ಲಿ 1,63,000 ಹೆಕ್ಟೇರು ತೋಟಗಾರಿಕೆ ಬೆಳೆ ಪ್ರದೇಶವಿದ್ದು ಅದರಲ್ಲಿ 40,000 ತರಕಾರಿ ಬೆಳೆಯಿದೆ ಪ್ರಸ್ತುತ 20981 ಹೆಕ್ಟೇರಿನಲ್ಲಿ ಈರುಳ್ಳಿ ಬೀಜ ಬಿತ್ತನೆ ಮಾಡಿದ್ದು 12786 ಹೆಕ್ಟೇರಿನಲ್ಲಿರುವ ಈರುಳ್ಳಿಯು ಅತಿವೃಷ್ಟಿಯಿಂದ ಹಾಳಾಗಿರುತ್ತದೆ. ಎನ್.ಡಿ.ಆರ್.ಎಫ್ ಮಾರ್ಗಸೂಚಿ ಪ್ರಕಾರ ರೂ.17.26 ಕೋಟಿ ಪರಿಹಾರ ಕೋರಿ ಸರ್ಕಾರಕ್ಕೆ ವರದಿ ಮಾಡಲಾಗಿದೆ ಎಂದು ಪ್ರಸ್ತಾಪಿಸಿದ್ದು, ಜಿಲ್ಲೆಯಲ್ಲಿ ತೆಂಗು, ಅಡಿಕೆ, ಸೇವಂತಿ, ದಾಳಿಂಬೆ, ಪಪ್ಪಾಯ, ಬಾಳೆ, ನುಗ್ಗೆಯನ್ನು ಹೆಚ್ಚಾಗಿ ಬೆಳೆಸುತ್ತಿದ್ದು ಡ್ರ್ಯಾಗನ್ ಹಣ್ಣಿನ ಬೆಳೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ.

4. **ಎಂ.ಜಿ.ಎನ್.ಆರ್.ಇ.ಜಿ.ಎ :**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ 2020-21ನೇ ಸಾಲಿಗೆ 75.00ಲಕ್ಷ ಮಾನವ ದಿನಗಳನ್ನು ಸೃಜನೆ ಮಾಡುವ ಗುರಿಯಿದ್ದು ಶೇ.63ರಷ್ಟು ಸಾಧನೆಯಾಗಿದೆ, ಕಳೆದ 2 ವರ್ಷಗಳಲ್ಲಿ ಸಾಮಾಗ್ರಿ ವೆಚ್ಚ ಹೆಚ್ಚಾದ ಕಾರಣ ಪ್ರಗತಿ ಕಡಿಮೆಯಾಗಿರುವುದಾಗಿ ತಿಳಿಸುತ್ತಾ ಸಂಪೂರ್ಣ ಪ್ರಗತಿ ಸಾಧಿಸಲಾಗುವುದೆಂದು ತಿಳಿಸಿದರು. **"ಬದು ಅಭಿಯಾನ"** ಯೋಜನೆಯಲ್ಲಿ ರಾಜ್ಯದ ಒಟ್ಟು ಗುರಿಯಲ್ಲಿ ಶೇ.52 ರಷ್ಟು ಗುರಿಯನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಸಾಧಿಸಿರುವುದಾಗಿ ತಿಳಿಸಿದರು. ಅಲ್ಲದೆ ಈ ಬಾರಿ ಪೌಷ್ಠಿಕ ಕೈತೋಟವನ್ನು ಸಹ ನರೇಗಾದಡಿ ತೆಗೆದುಕೊಳ್ಳಲಾಗಿದೆ ಎಂದು ವಿವರಿಸಿದರು.

'ಬದು' ಅಭಿಯಾನದ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು, ಪೌಷ್ಠಿಕ ಕೈ ತೋಟದಂತಹ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚು ಹೆಚ್ಚು ಅಳವಡಿಸಿಕೊಂಡು ಪ್ರಗತಿ ಸಾಧಿಸಲು ಈ ನಿಟ್ಟಿನಲ್ಲಿ ಅರಣ್ಯ ಹಾಗೂ ತೋಟಗಾರಿಕೆ ಇಲಾಖೆಗಳ ಸಮನ್ವಯದೊಂದಿಗೆ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮವಹಿಸುವಂತೆ ತಿಳಿಸಲಾಯಿತು.

5. **ಶಿಕ್ಷಣ ಇಲಾಖೆ :**

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಶಾಲೆಯಿಂದ ಹೊರಗುಳಿದ ಮಕ್ಕಳ ವಿವರವನ್ನು ಮಂಡಿಸಿದರು. ಈ ಸಂದರ್ಭದಲ್ಲಿ ಮುಖ್ಯ ವಾಹಿನಿಗೆ ಬರದಿರುವ ಮಕ್ಕಳ ಬಗ್ಗೆ ಕೈಗೊಂಡ ಕ್ರಮದ ವಿವರವನ್ನೂ ಸಹ ಪಡೆದು, ಪ್ರಸ್ತುತ ವಿದ್ಯಾಗಮ ಪೂರಕ ಶಿಕ್ಷಣಕ್ಕೆ ತಡೆ ಇರುವುದರಿಂದ ಮಕ್ಕಳಿಗೆ

ಮನೆಯಲ್ಲಿಯೇ ಅಭ್ಯಾಸ ಮಾಡಿಕೊಳ್ಳಲು ಅನುವಾಗುವಂತೆ ಪಠ್ಯ ವಿಷಯ ವಸ್ತುಗಳನ್ನು ಒದಗಿಸಲು ಮಾರ್ಗದರ್ಶನ ನೀಡಲಾಗಿರುತ್ತದೆ.

6. **ಕಂದಾಯ ಇಲಾಖೆ :**

ಸದರಿ ಇಲಾಖೆಯ ಪ್ರಗತಿ ಪರಿಶೀಲಿಸುತ್ತಾ, ಕಂದಾಯ ಗ್ರಾಮ ರಚನೆಯಲ್ಲಿ ಪ್ರಗತಿಯ ಅಂಶಗಳು ಕಡಿಮೆ ಇರುವುದನ್ನು ತಿಳಿಸುತ್ತಾ, ಇದಕ್ಕಾಗಿ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚನೆಯನ್ನು ನೀಡಲಾಗಿರುತ್ತದೆ.

7. **ನಗರೋತ್ಥಾನ (ನಗರಸಭೆ) :**

ಈ ಕ್ಷೇತ್ರದ ಪ್ರಗತಿ ಪರಿಶೀಲಿಸುತ್ತಾ ಪ್ರಗತಿ ಅಪೇಕ್ಷಿತ ಮಟ್ಟದಲ್ಲಿ ಇಲ್ಲದಿರುವ ಬಗ್ಗೆ ಅಸಮಾಧಾನ ವ್ಯಕ್ತವಾಗಿರುತ್ತದೆ. ಮುಂದಿನ ಸಭೆಗೆ ತಾಲ್ಲೂಕುವಾರು / ಕಾಮಗಾರಿವಾರು ಪ್ರತ್ಯೇಕವಾದ ವಿವರಗಳನ್ನು ಅಂಕಿ ಅಂಶ ಸಹಿತ ಪ್ರಸ್ತುತಪಡಿಸಲು ಅಧಿಕಾರಿಗಳಿಗೆ ಜವಾಬ್ದಾರಿಯನ್ನು ವಿಧಿಸಲಾಗಿರುತ್ತದೆ.

8. **ವಸತಿ ಇಲಾಖೆ :**

ಈ ಕ್ಷೇತ್ರದ ಇಲಾಖಾ ಪ್ರಗತಿಯನ್ನು ಪರಿಶೀಲಿಸಲಾಯಿತು. ಮುಖ್ಯ ಯೋಜನಾಧಿಕಾರಿಗಳು ಮಾತನಾಡಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ವಾರ್ಷಿಕ ಗುರಿ-6296 ರಲ್ಲಿ 2873 ಮನೆಗಳು ಅನುಮೋದನೆಯಾಗಿದ್ದು 1771 ಪೂರ್ಣಗೊಂಡಿರುತ್ತವೆ, 20262 ಮನೆಗಳು ಪ್ರಗತಿಯಲ್ಲಿವೆ, ಸರ್ಕಾರದಿಂದ ಹಣ ಬಿಡುಗಡೆಯಾಗದಿರುವ ಕಾರಣ 5627 ಇನ್ನು ಪ್ರಾರಂಭಗೊಂಡಿಲ್ಲವೆಂದು, ವಿವರಣೆ ನೀಡಿದರು. ಈಗಾಗಲೇ 2873 ಮನೆಗಳು ಅನುಮೋದನೆಯಾಗಿದ್ದು, ಎಲ್ಲಾ ಮನೆಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗುವುದರಿಂದ, ಇನ್ನು ಪ್ರಾರಂಭಗೊಳ್ಳದಿರುವ 5627 ಮನೆಗಳನ್ನು ಪ್ರಾರಂಭಿಸುವಂತೆ ಸಂಬಂಧಿಸಿದವರಿಗೆ ಸೂಚನೆ ನೀಡಿ ಕ್ರಮವಹಿಸುವ ಮೂಲಕ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡುವಂತೆ ತಿಳಿಸಲಾಯಿತು.

ಜಿಲ್ಲೆಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲ ಹಂತದಲ್ಲಿಯೂ ಅದರಲ್ಲೂ ಸಾರ್ವಜನಿಕರು ಗುಂಪು ಸೇರದಂತೆ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಜೊತೆಗೆ ಪರೀಕ್ಷೆ ಪ್ರಮಾಣವನ್ನು ಹೆಚ್ಚಿಸಬೇಕು ಹಾಗೂ ಪ್ರಸ್ತುತ ಮಳೆಗಾಲ ಹಾಗೂ ಸ್ವಲ್ಪ ದಿನಗಳಲ್ಲಿ ಚಳಿಗಾಲ ಬರುತ್ತಿರುವುದರಿಂದ ಕೋವಿಡ್ ನಿಯಂತ್ರಣಕ್ಕೆ ಅಗತ್ಯ ಕ್ರಮವಹಿಸಬೇಕೆಂದರು ಅಲ್ಲದೇ ಸಾಮಾಜಿಕ ಅಂತರ, ಮಾಸ್ಕ್ ಧರಿಸುವುದು ಕಡ್ಡಾಯವೆಂದು ಜನರಲ್ಲಿ ಅರಿವು ಮೂಡಿಸಬೇಕೆಂದು ತಿಳಿಸಲಾಯಿತು.

ನಂತರ, ತೋಟಗಾರಿಕೆ ಇಲಾಖೆಯಲ್ಲಿ ಬೆಳೆ ಪರಿಹಾರ ನೀಡುವ ಬಗ್ಗೆ ಫಲಾನುಭವಿಗಳ ವಿವರವನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲುಪಡಿಸುವ ಕಾರ್ಯ ತುರ್ತಾಗಿ ಆಗಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಚಿತ್ರದುರ್ಗ ನಗರದಲ್ಲಿ ನಗರೋತ್ಥಾನ ಹಾಗೂ ಲೋಕೋಪಯೋಗಿ ಇಲಾಖೆ ಸೇರಿದಂತೆ ವಿವಿಧ ಯೋಜನೆಯಡಿ ರಸ್ತೆ ಅಗಲೀಕರಣ ಕಾಮಗಾರಿಯನ್ನು ಕೈಗೊಂಡಿದ್ದು ಸಂಚಾರ ಸಮಸ್ಯೆ ಜೊತೆಗೆ

ಜನರಿಗೆ ಧೂಳಿನ ಸಮಸ್ಯೆಯಾಗುತ್ತಿರುವುದರಿಂದ ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲಾ ಪ್ರಗತಿ ಪರಿಶೀಲನೆಯ ಅಂಶಗಳನ್ನು ಅವಗಾಹನೆಗೆ ಸಲ್ಲಿಸಿದೆ.

ಎಂ.ದೀಪಾ ಭಾ.ಆ.ಸೇ
ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

## Note on Tumkur District, related to COVID-19 Sample Collection.

- The State Govt has instructed to collect and test more samplesby fixing a target of 3045 Samples per day for Tumkur district. As per the directions of the Govt, a target of 310 Samples per day has been fixed to each Taluks.

- Further, instructionswere given to all Taluks to achieve the target withat least 60% of which is RTPCR swabs and remaining 40% to be RAT(Rapid Antigen Test) swabs atall PHCs leveland Mobile Swab Collection Squads have beendeployed throughout the district achieve the target.

**The day wise detail of sample taken from 07.10.2020 is as shown below**.

| Sl.No | Date | Total Sample Collected now Both (Inclusive of RAT & RTPCR) | Percentage |
|---|---|---|---|
| 01. | 05.11.2020 | 4201 | 137.96 |
| 02. | 06.11.2020 | 5378 | 176.61 |
| 03. | 07.11.2020 | 6500 | 213.46 |
| 04. | 08.11.2020 | 4189 | 137.56 |
| 05. | 09.11.2020 | 6191 | 203.31 |
| 06. | 10.11.2020 | 6061 | 199.04 |

- Now constantly the progress has been achieved. It will be continued provided that the RAT (Rapid Antigen Test) kits are supplied in time to the district.

## Note on Tumkur District, related to COVID-19 as on 10.11.2020.

01. **Review status of Surveillance activities in the District - SARI and ILI and their monitoring protocols**.
    a. Total No of SARI Cases : 362
    b. Total No of ILI Cases : 18020
    c. Total No of Positive Covid-19 Cases : 20908

RAKESH SINGH, I.A.S.
Additional Chief Secretary to Govt.,
Water Resources Department

## 02. Status of Supplies-Medicines, Medical Materials.

The details of Medicines, Medical Materials Available as fallows

a. PPE's - 10997
b. N-95 Mask – 1950
c. Triple Layer Mask – 00
d. Sanitizers 500 ml – 1773
e. Sanitizers 5000 ml – 00
f. Viral Transport media 1X25 - 716

## 03. Containment plan for affected areas for the District.

a. As on 10.11.2020 totally 20908 cases are reported.
b. 19575 Patients are discharged.
c. 900 case are Active & 262 were Deceased.
a. The areas where more than 20 cases are tested positive within 100 meter area boundary is being fixed entire containment zone.
d. Proper arrangements are made to provide daily necessaries those who are in containment zone.

Teams were formed, each team having 2 persons (ANM, Asha, Male Health Workers &AW's) Each team daily survey up to 200 households, those who have fever & ILI symptoms. These teams refer to fever clinic for further management.

## 04. Availability of Money under SDRF and Health.

Availability of Money Under SDRF – 35.00 Lakhs
Availability of Money Under Health – 0

## 05. Protection of frontline staff

**a.** Health – PPE and N95 masks has been distributed to Frontline Health workers and direction has been given to Health workers regarding use of PPE Equipment.

**b.** Municipalities – Masks given to municipality workers and instructions given to all workers.

**c.** Police – Instructions has been given to police officials to wear mask.

## 06. Periodical updating of Data to State/Monitoring tool.

Nodal Officer has been appointed for updating information to State/Monitoring tool and its being updated regularly.

RAKESH SINGH, I.A.S.
Additional Chief Secretary to Govt.,
Water Resources Department

**ದಿನಾಂಕ: 18-11-2020 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿನಾಥ್ ಭಾ.ಆ.ಸೇ., ರವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 2-30 ಗಂಟೆಗೆ ಜರುಗಿದ ಬೆಂಗಳೂರು ನಗರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

| | |
|---|---|
| 1 | ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು |
| 2 | ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು |
| 3 | ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು |
| 4 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ |
| 5 | ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ ಮತ್ತು ದಕ್ಷಿಣ ಉಪವಿಭಾಗ ಬೆಂಗಳೂರು |
| 6 | ಕಛೇರಿ ಸಹಾಯಕರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು |
| 7 | ಸಹಾಯಕ ನಿಯಂತ್ರಕರು(ಹಣಕಾಸು), ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರು. |
| 8 | ತಹಶೀಲ್ದಾರ್, ಉತ್ತರ, ದಕ್ಷಿಣ ಪೂರ್ವ, ಯಲಹಂಕ ಮತ್ತು ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ |
| 9 | ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, |
| 10 | ಉಪ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು ನಗರ |
| 11 | ಜಿಲ್ಲಾ ಆಯುಷ್ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ |
| 12 | ಯೋಜನಾ ನಿರ್ದೇಶಕರು, ಡಿಯುಡಿಸಿ, ಬೆಂಗಳೂರು ನಗರ |
| 13 | ಭೂ ದಾಖಲೆಗಳ ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ |
| 14 | ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ |
| 15 | ಉಪನಿರ್ದೇಶಕರು, ಬೆಂಗಳೂರು ಉತ್ತರ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು |
| 16 | ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ |
| 17 | ಉಪ ನಿರ್ದೇಶಕರು,ತೋಟಗಾರಿಕೆ ಇಲಾಖೆ, ಬೆಂಗಳೂರು ನಗರ ಜಿಲ್ಲೆ. |
| 18 | ಕಾರ್ಯಪಾಲಕ ಅಭಿಯಂತರರು, ಆರ್‌ಡಬ್ಲ್ಯೂಎಸ್, ಬೆಂಗಳೂರು ನಗರ ಜಿಲ್ಲೆ |
| 19 | ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು |
| 20 | ಜಿಲ್ಲಾ ಯೋಜನಾಧಿಕಾರಿ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು |
| 21 | ಜಿಲ್ಲಾ ಅಧಿಕಾರಿ, ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ |
| 22 | ಕಾರ್ಯಪಾಲಕ ಅಭಿಯಂತರರು, ಪಿಆರ್‌ಇಡಿ, ಜಿಲ್ಲಾ ಪಂಚಾಯತ್, ಬೆಂಗಳೂರು |
| 23 | ಕಾರ್ಯಪಾಲಕ ಅಭಿಯಂತರರು, ನಗರಸಭೆ, ಹೆಬ್ಬಗೋಡಿ |
| 24 | ಸಹಾಯಕ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು ನಗರ |
| 25 | ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಸಭೆ, ಹೆಬ್ಬಗೋಡಿ |
| 26 | ವಯಸ್ಕರ ಶಿಕ್ಷಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ |
| 27 | ಶಿಕ್ಷಣಾಧಿಕಾರಿ,ಅಕ್ಷರ ದಾಸೋಹ, ಬೆಂಗಳೂರು ನಗರ ಜಿಲ್ಲೆ |
| 28 | ಅಭಿಯಂತರರು, ಬೆಂಗಳೂರು ನಿರ್ಮಿತಿ ಕೇಂದ್ರ(ನಗರ), ಬೆಂಗಳೂರು |
| 29 | ಸಹಾಯಕ ಅಭಿಯಂತರರು, ನಗರಸಭೆ, ಹೆಬ್ಬಗೋಡಿ |

1

| | |
|---|---|
| 30 | ಜಿಲ್ಲಾ ವ್ಯವಸ್ಥಾಪಕರು, ಕೆಎಂಎಸ್‌ಟಿಸಿಎಲ್, ಬೆಂಗಳೂರು. |
| 31 | ಎನ್ವಿರಾಲ್‌ಮೆಂಟ್ ಇಂಜಿನೀಯರ್, ಪುರಸಭೆ, ಚಂದಾಪುರ |
| 32 | ಪೌರಾಯುಕ್ತರು, ನಗರಸಭೆ, ಹೆಬ್ಬಗೋಡಿ |
| 33 | ಮುಖ್ಯಾಧಿಕಾರಿ, ಪುರಸಭೆ, ಅತ್ತಿಬೆಲೆ |
| 34 | ಮುಖ್ಯಾಧಿಕಾರಿ, ಪುರಸಭೆ, ಚಂದಾಪುರ |
| 35 | ಮುಖ್ಯಾಧಿಕಾರಿ, ಪುರಸಭೆ, ಮಾದನಾಯಕನಹಳ್ಳಿ |
| 36 | ಮುಖ್ಯಾಧಿಕಾರಿ, ಪುರಸಭೆ, ಆನೇಕಲ್ |
| 37 | ಮುಖ್ಯಾಧಿಕಾರಿ, ಪುರಸಭೆ, ಬೊಮ್ಮಸಂದ್ರ |
| 38 | ತಾಲ್ಲೂಕು ಆರೋಗ್ಯಾಧಿಕಾರಿಗಳು, ಪೂರ್ವ ತಾಲ್ಲೂಕು |
| 39 | ತಾಲ್ಲೂಕು ಆರೋಗ್ಯಾಧಿಕಾರಿಗಳು, ಉತ್ತರ ತಾಲ್ಲೂಕು |
| 40 | ತಾಲ್ಲೂಕು ಆರೋಗ್ಯಾಧಿಕಾರಿಗಳು, ಆನೇಕಲ್ ತಾಲ್ಲೂಕು |
| 41 | ತಾಲ್ಲೂಕು ಆರೋಗ್ಯಾಧಿಕಾರಿಗಳು, ದಕ್ಷಿಣ ತಾಲ್ಲೂಕು |
| 42 | ಕಿರಿಯ ಅಭಿಯಂತರರು, ಪುರಸಭೆ, ಆನೇಕಲ್ |
| 43 | ಮ್ಯಾನೇಜರ್, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ನಗರ |
| 44 | ಅಕೌಂಟೆಂಟ್ ಸೂಪರಿಂಟೆಂಡೆಂಟ್, ಪಿಆರ್‌ಇಡಿ, ಕಾರ್ಯಪಾಲಕ ಅಭಿಯಂತರರ ಕಛೇರಿ, ಜಿಲ್ಲಾ ಪಂಚಾಯತ್, ಬೆಂಗಳೂರು |
| 45 | ಅಕೌಂಟೆಂಟ್ ಸೂಪರಿಂಟೆಂಡೆಂಟ್, ಬೆಂಗಳೂರು ನಗರ ನಿರ್ಮಿತಿ ಕೇಂದ್ರ, ಬೆಂಗಳೂರು. |
| 46 | ನೋಡೆಲ್ ಆಫೀಸರ್, ಡಿಯುಡಿಸಿ, ಬೆಂಗಳೂರು ನಗರ |
| 47 | ರೆವಿನ್ಯೂ ಆಫೀಸರ್, ಪುರಸಭೆ ಜಿಗಣಿ |
| 48 | ಆರ್.ಆರ್. ಶಿರಸ್ತೇದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು |

*****

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಿದರು.

1. **ಕೋವಿಡ್–19ರ ಕುರಿತು:**

- ಸರ್ಕಾರದಿಂದ ಬಂದಿರುವ ನಿರ್ದೇಶನದನ್ವಯ ಸರ್ಕಾರಿ ಆಸ್ಪತ್ರೆಗಳಲ್ಲಿ ಜನರಲ್ ಮತ್ತು ಐಸಿಯು ಬೆಡ್‌ಗಳು, ಐಸಿಯು ವೆಂಟಿಲೇಟರ್‌ಗಳ ಬೆಡ್‌ಗಳು ಶೇಕಡ 90% ರಷ್ಟು ಭರ್ತಿಯಾಗುವವರೆಗೆ ಯಾವುದೇ ಖಾಸಗಿ ಆಸ್ಪತ್ರೆಗಳಿಗೆ ಕೋವಿಡ್ ರೋಗಿಗಳನ್ನು ಕಳುಹಿಸಲು ಸಂಬಂಧಪಟ್ಟ ಆರೋಗ್ಯಾಧಿಕಾರಿಗಳು ಶಿಫಾರಸ್ಸು ಮಾಡುವಂತಿಲ್ಲವೆಂದು, ಆಯಾ ಸರ್ಕಾರಿ ಆಸ್ಪತ್ರೆಗಳಲ್ಲಿ/ಮೆಡಿಕಲ್ ಕಾಲೇಜುಗಳಲ್ಲಿ ಬೆಡ್‌ಗಳು ಭರ್ತಿಯಾದ ನಂತರವೇ ಹಾಗೂ ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಖಾಸಗಿ ಆಸ್ಪತ್ರೆಗೆ ಕಳುಹಿಸುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು, ಒಂದು ವೇಳೆ ಇದರಲ್ಲಿ ನ್ಯೂನ್ಯತೆಗಳು ಕಂಡು ಬಂದಲ್ಲಿ ಅಂತಹ ಆರೋಗ್ಯಾಧಿಕಾರಿಗಳ ವಿರುದ್ಧ ಕ್ರಮಜರುಗಿಸಲು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು.
- ದಿನಾಂಕ: 23.08.2020 ರಿಂದ ದಿನಾಂಕ: 16.11.2020 ರವರೆಗಿನ ಬಿಬಿಎಂಪಿ ಕೋವಿಡ್–19ರ ವಾರ್ ರೂಂ ಮಾಹಿತಿಯನ್ನು ಪರಿಶೀಲಿಸಿದಾಗ, ಎಲ್ಲಾ ತಾಲ್ಲೂಕುಗಳಿಗೆ ಹೋಲಿಸಿದಾಗ ಆನೇಕಲ್‌ನಲ್ಲಿ ಪಾಸಿಟಿವಿಟಿ

ರೇಟ್ ಹೆಚ್ಚಿರುವುದನ್ನು ಗಮನಿಸಿದ ಸಭೆಯು ಕಾಂಟ್ಯಾಕ್ಟ್ ಟ್ರೇಸಿಂಗ್, ಹೋಮ್ ಐಸೋಲೇಷನ್‌ಗಳ ಬಗ್ಗೆ ಹೆಚ್ಚು ಗಮನಹರಿಸದೆ ಇದ್ದು, ಕೂಡಲೇ ಈ ಬಗ್ಗೆ ಕ್ರಮ ವಹಿಸಿ ಹೆಚ್ಚು ಹೆಚ್ಚು ಟೆಸ್ಟಿಂಗ್‌ಗಳನ್ನು ಹಾಗೂ ಕಾಂಟ್ಯಾಕ್ಟ್ ಟ್ರೇಸಿಂಗ್ ಮಾಡುವಂತೆ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಗುರಿಯನ್ನು ನಿಗಧಿಪಡಿಸುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು.

- ಮುಂದುವರೆದು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಸಾಮಾಜಿಕ ಅಂತರ ಕಾಯ್ದುಕೊಳ್ಳದೆ ಇರುವ ಹಾಗೂ ಮಾಸ್ಕ್ ಧರಿಸದೇ ಓಡಾಡುವ ನಾಗರೀಕರಿಂದ ದಂಡ ವಸೂಲಿ ಮಾಡುವ ಕ್ರಮದ ಕುರಿತು ಮಾಹಿತಿಯನ್ನು ಪರಿಶೀಲಿಸಿದ ಸಭೆಯು, ಇದುವರೆಗೂ ವಸೂಲಿ ಮಾಡಿರುವ ದಂಡದ ಮೊತ್ತ ತುಂಬಾ ಕಡಿಮೆಯಾಗಿದ್ದು, ಈಗಾಗಲೇ ಪ್ರತಿ ಸಿಎಂಸಿಗೆ ದಿನಕ್ಕೆ 200 ಹಾಗೂ ಟಿಎಂಸಿಗೆ 100 ಪ್ರಕರಣಗಳ ಗುರಿಯನ್ನು ನಿಗಧಿಪಡಿಸಿದಂತೆ ಕ್ರಮ ವಹಿಸದೆ ಇರುವುದನ್ನು ಗಮನಿಸಿದ ಸಭೆಯು ಅಸಮಾಧಾನವನ್ನು ವ್ಯಕ್ತಪಡಿಸುತ್ತಾ, ಕೂಡಲೇ ಈ ಬಗ್ಗೆ ಹೆಚ್ಚು ಗಮನ ಹರಿಸಿ ಸೂಕ್ತ ಕ್ರಮವಹಿಸಲು ಡಿಯುಡಿಸಿಯ ಯೋಜನಾ ನಿರ್ದೇಶಕರು ಸಂಬಂಧಪಟ್ಟ ಅಧೀನ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು, ಹಾಗೂ ನಿಯಮಿತವಾಗಿ ಪರಿಶೀಲನಾ ಸಭೆಗಳನ್ನು ನಡೆಸಲು ಯೋಜನಾ ನಿರ್ದೇಶಕರಿಗೆ ಸೂಚಿಸಲಾಯಿತು. ಪುರಸಭೆ ಮತ್ತು ನಗರಸಭೆಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ನಿಗಧಿಪಡಿಸಿದ ಗುರಿಯ ಕುರಿತು ಅಧಿಕಾರಿಗಳು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ ಇಲ್ಲವೇ ಎಂಬುದರ ಬಗ್ಗೆ ವಾರಕ್ಕೊಮ್ಮೆ ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳು ಪರಿಶೀಲಿಸಿ, ಮೇಲ್ವಿಚಾರಣೆ ವಹಿಸಬೇಕೆಂದು ಸೂಚನೆಯನ್ನು ನೀಡಲಾಯಿತು.
- ಹಿಂದಿನ ಸಭೆಯಲ್ಲಿ ತಿಳಿಸಿದಂತೆ ಪೊಲೀಸ್ ಅಧಿಕಾರಿಗಳು ಸಾಮಾಜಿಕ ಅಂತರ ಕಾಯ್ದುಕೊಳ್ಳದೆ ಇರುವ ಮತ್ತು ಮಾಸ್ಕ್ ಧರಿಸದೇ ಓಡಾಡುವ ವ್ಯಕ್ತಿಗಳಿಂದ ಅವರವರ ವ್ಯಾಪ್ತಿಯಲ್ಲಿ ಸಂಗ್ರಹಿಸುತ್ತಿರುವ ದಂಡದ ಮೊತ್ತಗಳ ಕುರಿತು ಮುಂದಿನ ಸಭೆಯಲ್ಲಿ ಮಾಹಿತಿಯನ್ನು ನೀಡುವಂತೆ ನಿರ್ದೇಶನ ನೀಡಲಾಯಿತು.
- ದಂಡ ವಸೂಲಿಯ ಬಗ್ಗೆ ಪೊಲೀಸ್ ಇಲಾಖೆಯವರು ಪ್ರತ್ಯೇಕವಾಗಿ ವಸೂಲಿ ಮಾಡುತ್ತಿರುವ ಕಾರಣ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ನಿಗಧಿಪಡಿಸಿದ ಗುರಿಯನ್ನು ತಲುಪಲು ಸಾಧ್ಯವಾಗದೆ ಇರುವ ಬಗ್ಗೆ ಡಿಯುಡಿಸಿ ಅಧಿಕಾರಿಗಳು ಸಭೆಯ ಗಮನಕ್ಕೆ ತಂದಾಗ, ಈ ಬಗ್ಗೆ ಈಗಾಗಲೇ ನಿಗಧಿಪಡಿಸಿದ ಗುರಿಯನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಶೇಕಡ 50 ರಷ್ಟು ಕಡಿತಗೊಳಿಸುವಂತೆಯೂ ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿ ನಿತ್ಯ 25 ಪ್ರಕರಣಗಳ ದಂಡ ವಸೂಲಿ ಗುರಿಯನ್ನು ಕ್ರಮ ವಹಿಸುವಂತೆ ಗುರಿಯನ್ನು ಮರುನಿಗಧಿಪಡಿಸಲಾಯಿತು. ಮುಂದಿನ ಸಭೆಗೆ ಪೊಲೀಸ್ ಠಾಣೆಗಳಲ್ಲಿ ಸಂಗ್ರಹಿಸಿರುವ ದಂಡದ ವಸೂಲಿ ಮಾಹಿತಿಯನ್ನು ನೀಡುವಂತೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ತಿಳಿಸುವಂತೆ ಸೂಚಿಸಲಾಯಿತು.
- ದಂಡ ವಸೂಲಿ ಕ್ರಮದ ಕುರಿತು ಬಿಬಿಎಂಪಿ ವ್ಯಾಪ್ತಿಯಲ್ಲಿ ಯಾವ ರೀತಿ ಕ್ರಮವಹಿಸಲಾಗುತ್ತಿದೆ ಎಂಬುದನ್ನು ಪರಿಶೀಲಿಸಿ ಅದೇ ರೀತಿಯಲ್ಲಿ ಹಾಗೂ ಹಿಂದಿನ ಸಭೆಯಲ್ಲಿ ಸೂಚಿಸಿರುವಂತೆ ಕ್ರಮ ವಹಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಚಿಸಲಾಯಿತು.
- ವಲಯ ಸಂಯೋಜಕರು ನಿಗದಿಪಡಿಸಿದ ಗುರಿಯಂತೆ ಟೆಸ್ಟಿಂಗ್ ಪ್ರಮಾಣವನ್ನು ಜಿಲ್ಲಾ ಆರೋಗ್ಯಾಧಿಕಾರಿಗಳು ಎಲ್ಲಾ ತಾಲ್ಲೂಕುಗಳ ಪಿಹೆಚ್‌ಸಿ ಕೇಂದ್ರಗಳಲ್ಲಿ ಕ್ರಮವಹಿಸಲು ಸಂಬಂಧಪಟ್ಟ ತಾಲ್ಲೂಕು/ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವಂತೆ ಸೂಚಿಸಲಾಯಿತು.

- ಕಳೆದ 24 ಗಂಟೆಗಳಲ್ಲಿ ಆಗಿರುವ ಪ್ರೈಮರಿ ಕಾಂಟ್ಯಾಕ್ಟ್‌ಗಳ, ಕಾಂಟ್ಯಾಕ್ಟ್ ಟ್ರೇಸಿಂಗ್‌ಗಳ ಕುರಿತು ಮಾಹಿತಿಯನ್ನು ಸರಿಯಾಗಿ ಅಪ್‌ಲೋಡ್ ಮಾಡದೆ ಇರುವುದನ್ನು ಗಮನಿಸಿದ ಸಭೆಯು ಎಲ್ಲಾ ಬಿ.ಎಲ್.ಓ.ಗಳು ಈ ಮಾಹಿತಿಯನ್ನು ಸಂಬಂಧಿಸಿದ ಆಪ್‌ನಲ್ಲಿ ಪ್ರತಿನಿತ್ಯ ತಪ್ಪದೆ ನಮೂದಿಸುವಂತೆಯೂ, ಇದರ ಮೇಲ್ವಿಚಾರಣೆಯನ್ನು ತಾಲ್ಲೂಕು ಆರೋಗ್ಯಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳು ವಹಿಸಬೇಕೆಂದು ನಿರ್ದೇಶನ ನೀಡಲಾಯಿತು.
- ಆನೇಕಲ್ ತಾಲ್ಲೂಕು ವೈದ್ಯಾಧಿಕಾರಿಗಳು ಸರ್ಕಾರವು ಅಭಿವೃದ್ಧಿ ಪಡಿಸಿರುವ ಕೋವಿಡ್ ಕಾಂಟ್ಯಾಕ್ಟ್ ಟ್ರೇಸಿಂಗ್ ಆಪ್‌ನಲ್ಲಿ ತಾಂತ್ರಿಕ ತೊಂದರೆ ಇದ್ದು, ಇದರಿಂದ ಅಪ್‌ಲೋಡ್ ಮಾಡಲು ಆಗುತ್ತಿಲ್ಲವೆಂದೂ ಸಭೆಯನ್ನು ಕೋರಿದಾಗ, ಕೋವಿಡ್‌ಗೆ ಸಂಬಂಧಿಸಿದ ಯಾವುದೇ ಆಪ್‌ಗಳಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡಲು ತಾಂತ್ರಿಕ ದೋಷ ಕಂಡುಬಂದಲ್ಲಿ ಕೂಡಲೇ ಈ ಬಗ್ಗೆ ಶ್ರೀಯುತ ಮುನಿಷ್ ಮುದ್ಗಿಲ್, ಐ.ಎ.ಎಸ್. ರವರನ್ನು ಸಂಪರ್ಕಿಸಿ ಸರಿಪಡಿಸಿಕೊಳ್ಳುವಂತೆ ನಿರ್ದೇಶನ ನೀಡಿ ಸದರಿ ಅಧಿಕಾರಿಯವರ ಮೊಬೈಲ್ ಸಂಖ್ಯೆಯನ್ನು ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ನೀಡಲಾಯಿತು.
- ಕಾಂಟ್ಯಾಕ್ಟ್ ಟ್ರೇಸಿಂಗ್ ಆಪ್‌ಗಳಿಗೆ ಮಾಹಿತಿಯನ್ನು ಅಪ್‌ಲೋಡ್ ಮಾಡುವ ಕರ್ತವ್ಯದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳನ್ನು ಬಳಸಿಕೊಳ್ಳದೆ, ಬಿಎಲ್‌ಓ ಗಳು ಹಾಗೂ ತಹಶೀಲ್ದಾರ್‌ಗಳು ಜವಾಬ್ದಾರಿಗಳಾಗಿರುತ್ತಾರೆಂದು, ಈಗಾಗಲೇ ವಿಧಾನಸಭಾ ಕ್ಷೇತ್ರವಾರು ನೇಮಿಸಿರುವ ನೋಡೆಲ್ ಅಧಿಕಾರಿಗಳು ಇವುಗಳ ಮೇಲ್ವಿಚಾರಣೆಯನ್ನು ವಹಿಸಬೇಕೆಂದು ಸೂಚಿಸಲಾಯಿತು.
- ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಬರುವ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ನೋಡೆಲ್ ಅಧಿಕಾರಿಗಳ, ತಹಶೀಲ್ದಾರ್, ಉಪವಿಭಾಗಾಧಿಕಾರಿಗಳನ್ನು ಒಳಗೊಂಡಂತೆ ಒಂದು ಸಭೆಯನ್ನು ಕರೆದು ಹೆಚ್ಚುತ್ತಿರುವ ಪಾಸಿಟಿವ್ ಪ್ರಕರಣಗಳ ಕುರಿತು ಕಾಂಟ್ಯಾಕ್ಟ್ ಟ್ರೇಸಿಂಗ್ ಕುರಿತು ಆಯಾ ಕ್ಷೇತ್ರಗಳಲ್ಲಿ ಟೆಸ್ಟಿಂಗ್ ಪ್ರಕರಣಗಳನ್ನು 1:10 ರಂತೆ ನಿರ್ವಹಿಸಬೇಕೆಂದು, ಐಎಲ್‌ಐ, ಸಾರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಮನೆ ಮನೆ ಸರ್ವೆ ಮಾಡುವಂತೆ ಪಿಹೆಚ್‌ಸಿ ಕೇಂದ್ರದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ನೀಡಬೇಕೆಂದು ಮತ್ತು ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದವರು ಕೋವಿಡ್ ಟೆಸ್ಟಿಂಗ್‌ಗಾಗಿ ನಿಗಧಿಪಡಿಸಿರುವ ದೈನಂದಿನ ಗುರಿಯನ್ನು ತಪ್ಪದೇ ನಿರ್ವಹಿಸಬೇಕೆಂದು, ಈ ಬಗ್ಗೆ ಮೇಲ್ವಿಚಾರಣೆಯನ್ನು ಆಯಾ ತಾಲ್ಲೂಕು ಆರೋಗ್ಯಾಧಿಕಾರಿಗಳು ವಹಿಸುವ ಬಗ್ಗೆ ಸಭೆಯಲ್ಲಿ ತಿಳಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.
- ಇನ್ನುಳಿದ ಗ್ರಾಮಾಂತರ ಪ್ರದೇಶಗಳಲ್ಲಿ ದಂಡ ವಸೂಲಿಯ ಬಗ್ಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಿ.ಡಿ.ಓ ಮತ್ತು ವಿಲೇಜ್ ಸೆಕ್ರೆಟರಿಯವರು ಕ್ರಮವಹಿಸಬೇಕೆಂದು, ಈ ಬಗ್ಗೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಭೆಯು ಸೂಚನೆಯನ್ನು ನೀಡಲಾಯಿತು.
- ಕೋವಿಡ್ ಪಾಸಿಟಿವ್ ಕಂಡು ಬಂದ ಪ್ರಕರಣಗಳಲ್ಲಿ ಮೊದಲನೇ ದಿನ ಹಾಗೂ 7ನೇ ದಿನದಂದು ಕಡ್ಡಾಯವಾಗಿ ಟೆಸ್ಟ್ ಮಾಡಬೇಕೆಂದು ಸೂಚಿಸಲಾಯಿತು.
- ಆರ್‌ಟಿಪಿಸಿಆರ್‌ನಲ್ಲಿನ ಪ್ರಗತಿಯು ತುಂಬಾ ಕಡಿಮೆಯಾಗಿದ್ದು, ಆರ್‌ಟಿಪಿಸಿಆರ್ ಟೆಸ್ಟ್‌ಗಳನ್ನು ಶೇಕಡ 100 ರಷ್ಟು ಅಥವಾ ಶೇಕಡ 100ಕ್ಕಿಂತ ಹೆಚ್ಚು ಟೆಸ್ಟ್‌ಗಳನ್ನು ನಡೆಸಬೇಕೆಂದೂ, ಅನೇಕಲ್ ಮತ್ತು ಉತ್ತರ

ತಾಲ್ಲೂಕುಗಳಲ್ಲಿ ಹೆಚ್ಚು ಹೆಚ್ಚು ಆರ್‌ಟಿಪಿಸಿಆರ್ ಟೆಸ್ಟ್‌ಗಳನ್ನು ಕೈಗೊಳ್ಳಬೇಕೆಂದು ಎಚ್ಚರಿಕೆಯನ್ನು ನೀಡಲಾಯಿತು.

ಮೇಲೆ ತಿಳಿಸಿರುವ ಎಲ್ಲಾ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡಿದಲ್ಲಿ, ಕರೋನಾ ಸಾಂಕ್ರಾಮಿಕ ರೋಗ ಹೆಚ್ಚಾಗಿ ಹರಡದಂತೆ ಪರಿಣಾಮಕಾರಿಯಾಗಿ ತಡೆಯಬಹುದಾಗಿದ್ದು, ಈ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಸಮರೋಪಾದಿಯಲ್ಲಿ ಕೋವಿಡ್-19ರ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಸೂಚನೆಗಳನ್ನು ನೀಡಲಾಯಿತು.

2) <u>ನಗರ ಸ್ಥಳೀಯ ಸಂಸ್ಥೆಗಳ ಕುರಿತು;</u>

ಎಸ್‌ಡಿಆರ್‌ಎಫ್ ಎನ್‌ಡಿಆರ್‌ಫ್‌ನ ನಿಧಿಯಿಂದ ಹಣವನ್ನು ಕೋವಿಡ್ ನಿಯಂತ್ರಣಕ್ಕಾಗಿ ಖರ್ಚು ಮಾಡಬೇಕಾಗಿದ್ದ ಸಂದರ್ಭದಲ್ಲಿ ಸಂಬಂಧಪಟ್ಟ ಬಿಬಿಎಂಪಿ ವಲಯ ಸಂಯೋಜಕರಿಂದ ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

ಬಿಬಿಎಂಪಿಯವರು ತಮ್ಮ ಜೋನ್‌ನಲ್ಲಿ ವ್ಯವಸ್ಥೆ ಮಾಡಿರುವಂತೆಯೇ, ಬಿಬಿಎಂಪಿ ವ್ಯಾಪ್ತಿಯ ಹೊರತುಪಡಿಸಿದ ಗ್ರಾಮಾಂತರ ಪ್ರದೇಶಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಅದೇ ಮಾದರಿಯಲ್ಲಿ ಅಳವಡಿಸಿಕೊಳ್ಳಲು ಸೂಚಿಸಲಾಯಿತು. ಸ್ವಾಬ್ ಟೆಸ್ಟಿಂಗ್, ಡಾಟಾ ಆಪರೇಟರ್ ಎಂಟ್ರಿ ಇಂತಹ ವೆಚ್ಚಗಳನ್ನು ಭರಿಸಲು ಕಡತಗಳನ್ನು ವಲಯ ಸಂಯೋಜಕರ ಮೂಲಕ ಆಯುಕ್ತರಿಗೆ ಮಂಡಿಸಿ, ಬಿಬಿಎಂಪಿಯಿಂದ ಹಣವನ್ನು ಪಡೆಯುವಂತೆಯೂ, ಈ ಹಣವನ್ನು ಎನ್‌ಹೆಚ್‌ಎಂ ಮತ್ತು ಎಸ್‌ಡಿಆರ್‌ಎಫ್ ನಿಧಿಯಿಂದ ರಿಇಂಬರ್ಸ್ ಮಾಡಿಕೊಳ್ಳುವಂತೆಯೂ, ಹಾಗೂ ಈ ನಿಧಿಯಿಂದ ಖರೀದಿಸಲು ಅವಕಾಶವಿಲ್ಲದ ವಸ್ತುಗಳನ್ನು ಮುನಿಸಿಪಲ್ ಫಂಡ್‌ನಿಂದ ಭರಿಸಲು ನಗರಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದನೆಯನ್ನು ಪಡೆಯಲು ಸೂಚಿಸಲಾಯಿತು. ಇದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿ ಎನ್‌ಹೆಚ್‌ಎಂ ಮತ್ತು ಎಸ್‌ಟಿಆರ್‌ಎಫ್‌ನಡಿ ಖರ್ಚು ಮಾಡಲು ಸಾಧ್ಯವಿಲ್ಲದ ಕಡೆ ಅವಶ್ಯವಾದ ಕೋವಿಡ್‌ಗೆ ಸಂಬಂಧಿಸಿದ ಅವಶ್ಯ ವಸ್ತುಗಳನ್ನುಗ್ರಾಮ ಪಂಚಾಯಿತಿಯ ನಿಧಿಯಿಂದ ಭರಿಸಲು, ಆಯಾ ಜೋನಲ್ ಕೋಆರ್ಡಿನೇಟರ್ ಮತ್ತು ಜಂಟಿ ಆಯುಕ್ತರ ರವರ ಅನುಮೋದನೆಯನ್ನು ಪಡೆಯಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಲಾಯಿತು.

ಸರ್ಕಾರದ ಆದೇಶದಂತೆ ಬೆಂಗಳೂರು ನಗರದ ಬಿಬಿಎಂಪಿ ವ್ಯಾಪ್ತಿ ಮತ್ತು ಗ್ರಾಮಾಂತರ ಪ್ರದೇಶಗಳ ಕುರಿತು ಹೆಚ್ಚಿನ ಅಧಿಕಾರವನ್ನು ಬಿಬಿಎಂಪಿ ಆಯುಕ್ತರಿಗೆ ನೀಡಿರುವ ಕಾರಣ, ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಸಾಮಗ್ರಿಗಳನ್ನು ಖರೀದಿಸಲು ಅವಶ್ಯಕತೆ ಇದ್ದಲ್ಲಿ ಜಿಲ್ಲಾಧಿಕಾರಿಗಳಿಂದ ಒಂದು ಆದೇಶವನ್ನು ಹೊರಡಿಸಿದ ನಂತರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರು ಅವರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಆದೇಶಗಳನ್ನು ಹೊರಡಿಸಿಕೊಳ್ಳಬೇಕೆಂದು ಸೂಚಿಸಲಾಯಿತು. ಡಿಯುಡಿಸಿ ಅಧಿಕಾರಿಯವರು ಜಿಲ್ಲಾಧಿಕಾರಿಗಳ ಆದೇಶವನ್ನು ಪಡೆದು ಕ್ರಮವಹಿಸಲು ಸೂಚಿಸಲಾಯಿತು.

ಕೋವಿಡ್‌ಗೆ ಸಂಬಂಧಿಸಿದಂತೆ ಬಿಎಲ್‌ಓಗಳೊಂದಿಗೆ, ತಾಲ್ಲೂಕು ಆರೋಗ್ಯಾಧಿಕಾರಿಗಳು, ಡಿಯುಡಿಸಿ ಅಧಿಕಾರಿಗಳೊಂದಿಗೆ, ತಹಶೀಲ್ದಾರ್ ಹಾಗೂ ವಿಧಾನಸಭಾ ಕ್ಷೇತ್ರದ ನೋಡೆಲ್ ಅಧಿಕಾರಿಗಳೊಂದಿಗೆ ಒಂದು ಸಭೆಯನ್ನು ಕರೆದು, ಈ ಸಭೆಯಲ್ಲಿ 1) ಕಾಂಟ್ಯಾಕ್ಟ್ ಟ್ರೇಸಿಂಗ್ 2) ಟೆಸ್ಟಿಂಗ್ ಮತ್ತು 3) ಮಾಸ್ಕ್ ಧರಿಸದೆ ಇರುವ

ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳದೆ ಇರುವ ದಂಡ ವಸೂಲಿ ಮಾಡುವ ಕುರಿತು ಚರ್ಚಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

**ಸ್ಥಳೀಯ ಸಂಸ್ಥೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು:**

ಯೋಜನಾ ನಿರ್ದೇಶಕರು, ಡಿಯುಡಿಸಿ ಇವರು ಈ ವರ್ಷದಲ್ಲಿ ಸಾಕಷ್ಟು ಮಳೆಯಾಗಿರುವುದರಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಮುಂದುವರೆದು ಎಸ್‌ಎಫ್‌ಸಿ(ಡಿಡಬ್ಲ್ಯೂ) ಯೋಜನೆಯಡಿ ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು ರೂ.49.98 ಲಕ್ಷಗಳ ಅನುದಾನ ಲಭ್ಯವಿರುವ ಬಗ್ಗೆ ಸಭೆಗೆ ವಿವರಿಸಿದರು.

**14ನೇ ಹಣಕಾಸು ಮತ್ತು ಎಸ್‌ಎಫ್‌ಸಿ ಯೋಜನೆಯಡಿ ಹಿಂದಿನ ಸಾಲಿನಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳ ಬಗ್ಗೆ.**

14ನೇ ಹಣಕಾಸು ಯೋಜನೆಯು ಈಗಾಗಲೇ ಮುಕ್ತಾಯವಾಗಿದ್ದು, ಆದಾಗ್ಯೂ ಸಹ 37 ಕಾಮಗಾರಿಗಳು ಮುಕ್ತಾಯಕ್ಕೆ ಬಾಕಿ ಇದ್ದು, ಇದರಲ್ಲಿ ಆನೇಕಲ್ ಪುರಸಭೆಯಲ್ಲಿ 15 ಕಾಮಗಾರಿಗಳು ಮತ್ತು ಹೆಬ್ಬಗೋಡಿ ನಗರಸಭೆಯಲ್ಲಿ 12 ಕಾಮಗಾರಿಗಳು ಬಾಕಿ ಇರುವ ಬಗ್ಗೆ ಯೋಜನಾ ನಿರ್ದೇಶಕರು ಸಭೆಗೆ ವಿವರಿಸಿದರು.

ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಡಿಸೆಂಬರ್ 2020ರ ಮಾಹೆಯ ಅಂತ್ಯದೊಳಗೆ ಮುಕ್ತಾಯಗೊಳಿಸುವಂತೆ ಸಭೆಯಲ್ಲಿ ಹಾಜರಿದ್ದ ಮುಖ್ಯಾಧಿಕಾರಿಗಳಿಗೆ ಮತ್ತು ಪೌರಾಯುಕ್ತರಿಗೆ ಸೂಚಿಸಲಾಯಿತು.

**ಎಸ್‌ಎಫ್‌ಸಿ:**

ಈ ಯೋಜನೆಯಡಿ ಹಿಂದಿನ ಸಾಲಿನ 51 ಕಾಮಗಾರಿಗಳು ಬಾಕಿಯಿದ್ದು, ಇದರಲ್ಲಿ ಹೆಬ್ಬಗೋಡಿ ನಗರಸಭೆಯಲ್ಲಿ 22 ಕಾಮಗಾರಿಗಳು, ಆನೇಕಲ್ ಪುರಸಭೆಯಲ್ಲಿ 14 ಕಾಮಗಾರಿಗಳು ಹೆಚ್ಚು ಬಾಕಿ ಇರುವುದನ್ನು ಗಮನಿಸಿದ ಸಭೆಯು, ಬಾಕಿ ಇರುವ ಎಲ್ಲಾ 51 ಕಾಮಗಾರಿಗಳನ್ನು ಡಿಸೆಂಬರ್ 2020ರ ಮಾಹೆಯ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಪೌರಾಯುಕ್ತರು ಹಾಗೂ ಮುಖ್ಯಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಯಿತು.

**ಸಿಎಂಎಸ್‌ಎಂಟಿಡಿಪಿ (CMSMTDP) ನಗರೋತ್ಥಾನ ಹಂತ-3 ರ ಯೋಜನೆಗಳ ಪ್ರಗತಿ ಬಗ್ಗೆ:**

ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು 94 ಕಾಮಗಾರಿಗಳು ಅನುಮೋದನೆಯಾಗಿದ್ದು, ಈಗಾಗಲೇ 80 ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ 14 ಕಾಮಗಾರಿಗಳಿದ್ದು, ಇದರಲ್ಲಿ 10 ಕಾಮಗಾರಿಗಳನ್ನು ಕೆಯುಡಬ್ಲ್ಯೂಎಸ್&ಡಿಬಿ (KUWS&DB) ವತಿಯಿಂದ ಹಾಗೂ 4 ಕಾಮಗಾರಿಗಳನ್ನು ಡಿಯುಡಿಸಿ ವತಿಯಿಂದ ನಿರ್ವಹಿಸಬೇಕಾಗಿರುತ್ತದೆಂದು ಯೋಜನಾ ನಿರ್ದೇಶಕರು ಸಭೆಗೆ ವಿವರಿಸಿದರು. ಉಳಿದ 14 ಕಾಮಗಾರಿಗಳನ್ನು ಡಿಸೆಂಬರ್ 2020ರ ಮಾಹೆಯ ಅಂತ್ಯದೊಳಗಾಗಿ ಪೂರ್ಣಗೊಳಿಸುವಂತೆ ಸೂಚನೆಯನ್ನು ನೀಡಲಾಯಿತು.

ವಿವಿಧ ಯೋಜನೆಗಳ ಎಲ್ಲಾ ಕಾಮಗಾರಿಗಳಿಗೆ ಬಾರ್‌ಚಾರ್ಟ್‌ನ್ನು ತಯಾರಿಸಿ ಸಲ್ಲಿಸಲು ಸಭೆಯಲ್ಲಿ ಹಾಜರಿದ್ದ ಮುಖ್ಯಾಧಿಕಾರಿಗಳು ಮತ್ತು ಪೌರಾಯುಕ್ತರಿಗೆ ಸೂಚಿಸಲಾಯಿತು. ಹಾಗೂ ಕೇಂದ್ರ ಸರ್ಕಾರದ ಪುರಸ್ಕೃತ

ಯೋಜನೆಯಾದ ಪಿಎಂಸ್ವಾನಿಧಿ, ಆತ್ಮನಿರ್ಭರ್ ಯೋಜನೆಯ ಗುರಿಯನ್ವಯ ಪ್ರಗತಿಯನ್ನು ಸಾಧಿಸಲು ಎಲ್ಲಾ ಮುಖ್ಯಾಧಿಕಾರಿಗಳಿಗೆ ಮತ್ತು ಪೌರಾಯುಕ್ತರಿಗೆ ಸೂಚಿಸಲಾಯಿತು.

**3) <u>ಕೆಎಲ್‌ಲ್ಯಾಡ್ಸ್ ಮತ್ತು ಎಂಪಿಲ್ಯಾಡ್ ವಿಷಯಗಳ ಕುರಿತು:</u>**

**ಕೆಎಲ್‌ಲ್ಯಾಡ್ಸ್:**

ಕೆಎಲ್‌ಲ್ಯಾಡ್ಸ್‌ನಲ್ಲಿ ಬರುವ ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳು ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿವಿಧ ಕಾಮಗಾರಿಗಳಿಗೆ ಒಟ್ಟು 2418 ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಇದರಲ್ಲಿ 2216ಕ್ಕೆ ಮಾತ್ರ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಉಳಿದ 202 ರ ಬಗ್ಗೆ ಮಾಹಿತಿಯನ್ನು ಸರ್ಕಾರವು ಕೋರಿದ್ದು, ಇದರಲ್ಲಿ 93 ಕಾಮಗಾರಿಗಳಿಗೆ ವರ್ಕ್‌ಸಾಫ್ಟ್‌ನಲ್ಲಿ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಿದ್ದು, 85 ಕಾಮಗಾರಿಗಳು ಎರಡೆರಡು ಬಾರಿ ಆನ್‌ಲೈನ್‌ನಲ್ಲಿ ದಾಖಲಿಸಿದ್ದು, ಡಬಲ್ ಎಂಟ್ರಿ ಆದ ಕಾರಣ ಇದನ್ನು ರದ್ದುಗೊಳಿಸುವ ಬಗ್ಗೆ ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಉಳಿದ 22 ಕಾಮಗಾರಿಗಳು 2015-16, 2016-17, 2017-18 ನೇ ಸಾಲಿನವುಗಳಾಗಿದ್ದು, ಇದಕ್ಕೆ ಸಂಬಂಧಪಟ್ಟಂತಹ ಕಡತಗಳು ಲಭ್ಯವಾಗದೇ ಇರುವ ಬಗ್ಗೆ ಸಹಾಯಕ ನಿಯಂತ್ರಕರು (ಹಣಕಾಸು) ಇವರು ಸಭೆಯ ಗಮನಕ್ಕೆ ತಂದರು.

ಇದನ್ನು ಗಮನಿಸಿದ ಸಭೆಯು ಲಭ್ಯವಾಗದೆ ಇರುವ 22 ಕಡತಗಳ ಕಾಮಗಾರಿಯನ್ನು ರದ್ದುಗೊಳಿಸುವಂತೆ ಸೂಚಿಸಲಾಯಿತು.

2216 ಕಾಮಗಾರಿಗಳಲ್ಲಿ ಕೇವಲ 325 ಕಾಮಗಾರಿಗಳು ಮಾತ್ರ ಪೂರ್ಣಗೊಂಡಿದ್ದು, ಉಳಿಕೆ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಅನುಷ್ಠಾನ ಇಲಾಖೆಗಳೊಂದಿಗೆ ಸಮನ್ವಯ ಮಾಡಿಕೊಂಡು ಒಟ್ಟು ಎಷ್ಟು ಕಾಮಗಾರಿಗಳು ಸರಿಯಾಗಿ ಪೂರ್ಣಗೊಳಿಸಲಾಗಿದೆ ಎಂಬುದರ ಬಗ್ಗೆ ಮರುಹೊಂದಾಣಿಕೆ ಮಾಡಿಕೊಂಡು ಮುಂದಿನ ಸಭೆಯಲ್ಲಿ ಸರಿಯಾದ ಮಾಹಿತಿಯನ್ನು ನೀಡುವಂತೆ ಸೂಚನೆಯನ್ನು ನೀಡಲಾಯಿತು.

**ಎಂಪಿಲ್ಯಾಡ್ಸ್:**

16ನೇ ಲೋಕಸಭೆಗೆ ಸಂಬಂಧಪಟ್ಟಂತೆ ಒಟ್ಟು 3445 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಸದರಿ ಕಾಮಗಾರಿಗಳಲ್ಲಿ ಒಟ್ಟು 2960 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿಕೆ 485 ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುವುದಾಗಿ ಸಹಾಯಕ ನಿಯಂತ್ರಕರು (ಹಣಕಾಸು) ಇವರು ಸಭೆಗೆ ತಿಳಿಸಿದರು.

17ನೇ ಲೋಕಸಭೆಗೆ ಸಂಬಂಧಪಟ್ಟಂತೆ ಒಟ್ಟು 320 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಸದರಿ ಕಾಮಗಾರಿಗಳಲ್ಲಿ ಒಟ್ಟು 71 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿಕೆ 249 ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುವುದಾಗಿ ಸಹಾಯಕ ನಿಯಂತ್ರಕರು (ಹಣಕಾಸು) ಇವರು ಸಭೆಗೆ ತಿಳಿಸಿದರು.

ಈ ಎರಡು ಸಾಲಿನ ಮಾಹಿತಿ ಇರುವ ತಃಖ್ತೆಯನ್ನು ಪರಿಶೀಲಿಸಿದ ಸಭೆಯು, ಇನ್ನು ಮುಂದೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡುವ ಮೊತ್ತಕ್ಕೆ ಅನುಗುಣವಾಗಿ ವಿವಿಧ ಲೋಕಸಭಾ/ರಾಜ್ಯಸಭಾ ಸದಸ್ಯರ ಪ್ರಸ್ತಾವನೆಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಬೇಕೆಂದು, ಹೆಚ್ಚಿನ ಪ್ರಸ್ತಾವನೆಗಳು ಸ್ವೀಕಾರವಾದಲ್ಲಿ ಅವುಗಳನ್ನು ಅನುದಾನ

ಬಿಡುಗಡೆಯಾದ ನಂತರ ಆದ್ಯತೆ ಮೇರೆಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆಯೂ ಹಾಗೂ ನವೆಂಬರ್ 30ರೊಳಗಾಗಿ ಅನುಷ್ಠಾನ ಇಲಾಖೆಯೊಂದಿಗೆ ಸಮನ್ವಯ ಮಾಡಿಕೊಂಡು ತಾಳೆ ( Reconcilation) ಮಾಡಿಕೊಳ್ಳಲು ಸೂಚಿಸಲಾಯಿತು.

ಕೆವಿಎಲ್‌ಲಾಡ್ಸ್ ಮತ್ತು ಎಂಪಿಲಾಡ್ಸ್‌ಗಳ ಕುರಿತು ಅಪರ ಜಿಲ್ಲಾಧಿಕಾರಿಗಳಿಗೆ ಮೇಲ್ವಿಚಾರಣೆಯನ್ನು ನಿರ್ವಹಿಸುವಂತೆ ಸೂಚಿಸಲಾಯಿತು.

**4) ಕೃಷಿ ಇಲಾಖೆ:**

2020–21 ರ ಮುಂಗಾರು ಹಂಗಾಮಿನಲ್ಲಿ ಒಟ್ಟು 20147 ಹೆಕ್ಟೇರ್ ಗುರಿಗೆ 19389 ಹೆಕ್ಟೇರ್ ಬಿತ್ತನೆಯಾಗಿದ್ದು, ಶೇಕಡ 96 ಬಿತ್ತನೆ ಗುರಿ ಸಾಧಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಪ್ರಮುಖವಾಗಿ ರಾಗಿ (15289 ಹೆಕ್ಟೇರ್) ಮುಸುಕಿನ ಜೋಳ ಮತ್ತು ಅವರೆ ಆಹಾರ ಬೆಳೆಗಳನ್ನು ಬೆಳೆಯಲಾಗುತ್ತದೆ. ಪ್ರಸ್ತುತ ರಾಗಿ ಬೆಳೆ ಕಟಾವು ಪ್ರಗತಿಯಲ್ಲಿದ್ದು, ಶೇಕಡ 10ರಷ್ಟು ಪ್ರದೇಶ ಕಟಾವಾಗಿರುತ್ತದೆ. ಹಿಂಗಾರು ಹಂಗಾಮಿನಲ್ಲಿ 344 ಹೆಕ್ಟೇರ್ ಬಿತ್ತನೆ ಗುರಿಗೆ 315 ಹೆಕ್ಟೇರ್ ಪ್ರದೇಶದಲ್ಲಿ ಅಂದರೆ ಶೇಕಡ 91.57 ಬಿತ್ತನೆಯಾಗಿರುತ್ತದೆ. ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆ ಇರುವುದಿಲ್ಲವೆಂದು ಉಪ ಕೃಷಿ ನಿರ್ದೇಶಕರು ಸಭೆಯ ಗಮನಕ್ಕೆ ತಂದರು.

2020ರ ಮುಂಗಾರು ಬೆಳೆ ಸಮೀಕ್ಷೆಯಲ್ಲಿ 257731 ಪ್ಲಾಟ್‌ಗಳ ಗುರಿಗೆ 249585 ಪ್ಲಾಟ್‌ಗಳ ಸಮೀಕ್ಷೆ ಕೈಗೊಂಡಿದ್ದು, ಶೇಕಡ 97.25 ಪ್ರಗತಿಯಾಗಿರುತ್ತದೆ. ನಗರೀಕರಣ ಹಾಗೂ Absentee landlords ಹೆಚ್ಚಿರುವ ಕಾರಣದಿಂದ ಶೇಕಡ 100 ರಷ್ಟು ಪ್ರಗತಿ ಸಾಧಿಸಲಾಗಿರುವುದಿಲ್ಲ. ಮೇಲ್ವಿಚಾರಕರು ಶೇಕಡ 99.94 ಪ್ಲಾಟ್‌ಗಳನ್ನು ಪರಿಶೀಲಿಸಿ ಅನುಮೋದಿಸಿದ್ದು, ಉಳಿದ 124 ಪ್ಲಾಟ್‌ಗಳನ್ನು ಎರಡು ದಿನಗಳಲ್ಲಿ ಪೂರ್ಣಗೊಳಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

ಎನ್‌ಎಫ್‌ಎಂಸಿ ಯೋಜನೆಯಡಿ ಬೆಳೆ ಆಧಾರಿತ ಪ್ರಾತ್ಯಕ್ಷಿಕೆಗಳು, ಬಿತ್ತನೆ ಬೀಜ ವಿತರಣೆ, ಬೆಳೆಗಳ ಬೆಳವಣಿಗೆಗೆ ಪೂರಕವಾದ ವಿವಿಧ ಕೃಷಿ ಪರಿಕರಗಳು, ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗುತ್ತಿದೆ. ಸದರಿ ಯೋಜನೆಯಡಿ ರೂ.53.80 ಲಕ್ಷಗಳು ಬಿಡುಗಡೆಯಾಗಿದ್ದು, ರೂ.43.33 ಲಕ್ಷಗಳಷ್ಟು ವೆಚ್ಚ ಅಂದರೆ ಶೇಕಡ 80.55ರಷ್ಟು ಭರಿಸಲಾಗಿದೆ. ಉಳಿದ ಅನುದಾನವನ್ನು ಡಿಸೆಂಬರ್ 2020ರ ಅಂತ್ಯಕ್ಕೆ ವೆಚ್ಚ ಭರಿಸಲಾಗುವುದು ಎಂದು ತಿಳಿಸುತ್ತಾ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಮೈಕ್ರೋ ಇರಿಗೇಶನ್)ಯಡಿ ರೂ.22.21 ಲಕ್ಷಗಳಿಗೆ 6.60 ಲಕ್ಷಗಳ ವೆಚ್ಚ ಭರಿಸಲಾಗಿದ್ದು, ಒಟ್ಟಾರೆ ರಾಜ್ಯ ವಲಯ ಯೋಜನೆಯಡಿ ರೂ. 363.24 ಲಕ್ಷಗಳ ಅನುದಾನ ಬಿಡುಗಡೆಗೆ ರೂ.286.70 ಲಕ್ಷಗಳಷ್ಟು ವೆಚ್ಚವಾಗಿದ್ದ ಶೇಕಡ 79ರಷ್ಟು ವೆಚ್ಚ ಭರಿಸಲಾಗಿದೆ ಎಂದು ಉಪ ಕೃಷಿ ನಿರ್ದೇಶಕರು ಸಭೆಗೆ ತಿಳಿಸಿದರು.

ಇದನ್ನು ಗಮನಿಸಿದ ಸಭೆಯು ಮಾರ್ಚ್ 2021ರ ಅಂತ್ಯಕ್ಕೆ ಯಾವುದೇ ಅನುದಾನ ವ್ಯಪಗತವಾಗದಂತೆ ಶೇಕಡ 100 ವೆಚ್ಚ ಭರಿಸುವಂತೆ ಉಪ ಕೃಷಿ ನಿರ್ದೇಶಕರಿಗೆ ಸಭೆಯು ನಿರ್ದೇಶನವನ್ನು ನೀಡಲಾಯಿತು.

**5) ತೋಟಗಾರಿಕೆ ಇಲಾಖೆ:**

ತೋಟಗಾರಿಕೆ ಇಲಾಖೆಗೆ ರೂ.650 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇನ್ನು ರೂ. 650 ಲಕ್ಷಗಳು ಬಿಡುಗಡೆಯಾಗಬೇಕಿದ್ದು, ಈ ಬಗ್ಗೆ ಕ್ರಿಯಾ ಯೋಜನೆಯು ಅನುಮೋದನೆಗೊಂಡಿದ್ದು, ಇದುವರೆಗೂ ರೂ.578 ಲಕ್ಷಗಳು

ಖರ್ಚಾಗಿದ್ದು, ಉಳಿದಿರುವ ಗುರಿಯನ್ನು ಬೇಗನೆ ಮುಗಿಸುವುದಾಗಿಯೂ, ಸರ್ಕಾರದ ಮಟ್ಟದಲ್ಲಿ ಯಾವುದೇ ವಿಷಯ ಬಾಕಿ ಇರುವುದಿಲ್ಲವೆಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

6) ಪಶುಪಾಲನೆ ಮತ್ತು ಪಶು ಸಂಗೋಪನೆ:

ಕಾಲುಬಾಯಿ ರೋಗಕ್ಕೆ ಲಸಿಕೆಗೆ ಸಂಬಂಧಿಸಿದಂತೆ ದಿನಾಂಕ:12–10–2020 ರಿಂದ ಲಸಿಕೆ ನೀಡುವ ಕಾರ್ಯಕ್ರಮ ಪ್ರಾರಂಭಿಸಲಾಗಿದೆ ಎಂದು ಇಲಾಖಾ ಉಪ ನಿರ್ದೇಶಕರು ತಿಳಿಸಿದರು. 1.71 ಲಕ್ಷ ಪ್ರಾಣಿಗಳು (ಹಸು ಮತ್ತು ಎಮ್ಮೆ) ಇದ್ದು ಇದುವರೆಗೂ 1,00,499 ಪ್ರಾಣಿಗಳಿಗೆ ಲಸಿಕೆ ನೀಡಿರುವುದಾಗಿ ಆಗಿರುವುದಾಗಿ ತಿಳಿಸಿದರು. ಸದರಿ ವರ್ಷದಲ್ಲಿ ಲಸಿಕೆ ನೀಡಿದ ನಂತರ ಟ್ಯಾಗಿಂಗ್ ಮಾಡಿ ಸ್ಕ್ಯಾನ್ ಮಾಡಲು ಸೂಚಿಸಿರುವುದರಿಂದ ವಿಳಂಬ ಆಗುತ್ತಿರುವುದಾಗಿ ತಿಳಿಸಿದರು. ಈ ತಿಂಗಳ ಅಂತ್ಯಕ್ಕೆ ಪ್ರಗತಿ ಸಾಧಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಜಾನುವಾರು ಗಣತಿಗೂ ವಾಸ್ತವವಾಗಿ ಲಸಿಕೆ ಹಾಕಿರುವ ಪ್ರಾಣಿಗಳ ಸಂಖ್ಯೆಗಳನ್ನು ಹೋಲಿಸಿದಾಗ ಜಾನುವಾರಗಳ ಸಂಖ್ಯೆ ಕಡಿಮೆಯಾಗಿರುವುದಾಗಿ ತಿಳಿಸಿದರು.

7) ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ:

ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮುಂದುವರೆದ ಕಾಮಗಾರಿಗಳಲ್ಲಿ ಒಟ್ಟು 137 ಕಾಮಗಾರಿಗಳಲ್ಲಿ 103 ಕಾಮಗಾರಿಗಳು ಪೂರ್ಣಗೊಂಡಿದ್ದು 33 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇವರು ತಿಳಿಸಿದರು. ಒಟ್ಟು 507 ಹೊಸ ಕಾಮಗಾರಿಗಳು ಇದ್ದು ಅದರಲ್ಲಿ 494 ಕಾಮಗಾರಿಗಳು ಪೂರ್ಣಗೊಂಡಿದ್ದು, 13 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ತಿಳಿಸುತ್ತಾ, ಡಿಸೆಂಬರ್ ತಿಂಗಳ ಅಂತ್ಯಕ್ಕೆ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸುವುದಾಗಿ ಕಾರ್ಯಪಾಲಕ ಅಭಿಯಂತರರು ತಿಳಿಸಿದರು.

8) ಸಿ.ಆರ್.ಎಫ್:

ಸಿ.ಆರ್.ಎಫ್‌ನ ಮುಂದುವರೆದ ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಕಾರ್ಯಪಾಲಕ ಅಭಿಯಂತರರು ತಿಳಿಸಿದರು. 150 ಕಾಮಗಾರಿಗಳಲ್ಲಿ 150 ಕಾಮಗಾರಿಗಳು ಪೂರ್ಣಗೊಂಡಿದ್ದು, ಬಿಲ್‌ಗಳನ್ನು ವಿಭಾಗೀಯ ಕಛೇರಿಗೆ ಸಲ್ಲಿಸಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

9) ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನೀಯರಿಂಗ್ ವಿಭಾಗ:

ಅನಿರ್ಬಂಧಿತ ಯೋಜನೆ:

ಈ ಯೋಜನೆಯಡಿ ಒಟ್ಟು 515.72ಲಕ್ಷ ನಿಗಧಿಪಡಿಸಿದ ಅನುದಾನದಲ್ಲಿ ಇದುವರೆಗೂ ರೂ.128.2 ಲಕ್ಷಗಳು ಬಿಡುಗಡೆಯಾಗಿದ್ದು, ಇನ್ನು 386.80 ಲಕ್ಷಗಳು ಬಿಡುಗಡೆಯಾಗಬೇಕಾಗಿದ್ದು, ಈಗಾಗಲೇ ಈ ಯೋಜನೆಯಡಿಯ ಕಾಮಗಾರಿಗಳ ಕ್ರಿಯಾ ಯೋಜನೆಗೆ ದಿನಾಂಕ:19–10–2020 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು.

**ಮುಖ್ಯಮಂತ್ರಿ ಜಿವಸ್‌ವೈ ಯೋಜನೆ:**

ಈ ಯೋಜನೆಯಡಿ ರೂ. 117.19 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಇದುವರೆಗೂ ರೂ.90.00 ಲಕ್ಷಗಳು ಬಿಡುಗಡೆಯಾಗಿದ್ದು ಇನ್ನು ರೂ.27.19 ಲಕ್ಷಗಳು ಬಿಡುಗಡೆಗೆ ಬಾಕಿ ಇರುವುದನ್ನು ಸಭೆಗೆ ತಿಳಿಸಿದರು. ಈ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂಬುದಾಗಿ ಸಭೆಗೆ ತಿಳಿಸಿದರು.

**ಕೆರೆ ನಿರ್ವಹಣೆ ಬಗ್ಗೆ:**

ಒಟ್ಟು 337 ಕೆರೆಗಳಲ್ಲಿ 26 ಕೆರೆಗಳಿಗೆ ಬೌಂಡರಿ ಗುರುತಿಸಿದ್ದು, ಉಳಿದ 311 ಕೆರೆಗಳ ಒತ್ತುವರಿ ತೆರವುಗೊಳಿಸುವ ಸಂಬಂಧ ಸರ್ವೆ ಕಾರ್ಯ ಕೈಗೊಳ್ಳಲು ದಿನಾಂಕವನ್ನು ನಿಗಧಿಪಡಿಸುವಂತೆ ಈಗಾಗಲೇ ದಿನಾಂಕ:22-10-2020 ರಂದು ಜಿಲ್ಲಾದಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಳುಹಿಸಿದ್ದು ಕಂದಾಯ ಇಲಾಖೆಯಿಂದ ರೆವಿನ್ಯೂ ಇನ್ಸ್‌ಪೆಕ್ಟರ್, ತಹಶೀಲ್ದಾರ್, ಎಡಿಎಲ್‌ಆರ್ ಹಾಗೂ ಸರ್ವೆಯರ್‌ಗಳು ಯಾವ ದಿನಾಂಕಂದು ಯಾವ ಕರೆಯ ಒತ್ತುವರಿಯನ್ನು ಗುರುತಿಸಲು ಬರುತ್ತಾರೆ ಎಂಬುದಾಗಿ ತಿಳಿಸಿದಲ್ಲಿ ಕ್ರಮವಹಿಸಲು ಅನುಕೂಲವಾಗುವುದಾಗಿ ಸಭೆಗೆ ಅಧಿಕಾರಿಗಳು ಮನವಿ ಮಾಡಿಕೊಂಡರು.

ಈ ಬಗ್ಗೆ ಡಿಡಿಎಲ್‌ಆರ್ ಹಾಗೂ ಜಿಲ್ಲಾಧಿಕಾರಿಗಳ ಕಛೇರಿಯಿಂದ ಈ ತಿಂಗಳಲ್ಲಿ ಒಟ್ಟು 10 ಕೆರೆಗಳ ಒತ್ತುವರಿಯನ್ನು ಗುರುತಿಸಿಕೊಡುವುದಾಗಿ ತಿಳಿಸುತ್ತಾ, ಆದ್ಯತೆಗೆ ಅನುಗುಣವಾಗಿ 311 ಕೆರೆಗಳಲ್ಲಿ 10 ಕೆರೆಗಳ ಹೆಸರನ್ನು ನೀಡುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆಯನ್ನು ನೀಡಲಾಯಿತು.

ಗಡ್ಡೆಕೆರೆ, ಗುರುಶಾಂತಯ್ಯಕೆರೆ, ಚೆನ್ನಜಿಕೆರೆ, ಬೈರಸಂದ್ರ ಕೆರೆ, ತಾವರೆಕೆರೆ(ಗಂಗನಕೆರೆ),ಹೊಸಗನಪಟ್ಟಿ ಕೆರೆ, ರಾಮೋಹಳ್ಳಿ ಕೆರೆ, ಯಲಚಗುಪ್ಪಕೆರೆ, ಊರಮುಂದಿನ ಕೆರೆ, ಕಗ್ಗಲೀಪುರ ಕೆರೆ ಒಟ್ಟು ಈ ಹತ್ತು ಕೆರೆಗಳನ್ನು ನವೆಂಬರ್ ತಿಂಗಳ ಅಂತ್ಯದೊಳಗಾಗಿ ಸರ್ವೆ ಕಾರ್ಯ ನಡೆಸಿ ಬೌಂಡರಿ ಗುರುತಿಸಿಕೊಡುವಂತೆ ಸಭೆಯನ್ನು ಕಾರ್ಯಪಾಲಕ ಅಭಿಯಂತರರು ಕೋರಿಕೊಂಡರು.

ಈ ಕಾರ್ಯದಲ್ಲಿ ಅಪರ ಜಿಲ್ಲಾಧಿಕಾರಿಗಳು ಎಡಿಎಲ್‌ಆರ್ ಹಾಗೂ ಕಾರ್ಯಪಾಲಕ ಅಭಿಯಂತರರು, ಪಿಆರ್‌ಇಡಿ ಇವರೊಂದಿಗೆ ಸಮನ್ವಯ ಮಾಡಿಕೊಂಡು ಸರ್ವೆ ಕಾರ್ಯವನ್ನು ನಿಗಧಿತ ಅವಧಿಯೊಳಗೆ ಮುಗಿಸುವಂತೆ ಮೇಲ್ವಿಚಾರಣೆ ವಹಿಸಲು ಸೂಚಿಸಲಾಯಿತು.

ಒತ್ತುವರಿಯನ್ನು ಗುರುತಿಸಿ, ಅವುಗಳನ್ನು ತೆರವುಗೊಳಿಸಿದ ಕೂಡಲೇ ಅದಕ್ಕೆ ತಂತಿಬೇಲಿ ಹಾಕಿ ಹದ್ದುಬಸ್ತು ಮಾಡುವಂತೆಯೂ, ತಪ್ಪಿದ್ದಲ್ಲಿ ಕ್ರಮ ಕೈಗೊಳ್ಳುವುದಾಗಿ ಸಭೆಯು ಕಾರ್ಯಪಾಲಕ ಅಭಿಯಂತರರಿಗೆ ಸೂಚನೆಯನ್ನು ನೀಡಲಾಯಿತು.

**ಶಿಕ್ಷಣ ಇಲಾಖೆಯ ಶಾಲಾ ಕೊಠಡಿಯ ಕಾಮಗಾರಿಯ ಬಗ್ಗೆ:**

ಶಿಕ್ಷಣ ಇಲಾಖೆಗಳ ಕಟ್ಟಡಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬೆಂಗಳೂರು ದಕ್ಷಿಣದಲ್ಲಿ 2018-19ನೇ ಸಾಲಿನಲ್ಲಿ ಒಟ್ಟು 94 ಕಾಮಗಾರಿಗಳನ್ನು ನೀಡಿದ್ದು, ಇವುಗಳ ಅಂದಾಜು ಮೊತ್ತ ರೂ.267.70 ಲಕ್ಷಗಳಾಗಿದ್ದು, ಇದರಲ್ಲಿ 63 ಕಾಮಗಾರಿಗಳು ಪೂರ್ಣಗೊಂಡಿದ್ದು, 16 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿಯೂ ಉಳಿದ 15

ಕಾಮಗಾರಿಗಳು ನಿವೇಶನ ಕೊರತೆಯಿಂದ ಸ್ಥಗಿತವಾಗಿರುವುದಾಗಿಯೂ, 2019–20ನೇ ಸಾಲಿನಲ್ಲಿ ಒಟ್ಟು 51 ಕೊಠಡಿಗಳ ನಿರ್ಮಾಣ ಕಾಮಗಾರಿಗಳಲ್ಲಿ, 22 ಕಾಮಗಾರಿಗಳು ಪೂರ್ಣಗೊಂಡಿದ್ದು, 21 ಕಾಮಗಾರಿಗಳು ಪ್ರಗತಿಯ ಹಂತದಲ್ಲಿದ್ದು, ಉಳಿದ 8ಕಾಮಗಾರಿಗಳು ವಿವಿಧ ಕಾರಣಗಳಿಂದ ಮುಂದುವರೆಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಇನ್ನು ಉತ್ತರದಲ್ಲಿ 2018–19ನೇ ಸಾಲಿನಲ್ಲಿ ಒಟ್ಟು 50 ಕಾಮಗಾರಿಗಳು ಮಂಜೂರಾಗಿದ್ದು, ಇದರಲ್ಲಿ 41 ಕಾಮಗಾರಿಗಳು ಪೂರ್ಣಗೊಂಡಿದ್ದು, 5 ಕಾಮಗಾರಿಗಳು ಪ್ರಗತಿಯ ಹಂತದಲ್ಲಿದ್ದು, 1 ಬದಲಿ ಕಾಮಗಾರಿ ಹಾಗೂ ಇನ್ನೊಂದು ಟೆಂಡರ್ ರದ್ದಾಗಿರುವುದಾಗಿ ಸಭೆಗೆ ತಿಳಿಸಿದರು.

ಈಗಾಗಲೇ ಶಾಲಾ ಕೊಠಡಿ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆ ನೀಡಿದ್ದ ಆದೇಶವನ್ನು ಹಿಂಪಡೆದು, ಅದನ್ನು ಕೆಆರ್‌ಐಡಿಎಲ್ ಅಥವಾ ಜಿಲ್ಲಾ ಪಂಚಾಯತ್ ವಿಭಾಗಕ್ಕೆ ನೀಡುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಲಾಯಿತು.

10) <u>ಸಮಾಜ ಕಲ್ಯಾಣ ಇಲಾಖೆ:</u>

ಈ ತಿಂಗಳ 16ನೇ ತಾರೀಖಿನಿಂದ ಹಾಸ್ಟೆಲ್‌ಗಳನ್ನು ಪ್ರಾರಂಭಿಸಿದ್ದು, ಸರ್ಕಾರವು 50% ಮಾತ್ರ ಸ್ಥಳಾವಕಾಶವನ್ನು ನೀಡಬೇಕೆಂದು ಸೂಚಿಸಿರುವ ಮೇರೆಗೆ ಈ ವಾರದಲ್ಲಿ ಇದುವರೆಗೂ 41 ವಿದ್ಯಾರ್ಥಿಗಳು ದಾಖಲಾಗಿದ್ದು, ಅದರಲ್ಲಿ ಕೊನೆಯ ವರ್ಷದ ಡಿಗ್ರಿ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮಾತ್ರ ಇರುವುದಾಗಿ ಸಭೆಗೆ ತಿಳಿಸಿದರು.

ಈ ಹಿಂದೆ ಕೋವಿಡ್ ರೋಗಿಗಳಿಗೆ ಕೋವಿಡ್ ಕೇರ್ ಸೆಂಟರ್ ಮಾಡಿದ ಕೊಠಡಿಗಳನ್ನು ಸರಿಯಾದ ರೀತಿಯಲ್ಲಿ ಸ್ಯಾನಿಟೈಸ್ ಮಾಡುವಂತೆ ಸಭೆಯು ಸೂಚಿಸಲಾಯಿತು. ಈಗಾಗಲೇ ಬಿಬಿಎಂಪಿ ಜಂಟಿ ಆಯುಕ್ತರನ್ನು ಸಂಪರ್ಕಿಸಿ ಸ್ಯಾನಿಟೈಸೆಷನ್ ಮಾಡಿರುದಾಗಿ ಜಂಟಿ ನಿರ್ದೇಶಕರು ಸಭೆಗೆ ತಿಳಿಸಿದರು. ಪ್ರತಿ ತಾಲ್ಲೂಕುಗಳಲ್ಲೂ ಒಂದೊಂದು ಸ್ಪ್ರೈಯರ್‌ನ್ನು ಖರೀದಿ ಮಾಡಿಕೊಳ್ಳಬೇಕೆಂದು ಸೂಚಿಸಲಾಯಿತು.

ಯಲಚೇನಹಳ್ಳಿಯಲ್ಲಿ ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಮಂಜೂರು ಮಾಡಿದ್ದ ಜಾಗದಲ್ಲಿ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸುವ ಸಮಯದಲ್ಲಿ ಅಲ್ಲಿಯ ಬಿಲ್ಡರ್‌ನವರು ಸರ್ಕಾರಿ ರಸ್ತೆಯ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಿಕೊಂಡಿರುವುದಾಗಿ ಜಂಟಿ ನಿರ್ದೇಶಕರು ಸಭೆಗೆ ವಿವರಿಸಿದರು.

ಈ ಬಗ್ಗೆ ತಹಶೀಲ್ದಾರ್‌ರವರು ಈಗಾಗಲೇ ಬಿಲ್ಡರ್‌ಗೆ ನೋಟೀಸ್‌ನ್ನು ಜಾರಿ ಮಾಡಿದ್ದು, ಮುಂದುವರೆದು ಎವಿಕ್ಷನ್ ಆರ್ಡರ್ ಸಹ ಪಾಸ್ ಮಾಡಿದ್ದು, ಇನ್ನು 10 ದಿನಗಳಲ್ಲಿ ತೆರವುಗೊಳಿಸುವ ಕಾರ್ಯವನ್ನು ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಸಭೆಯು ದಿನಾಂಕ: 21/11/2012ರೊಳಗಾಗಿ ಕಾಲುದಾರಿಯಲ್ಲಿ ನಿರ್ಮಿಸಿರುವ ಕಟ್ಟಡದ ಭಾಗವನ್ನು ತೆರವುಗೊಳಿಸಬೇಕೆಂದು ಸೂಚನೆಯನ್ನು ನೀಡುತ್ತಾ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಾಗೂ ಸಿವಿಲ್ ನ್ಯಾಯಾಲಯದಲ್ಲಿ ಈ ವಿಷಯವಾಗಿ ಕೇವಿಯಟ್ ಸಲ್ಲಿಸುವಂತೆ ತಹಶೀಲ್ದಾರ್‌ಗೆ ಸೂಚಿಸಿದರು.

ಈಗಾಗಲೇ ಸಮಾಜ ಕಲ್ಯಾಣ ಇಲಾಖೆಗೆ ನೀಡಿರುವ 0-20 ಗುಂಟೆ ಜಾಗದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಆರಂಭಿಸಲು ಹೋದಾಗ ಆ ಜಾಗ ತಮ್ಮದೆಂದು ಆರೋಗ್ಯ ಇಲಾಖೆಯವರು ತಗಾದೆ ತೆಗೆದಿದ್ದು, ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಿರುವುದಾಗಿ ಜಂಟಿ ನಿರ್ದೇಶಕರು ಸಭೆಯ ಗಮನಕ್ಕೆ ತಂದರು.

ಈ ಬಗ್ಗೆ ನಾಳೆಯೇ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿ, ಡಮಾರ್ಕೇಷನ್ ಮಾಡಿ, ಈ ಸಮಸ್ಯೆಯನ್ನು ಪರಿಹರಿಸುವುದಾಗಿ ಪೂರ್ವ ತಾಲ್ಲೂಕು ತಹಶೀಲ್ದಾರ್‌ರವರು ಸಭೆಗೆ ಮನವರಿಕೆ ಮಾಡಿದರು. ದಿನಾಂಕ:21/11/2020ರೊಳಗಾಗಿ ಈ ವಿಷಯದ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸಭೆಯು ತಹಶೀಲ್ದಾರ್‌ಗೆ ಸೂಚನೆಯನ್ನು ನೀಡಲಾಯಿತು.

**ಮ್ಯಾನುಯಲ್ ಸ್ಕ್ಯಾವೆಂಚರ್ ಕುರಿತು:**

ಬಿಬಿಎಂಪಿ ಆಯುಕ್ತರೊಂದಿಗೆ ಈ ಬಗ್ಗೆ ಚರ್ಚಿಸಿ ಜಂಟಿ ನಿರ್ದೇಶಕರು ಪತ್ರವನ್ನು ಸಹ ನೀಡಿರುವುದಾಗಿ ಸಭೆಗೆ ತಿಳಿಸುತ್ತಾ, ಬಿಬಿಎಂಪಿ ಕಛೇರಿಯಿಂದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಬೇಕಾಗಿರುತ್ತದೆಂದು ಸಭೆಯ ಗಮನಕ್ಕೆ ತಂದರು.

ಎಲ್ಲಾ ಇಲಾಖೆಯ ಅಧಿಕಾರಿಗಳು ಅವರುಗಳಿಗೆ ವಹಿಸಿದ ಜವಾಬ್ದಾರಿಯನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸುವಂತೆ ಸೂಚಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ತುಷಾರ್ ಗಿರಿನಾಥ್ ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲೆ.

ಇವರಿಗೆ:

1) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್
3) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
4) ಜಿಲ್ಲಾ ಮಟ್ಟದ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ

ಪ್ರತಿಯನ್ನು ಮಾಹಿತಿಗಾಗಿ:

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿದಾನ ಸೌಧ, ಬೆಂಗಳೂರು
2) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು

ದಿನಾಂಕ: 04.11.2020 ರಂದು ಅಪರಾಹ್ನ 12.30 ಗಂಟೆಗೆ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

1. ಮೊದಲಿಗೆ ಜಿಲ್ಲಾಧಿಕಾರಿಗಳು, ಮೈಸೂರು ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ, ಬೆಂಗಳೂರು ರವರನ್ನು ಹಾಗೂ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಿದರು.
2. ಜಿಲ್ಲಾಧಿಕಾರಿಗಳು, ಮೈಸೂರು ರವರು ಮೊದಲಿಗೆ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಸ್ತುತ ಸಕ್ರಿಯ 1582 ಸಕ್ರಿಯ ಪ್ರಕರಣಗಳಿದ್ದು, ಈವರೆವಿಗೆ ಕೋವಿಡ್ ಸೋಂಕಿನಿಂದ 959 ಮರಣವಾಗಿರುವುದಾಗಿ ಸಭೆಗೆ ಮಾಹಿತಿ ನೀಡಿರುತ್ತಾರೆ. ಕೋವಿಡ್ ನಿಂದ ಉಂಟಾದ ಕೆಲವು ಸಾವಿನ ಪ್ರಕರಣಗಳಲ್ಲಿ ಕೆಲವು ಪ್ರಕರಣಗಳು ಇತರೆ ಕಾರಣಗಳಿಂದ ಅಂದರೆ, ಅಪಘಾತ ಮುಂತಾದ ಕಾರಣಗಳಿಂದ ಉಂಟಾಗಿದ್ದರೂ ಸಹ ಅವರುಗಳ ಗಂಟಲು ದ್ರವ ಪರೀಕ್ಷೆ ವೇಳೆಯಲ್ಲಿ ಕೋವಿಡ್ ಸೋಂಕು ಇರುವುದು ಕಂಡುಬಂದ ಕಾರಣ ಅಂತಹ ಪ್ರಕರಣಗಳನ್ನು ಸಹ ಕೋವಿಡ್ ನಿಂದ ಮೃತಪಟ್ಟ ಪ್ರಕರಣಗಳಿಗೆ ಸೇರಿಸಿರುವುದರಿಂದ ಮರಣದ ಸಂಖ್ಯೆ ಹೆಚ್ಚಾಗಿರುತ್ತದೆ. ಈ ಸಂಬಂಧ ಅಂತಹ ಪ್ರಕರಣಗಳನ್ನು ಕೈಬಿಡುವಂತೆ ಪ್ರಸ್ತಾವನೆ ಸಲ್ಲಿಸಲು ಉದ್ದೇಶಿಸಲಾಗಿದೆ.
3. ಪ್ರಸ್ತುತ ಮರಣದ ಪ್ರಮಾಣವು ಸಹ ಕಡಿಮೆ ಆಗುತ್ತಿದ್ದು, ದಿನಾಂಕಃ 01.11.2020 ರವರೆಗೆ ಮರಣದ ಪ್ರಮಾಣ ಶೇ.2 ರಷ್ಟಿದ್ದು, ದಿಃ 25.10.2020 ರಿಂದ 01.11.2020 ರವರೆಗೆ ಒಟ್ಟು 16 ಸಾವುಗಳಾಗಿದ್ದು, ಶೇ.1.2 ರಷ್ಟು ಪ್ರಮಾಣ ಆಗಿರುವ ಅಂಶವನ್ನು ಸಭೆಗೆ ಮಾಹಿತಿ ನೀಡಿದರು.
4. ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ 494, ಖಾಸಗಿ ಆಸ್ಪತ್ರೆಗಳಲ್ಲಿ 460 ಹಾಗೂ ಮನೆಯಲ್ಲಿ ಒಟ್ಟು 5 ಮರಣ ಸಂಭವಿಸಿರುವುದಾಗಿ ತಿಳಿಸಿ, ಈ ಪೈಕಿ ಮೈಸೂರು ಜಿಲ್ಲಾ ಆಸ್ಪತ್ರೆಯಲ್ಲಿ 248 ಮತ್ತು ಕೆ.ಆರ್ ಆಸ್ಪತ್ರೆಯಲ್ಲಿ 232 ಮರಣವಾಗಿರುವುದಾಗಿ ಸಭೆಗೆ ಮಾಹಿತಿ ನೀಡಿದರು.
5. ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಈವರೆವಿಗೆ ಒಟ್ಟು 3,41,273 ಪರೀಕ್ಷೆಗಳನ್ನು ನಡೆಸಲಾಗಿದ್ದು, ಈ ಪೈಕಿ 3,06,883 ಪರೀಕ್ಷೆಗಳನ್ನು ಸರ್ಕಾರಿ ಲ್ಯಾಬ್ ನಲ್ಲಿ ಹಾಗೂ 34,390 ಪರೀಕ್ಷೆಗಳನ್ನು ಖಾಸಗಿ ಲ್ಯಾಬ್ ಗಳಲ್ಲಿ ನಡೆಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು.
6. ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯಲ್ಲಿ ಮಾತನಾಡುತ್ತಾ, ಸರ್ಕಾರದ ಆದೇಶದನ್ವಯ ಸಾಮಾಜಿಕ ಅಂತರ ಕಾಯ್ದುಕೊಳ್ಳದ ಹಾಗೂ ಮುಖಗವಸು ಧರಿಸದಿರುವ ವ್ಯಕ್ತಿಗಳಿಗೆ ಸರ್ಕಾರವು ನಿಗದಿಪಡಿಸಿರುವ ದರದಲ್ಲಿ ದಂಡವನ್ನು ವಸೂಲು ಮಾಡಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಪತ್ರಿಕೆಗಳ ಮೂಲಕ ಸಾರ್ವಜನಿಕರ ಗಮನಕ್ಕೆ ತಂದಲ್ಲಿ ಸಾರ್ವಜನಿಕರು ಎಚ್ಚರ ವಹಿಸಲು ಅವಕಾಶವಾಗುತ್ತದೆ ಇಲ್ಲದಿದ್ದಲ್ಲಿ ಸಾರ್ವಜನಿಕರು ಮುಖಗವಸು ಧರಿಸುವುದನ್ನು

ನಿರ್ಲಕ್ಷಿಸುವುದರಿಂದ ಸೋಂಕಿನ ಪ್ರಮಾಣ ಹೆಚ್ಚಾಗುತ್ತದೆ. ಆದ್ದರಿಂದ ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಜನಸಂದಣಿ ಸೇರುವಂತಹ ಕಡೆಗಳಲ್ಲಿ ದಂಡ ವಸೂಲು ಮಾಡುವ ಕ್ರಮವನ್ನು ತಕ್ಷಣವೇ ಕೈಗೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.

7. ಮೈಸೂರು ನಗರದಲ್ಲಿರುವ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ - 19 ಸೋಂಕಿನ ಚಿಕಿತ್ಸೆಗೆ ದಾಖಲಾದ ಸೋಂಕಿತರಿಂದ ಹೆಚ್ಚಿನ ಹಣವನ್ನು ಪಾವತಿಸಲು ಒತ್ತಾಯಿಸುತ್ತಿರುವ ವಿಷಯವು ತಮ್ಮ ಗಮನಕ್ಕೆ ಬಂದಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ದರದ ವಿವರವನ್ನು ಪ್ರಕಟಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ಹಾಜರಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನಿರ್ದೇಶನ ನೀಡಿದರು.
8. ಹೆಚ್ಚಿನ ದರ ವಿಧಿಸುತ್ತಿರುವ ಖಾಸಗಿ ಆಸ್ಪತ್ರೆಗಳಿಗೆ ಆಕಸ್ಮಿಕವಾಗಿ ಭೇಟಿ ನೀಡಿ ಹೆಚ್ಚಿನ ದರ ವಿಧಿಸುತ್ತಿರುವುದು ಕಂಡುಬಂದಲ್ಲಿ ಅಂತಹ ಖಾಸಗಿ ಆಸ್ಪತ್ರೆಗಳ ವಿರುದ್ಧ ಕೆ.ಪಿ.ಎಂ.ಇ ಕಾಯ್ದೆಯಡಿ ಕ್ರಮ ಜರುಗಿಸಲು ಹಾಗೂ ಅಂತಹ ಆಸ್ಪತ್ರೆಗಳ ರಹದಾರಿಯನ್ನು ಅಮಾನತ್ತು ಅಥವಾ ರದ್ದು ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಚರ್ಚಿಸಲು ಹೆಚ್ಚಿನ ವಿಷಯಗಳು ಇಲ್ಲದ ಕಾರಣ ಸಭೆಯನ್ನು ವಂದನೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ಎನ್ ಜಯರಾಮ್, ಭಾ.ಆ.ಸೇ)
ಅಧ್ಯಕ್ಷರು, ಬೆಂಗಳೂರು ಜಲಮಂಡಳಿ, ಬೆಂಗಳೂರು
ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ದಿನಾಂಕ:11.11.2020 ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಇವರ ಅಧ್ಯಕ್ಷತೆಯಲ್ಲಿ, ಕೋವಿಡ್-19, ಮತ್ತು ಮಳೆ ಹಾನಿ ಪ್ರದೇಶಗಳ ಅಭಿವೃದ್ಧಿ ಕಾರ್ಯ ಸಂಬಂಧ ನಡೆದ ಸಭೆಯ ನಡವಳಿ**

*****

ಹಾಜರಾತಿ: ಹಾಜರಾತಿ ಪಟ್ಟಿಯಂತೆ.

ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ, ಇವರು ಸಭೆಗೆ ಆಗಮಿಸಿದ ಸಭೆಗೆ ಆಗಮಿಸಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿ ಕೊಡಗು ಜಿಲ್ಲೆ, ಇವರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಪ್ರಾರಂಭದಲ್ಲಿ ಜಿಲ್ಲಾಧಿಕಾರಿಯವರು ಮಾತನಾಡಿ ಮಳೆ ಹಾನಿ, ಕೋವಿಡ್ ಮತ್ತು ಜಿಲ್ಲೆಯ ವಿವಿದ ಕಾರ್ಯಕ್ರಮಗಳ ಪ್ರಗತಿ ವಿವರದ ಮಾಹಿತಿಯನ್ನು ನೀಡಿದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್-19 ಮತ್ತು ಮಳೆ ಹಾನಿ ಸಂಬಂಧ ಎಲ್ಲಾ ಅಧಿಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿರುವುದಾಗಿ ಶ್ಲಾಘನೆ ವ್ಯಕ್ತಪಡಿಸಿದರು.

ಮುಂದುವರೆದು ಜನ ಸಾಮಾನ್ಯರ ಇತರೇ ಕಛೇರಿ ಕಾರ್ಯಗಳು ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲು ಸೂಚಿಸಿದರು ಮತ್ತು 2019-20 ನೇ ಸಾಲಿನ ಮಳೆಹಾನಿ ಕಾಮಗಾರಿಗೆ ಸಂಬಂದಿಸಿದಂತೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ವಿಭಾಗ, ಕೊಡಗು ಇವರ ವ್ಯಾಪ್ತಿಯ ಕಾಮಗಾರಿ ಪ್ರಗತಿಯನ್ನು ಪರಿಶೀಲಿಸಿ, ಪೂರ್ಣಗೊಂಡ 352 ಕಾಮಗಾರಿಗಳ ಮೊತ್ತವನ್ನು ಸಂಬಂಧಿಸಿದವರಿಗೆ ಪಾವತಿಸಲು ಮತ್ತು ಉಳಿದ 03 ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿದರು. ಲೋಕೋಪಯೋಗಿ ಇಲಾಖೆಯ 59, ಪಿ.ಎಂ.ಜಿ.ಎಸ್.ವೈ 12, ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆಯ 27 ಗ್ರಾಮೀಣ ಕುಡಿಯುವ ನೀರು ಮತ್ತ ನೈರ್ಮಲ್ಯ ವಿಭಾಗ ಇವರ 39 ಮತ್ತು ನಗರಾಭಿವೃದ್ಧಿ ಇಲಾಖೆಯ 15 ಪೂರ್ಣಗೊಂಡ ಕಾಮಗಾರಿಗಳಿಗೆ ಈಗಾಗಲೇ ಬಿಡುಗಡೆಯಾಗಿರುವ ಅನುದಾನವನ್ನು ಸಂಬಂಧಿಸಿದವರಿಗೆ ಪಾವತಿಸಿ ಸದರಿ ಮೊತ್ತಕ್ಕೆ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿ ಉಳಿಕೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.

2019-20 ನೇ ಸಾಲಿನ ಮಳೆಹಾನಿ ವಿಶೇಷ ಅನುದಾನ ರೂ.100 ಕೋಟಿ ಕಾಮಗಾರಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಅನುಮೋದನೆ ನೀಡಿರುವ ಲೋಕೋಪಯೋಗಿ ಇಲಾಖೆಯ 43., ಪಂ. ರಾಜ್ ಇಂಜಿನಿಯರಿಂಗ್ ವಿಭಾಗದ 427, ಸಣ್ಣ ನೀರಾವರಿ ಇಲಾಖೆಯ 13 ಪಿ.ಎಂ.ಜಿ.ಎಸ್.ವೈ ಯವರ 4 ನಗರಾಭಿವೃದ್ಧಿ ಇಲಾಖೆಯ 45 ಮತ್ತು ಕಾವೇರಿ ನೀರಾವರಿ ನಿಗಮದ 2 ಒಟ್ಟು 534 ಕಾಮಗಾರಿಗ್ಳ ಪೈಕಿ 189 ಕಾಮಗಾರಿ ಪೂರ್ಣಗೊಂಡಿದ್ದು, ಪ್ರಗತಿಯಲ್ಲಿರುವ 310 ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿ ಪ್ರಾರಂಬಿಸದೆ ಬಾಕಿ ಇರುವ 35 ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಯವರು ಮಾತನಾಡಿ 2019-20 ನೇ ವಿಶೇಷ ಮಳೆಹಾನಿ ರೂ. 100 ಕೋಟಿ ಅನುದಾನ ಪೈಕಿ ರೂ.90.61 ಕೋಟಿಯ 534 ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಈ ಪೈಕಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ 45 ಕಾಮಗಾರಿಗಳ ಅಂದಾಜು ಮೊತ್ತ ರೂ.12.96 ಕೋಟಿ ಅನುದಾನ ಬಿಡುಗಡೆಯಾಗಿದ್ದು ಇನ್ನುಳಿದ ಕಾಮಗಾರಿಗಳ ಮೊತ್ತ ಆಯಾಯ ಇಲಾಖೆಯಿಂದ ಬಿಡುಗಡೆಯಾಗದ್ದರಿಂದ ಉಳಿಕೆ ರೂ. 9.39 ಕೋಟಿ ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ. ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಸರ್ಕಾರದ ನಿರ್ದೇಶನದಂತೆ ಜಿಲ್ಲಾಧಿಕಾರಿಯವರು ಆಡಳಿತಾತ್ಮಕ ಅನುಮೋದನೆ ನೀಡುವ ಕಾಮಗಾರಿಗೆ ಖಚಿತವಾಗಿ ಅನುದಾನ ಬಿಡುಗಡೆಯಾಗುವುದ್ದರಿಂದ ಆಡಳಿತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಯನ್ನು ಬಾಕಿ ಮಾಡದೇ ಪೂರ್ಣಗೊಳಿಸಲು ಸಂಬಂಧಿಸಿದ ಇಲಾಖೆಗಳಿಗೆ ಸೂಚಿಸಿದರು, ಮತ್ತು ಜಿಲ್ಲಾಧಿಕಾರಿಯವರಿಗೆ ಉಳಿಕೆ ಮೊತ್ತದಲ್ಲಿ ಬಾಕಿ ಇರುವ ಮಳೆ ಹಾನಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸೂಚಿಸಿದರು.

ಮುಂದುವರಿದು ಜಿಲ್ಲೆಯಲ್ಲಿ ಮಳೆ ಹಾನಿಯಿಂದ ಮೃತ್ತರಾದವರ ಕುಟುಂಬದ ವಾರಿಸುದಾರರಿಗೆ ಪರಿಹಾರ ನೀಡಿರುವ ಬಗ್ಗೆ ಮಾಹಿತಿಯನ್ನು ಪಡೆದರು. ಮತ್ತು ಕೃಷಿ ಬೆಳೆ ಹಾನಿ, ತೋಟಗಾರಿಕೆ ಬೆಳೆ ಹಾನಿ ಮತ್ತು ಕಾಫಿ ಬೆಳೆ ಹಾನಿ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಜಿಲ್ಲೆಯ 3 ತಾಲ್ಲೂಕಿನ ತಹಶೀಲ್ದಾರರನ್ನು ವಿಚಾರಿಸಿದರು. ತಹಶೀಲ್ದಾರರು ಮಾತನಾಡಿ ಬೆಳೆ ಹಾನಿ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಸಂಬಂಧಿಸಿದ ಪರಿಹಾರ ತಂತ್ರಾಂಶದಲ್ಲಿ ದಾಖಲಿಸುತಿರುವ ಬಗ್ಗೆ ಮಾಹಿತಿಯನ್ನು ನೀಡಿದರು.

ಮನೆಹಾನಿ ಸಂಬಂಧಿಸಿದಂತೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಆಯಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಜಿ.ಪಿ.ಎಸ್ ಕಾಲೋಚಿತಗೊಳಿಸಿ ಸಂಭಂದಿಸಿದ ಸಂತ್ರಸ್ತರಿಗೆ ಪರಿಹಾರ ಮೊತ್ತ ಬಿಡುಗಡೆಗೆ ಕ್ರಮಕೈಗೊಳ್ಳಲು ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡಿ ಜಿಲ್ಲೆಯಲ್ಲಿ ಒಟ್ಟು 75312 ಕೋವಿಡ್-19 ಪರೀಕ್ಷಿಸಲಾಗಿದ್ದು ಈ ಪೈಕಿ ದೃಢಪಟ್ಟಿರುವ 5076 ರ ಪೈಕಿ 4866 ಪ್ರಕರಣ ಗುಣಮುಖರಾಗಿದ್ದು 69 ಜನರು ಮೃತ್ತಪಟ್ಟಿದ್ದು 141 ಪ್ರಕರಣ ಚಿಕಿತ್ಸೆಯಲ್ಲಿದು. ಇದರಂತೆ ಜಿಲ್ಲೆಯಲ್ಲಿ ಗುಣಮುಖರಾದವರ ಪ್ರಮಾಣ ಶೇಕಡ 96 ರಷ್ಟಿದ್ದು ಸೋಂಕು ವ್ಯಾಪಕವಾಗಿ ಹರಡದಂತೆ ಸೂಕ್ತ ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲು ತಿಳಿಸಿ ಈ ಸಂಬಂಧ ಸರ್ಕಾರದಿಂದ ಯಾವುದಾದರೂ ಅಗತ್ಯವಿದ್ದಲ್ಲಿ ತಿಳಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ ಸಭೆಯನ್ನು ಮುಗಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು ಹಾಗೂ ಕೊಡಗು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ

ಸಂಖ್ಯೆ:ಪ್ರವಿ/23/2020-21, ದಿನಾಂಕ:11.11.2020.
ಪ್ರತಿಯನ್ನು: ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಕರ್ನಾಟಕ ಲೋಕಸೇವಾ ಆಯೋಗ

ದೂರವಾಣಿ : 22268390, ಫ್ಯಾಕ್ಸ್ : 22266481
ಅಂಚೆ ಪೆಟ್ಟಿಗೆ ನಂ : 5056
ಇ-ಮೇಲ್ : kpsc-ka@nic.in

ಕರ್ನಾಟಕ ಲೋಕಸೇವಾ ಆಯೋಗದ ಕಛೇರಿ,
" ಉದ್ಯೋಗ ಸೌಧ",
ಬೆಂಗಳೂರು-560 001.
ವೆಬ್ ಸೈಟ್ : http://kpsc.kar.nic.in

ಸಂಖ್ಯೆ : Secy Est-30/2020-21 ಹಿಎಸ್‌ಸಿ
ಅಡಕ ಪತ್ರಗಳು

ದಿನಾಂಕ : 12.11.2020

CS/E-1916900/2020
13/11/2020

ಇಂದ :

ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ
ಬೆಂಗಳೂರು.

ಇವರಿಗೆ :

ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು.

(ಟಿ.ಎಂ. ವಿಜಯ್ ಭಾಸ್ಕರ್)
ಮುಖ್ಯ ಕಾರ್ಯದರ್ಶಿ

18/11/2020

ಮಾನ್ಯರೇ,

ವಿಷಯ: ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:20-11-2020ರಂದು ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳ ವೀಡಿಯೋ ಸಂವಾದದ ಸಭೆಯನ್ನು ಏರ್ಪಡಿಸಿರುವ ಕುರಿತು.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 09 ಇಸಪ 2020 ದಿನಾಂಕ:09-10-2020.
2. ತಮ್ಮ ಕಛೇರಿ ಸಭಾ ಸೂಚನಾ ಪತ್ರ ಸಂಖ್ಯೆ: ಸಿಆಸುಇ/11/ಗಕಾಸ 2020 ದಿನಾಂಕ:12-11-2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅಧಿಸೂಚನೆಯಡಿ, ರಾಮನಗರ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನನ್ನನ್ನು ನೇಮಕ ಮಾಡಿರುವುದು ಸರಿಯಷ್ಟೆ. ಈ ಸಂಬಂಧ ಉಲ್ಲೇಖ(2)ರ ಸಭಾ ಸೂಚನಾ ಪತ್ರದಡಿಯಲ್ಲಿ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:20-11-2020ರಂದು ಅಪರಾಹ್ನ 2:30 ಗಂಟೆಗೆ ಕೆ.ಡಿ.ಪಿ. ಪರಿಶೀಲನಾ ಸಭೆಯನ್ನು (ವಿಡಿಯೋ ಸಂವಾದದ ಮೂಲಕ) ಆಯೋಜಿಸಲಾಗಿದ್ದು, ತದನಂತರ ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ/ ಪ್ರಧಾನ

ಕಾರ್ಯದರ್ಶಿಗಳ/ ಕಾರ್ಯದರ್ಶಿಗಳ ಸಭೆಯನ್ನು ಏರ್ಪಡಿಸಿರುವುದಾಗಿ ತಿಳಿಸಿ, ಸದರಿ ಸಭೆಗೆ ಅಗತ್ಯ ಮಾಹಿತಿಯನ್ನು ದಿನಾಂಕ:17-11-2020ರೊಳಗಾಗಿ ಒದಗಿಸುವಂತೆ ಕೋರಲಾಗಿರುತ್ತದೆ.

ಈ ಸಂಬಂಧ ದಿನಾಂಕ:09-10-2020ರ ಅಧಿಸೂಚನೆಯಡಿ, ರಾಮನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನೇಮಕಗೊಳಿಸಿದ್ದು, ತದನಂತರದಲ್ಲಿ ಆಯೋಗದಲ್ಲಿ ನಿರಂತರವಾಗಿ ಸಂದರ್ಶನಗಳನ್ನು ನಡೆಸಲಾಗುತ್ತಿದೆ. ಆಯೋಗದಲ್ಲಿ ಸಂದರ್ಶನಗಳು ನಡೆಯುತ್ತಿರುವ ಸಂದರ್ಭದಲ್ಲಿ ಕಾರ್ಯದರ್ಶಿಯವರ ಉಪಸ್ಥಿತಿಯು ಅತೀ ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ರಾಮನಗರ ಜಿಲ್ಲೆಗೆ ಭೇಟಿ ನೀಡಲು ಸಾಧ್ಯವಾಗಿರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ. ಮುಂದುವರೆದು, ಮುಂದಿನ ದಿನಗಳಲ್ಲಿ ಜಿಲ್ಲೆಗೆ ಭೇಟಿ ನೀಡಿ ಪರಿಶೀಲಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಜಿ. ಸತ್ಯವತಿ) 12-11-2020
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ ಮತ್ತು
ರಾಮನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ.

ಶ್ರೀ ವಿ. ಅನ್ಬುಕುಮಾರ್, ಭಾ.ಆ.ಸೇ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಇವರ ಕೊಡಗು ಜಿಲ್ಲೆಯ ಪ್ರವಾಸ ವರದಿ

| ಕ್ರ.ಸಂ | ವಿಷಯ | ವರದಿ |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಕೊಡಗು |
| 2 | ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳ ಹೆಸರು ಮತ್ತು ಹುದ್ದೆ | ಶ್ರೀ ವಿ. ಅನ್ಬುಕುಮಾರ್, ಭಾ.ಆ.ಸೇ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು |
| 3 | ಪ್ರವಾಸ ಕೈಗೊಂಡ ದಿನಾಂಕ | 10.11.2020 ಮತ್ತು 11.11.2020 |
| | | |
| | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | 2019-20 ನೇ ಸಾಲಿನ ಮಳೆಹಾನಿ ಕಾಮಗಾರಿಗೆ ಸಂಬಂದಿಸಿದಂತೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ವಿಭಾಗ, ಕೊಡಗು ಇವರ ವ್ಯಾಪ್ತಿಯ ಕಾಮಗಾರಿ ಪ್ರಗತಿಯನ್ನು ಪರಿಶೀಲಿಸಲಾಯಿತು. ಪೂರ್ಣಗೊಂಡ 352 ಕಾಮಗಾರಿಗಳ ಮೊತ್ತವನ್ನು ಸಂಬಂಧಿಸಿದವರಿಗೆ ಪಾವತಿಸಲು ಮತ್ತು ಉಳಿದ 03 ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಲಾಯಿತು.<br><br>ಲೋಕೋಪಯೋಗಿ ಇಲಾಖೆಯ 59, ಪಿ.ಎಂ.ಜಿ.ಎಸ್.ವೈ. 12. ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆಯ 27 ಗ್ರಾಮೀಣ ಕುಡಿಯುವ ನೀರು ಮತ್ತ ನೈರ್ಮಲ್ಯ ವಿಭಾಗ ಇವರ 39 ಮತ್ತು ನಗರಾಭಿವೃದ್ಧಿ ಇಲಾಖೆಯ 15 ಪೂರ್ಣಗೊಂಡ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಈಗಾಗಲೇ ಬಿಡುಗಡೆಯಾಗಿರುವ ಅನುದಾವನ್ನು ಸಂಬಂದಿಸಿದವರಿಗೆ ಪಾವತಿಸಿ ಸದರಿ ಮೊತ್ತಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿ ಉಳಿಕೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲು ಸೂಚನೆ ನೀಡಲಾಯಿತು.<br>2019-20 ನೇ ಸಾಲಿನ ಮಳೆಹಾನಿ ವಿಶೇಷ ಅನುದಾನ ರೂ.100 ಕೋಟಿ ಕಾಮಗಾರಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಅನುಮೋದನೆ ನೀಡಿರುವ ಲೋಕೋಪಯೋಗಿ ಇಲಾಖೆಯ 43, ಪಂ. ರಾಜ್ ಇಂಜಿನಿಯರಿಂಗ್ ವಿಭಾಗದ 427, ಸಣ್ಣ ನೀರಾವರಿ ಇಲಾಖೆಯ 13 ಪಿ.ಎಂ.ಜಿ.ಎಸ್.ವೈ ಯವರ 4 ನಗರಾಭಿವೃದ್ಧಿ ಇಲಾಖೆಯ 45 ಮತ್ತು ಕಾವೇರಿ |

| | | |
|---|---|---|
| | | ನೀರಾವಾರಿ ನಿಗಮದ 2 ಒಟ್ಟು 534 ಕಾಮಗಾರಿಗ್ಳ ಪೈಕಿ 189 ಕಾಮಗಾರಿ ಪೂರ್ಣಗೊಂಡಿದ್ದು, ಪ್ರಗತಿಯಲ್ಲಿರುವ 310 ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿ ಪ್ರಾರಂಭಿಸದೆ ಬಾಕಿ ಇರುವ 35 ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಸೂಚನೆ ನೀಡಲಾಯಿತು. |
| | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 2019-20 ನೇ ವಿಶೇಷ ಮಳೆಹಾನಿ ರೂ. 100 ಕೋಟಿ ಅನುದಾನ ಪೈಕಿ ರೂ.90.61 ಕೋಟಿಯ 534 ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಈ ಪೈಕಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ 45 ಕಾಮಗಾರಿಗಳ ಅಂದಾಜು ಮೊತ್ತ ರೂ.12.96 ಕೋಟಿ ಅನುದಾನ ಬಿಡುಗಡೆಯಾಗಿದ್ದು ಇನ್ನುಳಿದ ಕಾಮಗಾರಿಗಳ ಮೊತ್ತ ಆಯಾಯ ಇಲಾಖೆಯಿಂದ ಬಿಡುಗಡೆಯಾಗದ್ದರಿಂದ ಉಳಿಕೆ ರೂ. 9.39 ಕೋಟಿ ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಪರಿಶೀಲನೆಯ ಸಮಯದಲ್ಲಿ ತಿಳಿಸಿರುತ್ತಾರೆ.<br><br>ಸರ್ಕಾರದ ನಿರ್ದೇಶನದಂತೆ ಜಿಲ್ಲಾಧಿಕಾರಿಯವರು ಆಡಳಿತಾತ್ಮಕ ಅನುಮೋದನೆ ನೀಡುವ ಕಾಮಗಾರಿಗೆ ಖಚಿತವಾಗಿ ಅನುದಾನ ಬಿಡುಗಡೆಯಾಗುವುದರಿಂದ ಆಡಳಿತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಯನ್ನು ವಿಳಂಬವಿಲ್ಲದೆ ಪೂರ್ಣಗೊಳಿಸಲು ಸಂಬಂಧಿಸಿದ ಇಲಾಖೆಗಳಿಗೆ ಸೂಚನೆ ನೀಡಲಾಯಿತು ಮತ್ತು ಉಳಿಕೆ ಮೊತ್ತದಲ್ಲಿ ಬಾಕಿ ಇರುವ ಮಳೆ ಹಾನಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಯಿತು. |
| | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಜಿಲ್ಲೆಯಲ್ಲಿ ಮಳೆ ಹಾನಿಯಿಂದ ಮೃತ್ತರಾದವರ ಕುಟುಂಬದ ವಾರಿಸುದಾರರಿಗೆ ಪರಿಹಾರ ನೀಡಿರುವ ಬಗ್ಗೆ ಮಾಹಿತಿಯನ್ನು ಚರ್ಚಿಸಲಾಯಿತು. ಕೃಷಿ ಬೆಳೆ ಹಾನಿ, ತೋಟಗಾರಿಕೆ ಬೆಳೆ ಹಾನಿ ಮತ್ತು ಕಾಫಿ ಬೆಳೆ ಹಾನಿ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಜಿಲ್ಲೆಯ 3 ತಾಲ್ಲೂಕಿನ ತಹಶೀಲ್ದಾರರನ್ನು ವಿಚಾರಿಸಲಾಯಿತು. ತಹಶೀಲ್ದಾರರು ಮಾತನಾಡಿ ಬೆಳೆ ಹಾನಿ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಸಂಬಂಧಿಸಿದ ಪರಿಹಾರ ತಂತ್ರಾಂಶದಲ್ಲಿ ದಾಖಲಿಸುತ್ತಿರುವ ಬಗ್ಗೆ ಮಾಹಿತಿಯನ್ನು ನೀಡಿದರು. |

| | | |
|---|---|---|
| | | ಮನೆಹಾನಿ ಸಂಬಂಧಿಸಿದಂತೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಆಯಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಜಿ.ಪಿ.ಎಸ್ ಕಾಲೋಚಿತಗೊಳಿಸಿ ಸಂಭಂದಿಸಿದ ಸಂತ್ರಸ್ತರಿಗೆ ಪರಿಹಾರ ಮೊತ್ತ ಬಿಡುಗಡೆಗೆ ಕ್ರಮಕೈಗೊಳ್ಳಲು ನಿರ್ದೇಶನ ನೀಡಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡಿ ಜಿಲ್ಲೆಯಲ್ಲಿ ಒಟ್ಟು 75312 ಕೋವಿಡ್-19 ಪ್ರಕರಣಗಳನ್ನು ಪರೀಕ್ಷಿಸಲಾಗಿದ್ದು ಈ ಪೈಕಿ ದೃಢಪಟ್ಟಿರುವ 5076 ರ ಪೈಕಿ 4866 ಪ್ರಕರಣ ಗುಣಮುಖರಾಗಿದ್ದು 69 ಜನರು ಮೃತ್ತಪಟ್ಟಿದ್ದು 141 ಪ್ರಕರಣ ಚಿಕಿತ್ಸೆಯಲ್ಲಿರುವುದಾಗಿ ಮಾಹಿತಿ ನೀಡಿದರು. ಇದರಂತೆ ಜಿಲ್ಲೆಯಲ್ಲಿ ಗುಣಮುಖರಾದವರ ಪ್ರಮಾಣ ಶೇಕಡ 96 ರಷ್ಟಿರುವುದಾಗಿ ತಿಳಿಸಿದರು. ಪ್ರಗತಿಯನ್ನು ಪರಿಶೀಲಿಸಿ ಸೋಂಕು ವ್ಯಾಪಕವಾಗಿ ಹರಡದಂತೆ ಸೂಕ್ತ ಮುನ್ನೆಚ್ಚರಿಕೆಯ ಕ್ರಮಗಳನ್ನು ಮುಂದುವರೆಸಲು ಸೂಚಿಸಲಾಯಿತು.<br>ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲು ತಿಳಿಸಿ ಈ ಸಂಬಂಧ ಸರ್ಕಾರದಿಂದ ಯಾವುದಾದರೂ ಅಗತ್ಯವಿದ್ದಲ್ಲಿ ತಿಳಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು. |

**<u>ವಿಶೇಷ ಗಮನಕ್ಕಾಗಿ:</u>** ಅಕ್ಟೋಬರ್ 2020ರ ಮಾಹೆಯಲ್ಲಿ ನಾನು ಕೋವಿಡ್-19 ಸೊಂಕಿಗೆ ಒಳಗಾಗಿದ್ದರಿಂದ ಕೊಡಗು ಜಿಲ್ಲೆಗೆ ಪ್ರವಾಸ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ನಿರಂತರ ಸಂಪರ್ಕದಲ್ಲಿದ್ದು, ಪ್ರಗತಿಯನ್ನು ಪರಾಮರ್ಶಿಸಿರುತ್ತೇನೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ಕೊಡಗು ಜಿಲ್ಲೆ

ಆಯುಕ್ತರ ಕಛೇರಿ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಕೌಶಲ್ಯ ಭವನ,
ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029.

ಸಂಖ್ಯೆ.ಕೈತಉ/ಆ.ಪ್ರ/ವರದಿ/2020-21. ದಿನಾಂಕ: 19-11-2020

ಗೆ,
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಸುಧಾರಣೆ-ಕಾರ್ಯಾಧ್ಯಯನ)
ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
<u>ಬೆಂಗಳೂರು-560 001.</u>

ಮಾನ್ಯರೆ,

ವಿಷಯ: ದಿನಾಂಕ 18-11-2020 ರಂದು ಕೋವಿಡ್-19 ರ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಮಂಡ್ಯ ಜಿಲ್ಲೆಗೆ ಭೇಟಿ ನೀಡಲಾದ ಬಗ್ಗೆ ವರದಿ

-000-

ಕರೋನಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ದಿನಾಂಕ 18-11-2020 ರಂದು ಮಂಡ್ಯ ಜಿಲ್ಲೆಗೆ ಭೇಟಿ ನೀಡಲಾಗಿದ್ದು, ಅದರಂತೆ ನಡೆದ ಸಭೆಯ ನಡವಳಿಯನ್ನು ತಮ್ಮ ಮಾಹಿತಿಗಾಗಿ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

ಅಡಕ: ಸಭೆಯ ನಡವಳಿ(7 ಪುಟಗಳು)

(ಡಾ॥ ಕೆ.ವಿ.ತ್ರಿಲೋಕ ಚಂದ್ರ)
ಆಯುಕ್ತರು,
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ
ಹಾಗೂ
ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

**ದಿನಾಂಕ:-18-11-2020ರಂದು ಶ್ರೀ ತ್ರಿಲೋಕ್ ಚಂದ್ರ ಭಾ.ಆ.ಸೇ. ಮಾನ್ಯ ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಕರೋನಾ ನಿಯಂತ್ರಣ ಸಂಬಂಧ ನಡೆದ ಸಭೆಯ ಸಭಾ ನಡವಳಿ**

*****

ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯರವರು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳು ಮತ್ತು ತಹಶೀಲ್ದಾರ್, ಟಿ.ಹೆಚ್.ಒ. ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಾರ್ಯಕಲಾಪವನ್ನು ನಡೆಸಿ ಕೊಡಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಜಿಲ್ಲೆಯಲ್ಲಿ ಕೋವಿಡ್-19 ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಿಯಂತ್ರಣ ಸಂಬಂಧ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಮಾಹಿತಿ ನೀಡಲು ಡಿ.ಹೆಚ್.ಒ.ರವರಿಗೆ ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರು ಮಂಡ್ಯರವರು ಮಾತನಾಡಿ, ಜಿಲ್ಲೆಯಲ್ಲಿ ಕಳೆದ 7 ದಿನಗಳ ಕೋವಿಡ್ ಟೆಸ್ಟ್‌ನ ತಾಲ್ಲೂಕುವಾರು ಪ್ರಗತಿಯನ್ನು ಸಭೆಗೆ ವಿವರಿಸುತ್ತಾ, ರ್ಯಾಟ್ ಟೆಸ್ಟ್‌ಗೆ 3150 ಗುರಿ ಇದ್ದು, 8297 ಟೆಸ್ಟ್ ಮಾಡಲಾಗಿದೆ. ಆರ್.ಟಿ.ಪಿ.ಸಿ.ಆರ್. ಟೆಸ್ಟ್‌ಗೆ 17500 ಗುರಿಗೆ 17433 ಟೆಸ್ಟ್ ಮಾಡಲಾಗಿದ್ದು, ಶೇ.99.62ರಷ್ಟು ಟೆಸ್ಟ್ ಮಾಡಲಾಗಿದ್ದು ಪಾಸಿಟಿವ್ ರೇಟ್ 1.72 ಇದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ, Co-Morbid, ILI ಮತ್ತು SARI ಪ್ರಕರಣಗಳು ಎಷ್ಟು ಇದೆ? ಅವರ ಆರೋಗ್ಯ ಪರಿಸ್ಥಿತಿ ಹೇಗಿದೆ ಎಂದು ಕೇಳಿದಾಗ ಡಿ.ಹೆಚ್.ಓ.ರವರು ಜಿಲ್ಲೆಯಲ್ಲಿ ಒಟ್ಟು 158216 ಅo-ಒoಡಿbiಜ ಪ್ರಕರಣಗಳಿದ್ದು ಇದರಲ್ಲಿ ಈವರೆಗೆ 122839 ಟೆಸ್ಟ್ ಮಾಡಲಾಗಿದ್ದು ಶೇ.77.64ರಷ್ಟು ಅo-ಒoಡಿbiಜ ಪ್ರಕರಣಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿರುವುದಾಗಿ ತಿಳಿಸಿದರು.

ಕಳೆದ ಏಳು ದಿನಗಳಲ್ಲಿ ಗಂಟಲು ದ್ರವ ಪರೀಕ್ಷೆಗೆ ನಿಗದಿಪಡಿಸಿದ ಗುರಿಯನ್ನು ಕೆ.ಆರ್.ಪೇಟೆ ತಾಲ್ಲೂಕು ಹೊರತು ಪಡಿಸಿ ಉಳಿದ ಎಲ್ಲಾ ತಾಲ್ಲೂಕುಗಳು ಯಶಸ್ವಿಯಾಗಿ ಪೂರ್ಣಗೊಳಿಸಿದೆ ಎಂದು ಜಿಲ್ಲಾ ಆ.ಕು.ಕ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಮಾನ್ಯ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ನಿಗದಿಪಡಿಸಲಾಗಿರುವ ಗುರಿಯನ್ನು ಸಾಧಿಸಲು ಬೇಕಾದ ಅಗತ್ಯ ಕ್ರಮ ಕೈಗೊಳ್ಳಲು ತಾಲ್ಲೂಕು ಆರೋಗ್ಯಾಧಿಕಾರಿಗಳು, ಕೆ.ಆರ್.ಪೇಟೆ ತಾಲ್ಲೂಕು ರವರಿಗೆ ಸೂಚಿಸಿದೆ.

ಕಳೆದ 01 ತಿಂಗಳಿನ ವರದಿಯನ್ವಯ ನಾಗಮಂಗಲ ತಾಲ್ಲೂಕಿನಲ್ಲಿ 3.26% ಮತ್ತು ಪಾಂಡವಪುರ ತಾಲ್ಲೂಕಿನಲ್ಲಿ 3.81% ಪಾಸಿಟಿವ್ ಪ್ರಕರಣಗಳು ಕಂಡುಬಂದಿದ್ದು, ಇಂತಹ ತಾಲ್ಲೂಕುಗಳಲ್ಲಿ ಐ.ಇ.ಸಿ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂದು ಜಿಲ್ಲಾ ಆ.ಕು.ಕ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಮಾನ್ಯ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಇಂತಹ ತಾಲ್ಲೂಕುಗಳಲ್ಲಿ ಹೆಚ್ಚಿನದಾಗಿ ILI ಮತ್ತು SARI ಪ್ರಕರಣಗಳ ಸ್ವಾಬ್ ಪರೀಕ್ಷೆ ನಡೆಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಈ ವರೆಗೆ 17874 ಮಂದಿ ಸೋಂಕಿಗೆ ತುತ್ತಾಗಿದ್ದು, ಇದರಲ್ಲಿ 17284 ಮಂದಿ ಈವರೆಗೆ ಗುಣಮುಖರಾಗಿದ್ದು, ಗುಣಮುಖ ಹೊಂದುತ್ತಿರುವವರ ಪ್ರಮಾಣ ಶೇಕಡಾ 96.7% ರಷ್ಟಿದೆ ಎಂದು ಜಿಲ್ಲಾ ಆ.ಕು.ಕ

ಅಧಿಕಾರಿಗಳು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಮರಣ ಪ್ರಮಾಣ ಶೇ 0.80% ರಷ್ಟಿದ್ದು ಮರಣ ಪ್ರಮಾಣವನ್ನು ಇಳಿಮುಖಗೊಳಿಸಿದಲ್ಲಿ 100% ಗುಣಮುಖ ಹೊಂದಲು ಸಾಧ್ಯವಾಗುತ್ತದೆ. ಹಾಗೂ ಮರಣ ಹೊಂದಿರುವವರಲ್ಲಿ ಶೇ 70% ರಷ್ಟು ಅ೦-ಒ೦ಡಿbಜ ಪ್ರಕರಣಗಳಾಗಿದ್ದು, ಇಂತಹ ಪ್ರಕರಣಗಳನ್ನು ಪತ್ತೆಹಚ್ಚಿ ಚಿಕಿತ್ಸೆಗೊಳಪಡೆಸಿದಲ್ಲಿ ಮರಣ ಪ್ರಕರಣಗಳನ್ನು ಕಡಿಮೆಗೊಳಿಸಬಹುದಾಗಿದ್ದು ಈ ನಿಟ್ಟಿನಲ್ಲಿ ಕ್ರಮ ವಹಿಸಲು ಜಿಲ್ಲಾ ಆ.ಕು.ಕ ಅಧಿಕಾರಿಗಳು ಮತ್ತು ಜಿಲ್ಲೆಯ ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ, ನಾಗಮಂಗಲ ತಾಲ್ಲೂಕಿನಲ್ಲಿ ಜಿಲ್ಲೆಯಲ್ಲಿಯೇ ಅತೀ ಕಡಿಮೆ Co-Morbid ಪ್ರಕರಣಗಳನ್ನು ಪರೀಕ್ಷೆಗೆ ಒಳಪಡಿಸಿದ್ದು, ಹೆಚ್ಚಿನದಾಗಿ ಪರೀಕ್ಷೆ ನಡೆಸಲು ಬೇಕಾದ ಅಗತ್ಯ ಕ್ರಮ ಕೈಗೊಳ್ಳಲು ತಹಶೀಲ್ದಾರ್ ಹಾಗೂ ಟಿ.ಹೆಚ್.ಒ ರವರಿಗೆ ಸೂಚಿಸಿದರು. ಹಾಗೂ ಮದ್ದೂರು ತಾಲ್ಲೂಕಿನಲ್ಲಿ ಕೋವಿಡ್ ಸೋಂಕಿತ ಗುಣಮುಖ ಸಂಖ್ಯೆ ಕಡಿಮೆ ಇರುವುದರ ಕುರಿತು ಮಾಹಿತಿ ನೀಡುವಂತೆ ತಾಲ್ಲೂಕು ಆರೋಗ್ಯಾಧಿಕಾರಿಗಳನ್ನು ಸೂಚಿಸಿದರು. ತಾಲ್ಲೂಕು ಆರೋಗ್ಯಾಧಿಕಾರಿಗಳು, ಮದ್ದೂರು ರವರು ಮಾತನಾಡಿ ಖಾಸಗಿ ನರ್ಸಿಂಗ್ ಹೋಂಗಳಿಗೆ ಹಾಗೂ ಮೃತಪಟ್ಟ ಪ್ರಕರಣಗಳ ಗ್ರಾಮಗಳಲ್ಲಿ ಮನೆ ಮನೆಗೆ ಬೇಟಿ ನೀಡಿ ಕೋವಿಡ್ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದರು. ಮರಣ ಹೊಂದಿರುವ ಪ್ರಕರಣಗಳಲ್ಲಿ ಬೆಂಗಳೂರು ಹಾಗೂ ಹೊರ ಜಿಲ್ಲೆಗಳಿಂದ ಬಂದವರು ಹೆಚ್ಚಿನವರಾಗಿದ್ದು ಇಂತಹ ಪ್ರಕರಣಗಳನ್ನು ಚಿಕಿತ್ಸೆಗೆ ಒಳಪಡಿಸುವ ವೇಳೆಗಾಗಲೇ ರೋಗಿಗಳ ಆರೋಗ್ಯದಲ್ಲಿ ಹೆಚ್ಚಿನ ಸಮಸ್ಯೆಗೀಡಾಗುತ್ತಿದ್ದು, ಇಂತಹ ಪ್ರಕರಣಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ತಾಲ್ಲೂಕಿನಲ್ಲಿ ಈವರಗೆ 1972 ಮಂದಿ ಸೋಂಕಿಗೆ ಒಳಗಾಗಿದ್ದು, 59 ಮಂದಿ ಮೃತಪಟ್ಟವರಾಗಿರುತ್ತಾರೆ. ಇಂತಹ ಮೃತ ಪ್ರಕರಣಗಳಲ್ಲಿ ಶೇ 62.96% ರಷ್ಟು Co-Morbid ಪ್ರಕರಣಗಳಾಗಿವೆ ಎಂದು ತಿಳಿಸಿದರು.

ಮಂಡ್ಯ ತಾಲ್ಲೂಕಿನಲ್ಲಿ ಮೃತಪಟ್ಟ ಪ್ರಕರಣಗಳಲ್ಲಿ ಎಷ್ಟು ಮಧುಮೇಹ ರೋಗಿಗಳು ಇದ್ದಾರೆ? ಅದರಲ್ಲಿ ಎಷ್ಟು ರೋಗಿಗಳಿಗೆ ಡಯಾಲಿಸೀಸ್ ಮಾಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಕೇಳಿದಾಗ, ಕಳೆದ 4 ವಾರಗಳಲ್ಲಿ ಪಾಸಿಟಿವ್ ರೇಟ್ 1.86 ಇರುವುದಾಗಿ ತಹಶೀಲ್ದಾರ್ ಮಂಡ್ಯರವರು ತಿಳಿಸಿದರು. ಡೆತ್ ಅನಾಲಿಸೀಸ್ ಮಾಹಿತಿ ಕೇಳಿದಾಗ, 59 ಮೃತಪಟ್ಟ ಪ್ರಕರಣಗಳು ತಾಲ್ಲೂಕಿನಲ್ಲಿದ್ದು, ಗುತ್ತಲು, ಬಸರಾಳು, ಕೆರಗೋಡು ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಹೆಚ್ಚಾಗಿ ಸೋಂಕಿನಿಂದ ಮೃತಪಟ್ಟ ಪ್ರಕರಣಗಳು ಪತ್ತೆಯಾಗಿದ್ದು, ಇದಕ್ಕೆ ಗ್ರಾಮಗಳ ಮ್ಯಾಪಿಂಗ್ ಮಾಡಿ ಪರೀಕ್ಷೆಗಳನ್ನು ನಡೆಸಲು ಬೇಕಾದ ಅಗತ್ಯ ಕ್ರಮ ಕೈಗೊಳ್ಳಲು ತಾಲ್ಲೂಕು ಆರೋಗ್ಯಾಧಿಕಾರಿ, ಮಂಡ್ಯ ತಾಲ್ಲೂಕು ರವರಿಗೆ ಜಿಲ್ಲಾಧಿಕಾರಿರವರು ಸೂಚಿಸಿದರು.

ಜಿಲ್ಲಾಧಿಕಾರಿರವರು ಮಾತನಾಡಿ, ಸರ್ಕಾರದ ಆದೇಶದಂತೆ ಜಿಲ್ಲೆಯಲ್ಲಿ ಕಾಲೇಜುಗಳು ಪ್ರಾರಂಭವಾಗಿದ್ದು, ಮೊಬೈಲ್ ತಂಡವನ್ನು ಬಳಸಿ ಆಯಾ ಕಾಲೇಜಿನಲ್ಲಿಯೇ ವಿದ್ಯಾರ್ಥಿಗಳಿಗೆ ಕೋವಿಡ್ ಟೆಸ್ಟ್ ನಡೆಸಲು ಯೋಜನೆ ರೂಪಿಸಿ ಪರೀಕ್ಷೆ ನಡೆಸಲು ಬೇಕಾದ ಅಗತ್ಯ ಕ್ರಮ ಕೈಗೊಳ್ಳಲು ಜಿಲ್ಲೆಯ ಎಲ್ಲಾ ತಹಶೀಲ್ದಾರ್ ಮತ್ತು ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು. ಹಾಗೂ ಜಿಲ್ಲೆಯಲ್ಲಿ ಸೋಂಕಿನ ಪ್ರಕರಣಗಳು ಕಡಿಮೆಯಾಗುತ್ತಿರುವುದರಿಂದ ಪರೀಕ್ಷೆ ನಡೆಸುವ ಗುರಿಯನ್ನು ಕಡಿಮೆ ಮಾಡದೆ ಯಥಾಸ್ಥಿತಿಯಲ್ಲಿ ಮುಂದುವರೆಸುವಂತೆ ಸೂಚಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಶೇ 66% ರಷ್ಟು ಮರಣ ಪ್ರಕರಣಗಳು Co-Morbid ಪ್ರಕರಣಗಳಾಗಿದ್ದು, ಈ ಪ್ರಕರಣಗಳ ಬಗ್ಗೆ ಹೆಚ್ಚು ಪ್ರಾಮುಖ್ಯತೆ ನೀಡಿ, ಆದ್ಯತೆ ಮೇರೆಗೆ ಗ್ರಾಮ, ಬಡಾವಣೆಯ ಸುತ್ತಮುತ್ತಲ ಪ್ರದೇಶಗಳಲ್ಲಿ ಪರೀಕ್ಷೆ ನಡಸಲು ಬೇಕಾದ ಅಗತ್ಯ ಕ್ರಮ ಕೈಗೊಳ್ಳಲು ಜಿಲ್ಲೆಯ ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

ವೈದ್ಯಕೀಯ ಅಧೀಕ್ಷಕರು, ಮಿಮ್ಸ್, ಮಂಡ್ಯರವರು ಮಾತನಾಡಿ ಪ್ರಸ್ತುತ 355 ಕೋವಿಡ್‌ಗೆಂದು ಹಾಸಿಗೆಗಳನ್ನು ಕಾಯ್ದಿರಿಸಲಾಗಿದ್ದು 84 ಮಂದಿ ಚಿಕಿತ್ಸೆ ಪಡೆಯುತ್ತಿದ್ದು 271 ಹಾಸಿಗೆಗಳು ಖಾಲಿ ಇರುವುದಾಗಿ ತಿಳಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಒಟ್ಟು ಸರ್ಕಾರಿ ಆಸ್ಪತ್ರೆಗಳಲ್ಲಿ 1538 ಹಾಸಿಗೆಗಳನ್ನು ಹಾಗೂ ಖಾಸಗಿ ಆಸ್ಪತ್ರೆ ಗಳಲ್ಲಿ 360 ಕಾಯ್ದಿರಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಜಿಲ್ಲಾಧಿಕಾರಿರವರು ಮಾತನಾಡಿ ಜಿಲ್ಲೆಯಲ್ಲಿನ ಲಭ್ಯವಿರುವ ಆಕ್ಸಿಜನ್ ಜಂಬು ಸಿಲಿಂಡರ್ ಮತ್ತು ಪೈಪ್ ಲೈನ್ ವ್ಯವಸ್ಥೆ ಕುರಿತು ಸಭೆಯಲ್ಲಿ ಮಾಹಿತಿ ನೀಡುವಂತೆ ಸೂಚಿಸಿದರು. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹೆಚ್.ಎಸ್.ಆರ್.ಡಿ.ಪಿ ರವರು ಮಾತನಾಡಿ ಜಿಲ್ಲೆಯ 6 ತಾಲ್ಲೂಕುಗಳಲ್ಲಿಯೂ ಆಕ್ಸಿಜನ್ ಸಿಲೆಂಡರ್ ಸರಬರಾಜು ಆಗಿದ್ದು, ಇದಕ್ಕೆ ಪೈಪ್‌ಲೈನ್ ಕೆಲಸ ಆಗುತ್ತಿದೆ. ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಪೈಪ್‌ಲೈನ್ ಕೆಲಸ ಪೂರ್ಣಗೊಂಡಿದೆ. ಸಿಲಿಂಡರ್ ಸಮಸ್ಯೆ ಇರುವಲ್ಲಿಗೆ 2-3 ದಿನಗಳಲ್ಲಿ ಸರಬರಾಜು ಮಾಡಲು ಸಂಬಂದಪಟ್ಟ ಸಂಸ್ಥೆಗೆ ತಿಳಿಸಿರುವುದಾಗಿ ಸಭೆಯಲ್ಲಿ ಮಾಹಿತಿ ನೀಡಿದರು. ಮದ್ದೂರು ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿ ಕೆಲಸ ಪೂರ್ಣವಾಗಿದೆ. ನಾಗಮಂಗಲ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ ನೀಡುವುದು ಬಾಕಿ ಇದೆ. ಮಳವಳ್ಳಿ ತಾಲ್ಲೂಕಿಗೆ ಜನರೇಟರ್ ಅಳವಡಿಸುವುದಕ್ಕೆ ಪ್ರಸ್ತಾವನೆಗೆ ಅನುಮೋದನೆ ದೊರೆತಿದ್ದು, ಟೆಂಡರ್ ಕರೆಯಬೇಕಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ ತಾಲ್ಲೂಕುವಾರು ಮಾಹಿತಿ ಮತ್ತು ತಾಲ್ಲೂಕುಗಳಲ್ಲಿ ಎದುರಾಗಿರುವ ಸಮಸ್ಯೆಗಳ ಕುರಿತಂತೆ ಮಾಹಿತಿ ನೀಡಲು ಜಿಲ್ಲೆಯ ಎಲ್ಲಾ ತಹಶೀಲ್ದಾರ್ ಮತ್ತು ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಸಭೆಯಲ್ಲಿ ತಿಳಿಸಿದರು. ಜಿಲ್ಲೆಯ ಎಲ್ಲಾ ತಹಶೀಲ್ದಾರ್ ಮತ್ತು ತಾಲ್ಲೂಕು ಆರೋಗ್ಯಾಧಿಕಾರಿಗಳು ಮಾಹಿತಿ ನೀಡಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ, ಕೋವಿಡ್ 2ನೇ ಹಂತ ಕೆಲವು ಕಡೆಗಳಲ್ಲಿ ಮತ್ತೆ ವ್ಯಾಪಿಸುತ್ತಿರುವುದರಿಂದ ದೀಪಾವಳಿ ಆದ ನಂತರ ಮತ್ತು ಮುಂಬರುವ ಗ್ರಾಮ ಪಂಚಾಯಿತಿ ಚುನಾವಣಾ ಸಮಯದಲ್ಲಿ ಸೋಂಕು ಹೆಚ್ಚು ಹರಡುವ ಸಾಧ್ಯತೆ ಇರುವುದರಿಂದ ಕಳೆದ 6 ತಿಂಗಳಿನಿಂದ ಎಲ್ಲರೂ ಕಷ್ಟಪಟ್ಟು ಕಾರ್ಯನಿರ್ವಹಿಸಿ ನಿಯಂತ್ರಣ ಮಾಡಿರುವಂತೆ ಇನ್ನು ಮುಂದಿನ ದಿನಗಳಲ್ಲಿಯೂ ಸಹ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು, ಸ್ವಚ್ಛತೆಗೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಈ ಬಗ್ಗೆ ಜನರಿಗೆ ತಿಳುವಳಿಕೆ ನೀಡುವುದು. ಗ್ರಾಮವಾರು ಟೆಸ್ಟ್‌ಗಳನ್ನು ಚುರುಕಾಗಿ ನಿಗಾವಹಿಸಿ ಮಾಡುವಂತೆ ತಹಶೀಲ್ದಾರ್ ಹಾಗೂ ಟಿ.ಹೆಚ್.ಒ.ರವರಿಗೆ ತಿಳಿಸಿದರು.

ಜಿಲ್ಲಾಧಿಕಾರಿರವರು ಮಾತನಾಡಿ, ಕೆಲಸದ ದಿನಗಳಲ್ಲಿ ಟೆಸ್ಟ್ ಮಾಡುತ್ತಿರುವಂತೆ ರಜಾ ದಿನಗಳಲ್ಲಿ ಒಬ್ಬ ಸೋಂಕಿತ ವ್ಯಕ್ತಿ ಟೆಸ್ಟ್‌ನಿಂದ ತಪ್ಪಿಸಿಕೊಂಡಲ್ಲಿ 448 ಜನರಿಗೆ ಸೋಂಕು ಹರಡುವ ಸಾಧ್ಯತೆ ಇರುವುದರಿಂದ ರಜಾ ದಿನಗಳಲ್ಲಿಯೂ ಸಹ ಕಡ್ಡಾಯವಾಗಿ ಟೆಸ್ಟ್‌ಗಳನ್ನು ಮಾಡುವಂತೆ ಎಲ್ಲಾ ಟಿ.ಹೆಚ್.ಒ.ರವರಿಗೆ ತಿಳಿಸಿದರು. ಮುಂದುವರಿದು ಪ್ರತಿ ದಿನ Contact Tracing & Q-Watch ಮಾಡುತ್ತಿರುವುದನ್ನು ಮುಂದುವರಿಸಿಕೊಂಡು ಹೋಗುವಂತೆ ಹಾಗೂ ಮಾಸ್ಕ್ ಧರಿಸದೆ ಇರುವ ದಂಡ ವಸೂಲಾತಿ ಪ್ರಕರಣಗಳನ್ನು ಪತ್ತೆ ಹಚ್ಚುವ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುವಂತೆಯೂ ತಹಶೀಲ್ದಾರ್‌ಗಳಿಗೆ ತಿಳಿಸಿದರು. ಅಲ್ಲದೇ ಆಕ್ಸಿಜನ್ ಸಿಲೆಂಡರ್ ಖಾಲಿ

ಆದ ಕಡೆ ಅದನ್ನು ಕೂಡಲೇ ಬದಲಾಯಿಸುವಂತೆ ತಾಲ್ಲೂಕು ಮಟ್ಟದಲ್ಲಿ ಸುಸಜ್ಜಿತವಾಗಿ ತಯಾರಿಮಾಡಿಕೊಂಡಲ್ಲಿ ಯಾವುದೇ ಸಮಸ್ಯೆ ಆಗುವುದಿಲ್ಲವೆಂದು ತಹಶೀಲ್ದಾರ್, ಟಿ.ಹೆಚ್.ಒ., ರವರಿಗೆ ತಿಳಿಸಿದರು.

**ಆರ್.ಐ.ಡಿ.ಎಫ್ ಯೋಜನೆ:-**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ, ಜಿಲ್ಲೆಯಲ್ಲಿ ಆರ್.ಐ.ಡಿ.ಎಫ್. ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ 23 ಅಂಗನವಾಡಿ ಕಟ್ಟಡ ನಿರ್ಮಿಸುವುದಕ್ಕೆ ಗುರಿ ನೀಡಿದ್ದು, ಕಾಮಗಾರಿ ಅನುಷ್ಠಾನವನ್ನು ಲೋಕೋಪಯೋಗಿ ಇಲಾಖೆ, ಮಂಡ್ಯ ರವರಿಗೆ ಜವಾಬ್ದಾರಿ ನೀಡಲಾಗಿದ್ದು, ಕಾಮಗಾರಿ ಯಾವ ಹಂತದಲ್ಲಿದೆ ಎಂದು ವಿಷಯವನ್ನು ಪ್ರಸ್ತಾಪಿಸಿದಾಗ ಸಭೆಯಲ್ಲಿ ಹಾಜರಿದ್ದ ತಾಂತ್ರಿಕ ಸಹಾಯಕರು, ಲೋಕೋಪಯೋಗಿ ಇಲಾಖೆರವರು ಮಾತನಾಡಿ, 16 ಅಂಗನವಾಡಿಗಳಿಗೆ ಕಾರ್ಯಾದೇಶ ನೀಡಲಾಗಿದ್ದು, 5 ಅಂಗನವಾಡಿಗೆ ಸ್ಥಳ ಸಮಸ್ಯೆ ಇದೆ, ಅದರಲ್ಲಿ ಕೆ.ಆರ್.ಪೇಟೆ ತಾಲ್ಲೂಕಿನ 12 ಅಂಗನವಾಡಿಗಳಲ್ಲಿ 7 ಅಂಗನವಾಡಿ ಕೇಂದ್ರಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, 5 ಅಂಗನವಾಡಿ ಕೇಂದ್ರಗಳಿಗೆ ಸ್ಥಳದ ಬದಲಾವಣೆ ಯಾಗಬೇಕಾಗಿದೆ ಎಂದು ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಸಿ.ಡಿ.ಪಿ.ಒ. ಜೊತೆಯಲ್ಲಿ ಸ್ಥಳ ಒದಗಿಸುವ ಬಗ್ಗೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲು ಜಿಲ್ಲೆಯ ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್ ರವರಿಗೆ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಪ್ರಗತಿಯಲ್ಲಿರುವ ಆರ್.ಐ.ಡಿ.ಎಫ್. ಅಂಗನವಾಡಿ ಕಟ್ಟಡ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ಎಂದು ಕೇಳಿದಾಗ ತಾಂತ್ರಿಕ ಸಹಾಯಕರು, ಲೋಕೋಪಯೋಗಿ ಇಲಾಖೆರವರು ಇನ್ನು ಎರಡು ತಿಂಗಳುಗಳಲ್ಲಿ ಕಾಮಗಾರಿ ಗಳನ್ನು ಪೂರ್ಣಗೊಳಿಸುವುದಾಗಿ ತಿಳಿಸಿದರು.

**ತೋಟಗಾರಿಕೆ ಇಲಾಖೆ:-**

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ತೋಟಗಾರಿಕೆ ಇಲಾಖೆಯ ಪ್ರಗತಿಯನ್ನು ಪರಿಶೀಲಿಸಿ ಪ್ರಸ್ತುತ ತೋಟಗಾರಿಕೆ ಬೆಳೆಗಳ ಸ್ಥಿತಿಗತಿಗಳ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ತೋಟಗಾರಿಕೆ ಉಪ ನಿರ್ದೇಶಕರು ಮಾತನಾಡಿ ಜಿಲ್ಲೆಯಲ್ಲಿ ತೆಂಗು ಬೆಳೆಯು ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು 62000 ಹೆಕ್ಟರ್ ಪ್ರದೇಶದಲ್ಲಿ ವ್ಯಾಪಿಸಿದ್ದು, ಪ್ರಸ್ತುತ ಸುರುಳಿ ಆಕಾರದ ಬಿಳಿ ನೊಣ (Rugose Spiraling White Fly) ಹಾವಳಿಗೆ ಅಂದಾಜು 10000 ಹೆಕ್ಟರ್ ಪ್ರದೇಶ ಹಾನಿಗೊಳಲಾಗಿರುವ ವಿಷಯವನ್ನು ಸಭೆಯಲ್ಲಿ ಮಂಡಿಸಿದರು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕೀಟದ ಹಾವಳಿ ನಿಯಂತ್ರಿಸಲು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವಂತೆ ಮತ್ತು ಅಗತ್ಯ ಪರಿಕರಗಳನ್ನು ಇಲಾಖೆಯ ಯೋಜನೆಗಳಡಿ ರೈತರಿಗೆ ರಿಯಾಯಿತಿ ದರದಲ್ಲಿ ಒದಗಿಸಲು ಅಗತ್ಯ ಕ್ರಮವಹಿಸುವಂತೆ ತೋಟಗಾರಿಕೆ ಉಪನಿರ್ದೇಶಕರಿಗೆ ಸೂಚಿಸಿದರು.

ಮುಂದುವರೆದು, ತೋಟಗಾರಿಕೆ ಉಪನಿರ್ದೇಶಕರು ಮಾತಾನಾಡಿ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕು, ಮುರುಕನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ RIDF-26 ಟ್ರ್ಯಾಂಚ್‌ನಡಿ ಅಂದಾಜು ರೂ.540.00ಲಕ್ಷ ವೆಚ್ಚದಲ್ಲಿ ತೆಂಗು ಬೆಳೆ ಉತ್ಕೃಷ್ಟ ಕೇಂದ್ರ (Central of Excellence for Coconut) ಮತ್ತು ರೈತರು ಬೆಳೆದ ತೋಟಗಾರಿಕೆ

ಉತ್ಪನ್ನಗಳನ್ನು ದಾಸ್ತಾನು ಮಾಡುವ ಸಲುವಾಗಿ ಅಂದಾಜು ರೂ.528.00ಲಕ್ಷಗಳ ವೆಚ್ಚದಲ್ಲಿ 2000 ಮೆಟ್ರಿಕ್ ಟನ್ ಸಾಮರ್ಥ್ಯದ ಶೈತ್ಯಗಾರ ನಿರ್ಮಾಣ ಮಾಡುವ ಯೋಜನಾ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಸಂಬಂಧಿಸಿದ ಪ್ರಸ್ತಾವನೆಗಳ ಪೂರ್ಣ ವಿವರಗಳನ್ನು ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ತೋಟಗಾರಿಕೆ ಉಪನಿರ್ದೇಶಕರಿಗೆ ಸೂಚಿಸಿದರು.

**ಕೃಷಿ ಇಲಾಖೆ:**

ಪ್ರಸಕ್ತ ಸಾಲಿನಲ್ಲಿ 11 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು, 4 ಪ್ರಕರಣಗಳನ್ನು ಪರಿಹಾರ ವಿತರಣೆಗೆ ಅರ್ಹ ಪ್ರಕರಣಗಳೆಂದು ಹಾಗೂ ಒಂದು ಪ್ರಕರಣವನ್ನು ಪರಿಹಾರ ವಿತರಣೆಗೆ ಅನರ್ಹ ಎಂದು ಉಪ ವಿಭಾಗಮಟ್ಟದ ಸಮಿತಿಯು ನಿರ್ಣಯಿಸಿರುವ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ಮಂಡ್ಯ ರವರು ಸಭೆಗೆ ವಿವರಿಸಿದರು. 4 ಪ್ರಕರಣಗಳಲ್ಲಿ ಎಫ್.ಎಸ್.ಎಲ್. ವರದಿ ಬರದಿರುವ ಕಾರಣ ಹಾಗೂ 2 ಪ್ರಕರಣಗಳಲ್ಲಿ ಅಗತ್ಯ ದಾಖಲಾತಿಗಳು ಲಭ್ಯವಿಲ್ಲದಿರುವ ಕಾರಣ ಒಟ್ಟು 6 ಪ್ರಕರಣಗಳು ಉಪ ವಿಭಾಗಮಟ್ಟದ ಸಮಿತಿಯಲ್ಲಿ ಬಾಕಿ ಇರುವುದಾಗಿ ತಿಳಿಸಿದರು. ಅರ್ಹ ಪ್ರಕರಣಗಳಿಗೆ ಕೂಡಲೆ ಪರಿಹಾರ ವಿತರಣೆಗೆ ಕ್ರಮವಹಿಸುವಂತೆ ಹಾಗೂ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳಲ್ಲಿ ಅಗತ್ಯ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ಇತ್ಯರ್ಥಪಡಿಸಲು ಕ್ರಮವಹಿಸುವಂತೆ ಜಂಟಿ ಕೃಷಿ ನಿರ್ದೇಶಕರು ಮಂಡ್ಯ, ಉಪ ವಿಭಾಗಾಧಿಕಾರಿಗಳು ಮಂಡ್ಯ ಹಾಗೂ ಉಪ ವಿಭಾಗಾಧಿಕಾರಿಗಳು ಪಾಂಡವಪುರ ರವರಿಗೆ ಸೂಚನೆ ನೀಡಿದರು.

ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಪಸಲ್ ಬೀಮಾ ಯೋಜನೆಯಡಿ ರೈತರಿಂದ ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿರುವ ಬಗ್ಗೆ ಜಂಟಿ ಕೃಷಿ ನಿರ್ದೇಶಕರು ಸಭೆಗೆ ವಿವರಿಸಿದರು. ಸದರಿ ಯೋಜನೆಯ ಬಗ್ಗೆ ರೈತರಿಗೆ ಪ್ರಚಾರ ನೀಡಲಾಗಿದ್ದು, ಸ್ಥಳಿಯ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿದೆ ಎಂದು ತಿಳಿಸಿದರು. ಬ್ಯಾಂಕ್ ಖಾತೆ ವಿವರ, ಆಧಾರ್ ಸಂಖ್ಯೆ ತಪ್ಪಾಗಿ ನಮೂದಾಗಿದ್ದ 2016-17ನೇ ಸಾಲಿನ 11055 ರೈತರಿಗೆ ESCROW ಖಾತೆ ಮೂಲಕ ವಿಮಾ ಮೊತ್ತ ನೀಡಬೇಕಿದ್ದು, ಇದುವರೆವಿಗೂ 5589 ರೈತರಿಗೆ ವಿಮಾ ಮೊತ್ತ ನೀಡಲಾಗಿದ್ದು, ಉಳಿದ 5466 ರೈತರ ಆಧಾರ್ ವಿವರ ಸಂಗ್ರಹಿಸಿ, ವಿಮಾ ಪರಿಹಾರ ವಿತರಣೆಗೆ ಕ್ರಮವಹಿಸಲಾಗುವುದೆಂದು ತಿಳಿಸಿದರು.

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯವು ಮುಕ್ತಾಯಗೊಂಡಿದ್ದು, ಮೇಲ್ವಿಚಾರಣೆ ಕಾರ್ಯವು ಪ್ರಗತಿಯಲ್ಲಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಸಭೆಗೆ ವಿವರಿಸಿದರು. ಬೆಳೆ ಸಮೀಕ್ಷೆಯಲ್ಲಿ ನೋಂದಣಿಯಾಗಿರುವ ಬೆಳೆಯ ವಿವರ ವ್ಯತ್ಯಾಸವಿದ್ದಲ್ಲಿ ರೈತರು ಆಕ್ಷೇಪಣೆ ಸಲ್ಲಿಸಿ, ಸರಿಪಡಿಸಿಕೊಳ್ಳಬಹುದಾಗಿ ವಿವರಿಸಿದರು. ಬೆಳೆ ಸಮೀಕ್ಷೆಯಡಿ ಪ್ರತೀ ರೈತರ ಆಧಾರ್ ವಿವರಗಳನ್ನು ಕಡ್ಡಾಯವಾಗಿ ನಮೂದಿಸಬೇಕಿದ್ದು, ಸದರಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

**ಇಂದಿರಾ ಗ್ರಾಮೀಣ ನಿವೇಶನ ಯೋಜನೆ:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಈ ಯೋಜನೆಯಡಿ ಈ ಕೆಳಕಂಡಂತೆ ಲಭ್ಯವಿರುವ ಜಮೀನುಗಳಲ್ಲಿ ನಿವೇಶನಕ್ಕೆ ಹಕ್ಕುಪತ್ರಗಳನ್ನು ವಿತರಿಸಲು ನಿಯಮಾನುಸಾರ ಕ್ರಮ ವಹಿಸುವಂತೆ ಎಲ್ಲಾ ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಯಿತು. ಹದ್ದುಬಸ್ತು ನಿಗದಿ ಪಡಿಸದಿರುವ ಗ್ರಾಮ

ಪಂಚಾಯಿತಿಗಳ ಜಮೀನುಗಳನ್ನು ಹದ್ದುಬಸ್ತು ನಿಗದಿ ಪಡಿಸಿ ದಾಖಲಾತಿಗಳನ್ನು ನೀಡುವಂತೆ ತಹಶೀಲ್ದಾರ್, ಎ.ಡಿ.ಎಲ್.ಆರ್ ಮತ್ತು ಭೂ ದಾಖಲೆಗಳ ಉಪ ನಿರ್ದೇಶಕರು ಗಳಿಗೆ ಸೂಚಿಸಿದರು.

ಮದ್ದೂರು ಮತ್ತು ಮಳವಳ್ಳಿ ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿರವರು ಈ ಸಂದರ್ಭದಲ್ಲಿ ಮಾತನಾಡಿ, ಗ್ರಾಮ ಸಭೆಗಳನ್ನು ನಡೆಸಲು ಗ್ರಾಮ ಪಂಚಾಯಿತಿಗಳಲ್ಲಿ ತೊಂದರೆಯಾಗುತ್ತಿರುವುದಾಗಿ ಮುಂದಿನ ದಿನಗಳಲ್ಲಿ ಗ್ರಾಮಸಭೆ ನಡೆಸಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಪ್ರಸ್ತಾವನೆ ಸಲ್ಲಿಸುವುದಾಗಿ ತಿಳಿಸಿದರು.

**ಮಂಡ್ಯ ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಆಶ್ರಯ ನಿವೇಶನದ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ಜಮೀನು ಹಾಗೂ ನಿವೇಶನ ಹಂಚಿಕೆ ಮಾಹಿತಿಯ ವಿವರ**

| ಕ್ರ. ಸಂ | ತಾಲ್ಲೂಕು | ಆಶ್ರಯ ನಿವೇಶನ ಕ್ಕಾಗಿ ಕಾಯ್ದಿರಿಸಿದ ಜಮೀನಿನ ವಿಸ್ತೀರ್ಣ | ಕಾಯ್ದಿರಿಸಿರುವ ಜಮೀನಿನ ಪೈಕಿ ತಕರಾರು ಇರುವ ಜಮೀನಿನ ವಿಸ್ತೀರ್ಣ | ಕಾಯ್ದಿರಿಸಿರುವ ಜಮೀನಿನ ಪೈಕಿಹದ್ದುಬಸ್ತು ನಿಗದಿಪಡಿಸಿ ಆರ್‌ಟಿಸಿ ಯಲ್ಲಿ ಕಾಯ್ದಿರಿಸಬೇಕಿರುವ ಜಮೀನಿನ ವಿಸ್ತೀರ್ಣ | ನಿವೇಶನ ಹಂಚಲು ಲಭ್ಯವಿರುವ ಜಮಿನಿನ ವಿಸ್ತೀರ್ಣ | ಲಭ್ಯವಿರುವ ಜಮೀನಿನಲ್ಲಿ ರಚಿಸಬಹುದಾದ ನಿವೇಶನಗಳ ಸಂಖ್ಯೆ (ಎಕರೆಗೆ ಕನಿಷ್ಠ 20 ರಂತೆ) / ರಚಿಸಲಾದ ನಿವೇಶನಗಳ ಸಂಖ್ಯೆ | ವಿವಿಧ ಲಾಗಿನ್ ಗಳಲ್ಲಿ ಬಾಕಿ ಇರುವ ಹಾಗೂ ಹಕ್ಕು ಪತ್ರಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುವ ಫಲಾನುಭವಿಗಳ ಸಂಖ್ಯೆ | ಹಕ್ಕು ಪತ್ರಕ್ಕೆ ಪ್ರಸ್ತಾವನೆ ಸಲ್ಲಿಸಲು ಬಾಕಿ |
|---|---|---|---|---|---|---|---|---|
| 1 | ಮಂಡ್ಯ | 48.00 | 21.27 | 4.32 | 21.21 | 605 | 182 | 423 |
| 2 | ಮದ್ದೂರು | 7.32 | 0 | 0 | 7.32 | 163 | 0 | 163 |
| 3 | ಮಳವಳ್ಳಿ | 60.34 | 24.30 | 0 | 36.04 | 864 | 68 | 796 |
| 4 | ಶ್ರೀರಂಗಪಟ್ಟಣ | 17.35 | 6.26 | 6.13 | 4.36 | 106 | 43 | 63 |
| 5 | ಪಾಂಡವಪುರ | 119.39 | 48.29 | 34.01 | 37.09 | 773 | 277 | 496 |
| 6 | ಕೃಷ್ಣರಾಜಪೇಟೆ | 71.17 | 3.30 | 56.27 | 11.00 | 359 | 22 | 337 |
| 7 | ನಾಗಮಂಗಲ | 23.28 | 13.0 | 6.01 | 4.27 | 163 | 64 | 99 |
| | ಒಟ್ಟು | 349.25 | 118.22 | 107.34 | 123.09 | 3033 | 656 | 2377 |

**ಘನ ತ್ಯಾಜ್ಯ ವಿಲೇವಾರಿ ಘಟಕ :-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಜಮೀನುಗಳನ್ನು ನೀಡಬೇಕಾಗಿರುವ ಗ್ರಾಮ ಪಂಚಾಯಿತಿಗಳಲ್ಲಿ ಜಮೀನುಗಳನ್ನು ಗುರುತಿಸಿ ಹಸ್ತಾಂತರಿಸುವಂತೆ ತಹಶೀಲ್ದಾರ್‌ಗಳಿಗೆ ಸೂಚಿಸಿದರು. ಸರ್ಕಾರಿ ಜಮೀನು ಲಭ್ಯವಿಲ್ಲದೆ ಇದ್ದಲ್ಲಿ ಗ್ರಾಮಠಾಣ ನಿವೇಶನ ಗಳನ್ನು ಸದರಿ ಯೋಜನೆಗೆ ಬಳಸಿಕೊಳ್ಳುವಂತೆ ತಿಳಿಸಿದರು. ಮೊದಲು ಸರ್ಕಾರಿ/ಗ್ರಾಮಠಾಣ ನಿವೇಶನಕ್ಕೆ ಆದ್ಯತೆ ನೀಡುವುದು. ಒಂದು ಸರ್ಕಾರಿ ಜಾಗ ಲಭ್ಯವಿಲ್ಲದಿದ್ದಲ್ಲಿ ಖಾಸಗಿಯವರಿಂದ ನಿವೇಶನ ಖರೀದಿಗೆ ಕ್ರಮವಹಿಸುವುದು. ಅಲ್ಲದೇ ಲಭ್ಯವಿರುವ ಜಮೀನಿನಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ಕ್ರಮವಹಿಸುವಂತೆಯೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು.

| SLWM LAND SANCTIONED DETAILS | | | | |
|---|---|---|---|---|
| Sl. NO | TALUK | Total No of GPs | No of GP's land sanctioned | Pending |
| 1 | K.R.PETE | 34 | 10 | 24 |
| 2 | MADDURU | 42 | 13 | 29 |
| 3 | MALAVALLI | 39 | 2 | 37 |
| 4 | MANDYA | 46 | 2 | 44 |
| 5 | NAGAMANGALA | 27 | 0 | 27 |
| 6 | PANDAVAPURA | 24 | 7 | 17 |
| 7 | SRIRANGAPATNA | 21 | 3 | 18 |
| | TOTAL | 233 | 37 | 196 |

ಅಂತಿಮವಾಗಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಆಯುಕ್ತರು

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಬೆಂಗಳೂರು
ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ/ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ :-**

1. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿದಾನ ಸೌಧ, ಬೆಂಗಳೂರುರವರ ಅವಗಾಹನೆಗೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿದಾನ ಸೌಧ, ಬೆಂಗಳೂರುರವರ ಅವಗಾಹನೆಗೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರುರವರ ಅವಗಾಹನೆಗೆ.
4. ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಮಂಡ್ಯ
5. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮಂಡ್ಯ
6. ಜಂಟಿ ಕೃಷಿ ನಿರ್ದೇಶಕರು, ಮಂಡ್ಯ
7. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮಂಡ್ಯ
8. ನಿರ್ದೇಶಕರು, ಮಿಮ್ಸ್, ಮಂಡ್ಯ
9. ಉಪ ನಿರ್ದೇಶಕರು, ತೋಟಗಾರಿಕಾ ಇಲಾಖೆ, ಮಂಡ್ಯ
10. ಎಲ್ಲಾ ನೋಡಲ್ ಅಧಿಕಾರಿಗಳು, ಮಂಡ್ಯ
11. ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ, ಮಂಡ್ಯ
12. ಉಪ ವಿಭಾಗಾಧಿಕಾರಿಗಳು, ಮಂಡ್ಯ/ಪಾಂಡವಪುರ
13. ಜಿಲ್ಲೆಯ ಎಲ್ಲಾ ತಹಶೀಲ್ದಾರ್ ಗಳು
14. ಜಿಲ್ಲೆಯ ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು
15. ಹೆಚ್ಚುವರಿ ಪ್ರತಿ

## ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಉ.ನಿ, ಬೆಂಗಳೂರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ.17-11-2020ರಂದು ಬೆಳಿಗ್ಗೆ 11-00ಗಂಟೆಗೆ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರ ಸಭಾಂಗಣದಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು

ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ ರವರು ಸಭೆಗೆ ಆಗಮಿಸಿದ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಉ.ನಿ, ಬೆಂಗಳೂರು ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ ಬೀದರ, ಜಿಲ್ಲಾ ಪೋಲಿಸ ವರಿಷ್ಠಾಧಿಕಾರಿಗಳು, ಸಹಾಯಕ ಆಯುಕ್ತರು ಬೀದರ ಹಾಗೂ ಬಸವಕಲ್ಯಾಣ ಮತ್ತು ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಸ್ವಾಗತಿಸಿದರು.

**1. ಕೋವಿಡ-19 ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :-**

ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತ, ಕೋವಿಡ್-19 ವೈರಾಣು ಪರೀಕ್ಷೆಗಾಗಿ ಈಗಾಗಲೇ ಜಾರಿಯಲ್ಲಿರುವ RT-PCR & RAT ಪರೀಕ್ಷೆಗಾಗಿ ಬೀದರ ಬ್ರಿಮ್ಸ್ ಆಸ್ಪತ್ರೆಯಲ್ಲಿ ವೈರಾಣು ಪರೀಕ್ಷೆ ಒಟ್ಟು ಸಾಮರ್ಥ್ಯ ಎಷ್ಟು ಮತ್ತು ದಿನನಿತ್ಯ ಆಗುತ್ತಿರುವ ಕೋವಿಡ್-19 ವೈರಾಣು ಪರೀಕ್ಷೆಗಳ ಸಂಖ್ಯೆ ಎಷ್ಟು ಎಂದು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಪ್ರಶ್ನಿಸಿದರು.

ಜಿಲ್ಲಾ ಆರೋಗ್ಯ ಅಧಿಕಾರಿಗಳು, ಬೀದರ ರವರು ಸಭೆಗೆ ಮಾಹಿತಿ ತಿಳಿಸುತ್ತ, ಬೀದರ ಬ್ರಿಮ್ಸ್ ವೈರೋಲಾಜಿಯಲ್ಲಿ ಒಂದು ದಿನದಲ್ಲಿ 2000 ಕೋವಿಡ್-19 ವೈರಾಣು ಪರೀಕ್ಷೆಯ ಸಾಮರ್ಥ್ಯ ಇದ್ದು ದಿನಾಲು ಸುಮಾರು 1000 ಪರೀಕ್ಷೆಗಳು ಮಾಡಲಾಗುತ್ತಿವೆ ಮತ್ತು ಸದರಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೂಚನೆ ನೀಡಲಾಗಿದ್ದು ಜಿಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸದರಿ ಪರೀಕ್ಷೆಯು ಜಾರಿಯಲ್ಲಿರುತ್ತವೆ ಎಂದು ಸಭೆಗೆ ತಿಳಿಸಿದರು.

ಸಭಾಧ್ಯಕ್ಷರು ವಿವರಿಸುತ್ತ, ದಿನಾಂಕ 17-11-2020 ರಿಂದ ಕಾಲೇಜುಗಳು ಆರಂಭವಾಗುತ್ತಿದ್ದು ಸರ್ಕಾರದ ಸೂಚನೆಯನುಸಾರ ಎಲ್ಲಾ ವಿದ್ಯಾರ್ಥಿಗಳಿಗೆ ಕೋವಿಡ್-19 ವೈರಾಣು ಪರೀಕ್ಷೆ ಒಳಪಡಿಸಲು ಮತ್ತು ಜಿಲ್ಲೆಗೆ ನೀಡಿದ ಕೋವಿಡ್-19 ಪರೀಕ್ಷೆ ಗುರಿಯನ್ನು ಪ್ರತಿದಿನ ತಲುಪಲು ಎಲ್ಲಾ ವೈದ್ಯಾಧಿಕಾರಿಗಳು ಸೂಚನೆ ನೀಡಿದರು. ಜಿಲ್ಲೆಯಲ್ಲಿ ಸಂಚಾರಿ ಕೋವಿಡ್-19 ಪರೀಕ್ಷ ಕೇಂದ್ರಗಳೂ ಸೇರಿದಂತೆ ಸಾಕಷ್ಟು ಪರೀಕ್ಷಾ ತಂಡಗಳಿದ್ದು, ಪ್ರತಿಯೊಂದು ತಂಡದ ಗುರಿ ಮತ್ತು ಸಾಧನೆಯನ್ನು ಪ್ರತಿ ದಿನ ಕೋಷ್ಟಕದಲ್ಲಿ ನಮೂದಿಸಿ ಪ್ರತಿ ದಿನ ವಿಮರ್ಶೆ ಮಾಡಲು DHO ರವರಿಗೆ ಕ್ರಮವಹಿಸಲು ತಿಳಿಸಲಾಯಿತು.

(ಕ್ರಮ :- ಜಿಲ್ಲಾ ಆರೋಗ್ಯ ಇಲಾಖೆ)

2. ಕೃಷಿ ಇಲಾಖೆ :-

ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಬೀದರ ರವರು ಅತಿವೃಷ್ಟಿಯಿಂದ ಸಂಭವಿಸಿದ ಹಾನಿಗಳ ಬಗ್ಗೆ ತಾಲೂಕುವಾರಿ ಮಾಹಿತಿ ನೀಡುತ್ತ, ಹಸಿರು ಬೇಳೆ 22108 ಹೆಕ್ಟರೆ, ಸೋಯಾ 123807 ಹೆಕ್ಟರೆ, ಕಬ್ಬು 9552 ಹೆಕ್ಟರೆ, ಇನ್ನಿತರ 11771 ಹೆಕ್ಟರೆ ಒಟ್ಟು 247209 ಹೆಕ್ಟರೆ ಬೆಳೆಹಾನಿಯಾಗಿರುತ್ತದೆ. ಅತಿಯಾದ ಮಳೆಯಿಂದ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು 1756 ಮನೆಗಳಿಗೆ ಹಾನಿ ಉಂಟಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಸಭಾಧ್ಯಕ್ಷರು ಮಾತನಾಡುತ್ತ, ಪ್ರಮುಖ ಬೆಳೆಗಳಾದ ಕಬ್ಬು, ಹೆಸರು, ತೊಗರಿ ಮತ್ತು ಸೋಯಾ ಬೆಳೆಗಳಿಗೆ ಸಂಭವಿಸಿದ ಹಾನಿಯ ಕುರಿತಂತೆ ಮಾಹಿತಿಯು online ತಂತ್ರಾಂಶದಲ್ಲಿ ಕೂಡಲೇ ನಮೂದಿಸಿ ಪ್ರಗತಿಯ ವಿವರ ಸಲ್ಲಿಸಲು ಸೂಚಿಸಿಸುತ್ತಾ, ಬೆಳೆ ವಿಮೆಗಳ ಬಗ್ಗೆ ವಿವರಿಸಲು ಕೋರಿದರು.

ಜಂಟಿ ನಿರ್ದೇಶಕರು ವಿವರಿಸುತ್ತ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ ಅಡಿಯಲ್ಲಿ 2019-20 ನೇ ಸಾಲಿಗೆ ರಬಿ ಬೆಳೆಗಳಿಗೆ 27484 ರೈತರು ಮತ್ತು 2019-20ನೇ ಸಾಲಿಗೆ ಖರಿಫ್ ಬೆಳೆಗಳಿಗೆ 262780 ರೈತರು ನೋಂದಾಯಿಸಲಾಗಿದ್ದು, 2020-21 ನೇ ಸಾಲಿಗೆ ಖರಿಫ್ ಬೆಳೆಗೆ 213135 ರೈತರಿಗೆ ನೊಂದಾಯಿಸಲಾಗಿರುತ್ತದೆ ಎಂದು ತಿಳಿಸಿದರು.

ಸಭಾಧ್ಯಕ್ಷರು ಮಾತನಾಡುತ್ತ, ರೈತರ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಹೆಚ್ಚಿನ ಗಮನಹರಿಸಲು ಸೂಚಿಸಿದರು. 34 ರೈತರ ಆತ್ಮಹತ್ಯೆ ಪ್ರಕರಣಗಳಿದ್ದು ಎಲ್ಲಾ ಪ್ರಕರಣಗಳ ವಿಲೇವಾರಿಗೆ ಶೀಘ್ರ ಕ್ರಮವಹಿಸ ಬೇಕು. ಒಪ್ಪಿಕೊಂಡಂತಹ ಎಲ್ಲಾ ಪ್ರಕರಣಗಳಲ್ಲಿ ಸಂಬಂಧಪಟ್ಟ ಕುಟುಂಬಕ್ಕೆ ಸರ್ಕಾರ ನಿಗದಿ ಪಡಿಸಿದ ಎಲ್ಲಾ ಸೌಲಭ್ಯಗಳು ಕೂಡಲೇ ದೊರಕುವಂತೆ ಎಲ್ಲಾ ಅಂಶಗಳನ್ನು ಪ್ರತ್ಯೇಕವಾಗಿ ಕೋಷ್ಟಕದಲ್ಲಿ ನಮೂದಿಸಿ ಸಲ್ಲಿಸಬೇಕು ಮತ್ತು ಶೀಘ್ರವಾಗಿ ಸೌಲಭ್ಯಗಳನ್ನು ವಿತರಿಸಲು ಸೂಚಿಸಲಾಯಿತು.

(ಕ್ರಮ :- ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬೀದರ)

3. ಸಾರ್ವಜನಿಕ ಶಿಕ್ಷಣ ಇಲಾಖೆ :-

ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ ರವರು ಸಭಾಧ್ಯಕ್ಷರ ಅನುಮೋದನೆಯೊಂದಿಗೆ ಬೀದರ ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಶಾಲೆಗಳ ಮಾಹಿತಿ ನೀಡುತ್ತ, ಬೀದರ ಜಿಲ್ಲೆಯಲ್ಲಿ ಒಟ್ಟು 1244 ಸರ್ಕಾರಿ ಶಾಲೆಗಳು, 251 ಅನುದಾನಿತ ಶಾಳೆಗಳು ಹಾಗೂ 905 ಖಾಸಗಿ ಶಾಳೆಗಳಿದ್ದು 100% online ತರಗತಿಗಳು ಜಾರಿಯಲ್ಲಿರುತ್ತವೆ. ಈ ವರ್ಷ ಬೀದರ ಜಿಲ್ಲೆಯು SSLC ಫಲಿತಾಂಶದಲ್ಲಿ 22ನೇ ಸ್ಥಾನದಲ್ಲಿರುತ್ತದೆ ಎಂದು ಮಾಹಿತಿ ತಿಳಿಸಿದರು.

ಸರ್ಕಾರದ ಸೂಚನೆಗಳಂತೆ ವಿಧ್ಯಾರ್ಥಿಗಳಿಗೆ ಎಲ್ಲಾ ಶೈಕ್ಷಣಿಕ ನೆರವು /ಮಾಹಿತಿ ಒದಗಿಸಲು ಕ್ರಮವಹಿಸಲಾಗಿದೆ ಎಂದು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ತಿಳಿಸಿದರು.

(ಕ್ರಮ :- ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ)

4. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ :-

ಸಭಾಧ್ಯಕ್ಷರು ಮಾತನಾಡುತ್ತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿಯಲ್ಲಿ ಅಂಗನವಾಡಿಯಲ್ಲಿ ಶೌಚಾಲಯಗಳ ವ್ಯವಸ್ಥೆ ಮತ್ತು ಜಾರಿಯಲ್ಲಿರುವ ಯೋಜನೆ ಮತ್ತು ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲು ಕೋರಿದರು.

ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೀದರ ರವರು ಸಭೆಗೆ ಮಾಹಿತಿ ತಿಳಿಸುತ್ತ, ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ಜೊತೆಯಲ್ಲಿ ಪಾಠ ಕಾರ್ಯಕ್ರಮದಡಿ ಕಾರ್ಯ ನಿರ್ವಹಿಸುತ್ತಿದ್ದು ಒಟ್ಟು 1898 ಅಂಗನವಾಡಿ ಕೇಂದ್ರಗಳು ಬೀದರ ಜಿಲ್ಲೆಯಲ್ಲಿ ಲಭ್ಯವಿದ್ದು ಎಲ್ಲಾ ಕೇಂದ್ರಗಳಲ್ಲಿ ಶೌಚಾಲಯಗಳ ವ್ಯವಸ್ಥೆ ಮಾಡಲಾಗಿರುತ್ತದೆ ಎಂದು ಸಭೆಗೆ ಮಾಹಿತಿ ತಿಳಿಸಿದರು.

ಸಭಾಧ್ಯಕ್ಷರು ಬಾಲ ವಿವಾಹ ಪ್ರಕರಣಗಳ ಕುರಿತು ಮಾಹಿತಿ ಕೋರಿರುವ ಪ್ರಯುಕ್ತ ಉಪನಿರ್ದೇಶಕರು ಮಾಹಿತಿ ಮುಂದುವರಿಸುತ್ತ ಒಟ್ಟು 42 ಬಾಲ ವಿವಾಹ ಪ್ರಕರಣಗಳು ಕಂಡುಬಂದಿದ್ದು ಅದರಲ್ಲಿ ಹುಮನಾಬಾದ ತಾಲೂಕಿನಲ್ಲಿ ಜರುಗಿದ ಬಾಲವಿವಾಹ ಪ್ರಕರಣದಲ್ಲಿ ಪೋಲಿಸ ಇಲಾಖೆಯ ವತಿಯಿಂದ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಲಾಗಿದೆ ಹಾಗೂ ಬಾಲ ಕಾರ್ಮಿಕರ ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ ಎಂದು ತಿಳಿಸಿದರು. ಮುಂದುವರಿದು, ಅಕ್ಟೊಬರ 2020 ಮಾಹೆಯಲ್ಲಿ ಮೊಟ್ಟೆಗಳು ಒದಗಿಸುವ ಟೆಂಡರ ಮುಕ್ತಾಯಗೊಂಡಿದ್ದು ಮುಂದಿನ ಹಿತದೃಷ್ಟಿಯಿಂದ ಮರು ಟೆಂಡರ ಪ್ರಕಟಣೆ ಮಾಡುವುದು ಅವಶ್ಯಕತೆ ಇರುತ್ತದೆ ಎಂದು ಸಭೆಗೆ ತಿಳಿಸಿದರು. ಚೆಲ್ಡ್ ಪ್ರೊಟೆಕ್ಷನ್ ಆಫಿಸರ್ ಮತ್ತು ಕಾರ್ಮಿಕ ಇಲಾಖೆ ಅಧಿಕಾರಿಗಳು ಬಾಲಕಾರ್ಮಿಕ ಪ್ರಕರಣಗಳನ್ನು ಗಂಭಿರವಾಗಿ ಪರಿಗಣಿಸಿ ವಿಶೇಷ ತನಿಖಾದಳ ರಚಿಸಿ ಸೂಕ್ತ ಕ್ರಮವಹಿಸಲು ಸೂಚಿಸಿದರು.

(ಕ್ರಮ :- ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೀದರ)

5. ತೋಟಗಾರಿಕೆ ಇಲಾಖೆ :-

ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೀದರ ರವರು ಸಭೆಗೆ ಮಾಹಿತಿ ನೀಡುತ್ತ, 22,000 ಹೆಕ್ಟರೆ ಜಮೀನು ತೋಟಗಾರಿಕೆ, ಬೀದರ ವ್ಯಾಪ್ತಿಯಲ್ಲಿ ಲಭ್ಯವಿದ್ದು ಅದರಲ್ಲಿ ಸಪ್ಟೆಂಬರ 2020 ರ ಮಾಹೆಯಲ್ಲಿ ಸುರಿದ ಅತಿಯಾದ ಮಳೆಯಿಂದ ತೋಟಗಾರಿಕೆಯಲ್ಲಿ ಬೆಳೆಯಲಾಗುತ್ತಿರುವ ಟೊಮ್ಯಾಟೋ, ಮೆಣಸು, ಬದನೆಕಾಯಿ, ಶುಂಠಿ, ಅರಿಶಿಣ, ಸೌತೆಕಾಯಿ, ಎಲೆಕೋಸು, ಈರುಳ್ಳಿ, ಪಪಾಯಾ ಮತ್ತು ಇನ್ನಿತರ ಬೆಳೆಗಳು ಹಾನಿಗೊಳಗಾಗಿರುತ್ತವೆ ಎಂದು ಮಾಹಿತಿ ನೀಡಿದರು.

ಸಭಾಧ್ಯಕ್ಷರು ಮಾತನಾಡುತ್ತ, ಸದರಿ ಹಾನಿಗೊಳಗಾದ ಬೆಳೆಗಳಿಗೆ ಬೆಳೆವಿಮೆ ಮಾಡಲಾಗಿದೆಯೇ ಎಂದು ಕೇಳಿದ್ದಕ್ಕೆ ಉಪನಿರ್ದೇಶಕರು ವಿವರಿಸುತ್ತ ಬೆಳೆವಿಮೆಯ ಕಂತಿನ ಹಣ ಒಂದು ಹೆಕ್ಟರೆಗೆ ರೂ. 4000/- ರಂತೆ ನಿಗದಿಪಡಿಸಿರುವುದರಿಂದ ಸುಮಾರು ರೈತರು ಬೆಳೆವಿಮೆ ಮಾಡಿರುವುದಿಲ್ಲವೆಂದು ತಿಳಿಸಿದರು. ಉಳಿದಂತೆ ಸರ್ಕಾರ ಮತ್ತು ಇಲಾಖೆ ನಿಗದಿಪಡಿಸಿದ ಎಲ್ಲಾ ಗುರಿಗಳನ್ನು ಸಾಧಿಸಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

(ಕ್ರಮ :- ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೀದರ)

6. ಸಾಮಾಜಿಕ ಅರಣ್ಯ ಇಲಾಖೆ :-

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ಬೀದರ ರವರು ಮಾಹಿತಿ ನೀಡುತ್ತ, ಸುಮಾರು 138 ಕಿ.ಮೀ ಉದ್ದವಾದ ರಸ್ತೆಬದಿಯಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮ ಕೈಗೊಂಡು ಪೂರ್ಣಗೊಳಿಸಲಾಗಿದೆ ಮತ್ತು ಬೀದಿ ಬದಿಯಲ್ಲಿರುವ ರೈತರ ಸಹಾಯದಿಂದ 1,65,000 ಸಸಿಗಳು ಈಗಾಗಲೇ ನೆಡಲಾಗಿದೆ. ಈ ವರ್ಷ 8*12 ಅಳತೆಯ 7,50,000 ಸಸಿಗಳು ಮತ್ತು 14*20 ಅಳತೆಯ 61,000 ಸಸಿಗಳನ್ನು ನೆಡಲಾಗಿರುತ್ತದೆ ಹಾಗೂ ಮಹತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಕಾರ್ಯಕ್ರಮದಡಿ ಒಟ್ಟು ಶೇ. 35.91 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಮಾಹಿತಿ ನೀಡಿದರು. ಈ ಯೋಜನೆಯಡಿ ನಿಗದಿತ ಗುರಿ ಸಾಧನೆ ಮಾಡಲಾಗುತ್ತಿದೆಯೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಿಳಿಸಿದರು.

(ಕ್ರಮ :- ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ಬೀದರ)

7. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ :-

ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೀದರ ರವರು ಸಭೆಗೆ ಮಾಹಿತಿ ನೀಡುತ್ತ, ಬೀದರ ಜಿಲ್ಲೆಯಲ್ಲಿ ಒಟ್ಟು 109 ಆಸ್ಪತ್ರೆಗಳಿದ್ದು ಸದರಿ ಆಸ್ಪತ್ರೆಗಳಲ್ಲಿ ಒಟ್ಟು 121 ಮಂಜೂರಿಯಾದ ವೈದ್ಯರಲ್ಲಿ 106 ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಮುಂದುವರಿದು, 2,99,144 ಎತ್ತು ಮತ್ತು ಎಮ್ಮೆಗಳು, 2,70,599 ಆಡು ಮತ್ತು ಕುರಿಗಳು ಮತ್ತು 22,059 ಇತರೆ ಜಾನುವಾರುಗಳು ಕೂಡಿ ಒಟ್ಟು 5,91,802 ಜಾನುವಾರುಗಳಿರುತ್ತವೆ. ಸಪ್ಟೆಂಬರ 2020 ರ ಮಾಹೆಯಲ್ಲಿ 545 ಹಳ್ಳಿಗಳಲ್ಲಿರುವ 10,665 ಎತ್ತು ಮತ್ತು ಎಮ್ಮೆಗಳಿಗೆ ಚರ್ಮ ಗಡ್ಡೆ ರೋಗ ಹರಡಿದ್ದು ಎಲ್ಲಾ ಜಾನುವಾರುಗಳಿಗೆ ಗುಣಪಡಿಸಲಾಗಿದೆ. ಕಾಲು ಮತ್ತು ಬಾಯಿಬೇನೆ ರೋಗದಿಂದ ಬಳಲುತ್ತಿರುವ ಜಾನುವಾರುಗಳಿಗೆ ಲಸಿಕೆ ನೀಡುವ ಕಾರ್ಯ ಜಾರಿಯಲ್ಲಿರುತ್ತದೆ ಎಂದು ತಿಳಿಸಿದರು.

(ಕ್ರಮ:- ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೀದರ)

8. ಆಯುಷ ಇಲಾಖೆ :-

ಜಿಲ್ಲಾ ಆಯುಷ ಅಧಿಕಾರಿಗಳು ಸಭೆಗೆ ಮಾಹಿತಿ ತಿಳಿಸುತ್ತ, ಬೀದರ ಜಿಲ್ಲೆಯಲ್ಲಿ 23 ಔಷಧಾಲಯಗಳು ಮತ್ತು 02 ಆಸ್ಪತ್ರೆಗಳು ಲಭ್ಯವಿರುತ್ತವೆ ಸದರಿ ಆಸ್ಪತ್ರೆಗಳಲ್ಲಿ 22 ವೆದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಎಲ್ಲಾ ಔಷಧಾಲಯಗಳಲ್ಲಿ ಔಷದಿಗಳ ಯಾವುದೇ ಕೊರತೆ ಇರುವುದಿಲ್ಲವೆಂದು ತಿಳಿಸಿದರು.

(ಕ್ರಮ :- ಜಿಲ್ಲಾ ಆಯುಷ ಅಧಿಕಾರಿಗಳು, ಬೀದರ)

9. ಸಮಾಜ ಕಲ್ಯಾಣ ಇಲಾಖೆ :-

ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೀದರ ರವರು ಮಾಹಿತಿ ನೀಡುತ್ತ, ಜಿಲ್ಲೆಯಲ್ಲಿ ಒಟ್ಟು 42 ಮೆಟ್ರಿಕ ಪೂರ್ವದ ವಿದ್ಯಾರ್ಥಿ ನಿಲಯಗಳಿದ್ದು, ಒಟ್ಟು 18 ಮೆಟ್ರಿಕ ನಂತರದ ವಿದ್ಯಾರ್ಥಿ ನಿಲಯಗಳು ಹಾಗೂ 5 ಆಶ್ರಮ ಶಾಲೆಗಳಿದ್ದು ಸದರಿ ವಿದ್ಯಾರ್ಥಿ ನಿಲಯಗಳಲ್ಲಿ ಮೆಟ್ರಿಕ್

ಪೂರ್ವದ ವಿದ್ಯಾರ್ಥಿ ನಿಲಯಗಳಲ್ಲಿ 3039 ವಿದ್ಯಾರ್ಥಿಗಳು, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ 1783 ವಿದ್ಯಾರ್ಥಿಗಳು ಹಾಗೂ ಆಶ್ರಮ ಶಾಲೆಗಳಲ್ಲಿ 425 ವಿದ್ಯಾರ್ಥಿಗಳಿರುತ್ತಾರೆ ಎಂದು ಸಭೆಗೆ ಮಾಹಿತಿ ತಿಳಿಸಿದರು. ಎಲ್ಲಾ ಹಾಸ್ಟಲ್‌ಗಳನ್ನು ಸುಸ್ಥಿತಿಯಲ್ಲಿಡಲು ಕ್ರಮವಹಿಸುವುದು ಮತ್ತು ಎಲ್ಲಾ ಅಧಿಕಾರಿಗಳು ಪರಶೀಲಿಸಿ ವರದಿ ಮಾಡಲು ಸೂಚಿಸಲಾಯಿತು.

ಸಭೆಗೆ ಗೈರುಹಾಜರಾಗದ ಪರಿಶಿಷ್ಟ ಪಂಗಡ ಜಿಲ್ಲಾ ಅಧಿಕಾರಿಗೆ ಕಾರಣ ಕೇಳುವ ನೋಟಿಸ ಜಾರಿಮಾಡಲು ಸೂಚಿಸಿದರು.

(ಕ್ರಮ :- ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೀದರ)

**10. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ :-**

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಸಭೆಗೆ ಮಾಹಿತಿ ತಿಳಿಸುತ್ತ, ಜಿಲ್ಲೆಯಲ್ಲಿ 32 ಮೆಟ್ರಿಕ ಪೂರ್ವದ ವಿದ್ಯಾರ್ಥಿ ನಿಲಯಗಳಿದ್ದು ಹಾಗೂ 45 ಮೆಟ್ರಿಕ ನಂತರದ ವಿದ್ಯಾರ್ಥಿ ನಿಲಯಗಳು ಒಟ್ಟು 77 ವಿದ್ಯಾರ್ಥಿ ನಿಲಯಗಳು ಇರುವ ಬಗ್ಗೆ ತಿಳಿಸಿದರು. ಎಲ್ಲಾ ಹಾಸ್ಟಲ್‌ಗಳನ್ನು ಸುಸ್ಥಿತಿಯಲ್ಲಿಡಲು ಕ್ರಮವಹಿಸುವುದು ಮತ್ತು ಎಲ್ಲಾ ಅಧಿಕಾರಿಗಳು ಪರಶೀಲಿಸಿ ವರದಿ ಮಾಡಲು ಸೂಚಿಸಲಾಯಿತು.

(ಕ್ರಮ :- ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, ಬೀದರ)

**11. ವಸತಿ ಇಲಾಖೆ :-**

ಸಭಾಧ್ಯಕ್ಷರು ಮಾತನಾಡುತ್ತ, ಪ್ರಧಾನ ಮಂತ್ರಿ ಅವಾಸ ಯೋಜನೆಯಡಿಯಲ್ಲಿ ಜಿಯೋ ಟ್ಯಾಗಿಂಗ ಸಂಬಂಧಿಸಿದಂತೆ ಹಲವಾರು ಮನೆಗಳ ಜಿಯೋ ಟ್ಯಾಗಿಂಗ ಬಾಕಿ ಉಳಿದುಕೊಂಡಿರುವ ಕುರಿತು ಕಾರಣವೇನು ಎಂದು ಪ್ರಶ್ನಿಸಿದರು.

ಜಿಲ್ಲೆಯಲ್ಲಿ ಒಟ್ಟು ವಸತಿ ರಹಿತರ ನಿವೇಶನ ರಹಿತರ ಕುಟುಂಬಗಳ ಒಟ್ಟು ಸಂಖ್ಯೆ 93,328 ಅದರಲ್ಲಿ ವಸತಿರಹಿತರ ಕುಟುಂಬ ಸಂಖ್ಯೆ 89,234 ಹಾಗೂ ನಿವೇಶನ ರಹಿತರ ಕುಟುಂಬಗಳ ಸಂಖ್ಯೆ 4094 ಮುಂದಿನ ದಿನಗಳಲ್ಲಿ ಉಳಿದ ವಸತಿ ಯೋಜನೆಗಳಡಿ ಸರ್ಕಾರವು ಗುರಿ ನೀಡಿದ್ದಲ್ಲಿ ಈ ಸಮೀಕ್ಷೆ ಪಟ್ಟಿಯಲ್ಲಿನವರನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡಬೇಕಾಗಿರುತ್ತದೆ. ವಿವಿಧ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣದ ಹಂತಗಳ ತಾಲೂಕುವಾರು ವಿಜಿಲ್-ಆಪ್ ಗುರಿ ನೀಡಲಾಗುತ್ತದೆ. ಮಾರ್ಚ 2021 ರ ಅಂತ್ಯದೊಳಗೆ ಬಾಕಿ ಇರುವ ಫಲಾನುಭವಿಗಳಿಗೆ ಹಂತ ಹಂತವಾಗಿ ವಿಜಿಲ್-ಆಪ್ ಮಾಡಲು ಗುರಿ ನೀಡುತ್ತಾರೆ. ಗುರಿ ಪೂರ್ಣಗೊಳಿಸಲು ಜಿಲ್ಲೆಯಲ್ಲಿ ಬರುವ ಗ್ರಾಮ ಪಂಚಾಯಿತಿಗಳಿಗೆ ಸೂಚಿಸುತ್ತೇವೆ. ಕಳೆದ 02 ವರ್ಷಗಳಲ್ಲಿ ಸರ್ಕಾರದಿಂದ ಯಾವುದೇ ವಸತಿ ಯೋಜನೆಯಡಿ ಗುರಿ ನೀಡಿರುವುದಿಲ್ಲ ಎಂದು ಯೋಜನಾ ನಿರ್ದೇಶಕರು , ಜಿಲ್ಲಾ ಪಂಚಾಯತರವರು ತಿಳಿಸಿದರು.

(ಕ್ರಮ :- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ ಬೀದರ)

13. ಸ್ವಚ್ಛ ಭಾರತ ಮಿಷನ್ ರಡಿ ಘನ ಮತ್ತು ದ್ರವ್ಯ ತ್ಯಾಜ್ಯ ವಸ್ತುಗಳ ಸಂಗ್ರಹಣಾ ಘಟಕ ನಿರ್ಮಾಣಕ್ಕಾಗಿ ಜಮೀನು ಗುರುತಿಸುವ ಕುರಿತು :-

ಜಿಲ್ಲೆಯಲ್ಲಿ 185 ಗ್ರಾಮಪಂಚಾಯಿತಿಗಳಿದ್ದು 70 ಗ್ರಾಮಪಂಚಾಯಿತಿಗಳಿಗೆ ಸ್ಥಳ ಗುರುತಿಸಿ ಜಮೀನು ಕಾಯ್ದಿರಿಸಲಾಗಿರುತ್ತದೆ. ಇನ್ನುಳಿದ 115 ಗ್ರಾಮಪಂಚಾಯಿತಿಗಳಿಗೆ ಸ್ಥಳ ಗುರುತಿಸಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸಬೇಕಾಗಿರುತ್ತದೆಂದು ಸಭೆಯ ಗಮನಕ್ಕೆ ತರಲಾಯಿತು. ಮಾನ್ಯ ಜಿಲ್ಲಾಧಿಕಾರಿಗಳು ಜಿಲ್ಲೆಯ ಎಲ್ಲಾ ತಾಲೂಕಿನ ದಂಡಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಉಳಿದ 115 ಗ್ರಾಮ ಪಂಚಾಯಿತಿಗಳ ಸ್ಥಳ ಗುರುತಿಸಿ ಅನುಮೋದನೆಗಾಗಿ ಒಂದು ವಾರದೊಳಗಾಗಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು. ಯೋಜನಾ ನಿರ್ದೇಶಕರು ಪ್ರತಿ ತಾಲ್ಲೂಕಿಗೆ ಕೂಡಲೇ ಭೇಟಿ ನೀಡಿ ಸಂಬಂಧಪಟ್ಟವರೊಂದಿಗೆ ಸಭೆ ನಡೆಸಿ, ಎಲ್ಲಾ ಅಧಿಕಾರಿಗಳ ಸಹಕಾರದೊಂದಿಗೆ ಯೋಜನೆಯನ್ನು ತುರ್ತಾಗಿ ಅನುಷ್ಠಾನಗೊಳಿಸಲು ಸೂಚಿಸಿದರು.

(ಕ್ರಮ :- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ ಬೀದರ)

12. ವಿಪತ್ತು ನಿರ್ವಹಣಾ ಶಾಖೆ :-

ಕೇಂದ್ರ ಸರ್ಕಾರದ ಮೂಲಕ ಸಂಪೂರ್ಣ ರೋಜಗಾರ ಯೋಜನೆಯಡಿಯಲ್ಲಿ 2007-08ನೇ ಸಾಲಿನಲ್ಲಿ ಬೀದರ ಜಿಲ್ಲೆಗೆ ಬಿಡುಗಡೆಯಾದ 1000 ಮೆಟ್ರಿಕ ಟನ್ ಅಕ್ಕಿ ರಾಜ್ಯ ಉಗ್ರಾಣ ನಿಗಮದ ಮೂಲಕ ದಾಸ್ತಾನು ಮಾಡಲಾಗಿತ್ತು. ಸದರಿ ಯೋಜನೆಗಾಗಿ 1000 ಮೆಟ್ರಿಕ ಟನ್ ಅಕ್ಕಿಯಲ್ಲಿ 576.552 ಮೆಟ್ರಿಕ್ ಟನ್ ಉಳಿಕೆಯಾಗಿರುತ್ತದೆ. ಉಳಿಕೆಯಾದ ಅಕ್ಕಿಗೆ ಸಂಬಂಧಪಟ್ಟಂತೆ ಹಲವಾರು ಬಾರಿ ಕಂದಾಯ ಇಲಾಖೆ, ಬೆಂಗಳೂರು ರವರಿಗೆ ಪತ್ರವ್ಯವಹಾರ ಮಾಡಲಾಗಿ ವಿಲೇವಾರಿ ಮಾಡುವಲ್ಲಿ ಸೂಕ್ತ ಮಾರ್ಗದರ್ಶನಕ್ಕಾಗಿ ಕೋರಲಾಗಿತ್ತು. ಆದರೆ, ಕಂದಾಯ ಇಲಾಖೆಯಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಈ ಮಧ್ಯ ಕೋವಿಡ್-19 ತಡೆಗಟ್ಟುವ ನಿಟ್ಟಿನಲ್ಲಿ ಲಾಕ್‌ಡೌನ್ ಸಂದರ್ಭದಲ್ಲಿ ವಲಸೆ ಕಾರ್ಮಿಕರು, ಭಿಕ್ಷುಕರು, ಪಡಿತರ ಚೀಟಿ ಇಲ್ಲದೆ ಇರುವವರಿಗೆ ಆಹಾರ ಧಾನ್ಯ ವಿತರಣೆ ಮಾಡಲು ಸರ್ಕಾರದಿಂದ ನಿರ್ದೇಶನವಿತ್ತು. ಆಹಾರ ಧಾನ್ಯಗಳು ಖರೀದಿಸಲು ರಾಜ್ಯ ಸರ್ಕಾರವು ಭಾರತ ಉಗ್ರಾಣ ನಿಗಮದಿಂದ ಖರೀದಿಸಲು ತಿಳಿಸಲಾಗಿತ್ತು. ಅದಕ್ಕಾಗಿ ಈಗಾಗಲೇ ರಾಜ್ಯ ಉಗ್ರಾಣ ನಿಗಮದಲ್ಲಿ ಅಕ್ಕಿ ದಾಸ್ತಾನು ಇರುವುದರಿಂದ ಮತ್ತು ಅದನ್ನು ಕೆಟ್ಟು ಹೋಗುವ ಸಂಭವ ಜಾಸ್ತಿ ಇರುವುದರಿಂದ ಸರ್ಕಾರದ ಸೂಚನೆಯಂತೆ ಖರೀದಿಸುವ ಆಹಾರ ಧಾನ್ಯ ಹಂಚಿಕೆ ಬದಲು ಈಗಾಗಲೇ ಇದ್ದ ದಾಸ್ತಾನು ಉಪಯೋಗಿಸಿರುವ ಬಗ್ಗೆ ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಇದರಿಂದ ಕೆಟ್ಟು ಹೋಗುವ ಆಹಾರ ಧಾನ್ಯ ತಡೆಗಟ್ಟಿ, ಖರೀದಿ ಮಾಡುವ ಬದಲು ಹಣವನ್ನು ಉಳಿಸಿ ಇದನ್ನು ಸಂಬಂಧಪಟ್ಟ ತಹಶೀಲ್ದಾರರಿಗೆ ನಿಯಮಾನುಸಾರ ತಾಲ್ಲೂಕುವಾರು ಹಂಚಿಕೆ ಮಾಡಲಾಗಿದೆ. ಎಲ್ಲಾ ತಹಶೀಲ್ದಾರರು/ನಗರಸಭೆ ಬೀದರ ರವರು ವಿತರಣೆ ಮಾಡಿ ಸೂಕ್ತವಾದ ದಾಖಲೆಗಳನ್ನು ಇಟ್ಟಿಕೊಂಡಿರುತ್ತಾರೆ. ಪ್ರಸ್ತುತ ದಾಸ್ತಾನು ಮಾಡಿದ್ದಕ್ಕೆ ರಾಜ್ಯ ಉಗ್ರಾಣ ನಿಗಮದವರಿಗೆ ಬಾಡಿಗೆ ಹಾಗೂ ಅಕ್ಕಿ ತಾಲೂಕುಗಳಿಗೆ ಸರಬರಾಜು ಮಾಡಿದ್ದಕ್ಕೆ ಸಾಗಾಣಿಕೆ ವೆಚ್ಚ ಭರಿಸಬೇಕಾಗಿದೆ. ಈ ಹಿಂದೆ ಅಕ್ಕಿ ಮತ್ತು ದಾಸ್ತಾನು ಮಾಡಿದ ವೆಚ್ಚವನ್ನು ವಿಪತ್ತು ನಿರ್ವಹಣಾ ನಿಧಿಯಿಂದಲೇ ಭರಿಸಲಾಗಿತ್ತು ಎಂದು ತಿಳಿಸಿದರು. ಕೋವಿಡ್-19 ವಿಪತ್ತಿನ ಸಂದರ್ಭದಲ್ಲಿ ಉಳಿಕೆ ಆಗಿರುವ ಸದರಿ ಯೋಜನೆಯ 576.552 ಮೆಟ್ರಿಕ್ ಟನ್ ಅಕ್ಕಿಯನ್ನು ದಾಸ್ತಾನು

ಮಾಡಿದ ಬಾಡಿಗೆ ರೂ.10,88,398/ ಹಾಗೂ ಸಾಗಾಣಿಕೆ ವೆಚ್ಚ ರೂ.04,35,445/– ಒಟ್ಟು ರೂ.15,23,843/–(ಈ ಹಿಂದಿನ ಬಾಕಿ ಸೇರಿ) S.D.R.F ನಿಧಿಯಿಂದ ನಿಯಾಮಾನುಸಾರ ಭರಿಸಬಹುದೆಂದು ನಿರ್ಣಯಿಸಲಾಯಿತು.

(ಕ್ರಮ :– ಅಪರ ಜಿಲ್ಲಾಧಿಕಾರಿಗಳು, ಉಪನಿರ್ದೇಶಕರು, ಆಹಾರ ಇಲಾಖೆ ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಬೀದರ.)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕ.ರಾ.ಉ.ನಿ ಬೆಂಗಳೂರು ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬೀದರ ಜಿಲ್ಲೆ ಬೀದರ

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ : ಆಆಶಾ ಕೊಡಗು ಭೇಟಿ ವರದಿ 2020-21 ದಿನಾಂಕ: 17.11.2020

ಸರ್ಕಾರದ ಕಾರ್ಯದರ್ಶಿಗಳು,
ಸಿ.ಆ.ಸು.ಇ (ಆಡಳಿತ ಸುಧಾರಣೆ),
ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಮಾನ್ಯರೇ,

ವಿಷಯ: ಕೋವಿಡ್-19 ನಿಯಂತ್ರಣ ಮತ್ತು ಮಳೆ ಹಾನಿ ಪರಿಹಾರ ಕಾರ್ಯವನ್ನು ಪರಿಶೀಲಿಸಲು ಕೊಡಗು ಜಿಲ್ಲೆಗೆ ಭೇಟಿ ನೀಡಿರುವ ವರದಿ ಸಲ್ಲಿಸುತ್ತಿರುವ ಬಗ್ಗೆ.

- - - - - - - -

ಕೊಡಗು ಜಿಲ್ಲೆಯಲ್ಲಿ ಮಳೆ ಹಾನಿಗೆ ಒಳಗಾದ ಪ್ರದೇಶಗಳ ಅಭಿವೃದ್ಧಿ, ಕೋವಿಡ್-19 ನಿಯಂತ್ರಣ ಮತ್ತು ಜಿಲ್ಲಾ ಹಂತದ ವಿವಿಧ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಗಾಗಿ ದಿನಾಂಕ 10.11.2020 ಮತ್ತು 11.11.2020 ರಂದು ಕೊಡಗು ಜಿಲ್ಲೆಗೆ ಭೇಟಿ ನೀಡಿ ಪರಿಶೀಲನೆಯನ್ನು ನಡೆಸಿದ್ದು, ವರದಿಯನ್ನು ಇದರೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ಅನ್ಬುಕುಮಾರ್. ವಿ, ಭಾ.ಆ.ಸೇ.)
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಕೊಡಗು ಜಿಲ್ಲೆ.

**ದಿನಾಂಕ:11.11.2020 ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಇವರ ಅಧ್ಯಕ್ಷತೆಯಲ್ಲಿ, ಕೋವಿಡ್-19, ಮತ್ತು ಮಳೆ ಹಾನಿ ಪ್ರದೇಶಗಳ ಅಭಿವೃದ್ಧಿ ಕಾರ್ಯ ಸಂಬಂಧ ನಡೆದ ಸಭೆಯ ನಡವಳಿ**

*****

ಹಾಜರಾತಿ: ಹಾಜರಾತಿ ಪಟ್ಟಿಯಂತೆ.

ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ. ಇವರು ಸಭೆಗೆ ಆಗಮಿಸಿದ ಸಭೆಗೆ ಆಗಮಿಸಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿ ಕೊಡಗು ಜಿಲ್ಲೆ. ಇವರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಪ್ರಾರಂಭದಲ್ಲಿ ಜಿಲ್ಲಾಧಿಕಾರಿಯವರು ಮಾತನಾಡಿ ಮಳೆ ಹಾನಿ. ಕೋವಿಡ್ ಮತ್ತು ಜಿಲ್ಲೆಯ ವಿವಿದ ಕಾರ್ಯಕ್ರಮಗಳ ಪ್ರಗತಿ ವಿವರದ ಮಾಹಿತಿಯನ್ನು ನೀಡಿದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್-19 ಮತ್ತು ಮಳೆ ಹಾನಿ ಸಂಬಂಧ ಎಲ್ಲಾ ಅಧಿಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿರುವುದಾಗಿ ಶ್ಲಾಘನೆ ವ್ಯಕ್ತಪಡಿಸಿದರು.

ಮುಂದುವರಿದು ಜನ ಸಾಮಾನ್ಯರ ಇತರೇ ಕಛೇರಿ ಕಾರ್ಯಗಳು ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲು ಸೂಚಿಸಿದರು ಮತ್ತು 2019-20 ನೇ ಸಾಲಿನ ಮಳೆಹಾನಿ ಕಾಮಗಾರಿಗೆ ಸಂಬಂದಿಸಿದಂತೆ ಕಾರ್ಯಪಾಲಕ ಇಂಜಿನಿಯರ್. ಪಂ.ರಾಜ್ ಇಂಜಿನಿಯರಿಂಗ್ ವಿಭಾಗ, ಕೊಡಗು ಇವರ ವ್ಯಾಪ್ತಿಯ ಕಾಮಗಾರಿ ಪ್ರಗತಿಯನ್ನು ಪರಿಶೀಲಿಸಿ, ಪೂರ್ಣಗೊಂಡ 352 ಕಾಮಗಾರಿಗಳ ಮೊತ್ತವನ್ನು ಸಂಬಂಧಿಸಿದವರಿಗೆ ಪಾವತಿಸಲು ಮತ್ತು ಉಳಿದ 03 ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿದರು. ಲೋಕೋಪಯೋಗಿ ಇಲಾಖೆಯ 59, ಪಿ.ಎಂ.ಜಿ.ಎಸ್.ವೈ. 12. ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆಯ 27 ಗ್ರಾಮೀಣ ಕುಡಿಯುವ ನೀರು ಮತ್ತ ನೈರ್ಮಲ್ಯ ವಿಭಾಗ ಇವರ 39 ಮತ್ತು ನಗರಾಭಿವೃದ್ಧಿ ಇಲಾಖೆಯ 15 ಪೂರ್ಣಗೊಂಡ ಕಾಮಗಾರಿಗಳಿಗೆ ಈಗಾಗಲೇ ಬಿಡುಗಡೆಯಾಗಿರುವ ಅನುದಾನವನ್ನು ಸಂಬಂಧಿಸಿದವರಿಗೆ ಪಾವತಿಸಿ ಸದರಿ ಮೊತ್ತಕ್ಕೆ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿ ಉಳಿಕೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.

2019-20 ನೇ ಸಾಲಿನ ಮಳೆಹಾನಿ ವಿಶೇಷ ಅನುದಾನ ರೂ.100 ಕೋಟಿ ಕಾಮಗಾರಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಅನುಮೋದನೆ ನೀಡಿರುವ ಲೋಕೋಪಯೋಗಿ ಇಲಾಖೆಯ 43,, ಪಂ. ರಾಜ್ ಇಂಜಿನಿಯರಿಂಗ್ ವಿಭಾಗದ 427. ಸಣ್ಣ ನೀರಾವರಿ ಇಲಾಖೆಯ 13 ಪಿ.ಎಂ.ಜಿ.ಎಸ್.ವೈ ಯವರ 4 ನಗರಾಭಿವೃದ್ಧಿ ಇಲಾಖೆಯ 45 ಮತ್ತು ಕಾವೇರಿ ನೀರಾವಾರಿ ನಿಗಮದ 2 ಒಟ್ಟು 534 ಕಾಮಗಾರಿಗ್ಳ ಪೈಕಿ 189 ಕಾಮಗಾರಿ ಪೂರ್ಣಗೊಂಡಿದ್ದು, ಪ್ರಗತಿಯಲ್ಲಿರುವ 310 ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿ ಪ್ರಾರಂಬಿಸದೆ ಬಾಕಿ ಇರುವ 35 ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಯವರು ಮಾತನಾಡಿ 2019-20 ನೇ ವಿಶೇಷ ಮಳೆಹಾನಿ ರೂ. 100 ಕೋಟಿ ಅನುದಾನ ಪೈಕಿ ರೂ.90.61 ಕೋಟಿಯ 534 ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಈ ಪೈಕಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ 45 ಕಾಮಗಾರಿಗಳ ಅಂದಾಜು ಮೊತ್ತ ರೂ.12.96 ಕೋಟಿ ಅನುದಾನ ಬಿಡುಗಡೆಯಾಗಿದ್ದು ಇನ್ನುಳಿದ ಕಾಮಗಾರಿಗಳ ಮೊತ್ತ ಆಯಾಯ ಇಲಾಖೆಯಿಂದ ಬಿಡುಗಡೆಯಾಗದ್ದರಿಂದ ಉಳಿಕೆ ರೂ. 9.39 ಕೋಟಿ ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ. ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಸರ್ಕಾರದ ನಿರ್ದೇಶನದಂತೆ ಜಿಲ್ಲಾಧಿಕಾರಿಯವರು ಆಡಳಿತಾತ್ಮಕ ಅನುಮೋದನೆ ನೀಡುವ ಕಾಮಗಾರಿಗೆ ಖಚಿತವಾಗಿ ಅನುದಾನ ಬಿಡುಗಡೆಯಾಗುವುದ್ದರಿಂದ ಆಡಳಿತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಯನ್ನು ಬಾಕಿ ಮಾಡದೇ ಪೂರ್ಣಗೊಳಿಸಲು ಸಂಬಂಧಿಸಿದ ಇಲಾಖೆಗಳಿಗೆ ಸೂಚಿಸಿದರು. ಮತ್ತು ಜಿಲ್ಲಾಧಿಕಾರಿಯವರಿಗೆ ಉಳಿಕೆ ಮೊತ್ತದಲ್ಲಿ ಬಾಕಿ ಇರುವ ಮಳೆ ಹಾನಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸೂಚಿಸಿದರು.

ಮುಂದುವರಿದು ಜಿಲ್ಲೆಯಲ್ಲಿ ಮಳೆ ಹಾನಿಯಿಂದ ಮೃತ್ತರಾದವರ ಕುಟುಂಬದ ವಾರಿಸುದಾರರಿಗೆ ಪರಿಹಾರ ನೀಡಿರುವ ಬಗ್ಗೆ ಮಾಹಿತಿಯನ್ನು ಪಡೆದರು. ಮತ್ತು ಕೃಷಿ ಬೆಳೆ ಹಾನಿ, ತೋಟಗಾರಿಕೆ ಬೆಳೆ ಹಾನಿ ಮತ್ತು ಕಾಫಿ ಬೆಳೆ ಹಾನಿ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಜಿಲ್ಲೆಯ 3 ತಾಲ್ಲೂಕಿನ ತಹಶೀಲ್ದಾರರನ್ನು ವಿಚಾರಿಸಿದರು. ತಹಶೀಲ್ದಾರರು ಮಾತನಾಡಿ ಬೆಳೆ ಹಾನಿ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಸಂಬಂಧಿಸಿದ ಪರಿಹಾರ ತಂತ್ರಾಂಶದಲ್ಲಿ ದಾಖಲಿಸುತಿರುವ ಬಗ್ಗೆ ಮಾಹಿತಿಯನ್ನು ನೀಡಿದರು.

ಮನೆಹಾನಿ ಸಂಬಂಧಿಸಿದಂತೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಆಯಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಜಿ.ಪಿ.ಎಸ್ ಕಾಲೋಚಿತಗೊಳಿಸಿ ಸಂಭಂದಿಸಿದ ಸಂತ್ರಸ್ತರಿಗೆ ಪರಿಹಾರ ಮೊತ್ತ ಬಿಡುಗಡೆಗೆ ಕ್ರಮಕೈಗೊಳ್ಳಲು ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡಿ ಜಿಲ್ಲೆಯಲ್ಲಿ ಒಟ್ಟು 75312 ಕೋವಿಡ್-19 ಪರೀಕ್ಷಿಸಲಾಗಿದ್ದು ಈ ಪೈಕಿ ದೃಡಪಟ್ಟಿರುವ 5076 ರ ಪೈಕಿ 4866 ಪ್ರಕರಣ ಗುಣಮುಖರಾಗಿದ್ದು 69 ಜನರು ಮೃತ್ತಪಟ್ಟಿದ್ದು 141 ಪ್ರಕರಣ ಚಿಕಿತ್ಸೆಯಲ್ಲಿದು. ಇದರಂತೆ ಜಿಲ್ಲೆಯಲ್ಲಿ ಗುಣಮುಖರಾದವರ ಪ್ರಮಾಣ ಶೇಕಡ 96 ರಷ್ಟಿದ್ದು ಸೋಂಕು ವ್ಯಾಪಕವಾಗಿ ಹರಡದಂತೆ ಸೂಕ್ತ ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲು ತಿಳಿಸಿ ಈ ಸಂಬಂಧ ಸರ್ಕಾರದಿಂದ ಯಾವುದಾದರೂ ಅಗತ್ಯವಿದ್ದಲ್ಲಿ ತಿಳಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ ಸಭೆಯನ್ನು ಮುಗಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು ಹಾಗೂ ಕೊಡಗು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ

ಸಂಖ್ಯೆ:ಪ್ರವಿ/23/2020-21, ದಿನಾಂಕ:11.11.2020.
ಪ್ರತಿಯನ್ನು: ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

## Note on Tumkur District, related to COVID-19 Sample Collection.

- The State Govt has instructed to collect and test more samplesby fixing a target of 3045 Samples per day for Tumkur district. As per the directions of the Govt, a target of 310 Samples per day has been fixed to each Taluks.

- Further, instructionswere given to all Taluks to achieve the target withat least 60% of which is RTPCR swabs and remaining 40% to be RAT(Rapid Antigen Test) swabs atall PHCs leveland Mobile Swab Collection Squads have beendeployed throughout the district achieve the target.

**The day wise detail of sample taken from 07.10.2020 is as shown below.**

| Sl.No | Date | Total Sample Collected now Both (Inclusive of RAT & RTPCR) | Percentage |
|---|---|---|---|
| 01. | 05.11.2020 | 4201 | 137.96 |
| 02. | 06.11.2020 | 5378 | 176.61 |
| 03. | 07.11.2020 | 6500 | 213.46 |
| 04. | 08.11.2020 | 4189 | 137.56 |
| 05. | 09.11.2020 | 6191 | 203.31 |
| 06. | 10.11.2020 | 6061 | 199.04 |

- Now constantly the progress has been achieved. It will be continued provided that the RAT (Rapid Antigen Test) kits are supplied in time to the district.

## Note on Tumkur District, related to COVID-19 as on 10.11.2020.

01. **Review status of Surveillance activities in the District - SARI and ILI and their monitoring protocols.**
    a. Total No of SARI Cases : 362
    b. Total No of ILI Cases : 18020
    c. Total No of Positive Covid-19 Cases : 20908

RAKESH SINGH, I.A.S.
Additional Chief Secretary to Govt.,
Water Resources Department

## 02. Status of Supplies-Medicines, Medical Materials.

The details of Medicines, Medical Materials Available as fallows

a. PPE's - 10997
b. N-95 Mask – 1950
c. Triple Layer Mask – 00
d. Sanitizers 500 ml – 1773
e. Sanitizers 5000 ml – 00
f. Viral Transport media 1X25 - 716

## 03. Containment plan for affected areas for the District.

a. As on 10.11.2020 totally 20908 cases are reported.
b. 19575 Patients are discharged.
c. 900 case are Active & 262 were Deceased.
a. The areas where more than 20 cases are tested positive within 100 meter area boundary is being fixed entire containment zone.
d. Proper arrangements are made to provide daily necessaries those who are in containment zone.

   Teams were formed, each team having 2 persons (ANM, Asha, Male Health Workers &AW's) Each team daily survey up to 200 households, those who have fever & ILI symptoms. These teams refer to fever clinic for further management.

## 04. Availability of Money under SDRF and Health.

Availability of Money Under SDRF – 35.00 Lakhs
Availability of Money Under Health – 0

## 05. Protection of frontline staff

**a.** Health – PPE and N95 masks has been distributed to Frontline Health workers and direction has been given to Health workers regarding use of PPE Equipment.
**b.** Municipalities – Masks given to municipality workers and instructions given to all workers.
**c.** Police – Instructions has been given to police officials to wear mask.

## 06. Periodical updating of Data to State/Monitoring tool.

Nodal Officer has been appointed for updating information to State/Monitoring tool and its being updated regularly.

RAKESH SINGH, I.A.S.
Additional Chief Secretary to Govt,
Water Resources Department

ದಿನಾಂಕ: 04.11.2020 ರಂದು ಅಪರಾಹ್ನ 12.30 ಗಂಟೆಗೆ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

1. ಮೊದಲಿಗೆ ಜಿಲ್ಲಾಧಿಕಾರಿಗಳು, ಮೈಸೂರು ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ, ಬೆಂಗಳೂರು ರವರನ್ನು ಹಾಗೂ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಿದರು.
2. ಜಿಲ್ಲಾಧಿಕಾರಿಗಳು, ಮೈಸೂರು ರವರು ಮೊದಲಿಗೆ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಸ್ತುತ ಸಕ್ರಿಯ 1582 ಸಕ್ರಿಯ ಪ್ರಕರಣಗಳಿದ್ದು, ಈವರೆವಿಗೆ ಕೋವಿಡ್ ಸೋಂಕಿನಿಂದ 959 ಮರಣವಾಗಿರುವುದಾಗಿ ಸಭೆಗೆ ಮಾಹಿತಿ ನೀಡಿರುತ್ತಾರೆ. ಕೋವಿಡ್ ನಿಂದ ಉಂಟಾದ ಕೆಲವು ಸಾವಿನ ಪ್ರಕರಣಗಳಲ್ಲಿ ಕೆಲವು ಪ್ರಕರಣಗಳು ಇತರೆ ಕಾರಣಗಳಿಂದ ಅಂದರೆ, ಅಪಘಾತ ಮುಂತಾದ ಕಾರಣಗಳಿಂದ ಉಂಟಾಗಿದ್ದರೂ ಸಹ ಅವರುಗಳ ಗಂಟಲು ದ್ರವ ಪರೀಕ್ಷೆ ವೇಳೆಯಲ್ಲಿ ಕೋವಿಡ್ ಸೋಂಕು ಇರುವುದು ಕಂಡುಬಂದ ಕಾರಣ ಅಂತಹ ಪ್ರಕರಣಗಳನ್ನು ಸಹ ಕೋವಿಡ್ ನಿಂದ ಮೃತಪಟ್ಟ ಪ್ರಕರಣಗಳಿಗೆ ಸೇರಿಸಿರುವುದರಿಂದ ಮರಣದ ಸಂಖ್ಯೆ ಹೆಚ್ಚಾಗಿರುತ್ತದೆ. ಈ ಸಂಬಂಧ ಅಂತಹ ಪ್ರಕರಣಗಳನ್ನು ಕೈಬಿಡುವಂತೆ ಪ್ರಸ್ತಾವನೆ ಸಲ್ಲಿಸಲು ಉದ್ದೇಶಿಸಲಾಗಿದೆ.
3. ಪ್ರಸ್ತುತ ಮರಣದ ಪ್ರಮಾಣವು ಸಹ ಕಡಿಮೆ ಆಗುತ್ತಿದ್ದು, ದಿನಾಂಕಃ 01.11.2020 ರವರೆಗೆ ಮರಣದ ಪ್ರಮಾಣ ಶೇ.2 ರಷ್ಟಿದ್ದು, ದಿಃ 25.10.2020 ರಿಂದ 01.11.2020 ರವರೆಗೆ ಒಟ್ಟು 16 ಸಾವುಗಳಾಗಿದ್ದು, ಶೇ.1.2 ರಷ್ಟು ಪ್ರಮಾಣ ಆಗಿರುವ ಅಂಶವನ್ನು ಸಭೆಗೆ ಮಾಹಿತಿ ನೀಡಿದರು.
4. ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ 494, ಖಾಸಗಿ ಆಸ್ಪತ್ರೆಗಳಲ್ಲಿ 460 ಹಾಗೂ ಮನೆಯಲ್ಲಿ ಒಟ್ಟು 5 ಮರಣ ಸಂಭವಿಸಿರುವುದಾಗಿ ತಿಳಿಸಿ, ಈ ಪೈಕಿ ಮೈಸೂರು ಜಿಲ್ಲಾ ಆಸ್ಪತ್ರೆಯಲ್ಲಿ 248 ಮತ್ತು ಕೆ.ಆರ್ ಆಸ್ಪತ್ರೆಯಲ್ಲಿ 232 ಮರಣವಾಗಿರುವುದಾಗಿ ಸಭೆಗೆ ಮಾಹಿತಿ ನೀಡಿದರು.
5. ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಈವರೆವಿಗೆ ಒಟ್ಟು 3,41,273 ಪರೀಕ್ಷೆಗಳನ್ನು ನಡೆಸಲಾಗಿದ್ದು, ಈ ಪೈಕಿ 3,06,883 ಪರೀಕ್ಷೆಗಳನ್ನು ಸರ್ಕಾರಿ ಲ್ಯಾಬ್ ನಲ್ಲಿ ಹಾಗೂ 34,390 ಪರೀಕ್ಷೆಗಳನ್ನು ಖಾಸಗಿ ಲ್ಯಾಬ್ ಗಳಲ್ಲಿ ನಡೆಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು.
6. ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯಲ್ಲಿ ಮಾತನಾಡುತ್ತಾ, ಸರ್ಕಾರದ ಆದೇಶದನ್ವಯ ಸಾಮಾಜಿಕ ಅಂತರ ಕಾಯ್ದುಕೊಳ್ಳದ ಹಾಗೂ ಮುಖಗವಸು ಧರಿಸದಿರುವ ವ್ಯಕ್ತಿಗಳಿಗೆ ಸರ್ಕಾರವು ನಿಗದಿಪಡಿಸಿರುವ ದರದಲ್ಲಿ ದಂಡವನ್ನು ವಸೂಲು ಮಾಡಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಪತ್ರಿಕೆಗಳ ಮೂಲಕ ಸಾರ್ವಜನಿಕರ ಗಮನಕ್ಕೆ ತಂದಲ್ಲಿ ಸಾರ್ವಜನಿಕರು ಎಚ್ಚರ ವಹಿಸಲು ಅವಕಾಶವಾಗುತ್ತದೆ ಇಲ್ಲದಿದ್ದಲ್ಲಿ ಸಾರ್ವಜನಿಕರು ಮುಖಗವಸು ಧರಿಸುವುದನ್ನು

ನಿರ್ಲಕ್ಷಿಸುವುದರಿಂದ ಸೋಂಕಿನ ಪ್ರಮಾಣ ಹೆಚ್ಚಾಗುತ್ತದೆ. ಆದ್ದರಿಂದ ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಜನಸಂದಣಿ ಸೇರುವಂತಹ ಕಡೆಗಳಲ್ಲಿ ದಂಡ ವಸೂಲು ಮಾಡುವ ಕ್ರಮವನ್ನು ತಕ್ಷಣವೇ ಕೈಗೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.

7. ಮೈಸೂರು ನಗರದಲ್ಲಿರುವ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ - 19 ಸೋಂಕಿನ ಚಿಕಿತ್ಸೆಗೆ ದಾಖಲಾದ ಸೋಂಕಿತರಿಂದ ಹೆಚ್ಚಿನ ಹಣವನ್ನು ಪಾವತಿಸಲು ಒತ್ತಾಯಿಸುತ್ತಿರುವ ವಿಷಯವು ತಮ್ಮ ಗಮನಕ್ಕೆ ಬಂದಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ದರದ ವಿವರವನ್ನು ಪ್ರಕಟಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ಹಾಜರಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನಿರ್ದೇಶನ ನೀಡಿದರು.

8. ಹೆಚ್ಚಿನ ದರ ವಿಧಿಸುತ್ತಿರುವ ಖಾಸಗಿ ಆಸ್ಪತ್ರೆಗಳಿಗೆ ಆಕಸ್ಮಿಕವಾಗಿ ಭೇಟಿ ನೀಡಿ ಹೆಚ್ಚಿನ ದರ ವಿಧಿಸುತ್ತಿರುವುದು ಕಂಡುಬಂದಲ್ಲಿ ಅಂತಹ ಖಾಸಗಿ ಆಸ್ಪತ್ರೆಗಳ ವಿರುದ್ಧ ಒ.ಪಿ.ಎಂ.ಇ ಕಾಯ್ದೆಯಡಿ ಕ್ರಮ ಜರುಗಿಸಲು ಹಾಗೂ ಅಂತಹ ಆಸ್ಪತ್ರೆಗಳ ರಹದಾರಿಯನ್ನು ಅಮಾನತ್ತು ಅಥವಾ ರದ್ದು ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಚರ್ಚಿಸಲು ಹೆಚ್ಚಿನ ವಿಷಯಗಳು ಇಲ್ಲದ ಕಾರಣ ಸಭೆಯನ್ನು ವಂದನೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ಎನ್ ಜಯರಾಮ್, ಭಾ.ಆ.ಸೇ)
ಅಧ್ಯಕ್ಷರು, ಬೆಂಗಳೂರು ಜಲಮಂಡಳಿ, ಬೆಂಗಳೂರು
ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ದಿನಾಂಕ: 07.11.2020 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೋವಿಡ್-19 ಮತ್ತು ಅತಿವೃಷ್ಟಿ ಹಾಗೂ ಪ್ರವಾಹ ಕುರಿತು ನಡೆದ ವಿಡಿಯೋ ಸಂವಾದದ ನಡುವಳಿಗಳು**

**ಹಾಜರಿದ್ದ ಅಧಿಕಾರಿಗಳು:-**

1. ಜಿಲ್ಲಾಧಿಕಾರಿಗಳು, ಬಳ್ಳಾರಿ.
2. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು,ಬಳ್ಳಾರಿ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬಳ್ಳಾರಿ.

* * *

ಜಿಲ್ಲಾಧಿಕಾರಿಗಳು ಮಾನ್ಯ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿದರು. ನಂತರ ಬಳ್ಳಾರಿ ಜಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಕೋವಿಡ್-19 ಪ್ರಸ್ತುತ ಸ್ಥಿತಿಯ ಬಗ್ಗೆ ಹಾಗೂ ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ಕುರಿತು ವಿವರಣೆ ನೀಡಲು ಸೂಚಿಸಿದರು.

ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್-19 ಗೆ ಸಂಬಂಧಿಸಿದಂತೆ ಸೊಂಕು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳ ಕುರಿತು ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು.

- **ಕೊವೀಡ್ ಪರೀಕ್ಷೆ:-** ಜಿಲ್ಲೆಯಲ್ಲಿ ಒಟ್ಟಾರೆ 286087 ಪ್ರಕರಣಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಇದರಲ್ಲಿ RTPCR-124083 ಹಾಗೂ ANTIGEN-162004 ಪರೀಕ್ಷೆ ಮಾಡಲಾಗಿದ್ದು, ಈ ಪೈಕಿ 37620 ದೃಢ ಪ್ರಕರಣಗಳು ಪತ್ತೆಯಾಗಿದ್ದು, ಈಗ ಕೇವಲ 617 ಸಕ್ರೀಯ ಪ್ರಕರಣಗಳು ಚಿಕಿತ್ಸೆ ಪಡೆಯುತ್ತಿದ್ದು ಜಿಲ್ಲೆಯಲ್ಲಿ ಒಟ್ಟು 550 ಮರಣ ಹೊಂದಿದ ಪ್ರಕರಣಗಳು ವರದಿಯಾಗಿರುತ್ತವೆ ಎಂದು ತಿಳಿಸಿದರು.
- ಕೋವಿಡ್- 19 ಪರೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಬಳ್ಳಾರಿ ಜಿಲ್ಲೆಗೆ ಪ್ರತಿ ದಿನ ANTIGEN 900 ಮತ್ತು RTPCR-2100 ಕೋವಿಡ್-19 ಪರೀಕ್ಷೆಯ ಗುರಿ ನಿಗಧಿಪಡಿಸಲಾಗಿದ್ದು, ಪ್ರಸ್ತುತ ಜಿಲ್ಲೆಯಲ್ಲಿ ಕೋವಿಡ್-19 ಪ್ರಕರಣಗಳು ಕಡಿಮೆ ಆಗಿದ್ದು, ಸರ್ಕಾರ ನೀಡಿರುವ ಗುರಿಯನ್ನು ಪರಿಷ್ಕರಿಸುವ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು.
- ಈ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ರಾಜ್ಯ ಮಟ್ಟದಿಂದ ನಿಗಧಿಪಡಿಸಿರುವ ಗುರಿಯಂತೆ RTPCR ಪರೀಕ್ಷೆಯಲ್ಲಿ ಗುರಿ ತಲುಪುವುದು ಅತೀ ಮುಖ್ಯವಾಗಿದ್ದು, ಸರ್ಕಾರದ ನಿರ್ದೇಶನದಂತೆ ನಿಗಧಿಪಡಿಸಿರುವ ಗುರಿಯನ್ನು ಸಾಧಿಸಲು ನಿರ್ದೇಶನಗಳನ್ನು ನೀಡಿದರು.
- ಜಿಲ್ಲಾಧಿಕಾರಿಗಳು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆ ಹಚ್ಚುವ ಪ್ರಕ್ರಿಯೆಯನ್ನು ಶಿಕ್ಷಣ ಇಲಾಖೆಯಿಂದ ಸ್ಥಗಿತಗೊಳಿಸಿದ್ದು, ಆರೋಗ್ಯ ಇಲಾಖೆಯಿಂದನೇ ಸಂಪರ್ಕಿತರನ್ನು ಪತ್ತೆ ಹಚ್ಚುವ ಕಾರ್ಯ ಮಾಡಲಾಗುತ್ತಿದೆ ಎಂದು ತಿಳಿಸಿದರು.
- **ಕೊವೀಡ್-19 ಪ್ರಕರಣಗಳ ಮರಣಕ್ಕೆ ಸಂಬಂಧಿಸಿದಂತೆ:** ಕಳೆದ 7 ದಿನಗಳಲ್ಲಿ ಒಟ್ಟು 420 ದೃಢ ಪ್ರಕರಣಗಳು ವರದಿಯಾಗಿದ್ದು ಇದರ ಪೈಕಿ ಒಟ್ಟು 16 ಪ್ರಕರಣಗಳು ಮರಣ ಹೊಂದಿರುವುದಾಗಿ ಸಭೆಗೆ ವಿವರಿಸಿದರು. ಮರಣ ಪ್ರಮಾಣ ಕಡಿಮೆ ಮಾಡಲು ಮುಂಚಿತವಾಗಿಯೇ ILI, SARI & ಆಮ್ಲಜನಕ ಕೊರತೆ ಇರುವ ಪ್ರಕರಣಗಳನ್ನು ಮೊದಲೇ ಗುರುತಿಸಿ ಪರೀಕ್ಷೆಗೆ ಒಳಪಡಿಸಿ ಮುಂಚಿತವಾಗಿಯೇ ಚಿಕಿತ್ಸೆ ನೀಡಲು ಕ್ರಮವಹಿಸಲಾಗುತ್ತಿದೆ.

➢ ILI ಮತ್ತು SARI ಪ್ರಕರಣಗಳು: ಜಿಲ್ಲಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಪ್ರತಿನಿತ್ಯ ಖಾಸಗಿ ಆಸ್ಪತ್ರೆಗಳಿಂದ ಮತ್ತು ಔಷಧಿ ಅಂಗಡಿಗಳಿಂದ ಮಾಹಿತಿ ಹಾಗೂ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು (ಹಡಗಲಿ, ಹ.ಬೊ.ಹಳ್ಳಿ, ಸಿರುಗುಪ್ಪ, ಬಳ್ಳಾರಿ, ಸಂಡೂರು, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ) ಮನೆ ಮನೆ ಭೇಟಿ ನೀಡಿ ILI ಮತ್ತು SARI ಪ್ರಕರಣಗಳನ್ನು ಗುರುತಿಸಿ ನೊಂದಾಯಿಸಿಕೊಂಡು ನಂತರ ಕೋವಿಡ್ -19 ಪರೀಕ್ಷೆಗಾಗಿ ಫೀವರ್ ಕ್ಲಿನಿಕ್ ಗೆ ಮಾರ್ಗದರ್ಶನ ಮಾಡುತ್ತಿರುವುದರಿಂದ ಹೆಚ್ಚು ಲಕ್ಷಣ ರಹಿತ ಸಕಾರಾತ್ಮಕ ಪ್ರಕರಣಗಳು ಕಂಡು ಬರುತ್ತಿವೆ ಇಂತಹ ಲಕ್ಷಣರಹಿತ ಪ್ರಕರಣಗಳನ್ನು HOME-ISOLATION ಆರೈಕೆ ಪಡೆಯಲು ಪ್ರೋತ್ಸಾಹಿಸಲಾಗುತ್ತಿದೆ ಹಾಗೂ ಲಕ್ಷಣ ಹೊಂದಿದ ಸಕಾರಾತ್ಮಕ ಪ್ರಕರಣಗಳನ್ನು DCHC & DCH ಗಳಲ್ಲಿ ಆರೈಕೆ ಮತ್ತು ಚಿಕಿತ್ಸೆಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

➢ ಪ್ರಸ್ತುತ ಜಿಲ್ಲೆಯಲ್ಲಿ ಎಲ್ಲಾ ಕೋವಿಡ್ ಕೇರ್ ಸೆಂಟರ್ ಗಳನ್ನು ಮುಚ್ಚಲಾಗಿದೆ ಎಂದು ತಿಳಿಸಿದರು.

➢ ಜಿಲ್ಲೆಯಲ್ಲಿ ಒಟ್ಟು 1128 Oxygenated beds, 116 ventilator beds & 210 ICU beds ಗಳ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸುತ್ತಾ, ಪ್ರಸ್ತುತ ಯಾವುದೇ ತರಹದ ಬೆಡ್ಸ್ ಗಳ ತೊಂದರೆ ಇರುವುದಿಲ್ಲ ಎಂದು ತಿಳಿಸಿದರು.

➢ ಪ್ರಸ್ತುತ ಜಿಲ್ಲೆಯಲ್ಲಿ ಕೋವಿಡ್-19 ಪ್ರಕರಣಗಳು ಕಡಿಮೆಯಾಗಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿರುತ್ತದೆ ಎಂದು ತಿಳಿಸಿದರು.

*ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಈ ಕೆಳಕಂಡ ಸೂಚನೆಗಳನ್ನು ನೀಡಿದರು.*

1) ಜಿಲ್ಲೆಯಲ್ಲಿ ಸರ್ಕಾರದ ನಿರ್ದೇಶನದಂತೆ ಕೋವಿಡ್ ಕರ್ತವ್ಯ ನಿರತ ಸರ್ಕಾರಿ ನೌಕರರು ಕೋವಿಡ್-19 ಸೋಂಕಿನಿಂದ ಮೃತ ಹೊಂದಿದ್ದಲ್ಲಿ ಕೂಡಲೇ ನಿಯಮಾನುಸಾರ ಪರಿಹಾರ ವಿತರಣೆ ಮಾಡಲು ಕ್ರಮ ವಹಿಸುವುದು.
2) ಕೋವಿಡ್ ಪರೀಕ್ಷೆಯಲ್ಲಿ ಸರ್ಕಾರ ನಿಗಧಿಪಡಿಸಿದ ಜಿಲ್ಲಾವಾರು ಗುರಿಯನ್ನು ಪ್ರತಿ ದಿನ ತಲುಪುವಂತೆ ಕ್ರಮ ವಹಿಸಲು ಸೂಚಿಸಿದರು.
3) ಎಲ್ಲಾ ದೃಢ ಪ್ರಕರಣಗಳಿಗೆ ಸಂಬಂಧ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಿ ಪರೀಕ್ಷೆಗೆ ಒಳಪಡಿಸಲು ಕ್ರಮ ವಹಿಸುವಂತೆ ಸೂಚಿಸಿದರು.
4) ಕೋವಿಡ್ ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆ ಆಗದಂತೆ ಕ್ರಮ ವಹಿಸಲು ಸೂಚಿಸಿದರು.
5) ಕೋವಿಡ್ ಸೊಂಕು ತಡೆಗಟ್ಟಲು ಸಾರ್ವಜನಿಕರು ಮಾಸ್ಕ್ ಗಳನ್ನು ಕಡ್ಡಾಯವಾಗಿ ಧರಿಸಿ ಓಡಾಡಲು ಹೆಚ್ಚಿನ ರೀತಿಯಲ್ಲಿ ಅರಿವು ಮೂಡಿಸಲು ಕ್ರಮ ವಹಿಸುವಂತೆ ತಪ್ಪಿದ್ದಾಲ್ಲಿ ಸರ್ಕಾರ ನಿಗಧಿಪಡಿಸಿದ ದಂಡವನ್ನು ವಸೂಲಿ ಮಾಡಲು ಕ್ರಮ ವಹಿಸುವಂತೆ ಸೂಚಿಸಿದರು.
6) ILI ಮತ್ತು SARI ಹಾಗೂ ಆಮ್ಲಜನಕ 94% ಕಡಿಮೆಯಿರುವ ಜನರನ್ನು ಕೂಡಲೇ ಗುರುತಿಸಿ ಪರೀಕ್ಷೆಗೆ ಒಳಪಡಿಸಿ ದೃಢ ಪ್ರಕರಣಗಳಲ್ಲಿ ಮುಂಚಿತವಾಗಿಯೇ ಚಿಕಿತ್ಸೆ ನೀಡಲು ಕ್ರಮ ವಹಿಸಿ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸೂಚಿಸಿದರು.

# ಪ್ರಕೃತಿ ವಿಕೋಪ

- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಅಗಷ್ಟ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಅದ ನಷ್ಟದ ಬಗ್ಗೆ ವಿವರಿಸಲು ತಿಳಿಸಿದರು.
- ಜಿಲ್ಲಾಧಿಕಾರಿಗಳು, ಮಾತನಾಡಿ ಸರ್ಕಾರವು 2020ರ ಅಗಷ್ಟ್ ಮಾಹೆಯಲ್ಲಿ ಅತೀವೃಷ್ಟಿ ಎಂದು 6 ತಾಲೂಕಗಳನ್ನು (ಹಡಗಲಿ, ಹರಪನಹಳ್ಳಿ, ಹ.ಬೊ.ಹಳ್ಳಿ, ಹೊಸಪೇಟೆ, ಕಂಪ್ಲಿ ಮತ್ತು ಸಿರುಗುಪ್ಪ) ಹಾಗೂ ಸೆಪ್ಟೆಂಬರ್ ತಿಂಗಳ ಮಾಹೆಯಲ್ಲಿ 03 ತಾಲೂಕಗಳನ್ನು (ಬಳ್ಳಾರಿ, ಸಂಡೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳು) ಹಾಗೂ ಅಕ್ಟೋಬರ್ ತಿಂಗಳ ಮಾಹೆಯಲ್ಲಿ 02 ತಾಲೂಕಗಳನ್ನು (ಕುರುಗೋಡು ಮತ್ತು ಕೊಟ್ಟೂರು ತಾಲ್ಲೂಕುಗಳು) ಅತೀವೃಷ್ಟಿ ಎಂದು ಘೋಷಣೆ ಮಾಡಿರುತ್ತದೆ.
- ಜಿಲ್ಲೆಯಲ್ಲಿ 2020ರ ಆಗಷ್ಟ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಮಾಹೆಯಲ್ಲಿ ಅತೀವೃಷ್ಟಿಯಿಂದ 11 ತಾಲ್ಲೂಕುಗಳಲ್ಲಿ ಒಟ್ಟು 919 ಮನೆಗಳು ಹಾನಿಯಾಗಿವೆ ಎಂದು ತಿಳಿಸಿದರು. ಅದರಲ್ಲಿ 15 ಮನೆಗಳು ತೀವ್ರ ತರಹ ("ಬಿ" ವರ್ಗ) ಮತ್ತು 904 ಮನೆಗಳು ಭಾಗಶಃ ಹಾನಿಯಾಗಿದ್ದು ("ಸಿ" ವರ್ಗ).
- ಮುಂದುವರಿದು ಅತಿವೃಷ್ಟಿವೆಂದು ಘೋಷಣೆಯಾದ 09 ತಾಲೂಕಗಳಲ್ಲಿ ಸರ್ಕಾರದ ಆದೇಶದಂತೆ ಹಾನಿಯಾದ ಮನೆಗಳ ವಿವರವನ್ನು RGRHCL ತಂತ್ರಾಂಶಲ್ಲಿ ನಮೂದಿಸಿ ಪರಿಹಾರ (ಶೇ.75% ಕ್ಕಿಂತ ಹೆಚ್ಚಾಗಿ ಹಾನಿಗೆ ರೂ.5.00 ಲಕ್ಷ, ಶೇ.25% ರಿಂದ 75% ರವರೆಗಿನ ಹಾನಿಗೆ ದುರಸ್ಥಿಗೆ-ರೂ.3.00 ಲಕ್ಷ ಹಾಗೂ ಹೊಸದಾಗಿ ನಿರ್ಮಿಸಲು ರೂ.5.00 ಲಕ್ಷ ಹಾಗೂ ಶೇ.15% ರಿಂದ 25% ರವರೆಗಿನ ಹಾನಿಗೆ ರೂ.0.50 ಲಕ್ಷ) ಪಾವತಿಸಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು. ಅಕ್ಟೋಬರ್ ಮಾಹೆಯಲ್ಲಿ ಘೋಷಣೆಯಾದ ಕಂಪ್ಲಿ ಮತ್ತು ಕೊಟ್ಟೂರು ತಾಲ್ಲೂಕುಗಳ ಆರ್.ಜಿ.ಆರ್.ಹೆಚ್.ಸಿ.ಎಲ್. ಲಾಗಿನ್ ಸಕ್ರಿಯಗೊಂಡಿರುವುದಿಲ್ಲ ಇದರ ಕುರಿತು ಈಗಾಗಲೇ ಆರ್.ಜಿ.ಆರ್.ಹೆಚ್.ಸಿ.ಎಲ್. ಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.
- ಈವರೆಗೆ ಒಟ್ಟು 877 ಮನೆಗಳ ವಿವರಗಳನ್ನು RGRHCL login ನಲ್ಲಿ ನಮೂದಿಸಿ 858 ಮನೆಗಳನ್ನು ಅನುಮೋದಿಸಲಾಗಿದೆ ಎಂದು ತಿಳಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ RGRHCL ತಂತ್ರಾಶದಲ್ಲಿ ಅಕ್ಟೋಬರ್ ತಿಂಗಳ ಹಾನಿಯಾದ ಮನೆಗಳು ಡೇಟಾ ಎಂಟ್ರಿ ಮಾಡಲು ಕೊಟ್ಟೂರು ಮತ್ತು ಕುರುಗೋಡು ತಾಲ್ಲೂಕುಗಳ ಲಾಗಿನ್ ಗಳನ್ನು ಸಕ್ರಿಯಗೊಳಿಸುವಂತೆ ವ್ಯವಸ್ಥಪಕರು RGRHCL ರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.
- ಜಿಲ್ಲೆಯಲ್ಲಿ 2020 ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಮಾಹೆಯಲ್ಲಿ ಭಾರಿ ಮಳೆಯಿಂದ ಒಟ್ಟು 10384.66 ಹೆಕ್ಟರ್ ಬೆಳೆ ನಷ್ಟವಾಗಿರುತ್ತದೆ ಎಂದು ತಿಳಿಸಿದರು.

- ಸರ್ಕಾರದಿಂದ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ ನಷ್ಟದ ಫಲಾನುಭವಿಗಳ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಮಾಡಲು ಸೂಚಿಸಿದ್ದು, ಅದರಂತೆ ಈಗಾಗಲೇ ಪರಿಹಾರ ಡೇಟಾ ಎಂಟ್ರಿ ಕಾರ್ಯ ಪ್ರಾರಂಭಗೊಂಡಿದ್ದು ಒಟ್ಟು 5461 ಹೆಕ್ಟರ್ ಬೆಳೆ ವಿವರಗಳನ್ನು ಡೇಟಾ ಎಂಟ್ರಿ ಮಾಡಲಾಗಿದ್ದು ಇನ್ನು ಬಾಕಿ ವಿಸ್ತೀರ್ಣವನ್ನು 07 ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.
- ಇದಲ್ಲದೇ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಮರಣ ಹೊಂದಿದ ಒಟ್ಟು 64 ಪ್ರಾಣಿ ಹಾನಿ ಪ್ರಕರಣಗಳಿಗೆ ಒಟ್ಟು ರೂ.4.64 ಲಕ್ಷ ಪರಿಹಾರ ನೀಡಲಾಗಿದೆ ಹಾಗೂ 06 ಜೀವ ಹಾನಿಗೆ ಒಟ್ಟು ರೂ.30.00 ಲಕ್ಷ ಪರಿಹಾರ ನೀಡಲಾಗಿದೆ ಎಂದು ತಿಳಿಸಿದರು. ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆಗಳಿಂದ ಮಾಹಿತಿಯನ್ನು ಪಡೆದು ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.

<u>ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಈ ಕೆಳಕಂಡ ಸೂಚನೆಗಳನ್ನು ನೀಡಿದರು.</u>

1) ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಹಾನಿಯಾದ ಮನೆಗಳ ವಿವರಗಳನ್ನು ಕೂಡಲೇ RGRHCL ತಂತ್ರಾಂಶದಲ್ಲಿ ನಮೂದಿಸಿ ಸರ್ಕಾರ ನಿಗಧಿಪಡಿಸಿದ ಪರಿಷ್ಕೃತ ಧರದಲ್ಲಿ ಪರಿಹಾರ ವಿತರಣೆ ಮಾಡಲು ಸೂಚಿಸಿದರು.
2) ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಹಾನಿಯಾದ ಬೆಳೆಗಳ ಹಾನಿಯ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಮಾಡುವ ಕಾರ್ಯ ಒಂದು ವಾರದೊಳಗೆ ಪೂರ್ಣಗೊಳಿಸಲು ಸೂಚಿಸಿದರು.
3) ಅಕ್ಟೋಬರ್ ತಿಂಗಳಲ್ಲಿ ಮಳೆಯಿಂದಾದ ಹಾನಿಯಾದ ಮನೆಗಳ ಹಾಗೂ ಬೆಳೆ ಹಾನಿಯ ವಿವರಗಳನ್ನು ಕೂಡಲೇ ಡೇಟಾ ಎಂಟ್ರಿ ಮಾಡಲು ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಳ್ಳಾರಿ ಜಿಲ್ಲೆ.

ಶ್ರೀಕರ್. ಎಂ.ಎಸ್., ಭಾ.ಆ.ಸೇ.,
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.